f prajavani.net prajavani | ಬುಧವಾರ, ಜೂನ್ 24, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 174 | ಪುಟ 16 | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರೊನಾಲ್ಡೊ ದಾಖಲೆ
ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಫಿಫಾ ವಿಶ್ವಕಪ್‌ನಲ್ಲಿ ಆಡಿದ ಆರೂ ಆವೃತ್ತಿಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ ಎಂಬ ದಾಖಲೆ ಬರೆದರು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 76,200 | ನಿಫ್ಟಿ 23,824 | $/₹ 94.76 | ಚಿನ್ನ (Std. 10g) ₹1,50,250 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,42,500 (ಬೆಂಗಳೂರು)

ವಿದೇಶಿ ದೇಣಿಗೆ ನಿಯಮ ಬಿಗಿ

‘ಧಾರ್ಮಿಕ ಉದ್ದೇಶದ ಚಟುವಟಿಕೆಗಳಲ್ಲಿ ಮತಾಂತರ ಪ್ರಕ್ರಿಯೆ ಇರುವಂತಿಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ) ವಿದೇಶಗಳಿಂದ ದೇಣಿಗೆ ಪಡೆಯುವಾಗ ಪಾಲಿಸಬೇಕಾದ ನಿಯಮಗಳನ್ನು ಕೇಂದ್ರ ಸರ್ಕಾರವು ಮತ್ತಷ್ಟು ಬಿಗಿಗೊಳಿಸಿದ್ದು, ದೇಣಿಗೆ ಹಣವನ್ನು ಮತಾಂತರಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಬಳಸುವುದಕ್ಕೆ ಕಡಿವಾಣ ಹಾಕಿದೆ.

ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯವು (ಎಂಎಚ್‌ಎ) ರೂಪಿಸಿರುವ ಹೊಸ ನಿಯಮಗಳ ಪ್ರಕಾರ, ಇನ್ನು ಮುಂದೆ ಎನ್‌ಜಿಒಗಳು ವಿದೇಶಗಳಿಂದ ಪಡೆಯುವ ದೇಣಿಗೆಯು ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಉದ್ದೇಶದ 105 ಚಟುವಟಿಕೆಗಳಿಗಷ್ಟೇ ಸೀಮಿತವಾಗಿರಲಿದೆ.

ಎನ್‌ಜಿಒಗಳ ಚಟುವಟಿಕೆ ಮೇಲಿನ ಹಿಡಿತವನ್ನು ಇನ್ನಷ್ಟು ಬಲಗೊಳಿಸಲು ಕೇಂದ್ರ ಸರ್ಕಾರಕ್ಕೆ ಅವಕಾಶ ಕಲ್ಪಿಸುವ ‘ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ನಿಯಮಗಳು 2026’ ಅನ್ನು ಗೆಜೆಟ್‌ನಲ್ಲಿ ಸೋಮವಾರ ಪ್ರಕಟಿಸಲಾಗಿದೆ.

ಭಾರತ ಮೂಲದವರನ್ನು ಹೊರತುಪಡಿಸಿ ವಿದೇಶಿ ಪ್ರಜೆಗಳನ್ನು ಪ್ರಮುಖ ಕಾರ್ಯನಿರ್ವಾಹಕರನ್ನಾಗಿ ಹೊಂದಿರುವ ಯಾವುದೇ ಸಂಸ್ಥೆಯು ವಿದೇಶಿ ದೇಣಿಗೆ ಸ್ವೀಕರಿಸಲು ಕೋರುವ ಅನುಮತಿಯನ್ನು ‘ಸಾಮಾನ್ಯವಾಗಿ ಪರಿಗಣಿಸಲಾಗುವುದಿಲ್ಲ’ ಎಂದು ಸ್ಪಷ್ಟಪಡಿಸಲಾಗಿದೆ. ಆದಾಗ್ಯೂ, ಕೆಲವು ಸಂದರ್ಭಗಳಲ್ಲಿ ದೇಣಿಗೆ ಪಡೆಯಲು ಕೇಂದ್ರ ಸರ್ಕಾರವು ವಿಶೇಷ ಅನುಮತಿ ನೀಡಬಹುದು.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಡಿ (ಎಫ್‌ಸಿಆರ್‌ಎ) ವಿದೇಶಗಳಿಂದ ದೇಣಿಗೆ ಬಯಸುವ ಪ್ರತಿಯೊಂದು ಸಂಸ್ಥೆಯೂ ಗೃಹ ಸಚಿವಾಲಯದ ನೋಂದಣಿ ಅಥವಾ ಪೂರ್ವಾನುಮತಿ ಹೊಂದಿರಬೇಕು.

ವಿದೇಶಿ ದೇಣಿಗೆಗಳನ್ನು ಪಡೆಯಲು ಅನುಮತಿಸಲಾದ 105 ಕಾರ್ಯಚಟುವಟಿಕೆಗಳ ಪಟ್ಟಿಯಿಂದ ಮಾತ್ರ ಇನ್ನು ಮುಂದೆ ಎನ್‌ಜಿಒಗಳು ತಮ್ಮ ಚಟುವಟಿಕೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಧಾರ್ಮಿಕ ಉದ್ದೇಶಗಳ ಅಡಿ 16, ಸಾಂಸ್ಕೃತಿಕ ಉದ್ದೇಶದ 18, ಆರ್ಥಿಕ ಉದ್ದೇಶದ 19, ಶೈಕ್ಷಣಿಕ ಉದ್ದೇಶದ 22 ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಸಂಬಂಧಿಸಿದ 30 ಕಾರ್ಯ ಚಟುವಟಿಕೆಗಳನ್ನು ಪಟ್ಟಿ ಮಾಡಲಾಗಿದೆ.

ಧಾರ್ಮಿಕ ಉದ್ದೇಶಗಳ ಅಡಿಯಲ್ಲಿ– ಧಾರ್ಮಿಕ ತಾಣಗಳ ನಿರ್ಮಾಣ, ನವೀಕರಣ ಮತ್ತು ನಿರ್ವಹಣೆ, ಭಕ್ತಿ ಗೀತೆಗಳನ್ನು ಉತ್ತೇಜಿಸಲು ಧಾರ್ಮಿಕ ಶಿಕ್ಷಣ ನೀಡುವುದು, ಅಂತರ್ ಧರ್ಮೀಯ ಸಂವಾದ ಆಯೋಜನೆ, ಸ್ಮಶಾನಗಳ ನಿರ್ಮಾಣ ಮತ್ತು ನಿರ್ವಹಣೆ, ಪವಿತ್ರ ಸ್ಮಾರಕಗಳು ಮತ್ತು ಪ್ರಾರ್ಥನಾ ಮಂದಿರಗಳ ನಿರ್ವಹಣೆ ಮತ್ತು ರಕ್ಷಣೆಗೆ ದೇಣಿಗೆ ಸ್ವೀಕರಿಸಲು ಅನುಮತಿ ಪಡೆಯಬಹುದು.

▶6

ಪ್ರಮುಖ ಅಂಶಗಳು

- ವಿದೇಶಿ ದೇಣಿಗೆ ಸಂಗ್ರಹಿಸಲು ಪರವಾನಗಿ ಪಡೆಯಲು ಬಯಸುವ ಎನ್‌ಜಿಒಗಳು ಹಣವನ್ನು ಯಾವ ಉದ್ದೇಶಕ್ಕೆ ಖರ್ಚು ಮಾಡಲಾಗುವುದು ಮತ್ತು ಯಾವ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಖರ್ಚು ಮಾಡಲಾಗುವುದು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು
- ಈಗಾಗಲೇ ಎಫ್‌ಸಿಆರ್‌ಎ ಪರವಾನಗಿ ಹೊಂದಿರುವ ಎನ್‌ಜಿಒಗಳು ತಮ್ಮ ಕಾರ್ಯಚಟುವಟಿಕೆಗಳ ವಿವರಗಳನ್ನು ಕೇಂದ್ರ ಸರ್ಕಾರಕ್ಕೆ ಒಂದು ವರ್ಷದೊಳಗೆ ಕಡ್ಡಾಯವಾಗಿ ಸಲ್ಲಿಸಬೇಕು
- ವಲಸೆ ಕಾರ್ಮಿಕರು, ನಿರಾಶ್ರಿತರು ಮತ್ತು ಅಲೆಮಾರಿ ಬುಡಕಟ್ಟು ಜನಾಂಗದವರ ಮಕ್ಕಳ ಶಿಕ್ಷಣ ಹಾಗೂ ಶಾಲೆಗಳಲ್ಲಿ ಮೌಲ್ಯಾಧಾರಿತ ಮತ್ತು ನೈತಿಕ ಶಿಕ್ಷಣ ನೀಡಲು ದೇಣಿಗೆ ಸಂಗ್ರಹಿಸಬಹುದು
- ಎನ್‌ಜಿಒಗಳು ಎಫ್‌ಸಿಆರ್‌ಎ ಅಡಿಯಲ್ಲಿ ನೋಂದಣಿ ಅಥವಾ ನವೀಕರಣಕ್ಕಾಗಿ ಅರ್ಜಿ ಸಲ್ಲಿಸುವಾಗ ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳ ವಿವರಗಳನ್ನು ಒದಗಿಸಬೇಕು

ಕನಿಷ್ಠ ₹10 ಲಕ್ಷ ವೆಚ್ಚ ಕಡ್ಡಾಯ

ಪ್ರತಿ ಎನ್‌ಜಿಒ ತನ್ನ ಪರವಾನಗಿ ರದ್ದಾಗುವುದನ್ನು ತಪ್ಪಿಸಬೇಕಾದರೆ ಎರಡು ಹಣಕಾಸು ವರ್ಷಗಳಲ್ಲಿ ನಿಗದಿತ ಉದ್ದೇಶದ ಚಟುವಟಿಕೆಗಳಿಗಾಗಿ ಕನಿಷ್ಠ ₹10 ಲಕ್ಷ ಖರ್ಚು ಮಾಡಬೇಕು.
ಯಾವುದೇ ಎನ್‌ಜಿಒ ತನ್ನ ನೋಂದಣಿಯನ್ನು ನವೀಕರಿಸಲು ಅಥವಾ ರದ್ದಾಗುವುದನ್ನು ತಪ್ಪಿಸಲು, ಕಳೆದ ಎರಡು ವರ್ಷಗಳಲ್ಲಿ ತಾನು ಪಡೆದ ವಿದೇಶಿ ದೇಣಿಗೆಯನ್ನು ನಿಗದಿತ ಚಟುವಟಿಕೆಗಳಿಗೆ ಖರ್ಚು ಮಾಡಿರಬೇಕು.

ಬಗೆಹರಿಯದ ತಾಂತ್ರಿಕ ಸಮಸ್ಯೆ • ಆಟೊ ಪ್ರಯಾಣ ದರ ದಿಢೀರ್ ಏರಿಕೆ

ಮೆಟ್ರೊ ಸಂಚಾರ ಸ್ಥಗಿತ: ಪ್ರಯಾಣಿಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್ ನಿಲ್ದಾಣದಲ್ಲಿ ನಮ್ಮ ಮೆಟ್ರೊ ರೈಲಿನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಮಂಗಳವಾರ ಸಂಜೆ 6.32ಕ್ಕೆ ಇಂದಿರಾನಗರದಿಂದ ಮೆಜೆಸ್ಟಿಕ್‌ವರೆಗೆ ದಿಢೀರನೆ ರೈಲು ಸಂಚಾರ ಸ್ಥಗಿತಗೊಂಡಿತು. ಇದರಿಂದಾಗಿ ಸಾವಿರಾರು ಪ್ರಯಾಣಿಕರು ಪರದಾಡಿದರು. ಅತಂತ್ರ ಪರಿಸ್ಥಿತಿಯಲ್ಲಿ, ಪರ್ಯಾಯ ಸಾರಿಗೆಗಾಗಿ ಚಡಪಡಿಸುತ್ತ ರಸ್ತೆಯಲ್ಲಿ ನಿಲ್ಲುವಂತಾಯಿತು.

ರೈಲಿಗಾಗಿ ಕಾಯುತ್ತಿದ್ದವರು ಮತ್ತು ರೈಲಿನಲ್ಲಿ ಸಂಚರಿಸಲು ಬರುತ್ತಿದ್ದವರ ಸಂಖ್ಯೆ ಹೆಚ್ಚಾದ ಕಾರಣ ದಟ್ಟಣೆ ಉಂಟಾಯಿತು. ಎಂ.ಜಿ ರಸ್ತೆಯ ನಿಲ್ದಾಣದ ಒಳಗೆ ಮತ್ತು ಹೊರಗೆ ಜನಜಾತ್ರೆಯೇ ನೆರೆದಿತ್ತು. ಪಾದಚಾರಿ ರಸ್ತೆಯಲ್ಲೂ ಜನದಟ್ಟಣೆ ಹೆಚ್ಚಿತ್ತು.

ತಾಂತ್ರಿಕ ದೋಷ ಕಾಣಿಸಿಕೊಂಡ ಕೂಡಲೇ ಮೆಜೆಸ್ಟಿಕ್ ಕಡೆಗೆ ಹೊರಟಿದ್ದ ಪ್ರಯಾಣಿಕರನ್ನು ಎಂ.ಜಿ.ರಸ್ತೆ ನಿಲ್ದಾಣದಲ್ಲಿ ಇಳಿಸಲಾಯಿತು. ರೈಲಿನಿಂದ ಇಳಿದ ಪ್ರಯಾಣಿಕರು ಮತ್ತು ರೈಲಿಗಾಗಿ ಕಾಯುತ್ತಿದ್ದ ಜನರು ತೀವ್ರ ತೊಂದರೆ ಅನುಭವಿಸಿದರು. ಹೆಚ್ಚು ದಟ್ಟಣೆಯುಳ್ಳ ಸರ್.ಎಂ.ವಿಶ್ವೇಶ್ವರಯ್ಯ ನಿಲ್ದಾಣ, ಡಾ.ಬಿ.ಆರ್.ಅಂಬೇಡ್ಕರ್ ನಿಲ್ದಾಣದಲ್ಲೂ ಪ್ರಯಾಣಿಕರಿಗೆ ತಾತ್ಕಾಲಿಕವಾಗಿ ಪ್ರವೇಶ ನಿರ್ಬಂಧಿಸಲಾಯಿತು. ಈ ನಿಲ್ದಾಣಗಳಲ್ಲಿ ಜನರ ನಿಯಂತ್ರಣಕ್ಕೆ ಸಂಚಾರ ಪೊಲೀಸ್ ಸಿಬ್ಬಂದಿಯನ್ನು ಹೆಚ್ಚುವರಿಯಾಗಿ ನಿಯೋಜಿಸಲಾಯಿತು.

ಮಂಗಳವಾರ ರಾತ್ರಿ ಮೆಟ್ರೊ ರೈಲು ಸಂಚಾರ ಸ್ಥಗಿತಗೊಂಡ ಬಳಿಕ ಎಂ.ಜಿ ರಸ್ತೆ ನಿಲ್ದಾಣದ ಹೊರಗೆ ಪ್ರಯಾಣಿಕರು ಪರದಾಡಿದರು ಪ್ರಜಾವಾಣಿ ಚಿತ್ರ

‘ಎಂ.ಜಿ.ರಸ್ತೆ–ವೈಟ್‌ಫೀಲ್ಡ್, ಮಾಗಡಿ ರಸ್ತೆ–ಚಲ್ಲಘಟ್ಟ ನಡುವಿನ ಸಮಸ್ಯೆಯನ್ನು ಆಂಶಿಕವಾಗಿ ಬಗೆಹರಿಸಿದರೂ, ಎಂ.ಜಿ.ರಸ್ತೆ–ಮಾಗಡಿ ರಸ್ತೆ ನಡುವಿನ ಸುರಂಗ ಮಾರ್ಗದ ಸಂಚಾರ ಸಮಸ್ಯೆ ತೀವ್ರವಾಗಿತ್ತು’ ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

ಮೆಜೆಸ್ಟಿಕ್‌ಗೆ ₹150: ಎಂ.ಜಿ.ರಸ್ತೆಯಿಂದ ಮೆಜೆಸ್ಟಿಕ್ ಕಡೆಗೆ ಹೊರಡಬೇಕಿದ್ದ ಪ್ರಯಾಣಿಕರಿಂದ ಆಟೊ ರಿಕ್ಷಾದವರು ತಲಾ ₹150 ನೀಡುವಂತೆ ಕೇಳುತ್ತಿದ್ದರು.

▶3D

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಅಡ್ಡಮತದಾನ: ಇಬ್ಬರೇ ಹೊಣೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಅಡ್ಡ ಮತದಾನದ ಸಾಧ್ಯತೆಯ ಬಗ್ಗೆ ಮುಂಚಿತವಾಗಿಯೇ ಎಚ್ಚರಿಕೆ ವಹಿಸಬೇಕಿತ್ತು. ಸಂಭವನೀಯ ಪ್ರಮಾದದ ಮಾಹಿತಿ ಸಂಗ್ರಹಿಸಲು ನಿಮಗೆ ಏಕೆ ಸಾಧ್ಯವಾಗಲಿಲ್ಲ. ಈ ಲೋಪಕ್ಕೆ ನೀವೇ ಹೊಣೆ’ ಎಂದು ರಾಜ್ಯ ನಾಯಕರನ್ನು ಬಿಜೆಪಿ ವರಿಷ್ಠರು ಕಟುವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಅಡ್ಡ ಮತದಾನದ ಕುರಿತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರಿಂದ ಮಾಹಿತಿ ಪಡೆಯಲು ಮಂಗಳವಾರ ಇಲ್ಲಿಗೆ ಕರೆಸಿಕೊಂಡಿದ್ದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಮತ್ತು ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಅವರು ಇಬ್ಬರು ನಾಯಕರನ್ನೇ ಹೊಣೆ ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

‘ಪರಿಷತ್ ಚುನಾವಣೆಯನ್ನು ನೀವು ಗಂಭೀರವಾಗಿ ಪರಿಗಣಿಸಿರಲಿಲ್ಲ. ಕಾಂಗ್ರೆಸ್ ಪಕ್ಷವು ಐದನೇ ಅಭ್ಯರ್ಥಿ ಹಾಕಿದ ಬಳಿಕವೂ ನಿರ್ಲಕ್ಷ್ಯ ತೋರಿದ್ದೀರಿ. ಮೈತ್ರಿ ಅಭ್ಯರ್ಥಿ ಸೋತರೂ ಪರವಾಗಿಲ್ಲ ಎಂಬಂತೆ ವರ್ತಿಸಿದ್ದೀರಿ’ ಎಂದರು ಎನ್ನಲಾಗಿದೆ.

▶6

ಪ್ರಾಥಮಿಕ ವರದಿ ಇಂದು ಸಲ್ಲಿಕೆ

ಬೆಂಗಳೂರು: ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ರಚಿಸಲಾದ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ನೇತೃತ್ವದ ಸಮಿತಿ ಬುಧವಾರ (ಜೂನ್ 24) ಪ್ರಾಥಮಿಕ ವರದಿ ಸಲ್ಲಿಸಲಿದೆ. ‘ಒಂದು ವಾರದಲ್ಲಿ ವರದಿ ಸಲ್ಲಿಸಬೇಕು’ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸೂಚಿರುವ ಹಿನ್ನೆಲೆಯಲ್ಲಿ ಸಮಿತಿಯು ಮಂಗಳವಾರ ಸಭೆ ನಡೆಸಿತು. ಸಂಶಯಕ್ಕೆ ಗುರಿಯಾಗಿರುವ ಶಾಸಕರಿಗೆ ದೂರವಾಣಿ ಕರೆ ಮಾಡಿ ಮಾಹಿತಿ ಪಡೆದುಕೊಂಡಿತು ಎಂದು ಮೂಲಗಳು ತಿಳಿಸಿವೆ.

ಪುಣೆ: ಉದ್ಯಮಿ ಸಾವಿನ ಪ್ರಕರಣದಲ್ಲಿ ಭಾವಿಪತ್ನಿ, ಆಕೆಯ ಪ್ರಿಯಕರನ ಬಂಧನ

‘ಭಾವಿ ಪತಿಯನ್ನು ಕಣಿವೆಗೆ ನೂಕಿದಳು’

ಪುಣೆ (ಪಿಟಿಐ): ಮದುವೆ ಇಷ್ಟವಿಲ್ಲ ಎಂಬ ಕಾರಣಕ್ಕೆ ತನ್ನ ಭಾವಿ ಪತಿಯನ್ನು ಚಾರಣದ ನೆಪದಲ್ಲಿ ಐತಿಹಾಸಿಕ ಲೋಹಾಗಢ ಕೋಟೆಗೆ ಕರೆದೊಯ್ದ ಭಾವಿ ಪತ್ನಿ, 400 ಅಡಿ ಆಳದ ಕಂದಕಕ್ಕೆ ನೂಕಿ ಕೊಲೆ ಮಾಡಿದ್ದಾಳೆ ಎಂದು ಆರೋಪಿಸಲಾಗಿದೆ.

ಯುವತಿಯ ಪ್ರಿಯಕರನೂ ಕೃತ್ಯದಲ್ಲಿ ಭಾಗಿಯಾಗಿದ್ದಾನೆ. ರಿಯಲ್ ಎಸ್ಟೇಟ್ ಸಂಸ್ಥೆಯೊಂದರ ನಿರ್ದೇಶಕರಾಗಿದ್ದ ಕೇತನ್ ವಿಶಾಲ್ ಅಗರವಾಲ್ ಸಾವಿನ ಪ್ರಕರಣದ ಬೆನ್ನುಹತ್ತಿದ ಪೊಲೀಸರು, ಭಾವಿ ಪತ್ನಿ ಮತ್ತು ಆಕೆಯ ಪ್ರಿಯಕರ ಸೇರಿ ಕೊಲೆ ಮಾಡಿರುವುದನ್ನು ಪತ್ತೆಮಾಡಿದ್ದಾರೆ. ಇಬ್ಬರನ್ನೂ ಮಂಗಳವಾರ ಬಂಧಿಸಲಾಗಿದೆ.

ಕೊಲೆಯಾದ ಕೇತನ್ ವಿಶಾಲ್ ಅಗರವಾಲ್ ಅವರನ್ನು ವಿವಾಹ ಆಗಬೇಕಿದ್ದ ಸಿಯಾ ಗೋಯಲ್ ಹಾಗೂ ಆಕೆಯ ಪ್ರಿಯಕರ ಚೇತನ್ ಬಾಬುಲಾಲ್ ಚೌಧರಿ (22) ಬಂಧಿತರು. ‘ಆರೋಪಿಗಳು ಕೇತನ್ ಅವರನ್ನು ಜೂನ್ 18ರಂದು ಪುಣೆಯ ಲೋಹಾಗಢ ಕೋಟೆಯಿಂದ ಆಳವಾದ ಕಣಿವೆಗೆ ನೂಕಿ ಕೊಲೆ ಮಾಡಿದ್ದರು. ನಂತರ, ಕೇತನ್ ಅವರು ಆಕಸ್ಮಿಕವಾಗಿ ಕಣಿವೆಗೆ ಬಿದ್ದು ಸಾವನ್ನಪ್ಪಿದ್ದಾಗಿ ಬಿಂಬಿಸಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

> **ಪೊಲೀಸರು ನನ್ನ ಮಗನ ಮೃತದೇಹವನ್ನು ಮನೆಗೆ ತಂದಾಗ ಸಿಯಾಳಿಂದ ಯಾವುದೇ ಪ್ರತಿಕ್ರಿಯೆ ಇರಲಿಲ್ಲ. ಅವಳ ಮುಖದಲ್ಲಿ ದುಃಖವೂ ಕಾಣಲಿಲ್ಲ**
> **ವಿಶಾಲ್ ಅಗರವಾಲ್,** ಕೇತನ್ ತಂದೆ

26 ವರ್ಷದ ಕೇತನ್ ಅವರು ಪುಣೆ ಜಿಲ್ಲೆಯ ಗಹುಂಜೆ ನಿವಾಸಿಯಾಗಿದ್ದರು. ತಮ್ಮ ಕುಟುಂಬದ ಒಡೆತನದ ರಿಯಲ್ ಎಸ್ಟೇಟ್ ಸಂಸ್ಥೆಯ ನಿರ್ದೇಶಕರಾಗಿದ್ದರು. ಕೇತನ್ ಹಾಗೂ ಸಿಯಾ ಗೋಯಲ್ ಅವರ ಮದುವೆ ನಿಶ್ಚಯವಾಗಿತ್ತು.

▶7

ಅಪ್ಪ, ಅಮ್ಮ, ತಂಗಿ ಹತ್ಯೆಗೈದ ಯುವತಿ

ಬೆಂಗಳೂರು: ಯುವತಿಯೊಬ್ಬಳು ಪ್ರಿಯಕರನ ಜತೆ ಸೇರಿ ತಂದೆ, ತಾಯಿ ಹಾಗೂ ಸಹೋದರಿಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಕೆ.ಆರ್.ಪುರದ ಶೀಗೇಹಳ್ಳಿ ಬಳಿಯ ಡೊಮಿನಿಕ್ ಲೇಔಟ್‌ನಲ್ಲಿ ನಡೆದಿದೆ.

ತಮಿಳುನಾಡಿನ ಸೋಮಸುಂದರ್ (52), ಅವರ ಪತ್ನಿ ಮುತ್ತುಲಕ್ಷ್ಮಿ (48) ಹಾಗೂ ಕಿರಿಯ ಮಗಳು ಸುಪ್ರಿಯಾ (19) ಕೊಲೆಯಾದವರು. ಸೋಮಸುಂದರ್ ದಂಪತಿಯ ಹಿರಿಯ ಮಗಳು ಶ್ವೇತಾ, ಪ್ರಿಯಕರ ಕೆನೆತ್ ಜತೆ ಸೇರಿ ಕೃತ್ಯವೆಸಗಿ ಪರಾರಿಯಾಗಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿ.ಟೆಕ್ ಪದವೀಧರರಾದ ಶ್ವೇತಾ ಮತ್ತು ಕೆನೆತ್, ಕಾಲೇಜಿನಲ್ಲಿ ಸಹಪಾಠಿಗಳು. ವೈಟ್‌ಫೀಲ್ಡ್‌ನ ಕೆನೆತ್, ಹೈದರಾಬಾದ್‌ನ ಸಾಫ್ಟ್‌ವೇರ್ ಕಂಪನಿಯಲ್ಲಿ ಉದ್ಯೋಗಿ. ಪರಸ್ಪರ ಪ್ರೀತಿ ಮಾಡುತ್ತಿದ್ದ ಶ್ವೇತಾ ಮತ್ತು ಕೆನೆತ್, ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಇದಕ್ಕೆ ಶ್ವೇತಾಳ ಪೋಷಕರು ಆಕ್ಷೇಪ ವ್ಯಕ್ತಪಡಿಸಿ, ಮನೆಗೆ ವಾಪಸ್ ಬರುವಂತೆ ಹೇಳಿದ್ದರೂ, ಆಕೆ ಬಂದಿರಲಿಲ್ಲ.

ಶ್ವೇತಾ, ಕೆನೆತ್ ಸಹ ಜೀವನ ನಡೆಸುತ್ತಿದ್ದ ವಿಚಾರ ಗೊತ್ತಾಗಿ ಸೋಮಸುಂದರ್ ದಂಪತಿಯು ಕಿರಿಯ ಮಗಳ ಜತೆ ಭಾನುವಾರ ರಾತ್ರಿ ಫ್ಲ್ಯಾಟ್‌ಗೆ ಬಂದು ಉಳಿದುಕೊಂಡಿದ್ದರು. ಕೆನೆತ್ ಜತೆಗಿನ ಸಂಬಂಧದ ವಿಚಾರವಾಗಿ ಶ್ವೇತಾಗೆ ಬೈದರು. ಜಗಳ ವಿಕೋಪಕ್ಕೆ ಹೋಗಿ ಶ್ವೇತಾ, ಕೆನೆತ್‌ನ ಜತೆ ಸೇರಿ ತಂದೆ, ತಾಯಿಗೆ ಚಾಕುವಿನಿಂದ ಇರಿದಳು.

▶7

www.gmu.ac.in
* 1200 + Placements
* 1400 + Industry Internships
2nd Rank Best Emerging University in India
Times of India Ranking 2026

GM UNIVERSITY DAVANAGERE
Innovating Minds

GMU
B.Tech CET Code E303 | MBA PGCET Code B086 | MCA PGCET Code C568 | M.Tech PGCET Code T799 | GMIT CET Code E114

Admission Contact 9364099712

UG PROGRAMS

Faculty of Engineering and Technology
School of Computer Science and Technology
B.Tech
E303BW Computer Science and Engineering (CSE)
E303CU Information Science and Engineering (ISE)
E303LE Computer Science-AI & ML (CS-AIML)
E303LJ Computer Science - AI, Blockchain & Business Systems (CS-AI, BC & BS)
E303LK Computer Science-IoT with AI
E303LD Computer Science-Data Science (CS-DS)
E303LG Computer Science-Cyber Security (CS-CY)
E303LF Computer Science-Cloud Computing (CS-CC)
E303LH Computer Science-Information Security (CS-IY)
School of Engineering
B.Tech
E303BB Electronics and Communication Engineering (E&CE)
E303BJ Electrical and Electronics Engineering (EEE)
E303RA Robotics and Automation (RA)
E303YH Engineering Design (ED)
E303CE Civil Engineering (CE)
E303BT Biotechnology (BT)
E303ME Mechanical Engineering (ME)
Evening Courses
Electrical and Electronics Engineering (Evening)
Civil Engineering (Evening)

Faculty of Commerce and Management
School of Commerce
B.Com
General
Data Analytics and Business Intelligence
AI and Business Analytics
Accounting and Taxation
School of Management
BBA
General
Blockchain and Fintech
AI and Business Analytics
Digital Marketing and E-Commerce
Aviation Management
Tourism, Hospitality and Event Management
Healthcare Management

GM School of Law
LL.B
B.B.A., LL.B. (Integrated)
B.Com., LL.B. (Integrated)
* Students can opt for B.Voc. as an Additional Degree while pursuing main Degree

Faculty of Basic and Applied Sciences
School of Mathematical and Physical Sciences
B.Sc
Physics, Mathematics, CS (Minor)
Mathematics, Computer Science
Statistics, Computer Science
School of Chemical and Biological Sciences
B.Sc
Physics, Chemistry (Major), CS (Minor)
Chemistry, Computer Science (Major)
Chemistry, Zoology, CS (Minor)
Chemistry, Botany, CS (Minor)
Chemistry, Environmental Science, CS (Minor)
* Computer Science is available either as Minor or Major for all B.Sc Programs
School of Applied Sciences
B.Sc
Food Science and Technology
Biotechnology and Tissue Engineering
Industrial Microbiology

Faculty of Computing and IT
School of Computer Application
BCA
General
School of Computer Science
BCA
Data Science
Cyber Security
AI and Data Analytics

Research Programs
PhD
Faculty of Engineering and Technology
Faculty of Computing and IT
Faculty of Basic and Applied Sciences
Faculty of Commerce and Management

B.Voc.
Electrical Vehicle Technology
Fashion Design & Apparel Manufacture
Drone Development and Application
Airport Ground Services and Support
E-Commerce and Digital Marketing
BSc in Animation and Visual Effects

PG PROGRAMS

GM School of Advanced Studies
M.Tech
Deep Learning
AI in Healthcare
Data Engineering
Computer Aided Structural Engineering (CASE)
Smart Electrical Systems and Sustainable Energy
Advanced Electronics & Intelligent Communication Systems
Bioengineering and Genetic Technology
Product Development and Marketing
Smart and Green Agriculture
Intelligent Systems and Industrial IoT
Semiconductor Technologies and Chip Design

Faculty of Basic and Applied Sciences
M.Sc
Physics
Chemistry
Mathematics
Food Technology
D.Pharm, B.Pharm, M.Pharm
Diploma Programs available with polytechnic institute

Faculty of Computing and IT
School of Computer Application
MCA
General
Data Science
Cyber Security
AI and Data Analytics
M.Sc (New Age Programs)
Data Science
AI and Data Analytics
Cyber Security

Faculty of Commerce and Management
School of Commerce
M.Com
Applied Finance and Digital Business
Fintech Analytics and Entrepreneurship

GM Business School
MBA
General
Professional
Advanced
International

Post Graduate Diploma (Pg Diploma)
AI and IoT with 'Intel'
Embedded Systems with 'Texas Instruments'
Accounting and Finance with 'Tally'

93640 99720 | 63642 59993 www.gmu.ac.in

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಮಳೆ ಸಾಧ್ಯತೆ

ಕಸ ಸಂಗ್ರಹಣೆಯ ಆಟೊಗಳ ಮೇಲೆ ನಿಗಾ

‘ಮಾತ್ರಾ’ ಅಪ್ಲಿಕೇಶನ್ ಪರಿಶೀಲನೆ ● ಕಸ ರಸ ಕೇಂದ್ರದ ಆವರಣದಲ್ಲಿ ಸಿ.ಸಿ.ಟಿ.ವಿ ಅಳವಡಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಕೋರಮಂಗಲದಲ್ಲಿರುವ ಕಸ ರಸ ಘಟಕದಲ್ಲಿ ಕಸ ಸಂಗ್ರಹಣೆಯ ಆಟೊ ಚಾಲಕರ ಮೇಲೆ ನಿಗಾ ಇಡಲು ಪ್ರಾಯೋಗಿಕವಾಗಿ ಪರಿಚಯಿಸಿರುವ ‘ಮಾತ್ರಾ’ ಅಪ್ಲಿಕೇಶನ್ ಬಳಕೆಯನ್ನು ಆಯುಕ್ತ ಕೆ.ಎನ್.ರಮೇಶ್ ಪರಿಶೀಲಿಸಿದರು.

ಈ ಅಪ್ಲಿಕೇಶನ್ ಮೂಲಕ ಕಸ ಸಂಗ್ರಹಣಾ ಆಟೊಗಳು ನಿಗದಿತ ಸಮಯದಲ್ಲಿ ಕಾರ್ಯನಿರ್ವಹಿಸುತ್ತಿವೆಯೇ? ಯಾವ ಮಾರ್ಗದಲ್ಲಿ ಸಂಚರಿಸುತ್ತಿವೆ? ಎಷ್ಟು ದೂರ ಕ್ರಮಿಸಿವೆ ಹಾಗೂ ಎಷ್ಟು ಗಂಟೆ ಕೆಲಸ ಮಾಡಿವೆ? ಎಂಬುದರ ಸಮಗ್ರ ಮಾಹಿತಿ ಲಭ್ಯವಾಗುತ್ತದೆ. ಜಿಪಿಎಸ್ ಟ್ರ್ಯಾಕಿಂಗ್ ತಂತ್ರಜ್ಞಾನ ಹೊಂದಿರುವ ಈ ಅಪ್ಲಿಕೇಶನ್ ಅನ್ನು ಪ್ರಸ್ತುತ 25 ಕಸ ಸಂಗ್ರಹಣಾ ಆಟೊ ಚಾಲಕರ ಮೊಬೈಲ್‌ಗಳಿಗೆ ಅಳವಡಿಸಲಾಗಿದೆ ಎಂದು ಅಧಿಕಾರಿಗಳು ಆಯುಕ್ತರಿಗೆ ವಿವರಿಸಿದರು.

ಕೋರಮಂಗಲ ವಾರ್ಡ್ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆಯ ಆಟೊಗಳ ಕಾರ್ಯನಿರ್ವಾಹಣಾ ಸಂಖ್ಯೆ ಹಾಗೂ ಸಮಯ ನಿಗದಿ ಕುರಿತಂತೆ ಸಾರ್ವಜನಿಕರಿಂದ ಪ್ರತಿನಿತ್ಯ ದೂರುಗಳು ಬರುತ್ತಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಕಸ ಸಂಗ್ರಹಣೆ ಹಾಗೂ ವಿಲೇವಾರಿ ವ್ಯವಸ್ಥೆಯನ್ನು ಸರಿಪಡಿಸಲು ಕೋರಮಂಗಲ ವಾರ್ಡ್‌ನಲ್ಲಿ ಪ್ರಾಯೋಗಿಕವಾಗಿ ಹೊಸ ಅಪ್ಲಿಕೇಶನ್ ಬಳಸಲಾಗುತ್ತಿದೆ. ಇದರಿಂದ ಕಸ ಸಂಗ್ರಹಣೆಯಲ್ಲಿ ಉಂಟಾಗುತ್ತಿದ್ದ ಸಮಸ್ಯೆ ಕಡಿಮೆಯಾಗಲಿದೆ ಎಂದು ಆಯುಕ್ತರು ವಿಶ್ವಾಸ ವ್ಯಕ್ತಪಡಿಸಿದರು.

ಕಸ ರಸ ಕೇಂದ್ರದ ಆವರಣದಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಘಟಕದ ಒಳಗೆ ಕೆಲಸ ಮಾಡುವ ಪ್ರತಿಯೊಬ್ಬ ಸಿಬ್ಬಂದಿಗೂ ಗುರುತಿನ ಚೀಟಿ ನೀಡಬೇಕು. ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲು ಸೂಚನೆ ನೀಡಿದರು.

ಸಿದ್ದಾರ್ಥ ಕಾಲೊನಿ ವ್ಯಾಪ್ತಿಯಲ್ಲಿ ಎರಡು ಬ್ಲ್ಯಾಕ್ ಸ್ಪಾಟ್‌ಗಳನ್ನು ಸ್ವಚ್ಛಗೊಳಿಸಿ, ಮರುಕಳಿಸದಂತೆ ಕ್ರಮ ವಹಿಸಲು ಸೂಚಿಸಿದರು.

ಸಿಬ್ಬಂದಿ ಕಾರ್ಯಕ್ಷಮತೆ: ಪರಿಶೀಲನಾ ಸಭೆ

ಬೆಂಗಳೂರು: ಘನತ್ಯಾಜ್ಯ ನಿರ್ವಹಣೆ, ಬ್ಲ್ಯಾಕ್ ಸ್ಪಾಟ್ ತೆರವು, ಸಿಬ್ಬಂದಿ ಹಾಜರಾತಿ, ಪೌರಕಾರ್ಮಿಕರ ಕಾರ್ಯನಿರ್ವಹಣೆ ಹಾಗೂ ವಿವಿಧ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಕಸದ ಸಂಗ್ರಹಣಾ ವಾಹನಗಳ ಚಾಲಕರು ಹಾಗೂ ಸಹಾಯಕ ಸಿಬ್ಬಂದಿ ನಿಗದಿತ ಸಮಯವಾದ ಬೆಳಿಗ್ಗೆ 5.30ಕ್ಕೆ ಕರ್ತವ್ಯಕ್ಕೆ ಹಾಜರಾಗದೇ ಇರುವ ಪ್ರಕರಣಗಳು ಕಂಡುಬಂದವು. ಈ ಬಗ್ಗೆ ಸಿಬ್ಬಂದಿಗೆ ನೋಟಿಸ್ ನೀಡಿದ್ದು, ಪದೇ ಪದೇ ನಿರ್ಲಕ್ಷ್ಯ ತೋರುವ ಗುತ್ತಿಗೆ ಸಿಬ್ಬಂದಿಯ ಸೇವೆಯನ್ನು ವಜಾಗೊಳಿಸುವ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಘನತ್ಯಾಜ್ಯ ನಿರ್ವಹಣೆಯಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಕುರಿತು ಡಿಜಿಎಂ, ಎಜಿಎಂಗಳೊಂದಿಗೆ ವಿಸ್ತೃತ ಚರ್ಚೆ ನಡೆಸಿದ ಆಯುಕ್ತರು, ಎಲ್ಲಾ ಆಟೊ ಮಸ್ಟರಿಂಗ್ ಸೆಂಟರ್‌ಗಳು, ಪೌರಕಾರ್ಮಿಕ ಮಸ್ಟರಿಂಗ್ ಸೆಂಟರ್‌ಗಳು ಹಾಗೂ ಇತರೆ ಸಂಬಂಧಿತ ಕೇಂದ್ರಗಳ ಜಿಪಿಎಸ್ ಲೊಕೇಶನ್ ಮತ್ತು ಛಾಯಾಚಿತ್ರಗಳನ್ನು ಕಡ್ಡಾಯವಾಗಿ ವಾಟ್ಸಾಪ್ ಮೂಲಕ ಸಲ್ಲಿಸುವಂತೆ ಸೂಚಿಸಿದರು.

ನಗರದ ವಿವಿಧ ಭಾಗಗಳಲ್ಲಿ ಗುರುತಿಸಲಾಗಿರುವ ಬ್ಲ್ಯಾಕ್ ಸ್ಪಾಟ್‌ಗಳ ಕುರಿತು ಪರಿಶೀಲನೆ ನಡೆಸಿದ ಅಧಿಕಾರಿಗಳು, ಈಗಾಗಲೇ 20 ಸ್ಥಳಗಳಲ್ಲಿ ಬ್ಲ್ಯಾಕ್ ಸ್ಪಾಟ್ ತೆರವುಗೊಳಿಸಿರುವುದಾಗಿ ಮಾಹಿತಿ ನೀಡಿದರು. ಉಳಿದ ಸ್ಥಳಗಳಲ್ಲಿ ಅಗತ್ಯವಿರುವ ನಾಗರಿಕ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಿ, ಪ್ರತಿ ವಾರ ಕನಿಷ್ಠ 20 ಬ್ಲ್ಯಾಕ್ ಸ್ಪಾಟ್‌ಗಳನ್ನು ಶಾಶ್ವತವಾಗಿ ನಿವಾರಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸುವಂತೆ ಆಯುಕ್ತರು ಸೂಚಿಸಿದರು.

ಮಾರ್ಷಲ್ ವೈಫಲ್ಯ: ಕ್ರಮಕ್ಕೆ ಸೂಚನೆ

ಎನ್‌ಸಿಸಿ ಹಾಗೂ ಮಾಜಿ ಸೈನಿಕರ ವರ್ಗದಿಂದ ಆಯ್ಕೆಯಾಗಿ ಇಂದಿರಾ ಕ್ಯಾಂಟೀನ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾರ್ಷಲ್‌ಗಳನ್ನು ಘನತ್ಯಾಜ್ಯ ನಿರ್ವಹಣೆಯಲ್ಲಿ ಬಳಸಬೇಕು. ಅವರೆಲ್ಲ ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಕರ್ತವ್ಯ ನಿರ್ವಹಣೆಯಲ್ಲಿ ವೈಫಲ್ಯ ಕಂಡುಬಂದಲ್ಲಿ ಸಂಬಂಧಿತ ಮಾರ್ಷಲ್‌ಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಎಚ್ಚರಿಕೆ ನೀಡಿದರು.

ಅಪಾರ್ಟ್‌ಮೆಂಟ್‌ಗಳು ಹಾಗೂ ಬಲ್ಕ್ ವೇಸ್ಟ್ ಜನರೇಟರ್‌ಗಳ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಿ, ಘನ ತ್ಯಾಜ್ಯ ನಿರ್ವಹಣೆ ಹಾಗೂ ತೆರಿಗೆ ಪಾವತಿ ಸಂಬಂಧಿತ ಮಾಹಿತಿಯನ್ನು ನವೀಕರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

‘ಸ್ಕೌಟ್ಸ್’ ಅವಧಿ ವಿಸ್ತರಿಸಬೇಕಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ‘ಸ್ಕೌಟ್ಸ್’ ಕಾರ್ಯಕ್ರಮವನ್ನು ಮೂರು ವರ್ಷಗಳಿಗೆ ಸೀಮಿತಗೊಳಿಸದೆ, ಇನ್ನಷ್ಟು ಅವಧಿಗೆ ವಿಸ್ತರಿಸಬೇಕಿದೆ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಉನ್ನತ ಶಿಕ್ಷಣ ಇಲಾಖೆ ಮತ್ತು ಬ್ರಿಟಿಷ್ ಕೌನ್ಸಿಲ್ ಸಹಯೋಗದಲ್ಲಿ ಪ್ರತಿಭಾವಂತ ಪದವಿಪೂರ್ವ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾದ ‘ಸ್ಕೌಟ್ಸ್-2.0’ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಇದು ಕೇವಲ ಪದವಿ ಪಡೆಯುವ ಕಾರ್ಯಕ್ರಮವಲ್ಲ. ಯುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿ ಅವರ ಕ್ಷೇತ್ರಗಳಲ್ಲಿ ಅವರನ್ನು ನಾಯಕರನ್ನಾಗಿ ಬೆಳೆಸುವುದಾಗಿದೆ. ಈ ಅವಕಾಶ ಕೆಲವರಿಗೆ ಮಾತ್ರ ಸಿಗುತ್ತದೆ. ನೀವು ಕನಸು ಕಾಣಬೇಕು, ಆ ಕನಸು ನನಸಾಗಿಸಿಕೊಳ್ಳಲು ಹಂಬಲಿಸಬೇಕು. ಅದಕ್ಕಾಗಿ ಬದ್ಧರಾಗಿರಬೇಕು, ಶಿಸ್ತಿನ ಪರಿಶ್ರಮ ಹಾಕಬೇಕು. ಉದ್ಯೋಗಿಗಳಾಗುವುದಕ್ಕಿಂತ ಉದ್ಯೋಗದಾತರಾಗುವುದು ನಿಮ್ಮ ಗುರಿಯಾಗಲಿ’ ಎಂದು ಸಲಹೆ ನೀಡಿದರು.

‘ನಮ್ಮ ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಈ ಕಾರ್ಯಕ್ರಮ ವಿಸ್ತರಿಸಲು ಸಿದ್ಧವಿದೆ. ನಮ್ಮ ವಿದ್ಯಾರ್ಥಿಗಳಿಗೆ ಅವಕಾಶ ಸಿಗಬೇಕು. ಇಲ್ಲಿಂದ ಬ್ರಿಟನ್‌ಗೆ ಹೋಗಿ ಅಲ್ಲೇ ನೆಲಸಬೇಡಿ, ಅಲ್ಲಿ ವ್ಯಾಸಂಗ ಮಾಡಿ ಭಾರತಕ್ಕೆ ಮರಳಿ, ಇಲ್ಲಿ ಕೆಲಸ ಮಾಡಿ’ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

‘ಗ್ರಾಮೀಣ ವಿದ್ಯಾರ್ಥಿಗಳು ಎಂದು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ನಮ್ಮ ಕಾಲದಲ್ಲಿ ನಾವು ಕಷ್ಟಪಟ್ಟು ಓದಬೇಕಿತ್ತು. ಈಗ ಎಲ್ಲಾ ಮಾಹಿತಿ ನಿಮ್ಮ ಬೆರಳತುದಿಯಲ್ಲಿವೆ. ವಿಶ್ವವಿದ್ಯಾಲಯಗಳ ಕುಲಪತಿಗಳು ಇನ್ನಷ್ಟು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು. ಪ್ರತಿಭೆಗೆ ಅನುಗುಣವಾಗಿ ಗುರುತಿಸಿ, ಅವಕಾಶ ಕಲ್ಪಿಸಬೇಕು’ ಎಂದರು.

ಮಾಜಿ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಶಾಸಕರಾದ ವಿಜಯಾನಂದ ಕಾಶಪ್ಪನವರ್, ದರ್ಶನ್ ಧ್ರುವನಾರಾಯಣ್, ಬ್ರಿಟಿಷ್ ಡೆಪ್ಯೂಟಿ ಹೈ ಕೌನ್ಸಿಲ್ ಒವೆನ್ ರಿಚರ್ಡ್ಸ್, ಬ್ರಿಟಿಷ್ ಕೌನ್ಸಿಲ್ ದಕ್ಷಿಣ ಭಾರತ ನಿರ್ದೇಶಕಿ ಜನಕ ಪುಷ್ಪನಾಥನ್, ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ ತುಳಸಿ ಮದ್ದಿನೇನಿ ಇದ್ದರು.

PUBLIC NOTICE

This is to inform the general public that our clients have negotiated to purchase the schedule property from it owner **Sri. S K Sanjeevi**, S/o Sri. S K Narasaraju, Aged about 59 years, R/at: No.97, 8th Cross, Sadashivnagar, Bangalore-560080. Any person/s having any claim or objection for the proposed sale may contact the undersigned with all relevant document within **TEN** days from the date of this publication, whereafter no such claims will be entertained and clients will proceed to purchase the schedule property.

SCHEDULE

All that piece and parcel of the residential immovable property bearing No: 388, HIG-SFHS, II Stage, 23rd Block, Rajmahal Villas extension, Bangalore 560046, measuring east to west 16.90 meters (55.6 feet) and North to South 18340 meters (60.5 feet), totally admeasuring 310.96 square meters, (3363.8 Square feet), with Building with & bounded as follows:

East by : By House No.387;
West by : By House No.389;
North by : By 11th Main Road; and
South by : House No.374.

Harish Ananthmurthy,
Legal i,
Advocates & Solicitors,
601, Ground Level, 3rd Main Road,
Sadashivanagar, Bangalore-560080.

ಎಆರ್‌ಒ ಮಂಜುಳಾ ಅಮಾನತು

ಹೇರೋಹಳ್ಳಿಯಲ್ಲಿ 50ಕ್ಕೂ ಹೆಚ್ಚು ಅಕ್ರಮ ಖಾತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೇರೋಹಳ್ಳಿ ಗ್ರಾಮದ ಅಕ್ರಮ ಬಡಾವಣೆಯಲ್ಲಿ 50ಕ್ಕೂ ಹೆಚ್ಚು ನಿವೇಶನಗಳಿಗೆ ಕಾನೂನುಬಾಹಿರವಾಗಿ ಎ ಖಾತಾ ನೀಡಿದ್ದ ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಕೆ.ಎಸ್. ಮಂಜುಳಾ ಅವರನ್ನು ಜಿಬಿಎ ಮುಖ್ಯ ಆಯುಕ್ತರು ಅಮಾನತು ಮಾಡಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಹೇರೋಹಳ್ಳಿ ಗ್ರಾಮದ ಸರ್ವೆ ನಂ. 56/1ರಲ್ಲಿ ನಿರ್ಮಿಸಲಾಗಿದ್ದ ಅಕ್ರಮ ಬಡಾವಣೆಯಲ್ಲಿ ನಿವೇಶನಗಳಿಗೆ ಎ-ಖಾತಾ/ ಇ-ಖಾತಾಗಳನ್ನು ಅಕ್ರಮವಾಗಿ ಮಾಡಿಕೊಟ್ಟು ಪಾಲಿಕೆಗೆ ಕೋಟ್ಯಂತರ ರೂಪಾಯಿ ನಷ್ಟವನ್ನುಂಟು ಮಾಡಿದ್ದಾರೆ. ಇವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ ಎನ್. ಆರ್. ರಮೇಶ್ ಅವರು ಮೇ 11ರಂದು ದೂರು ನೀಡಿದ್ದರು.

ಈ ಬಗ್ಗೆ ತನಿಖೆ ನಡೆಸಲು ಮುಖ್ಯ ಆಯುಕ್ತರು ಸೂಚಿಸಿದ್ದರು. ಪಶ್ಚಿಮ ನಗರ ಪಾಲಿಕೆಯ ಜಂಟಿ ಆಯುಕ್ತರು ವರದಿ ಸಲ್ಲಿಸಿ, ಖಾತಾ ಬದಲಾವಣೆ ಸಮಯದಲ್ಲಿ ದಾಖಲೆಗಳನ್ನು ಪರಿಶೀಲಿಸದೆ, ನಿಯಮಗಳನ್ನು ಪಾಲಿಸದೆ ಖಾತಾ ಬದಲಾಯಿಸಿ ತಪ್ಪು ಮಾಡಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬಹುದಾಗಿದೆ ಎಂದು ಶಿಫಾರಸು ಮಾಡಿದ್ದರು.

ಖಾತಾ ನೀಡಿರುವ ಬಗ್ಗೆ ಸಹಾಯಕ ಕಂದಾಯ ಅಧಿಕಾರಿಯವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದು, ಅವರು ನೀಡಿರುವ ಸಮಜಾಯಿಷಿಯನ್ನು ಪರಿಶೀಲಿಸಲಾಯಿತು. ಹಿಂದಿನ ಬಿಬಿಎಂಪಿಯ ಖಾತೆ ನಕಲು ಹಾಗೂ ಪ್ರಮಾಣಪತ್ರಗಳನ್ನು 2016ರ ಆಗಸ್ಟ್ 16ರಂದು ನೀಡಲಾಗಿದೆ. ಈ ಬಗ್ಗೆ ಖಾತೆ ನಕಲುಗಳಲ್ಲಿ ನಮೂದಿಸಲಾಗಿರುವ ಅಸೆಸ್‌ಮೆಂಟ್ ವಹಿಗಳ ಸಂಖ್ಯೆ, ಪುಟಗಳ ಸಂಖ್ಯೆಗಳನ್ನು ಪರಿಶೀಲಿಸಿದಾಗ, ಸ್ವತ್ತಿನ ಮಾಲೀಕರ ಹೆಸರು ಬೇರೆ ಇರುತ್ತದೆ. ಅಲ್ಲದೇ ಸ್ವತ್ತಿನ ಅಳತೆಗಳೂ ತಾಳೆ ಹೊಂದುತ್ತಿಲ್ಲ. ಅಧಿಕಾರಿಯು ಬೇರೆ ಸ್ವತ್ತುಗಳ ಇಪಿಐಡಿ ಸಂಖ್ಯೆಗಳನ್ನು ಬಳಸಿಕೊಂಡು ಅಕ್ರಮವಾಗಿ ವಿಭಜನೆ ಮಾಡಿಕೊಟ್ಟಿರುವುದು ಕಂಡು ಬಂದಿದೆ. ಇದರಿಂದ ಹಾಲಿ ಖಾತೆದಾರರಿಗೂ ಖಾತೆ ಪಡೆಯಲು ತೊಂದರೆಯಾಗಿದೆ ಎಂದು ಕಂದಾಯ ವಿಭಾಗದ ಜಂಟಿ ಆಯುಕ್ತರೂ ವರದಿ ನೀಡಿದ್ದರು. ಈ ಎಲ್ಲ ವರದಿಗಳನ್ನು ಆಧರಿಸಿ ಕೆ.ಎಸ್. ಮಂಜುಳಾ ಅವರನ್ನು ಅಮಾನತುಗೊಳಿಸಲಾಗಿದೆ.

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ

- ಕರೀಗೌಡ-ಸಿಇಒ- 77605 04651
- ರಮಾಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 948068 84046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು ‘ಪ್ರಜಾವಾಣಿ’ಗೂ ಕಳುಹಿಸಿಕೊಡಿ. ನಿಮ್ಮ ಹೆಸರು ಹಾಗೂ ವಿಳಾಸವನ್ನು ಕಳಿಸಿ. ಅದನ್ನು ಪ್ರಕಟಿಸಲಾಗುತ್ತದೆ.

ನಾಯಂಡಹಳ್ಳಿಯ ಐಟಿಐ ಬಡಾವಣೆಯಲ್ಲಿನ ಜಿಆರ್‌ಸಿ ಬೃಂದಾವನ ಅಪಾರ್ಟ್‌ಮೆಂಟ್ ಎದುರಿನ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಬಳಿ ಸುರಿದಿದ್ದ ಕಸ ಸಮಸ್ಯೆ ಬಗ್ಗೆ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ನಂತರ ಮಂಗಳವಾರ ತೆರವು ಮಾಡಲಾಯಿತು– ನರಸಪ್ಪ

ಆರ್‌.ಟಿ.ನಗರದ ದಾಸಪ್ಪ ಗಾರ್ಡನ್ ರಸ್ತೆ ಕಸ ಸುರಿಯುವ ತಾಣವಾಗಿದೆ
– ಅನು ಅಭಿ

IN THE SUPREME COURT OF INDIA
EXTRA-ORDINARY APPELLATE JURISDICTION
SPECIAL LEAVE PETITION (CIVIL) No. 27711 OF 2025
WITH PRAYER FOR INTERIM RELIEF

THE RESIDENTS FORUM ... Petitioner(s)
VERSUS
THE STATE OF KARNATAKA AND OTHERS ... Respondent(s)
To,
1 ORISSA CULTURAL ASSOCIATION,
NO.19, 5TH MAIN JAYAMAHAL EXTENSION BENGALURU -560 046 REP BY ITS EXECUTIVE COMMITTEE MEMBER, SRI U RANJAN MOHANTY, DISTRICT- BANGALORE, KARNATAKA.
PID: 130767/2026 FOR R[9] IN SLP(C) NO.27711/2025 (SEC IV-A)

WHEREAS the Petition for Special Leave to Appeal with prayer for interim relief along with application for CONDONATION OF DELAY IN FILING, EXEMPTION FROM FILING O.T., SUBSTITUTED SERVICE above mentioned (copy enclosed) filed in the Registry by Ms. RANU PUROHIT, Advocate on behalf of the Petitioner(s) above named was listed for hearing before this Court on 15th September, 2025, when the Court was pleased to pass the following order:-

1. Delay condoned. Accordingly, I.A. No. 226297/2025 is allowed.
2. One of the submissions of learned counsel for the petitioner is that the plot in question is marked as a green area in the master plan of 2007, which is the last master plan and that the master plan of 1995 wherein it was reserved for residential area, stands superseded.
3. Issue notice, returnable in six weeks.
4. In the meantime, the parties are directed to maintain status quo with regard to the nature of the land in dispute."

AND WHEREAS, the matter above-mentioned was listed before Ld. Registrar's Court on 08th May, 2026, when the following order was passed:-

" Opportunity to file counter affidavit on behalf of respondent nos. 1, 2 and 7 has already been declined. Counter affidavit on behalf of respondent nos. 3, 4 and 6 has been filed after the opportunity has been declined. Apprise the fact before the Hon'ble Court.
Counter affidavit on behalf of respondent no. 5 has already been filed.
Service is complete on respondent no. 8 but none has entered appearance.
Learned counsel for the petitioner has filed an application for substituted service in respect of respondent no. 9 by way of paper publication in newspapers namely "Times of India" Bangalore Edition (English) and "Prajavani Bangalore" (Vernacular language).
Application is hereby allowed.
Learned counsel for the petitioner is directed to file Affidavit alongwith proof of paper publication by 22.05.2026.
List again on 14.07.2026.
Copy of this Record of Proceedings be furnished to the concerned Learned Advocate-on-Record for information and compliance. "

NOW, THEREFORE, TAKE NOTICE that the above petition with prayer for interim relief will be posted for hearing before this Court in due course and you may enter appearance before this Court either in person or through an advocate on record of this Court duly appointed by you in that behalf within 30 days from the date of service of notice. You may thereafter show cause to the Court on the day that may subsequently be specified as to why delay in filing SLP delay in filing SLP be not condoned and Special Leave Petition and interim relief as prayed be not granted and the resultant appeal be not allowed.

Take Further Notice that the prayer for interim relief after notice will also be listed before the Court in due course.

You may file your affidavit in opposition to the petition as provided under Rule 14(1) of Order XXI, S.C.R.2013 within 30 days from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLP and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted.

TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Dated: 13th May, 2026 **Sd/- ASSISTANT REGISTRAR**

‘ಬೊಕ್ಕಸ ಲೂಟಿ ಮಾಡಲು ಗ್ರಾಮ ಗ್ಯಾರಂಟಿ ಸಮಿತಿ’

ಬೆಂಗಳೂರು: ‘ಗ್ರಾಮ ಪಂಚಾಯಿತಿ ಮಟ್ಟದಲ್ಲೂ ‘ಗ್ಯಾರಂಟಿ ಸಮಿತಿ’ಗಳನ್ನು ರಚಿಸುವ ಮೂಲಕ ಕಾಂಗ್ರೆಸ್ ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡಲು ಹೊರಟಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

‘ಗ್ಯಾರಂಟಿ ಸಮಿತಿ ಎಂದರೆ ಸಾರ್ವಜನಿಕರ ತೆರಿಗೆ ಹಣದಲ್ಲಿ ಕಾಂಗ್ರೆಸ್‌ನ ಅತೃಪ್ತ ನಾಯಕರು ಮತ್ತು ಕಾರ್ಯಕರ್ತರನ್ನು ಸಾಕುವ ‘ಗಂಜಿ ಕೇಂದ್ರವೇ’ ಎಂದು ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಪ್ರಶ್ನಿಸಿದ್ದಾರೆ.

‘ಹಣವಿಲ್ಲದೆ ಅಭಿವೃದ್ಧಿ ಕಾರ್ಯಗಳು ನಿಂತಿವೆ. ಸರ್ಕಾರಿ ಶಾಲೆಗಳ ಮಕ್ಕಳು ಪಠ್ಯ ಪುಸ್ತಕ, ಸಮವಸ್ತ್ರಕ್ಕಾಗಿ ಕಾಯುತ್ತಿದ್ದಾರೆ. ಕುಸಿಯುತ್ತಿರುವ ಕೊಠಡಿಗಳ ದುರಸ್ತಿಗೆ, ಮೊಟ್ಟೆಗೂ ದುಡ್ಡಿಲ್ಲದ ದುಸ್ಥಿತಿ ಇದೆ. ರಾಗಿ ಬೆಳೆದ ರೈತರು ಬೆಂಬಲ ಬೆಲೆ ಬಾಕಿಗಾಗಿ ಕಚೇರಿಗಳಿಗೆ ಅಲೆಯುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸಾರ್ವಜನಿಕರ ಹಣವನ್ನು ಪಕ್ಷದ ನಿರುದ್ಯೋಗಿ ಕಾರ್ಯಕರ್ತರಿಗೆ, ಅತೃಪ್ತ ನಾಯಕರಿಗೆ ಉದ್ಯೋಗ ನೀಡಲು ಬಳಸಿಕೊಳ್ಳುತ್ತಿರುವುದು ನಾಚಿಕೆಗೇಡು’ ಎಂದಿದ್ದಾರೆ. ‘ಕಾಂಗ್ರೆಸ್ ಸರ್ಕಾರಕ್ಕೆ ಕಿಂಚಿತ್ತಾದರೂ ನಾಚಿಕೆ, ಮಾನ, ಮರ್ಯಾದೆ ಇದ್ದರೆ, ಈಗಿರುವ ನಾಲಾಯಕ್ ಗ್ಯಾರಂಟಿ ಸಮಿತಿಗಳನ್ನು ತಕ್ಷಣವೇ ವಿಸರ್ಜನೆ ಮಾಡಿ, ಈವರೆಗೂ ಕೊಟ್ಟಿರುವ ಸಂಬಳ ಮತ್ತು ಸವಲತ್ತುಗಳನ್ನು ವಾಪಸ್ ಪಡೆಯಬೇಕು’ ಎಂದು ಒತ್ತಾಯಿಸಿದ್ದಾರೆ.

ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆಯ 2ನೇ ಬ್ಲಾಕ್‌ನ ರಸ್ತೆಯ ಇಕ್ಕೆಲದಲ್ಲಿ ಬಿದ್ದಿರುವ ಕಸ ಮತ್ತು ಕಟ್ಟಡ ತ್ಯಾಜ್ಯ –ಹು.ಕಾ.ಗೌಡಯ್ಯ

ಕೆ.ಆರ್.ಪುರದ ಎನ್‌ಆರ್‌ಐ ಬಡಾವಣೆಯ ರಸ್ತೆಗಳಲ್ಲಿ ಕಸ ಸಂಗ್ರಹವಾಗಿದ್ದು, ಬಿಡಾಡಿ ದನಗಳ ಆಶ್ರಯತಾಣವಾಗಿದೆ –ಜಿ.ಎನ್.ಶ್ರೀನಿವಾಸಗೌಡ

ಮಹಾಲಕ್ಷ್ಮಿ ಬಡಾವಣೆಯ ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆಯ ಹಿಂಭಾಗದ ಖಾಲಿ ಜಾಗಗಳಲ್ಲಿ ಕಸವನ್ನು ಸುರಿಯಲಾಗುತ್ತಿದೆ. ಪಾದಚಾರಿ ಮಾರ್ಗಗಳೇ ಇಲ್ಲವಾಗಿದ್ದು, ತ್ಯಾಜ್ಯ ಸಂಗ್ರಹ ವಾಹನಗಳೇ ನಿಂತಿರುತ್ತವೆ
–ಎಸ್.ಬಿ.ರಾಜಶೇಖರ್

ಬಸವನಗುಡಿಯ ಕೆ.ಆರ್.ರಸ್ತೆ ಬಳಿ ಕಸದ ತ್ಯಾಜ್ಯ, ಮರದ ಕೊಂಬೆಗಳು ಬಿದ್ದಿವೆ
– ಅನೂಪ್ ಕುಮಾರ್

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂ. ಕಾನಿಇಂವಿ/ಯೋವಿದ/ಸಕಾಇಂ-2/2026-27/1009 ದಿನಾಂಕ : 23.06.2026

ಸಾರ್ವಜನಿಕರ ಎಚ್ಚರಿಕೆಗಾಗಿ

ಸಾರ್ವಜನಿಕರ ಎಚ್ಚರಿಕೆಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕವಿಪ್ರನಿನಿಯು 220/66ಕೆ.ವಿ ಎಕ್ಸೋರಾ ವಿದ್ಯುತ್ ಉಪ-ಕೇಂದ್ರದಿಂದ 66/11ಕೆ.ವಿ ಉಪ-ಕೇಂದ್ರದ ಮೆ: ಇಸ್ರೋ ಕ್ಯಾಂಪಸ್ (ISITE Campus) ವಿದ್ಯುತ್ ಉಪ-ಕೇಂದ್ರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಈ ಕೆಳಕಂಡ ವಿದ್ಯುತ್ ಉಪ-ಕೇಂದ್ರದಿಂದ ಭೂಗತ ಕೇಬಲನ್ನು ಎಳೆಯಬೇಕಿರುತ್ತದೆ.

220/66ಕೆ.ವಿ ಎಕ್ಸೋರಾ ವಿದ್ಯುತ್ ಉಪ-ಕೇಂದ್ರದಿಂದ 66/11ಕೆ.ವಿ ಉಪಕೇಂದ್ರದ ಮೆ: ಇಸ್ರೋ (EHT) ಕ್ಯಾಂಪಸ್ (ISITE Campus) ಉಪ-ಕೇಂದ್ರದವರೆಗೆ 66ಕೆ.ವಿ. 1000 ಚ.ಮೀ.ಮೀ ವ್ಯಾಸದ ಸುಮಾರು 4.505 ಕಿ.ಮೀ.ಗಳ ಉದ್ದದ ಭೂಗತ ಕೇಬಲನ್ನು ಅಳವಡಿಸಲಾಗಿದೆ.

ಸದರಿ ಭೂಗತ ಕೇಬಲ್‌ನಲ್ಲಿ ದಿನಾಂಕ: **24.06.2026** ನಂತರದ ದಿನಗಳಲ್ಲಿ ವಿದ್ಯುಚ್ಛಕ್ತಿ ಪ್ರವಹಿಸಲಾಗುವುದು.

ಸದರಿ ಭೂಗತ ಕೇಬಲ್ ವಿದ್ಯುತ್ ಮಾರ್ಗವು 220/66ಕೆ.ವಿ ಎಕ್ಸೋರಾ ವಿದ್ಯುತ್ ಉಪ-ಕೇಂದ್ರದಿಂದ, ಪಣತ್ತೂರು ರಸ್ತೆ, ಕಾಡುಬೀಸನಹಳ್ಳಿ ರಸ್ತೆ, 2ನೇ ಮುಖ್ಯ ರಸ್ತೆ ಕಾಡುಬೀಸನಹಳ್ಳಿ, ಬೆಳ್ಳಂದೂರು ರೈಲ್ವೆ ನಿಲ್ದಾಣ ರಸ್ತೆ – ಕ್ರೋಮಾ, ಮಾರತಹಳ್ಳಿ ಬ್ರಿಡ್ಜ್, ಕಲಾಮಂದಿರ, ದೊಡ್ಡಾನೆಕುಂಡಿ ಮುಖ್ಯ ರಸ್ತೆ – ಜೀವಿಕಾ ಆಸ್ಪತ್ರೆ, ಹೊರ ವರ್ತುಲ ರಸ್ತೆ ಮೂಲಕ 66/11ಕೆ.ವಿ ಉಪ-ಕೇಂದ್ರದ ಮೆ: ಇಸ್ರೋ (EHT) ಕ್ಯಾಂಪಸ್ (ISITE Campus) ಉಪ-ಕೇಂದ್ರಕ್ಕೆ ಹಾದು ಹೋಗುತ್ತದೆ.

ಆದುದರಿಂದ ಈ ಮೇಲ್ಕಂಡ 66ಕೆ.ವಿ. ಭೂಗತ ಕೇಬಲ್ ಹಾದು ಹೋಗಿರುವ ಮಾರ್ಗದಲ್ಲಿ ಯಾವುದೇ ಸಾರ್ವಜನಿಕರು/ಜಿ.ಬಿ.ಎ/ಸರ್ಕಾರಿ ಸಂಸ್ಥೆಗಳು/ಪಟ್ಟಣ ಪಂಚಾಯಿತಿ/ಗ್ರಾಮ ಪಂಚಾಯಿತಿ/GAIL/ಖಾಸಗಿ ಸಂಸ್ಥೆ/ರೈತರುಗಳು ರಸ್ತೆಯನ್ನು ಅಗೆಯಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ. ಯಾರಾದರೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅಪಘಾತಗಳಿಗೆ ಕವಿಪ್ರನಿನಿಯು ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಯೋಜನೆ ವಿಭಾಗ ದಕ್ಷಿಣ, ಕ.ವಿ.ಪ್ರ.ನಿ.ನಿ,
ಆನಂದರಾವ್ ವೃತ್ತ, ಬೆಂಗಳೂರು.

SOBHA

SOBHA LIMITED
CIN : L45201KA1995PLC018475
Registered and Corporate Office: ‘SOBHA’, Sarjapur – Marathahalli Outer Ring Road (ORR), Devarabisanahalli, Bellandur Post, Bangalore – 560 103
Ph: +91-80-49320000, Email: investors@sobha.com, Website: www.sobha.com

NOTICE TO THE MEMBERS OF SOBHA LIMITED REGARDING 31ST ANNUAL GENERAL MEETING

Notice is hereby given that the Thirty-first (31st) Annual General Meeting **(“AGM”)** of the members of the Company will be held on Saturday, the 18th day of July 2026 at 9.00 A.M. (IST) through Video Conferencing **(“VC”)** facility / Other Audio-Visual Means **(“OVAM”)**, in compliance with all applicable provisions of the Companies Act, 2013 and Rules made thereunder and the Securities and Exchange Board of India **(“SEBI”)** (Listing Obligations and Disclosure Requirements) Regulations, 2015, read with General Circular No. 03/2025 dated September 22, 2025, 09/2024 dated September 19, 2024, 09/2023 dated September 25, 2023, 10/2022 dated December 28, 2022 and other relevant circular issued by the Ministry of Corporate Affairs (“MCA”), SEBI/HO/CFD/CFD-PoD-2/P/CIR/2024/133 dated October 3, 2024, SEBI/HO/CFD/PoD-2/P/CIR/2023/4 dated January 05, 2023, Circular No. SEBI/HO/CFD/PoD-2/P/ CIR/2023/167 dated October 07, 2023, and other relevant circular issued by the Securities and Exchange Board of India (hereinafter collectively referred to as "Circulars").

In compliance with the aforesaid MCA and SEBI Circulars, the requirements of sending physical copy of the Notice of AGM and Annual Report to the Members have been dispensed. Accordingly, the Notice of AGM along with the Annual Report 2025-26 will be sent only through electronic mode to those Members whose email addresses are registered with the Company/ Registrar & Share Transfer Agent/ Depositories. Keeping in view the above, the Members of the Company holding shares in physical form or who have not registered their email addresses are hereby requested to get their email addresses registered in the records of the Company for receipt of notice and to cast their vote through remote e-voting.

Members who have not registered their email addresses with the Company are requested to follow the below steps for registering their email addresses:

1. In case shares are held in physical mode, and who have not registered their bank details can get the same registered with MUFG Intime India Private Limited **(“RTA”)**, by clicking the link: https://web.in.mpms.mufg.com/EmailReg/Email_Register.html at their web site www.in.mpms.mufg.com.at the Investor Services tab by choosing the E-mail / Bank Registration heading and follow the registration process as guided therein. The members are requested to provide details such as Name, Folio Number, Certificate number, PAN, e-mail id along with the copy of the cheque leaf with the first named shareholders name imprinted at the face of the cheque leaf containing bank name and branch, type of account, bank account number, MICR details and IFSC code in PDF or JPEG format. In case of any query, a member may send an e-mail to **RTA** at investor.helpdesk@in.mpms.mufg.com On submission of the shareholders details an OTP will be received by the shareholder which needs to be entered in the link for verification.

2. In case shares are held in dematerialized mode and who have not registered their e-mail addresses may temporarily get their e-mail addresses registered with the **RTA** by clicking the link:https://web.in.mpms.mufg.com/EmailReg/Email_Register.html at their web site www.in.mpms.mufg.com at the Investor Services tab by choosing the E-mail Registration heading and follow the registration process as guided therein. The members are requested to provide details such as Name, DPID, Client ID/ PAN, mobile number and e-mail id. In case of any query, a member may send an e-mail to **RTA** at investor.helpdesk@in.mpms.mufg.com On submission of the shareholders details, an OTP will be received by the shareholder which needs to be entered in the link for verification.

Manner of registering mandate for receiving Dividend:

Members are requested to register/update their complete bank details:

a. with their Depository Participant(s) with whom they maintain their Demat Accounts, if shares are held in dematerialized mode, submitting forms and documents as may be required by the Depository participant(s); and

b. with the Company/ MUFG Intime India Private Limited by e-mailing at investors@sobha.com or investor.helpdesk@in.mpms.mufg.com, if shares are held in physical mode, by submitting: (i) Scanned copy of signed request letter along with Form ISR-1 which shall contain Member's name, folio number, complete address, bank details (Bank Account number, Bank and Brach Name and address, IFSC, MICR details); (ii) copy of cancelled cheque leaf bearing the name of Member; (iii) self-attested copy of the PAN card and (iv) self-attested copy of address proof.

The Company is providing its members the facility to exercise their votes electronically through the electronic voting ("e-voting") facility provided by the RTA. The manner of voting remotely by members holding shares in dematerialized mode, physical mode and for members who have not registered their email addresses is provided in the instructions for e-voting section of the Notice of AGM. A letter providing the weblink, including the exact path, where the Annual Report and the Notice of the AGM for the financial year 2025-26 is available, will be sent to those members whose e-mail address is not registered with the Company/ MUFG Intime India Private Limited/ Depository Participant(s)/ Depositories. Copy of the AGM Notice will be made available at the Company's website www.sobha.com, websites of the Stock Exchanges i.e. BSE Limited and National Stock Exchange of India Limited at www.bseindia.com and www.nseindia.com respectively.

By order of the Board
for Sobha Limited
Sd/-
Bijan Kumar Dash
Company Secretary and Chief Compliance Officer

Place : Bangalore
Date : June 24, 2026

200 ಪೊಲೀಸರಿಗೆ ಡಿಜಿ–ಐಜಿಪಿ ಪ್ರಶಂಸನಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಇಬ್ಬರು ಐಜಿಪಿ, ಆರು ಮಂದಿ ಡಿಐಜಿಪಿ ಸೇರಿದಂತೆ 200 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ 2025–26ನೇ ಸಾಲಿನ ಡಿಜಿ-ಐಜಿಪಿ ಪ್ರಶಂಸನಾ ಪ್ರಶಸ್ತಿ ಲಭಿಸಿದೆ.

ಐಜಿಪಿಗಳಾದ ಎನ್. ಸತೀಶ್‌ಕುಮಾರ್, ಎನ್.ಶಶಿಕುಮಾರ್ ಹಾಗೂ ಡಿಐಜಿಪಿಗಳಾದ ಶಾಂತನು ಸಿನ್ಹಾ, ಭೀಮಾಶಂಕರ ಗುಳೇದ, ಹನುಮಂತರಾಯ, ಧರಣಿ ದೇವಿ, ಟಿ.ಶ್ರೀಧರ್, ಕೆ.ಪರಶುರಾಮ್, ವಿಜಯಪುರ ಜಿಲ್ಲಾ ವರಿಷ್ಠಾಧಿಕಾರಿ ಲಕ್ಷ್ಮಣ್ ನಿಂಬರಗಿ, ಆಗ್ನೇಯ ವಿಭಾಗದ ಡಿಸಿಪಿ ಮೊಹಮ್ಮದ್ ಸುಜಿತಾ, ಮೈಸೂರಿನಲ್ಲಿರುವ ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪ ನಿರ್ದೇಶಕ ಚನ್ನಬಸವಣ್ಣ, ಉತ್ತರ ವಿಭಾಗದ (ಸಂಚಾರ) ಡಿಸಿಪಿ ಜಯಪ್ರಕಾಶ್, ಚಾಮರಾಜನಗರ ಜಿಲ್ಲಾ ವರಿಷ್ಠಾಧಿಕಾರಿ ಮುತ್ತುರಾಜ್ ಸೇರಿದಂತೆ ವಿವಿಧ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಪ್ರಶಂಸನಾ ಪ್ರಶಸ್ತಿ ಲಭಿಸಿದೆ.

₹ 74 ಲಕ್ಷ ಮೌಲ್ಯದ ಗೋವಾ ಮದ್ಯ ವಶ

ಪ್ರಜಾವಾಣಿ ವಾರ್ತೆ

ವಿಜಯಪುರ: ಗೋವಾದಿಂದ ಸೋಲಾಪುರಕ್ಕೆ ಲಾರಿಯಲ್ಲಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ₹74.68 ಲಕ್ಷ ಮೌಲ್ಯದ ವಿವಿಧ ಬ್ರ್ಯಾಂಡ್‌ನ ಮದ್ಯವನ್ನು ವಿಜಯಪುರ ಜಿಲ್ಲಾ ಪೊಲೀಸರು ವಶಪಡಿಸಿಕೊಂಡಿದ್ದಾರೆ.

‘ವಿಜಯಪುರ ನಗರ ಉಪ ವಿಭಾಗದ ಪೊಲೀಸರು ರಾತ್ರಿ ಗಸ್ತಿನಲ್ಲಿದ್ದ ವೇಳೆ ಮಂಗಳವಾರ ನಸುಕಿನ 5.30ರ ಸುಮಾರಿಗೆ ಕೊಲ್ಹಾರ ನಾಕಾ ಹತ್ತಿರ ಬಳಿ ನಿಂತಿದ್ದ ಲಾರಿಯನ್ನು ಪರಿಶೀಲಿಸಿದಾಗ, ಅಕ್ರಮ ಮದ್ಯ ಪತ್ತೆಯಾಯಿತು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವಿದ್ಯುತ್ ವಿತರಣೆ ಖಾಸಗೀಕರಣಕ್ಕೆ ಆಕ್ಷೇಪ

ಟಾಟಾ ಕಂಪನಿಗೆ ಪರವಾನಗಿ ನೀಡದಂತೆ ಕೆಇಆರ್‌ಸಿಗೆ ಎಸ್ಕಾಂಗಳ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 19 ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಯ ಪರವಾನಗಿ ನೀಡುವಂತೆ ಕೋರಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಸಲ್ಲಿಸಿರುವ ಅರ್ಜಿಗೆ ವಿದ್ಯುತ್ ಸರಬರಾಜು ಕಂಪನಿಗಳು ಆಕ್ಷೇಪ ವ್ಯಕ್ತಪಡಿಸಿವೆ.

ಪರವಾನಗಿ ನೀಡುವ ಕುರಿತ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನವಾದ ಮಂಗಳವಾರ ಐದೂ ವಿದ್ಯುತ್ ಸರಬರಾಜು ಕಂಪನಿಗಳು ಲಿಖಿತವಾಗಿ ತಕರಾರು ಸಲ್ಲಿಸಿವೆ. ಇದರಿಂದ ರೈತರು, ಎಸ್ಕಾಂಗಳ ನೌಕರರು, ವಿವಿಧ ಸಂಘ ಸಂಸ್ಥೆಗಳು ನಡೆಸುತ್ತಿರುವ ಹೋರಾಟಕ್ಕೆ ಮತ್ತಷ್ಟು ಬಲಬಂದಿದೆ.

ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ ಹಾಗೂ ಚೆಸ್ಕಾಂ ಗಂಭೀರವಾದ ಆಕ್ಷೇಪಣೆಗಳನ್ನು ಎತ್ತಿದ್ದು, 'ವಿದ್ಯುತ್ ಕಾಯ್ದೆ-2003ರಡಿ ಅಗತ್ಯವಿರುವ ಕಾನೂನುಬದ್ಧ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಮಾನದಂಡಗಳ ಪಾಲನೆ ಬಗ್ಗೆ ಟಾಟಾ ಕಂಪನಿಯವರು ಯಾವುದೇ ಪ್ರಸ್ತಾಪ ಮಾಡಿಲ್ಲ' ಎಂದು ಹೇಳಿವೆ.

ವಿದ್ಯುತ್ ಸರಬರಾಜು ಕಂಪನಿಗಳ ಆಕ್ಷೇಪಣೆಗಳೇನು?

- ಪ್ರಸ್ತಾವಿತ ಪ್ರದೇಶದಲ್ಲಿ ಸ್ವತಂತ್ರ ವಿದ್ಯುತ್ ವಿತರಣಾ ಜಾಲ ನಿರ್ಮಿಸುವ ಕುರಿತು ಸ್ಪಷ್ಟ ಯೋಜನೆ ಸಲ್ಲಿಸದೇ ಈಗಿನ ವ್ಯವಸ್ಥೆಯಿಂದಲೇ ವಿದ್ಯುತ್ ಸರಬರಾಜು ಮಾಡಲು ಉದ್ದೇಶಿಸಿರುವುದಾಗಿ ಕಂಪನಿ ಹೇಳಿದೆ.
- ಅಲ್ಪಾವಧಿ ವಿದ್ಯುತ್ ಖರೀದಿಯ ಹೆಚ್ಚಿನ ಅವಲಂಬನೆ ಗ್ರಾಹಕರಿಗೆ ಹೆಚ್ಚುವರಿ ವೆಚ್ಚವನ್ನು ಉಂಟು ಮಾಡಲಿದೆ.
- ಕೈಗಾರಿಕಾ ಹಾಗೂ ವಾಣಿಜ್ಯ ವಲಯದ ಹೆಚ್ಚಿನ ಆದಾಯ ತರುವ ಗ್ರಾಹಕರನ್ನೇ ಗುರಿಯಾಗಿಸಿಕೊಂಡು ಟಾಟಾ ಸಂಸ್ಥೆ ಸೇವೆ ನೀಡುವ ಸಾಧ್ಯತೆ ಇರುವುದರಿಂದ, ಸಬ್ಸಿಡಿ ಪಡೆಯುವ ಸಾಮಾನ್ಯ ಗ್ರಾಹಕರಿಗೆ ತೊಂದರೆಯಾಗಬಹುದು. ಇದರಿಂದ ಕಂಪನಿಗಳ ಆರ್ಥಿಕ ಸ್ಥಿರತೆಗೆ ಧಕ್ಕೆ ಉಂಟಾಗಬಹುದು.
- ಗೃಹ, ಕೃಷಿ ಹಾಗೂ ಇತರ ಸಬ್ಸಿಡಿ ಆಧಾರಿತ ಗ್ರಾಹಕರಿಗೆ ನೀಡುತ್ತಿರುವ ಸಬ್ಸಿಡಿ ವ್ಯವಸ್ಥೆ ದುರ್ಬಲಗೊಳ್ಳಲಿದೆ.
- ದೀರ್ಘಾವಧಿಯ ವಿದ್ಯುತ್ ಖರೀದಿ ಒಪ್ಪಂದಗಳು, ಸಾರ್ವಜನಿಕ ಸೇವೆಗಳಿಗೆ ಧಕ್ಕೆಯಾಗಲಿದೆ. ಗ್ರಾಹಕರಿಗೆ ಹಣಕಾಸಿನ ಹೊರೆ ಹೆಚ್ಚಲಿದೆ.
- 2035ರ ನಂತರವೂ ಮುಂದುವರಿಯುವ ದೀರ್ಘಾವಧಿಯ ವಿದ್ಯುತ್ ಖರೀದಿ ಒಪ್ಪಂದವನ್ನು ಬೆಸ್ಕಾಂ ಮಾಡಿಕೊಂಡಿದ್ದು, ವಿದ್ಯುತ್ ಬಳಕೆ ಆಗದಿದ್ದರೂ ನಿಗದಿತ ಸ್ಥಿರ ಶುಲ್ಕಗಳನ್ನು ಪಾವತಿಸಬೇಕಾಗಿದೆ. ಟಿಪಿಸಿಎಲ್‌ಗೆ ಇಂತಹ ಯಾವುದೇ ಹೊಣೆಗಾರಿಕೆ ಇಲ್ಲ.
- ಟಾಟಾ ಕಂಪನಿಯವರು ವ್ಯವಹಾರದ ದೃಷ್ಟಿಯಿಂದ ಹೆಚ್ಚುವರಿ ದರ ಪಾವತಿಸುವ ಗ್ರಾಹಕರನ್ನು ಆಕರ್ಷಿಸುವುದಕ್ಕೆ ಕೇಂದ್ರೀಕೃತವಾಗಿದೆ. ಅದರಿಂದ ಬೆಸ್ಕಾಂನ ಶೇ 80ರಷ್ಟು ಸಬ್ಸಿಡಿ ಪಡೆಯುವ ವರ್ಗದ ಮೇಲೆ ಪರಿಣಾಮ ಬೀರಲಿದೆ

ಕ್ರೀಡಾಕೂಟಕ್ಕೆ ಚಾಲನೆ

ಬೆಂಗಳೂರು: ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ವಾರ್ಷಿಕ ಕ್ರೀಡಾಕೂಟಕ್ಕೆ ಕುಲಪತಿ ಪ್ರೊ.ಬಿ.ರಮೇಶ್ ಚಾಲನೆ ನೀಡಿದರು.

ನಂತರ ಮಾತನಾಡಿ, 'ದೈಹಿಕ ಮತ್ತು ಮಾನಸಿಕ ಸದೃಢತೆಗೆ ಕ್ರೀಡೆ ಅತ್ಯಂತ ಉಪಯುಕ್ತ. ಭಾವನಾತ್ಮಕ ಗಟ್ಟಿತನದ ಜತೆಗೆ ವ್ಯಕ್ತಿತ್ವವೂ ಉತ್ತಮವಾಗಿ ರೂಪುಗೊಳ್ಳುತ್ತದೆ.ಕ್ರೀಡೆಯಲ್ಲಿ ಸೋಲು– ಗೆಲುವು ಸಾಮಾನ್ಯ. ಶಿಸ್ತು ಪಾಲನೆ ಜತೆಗೆ ಸಾಂಘಿಕ ಸ್ಫೂರ್ತಿಯನ್ನೂ ಮೆರೆಯಬೇಕು. ಅದರಿಂದ ನಾಯಕತ್ವ ಗುಣ ಬೆಳವಣಿಗೆಯಾಗುತ್ತದೆ' ಎಂದರು.

ಕುಲಸಚಿವರಾದ ಎ.ನವೀನ್ ಜೋಸೆಫ್, ಪ್ರೊ.ರಮೇಶ. ಬಿ. ಕುಡೇನಟ್ಟಿ, ಹಣಕಾಸು ಅಧಿಕಾರಿ ಎಂ.ವಿ. ವಿಜಯಲಕ್ಷ್ಮಿ, ಪ್ರಸಾರಾಂಗ ನಿರ್ದೇಶಕ ಟಿ.ಎನ್.ತಾಂಡವಗೌಡ, ವೈದ್ಯಾಧಿಕಾರಿ ಡಾ.ದೀಪಾ, ಕ್ರೀಡಾ ನಿರ್ದೇಶಕ ಕೆ.ಶಿವಶಂಕರ್, ಕ್ರೀಡಾ ಸಮನ್ವಯ ಅಧಿಕಾರಿ ಮೊಹಮ್ಮದ್ ಸಿಬ್ಗತುಲ್ಲಾ, ಪ್ರೊ.ಮಹದೇವಸ್ವಾಮಿ ಇದ್ದರು.

DH
DECCAN HERALD
The Power of Good

JOB OPPORTUNITY

We are a leading newspaper and magazine publishing group in Karnataka.
We invite applications for the following position in our organisation.

COPY EDITOR / SENIOR COPY EDITOR

Department : Deccan Herald - Editorial
Experience : 3 - 6 years
Job Location : Bengaluru (M.G. Road)
Salary : Attractive package commensurate with experience & qualifications
Role : Handle editing and page-making responsibilities

Requisites:
- Excellent editing and rewriting skills with strong news judgement.
- Ability to translate news copies from Kannada to English.
- Strong understanding of Karnataka and Bengaluru.
- Should be willing to work from office in Bengaluru.

Please send your application with a recent photograph to
THE PRINTERS (MYSORE) PRIVATE LIMITED
75, Mahatma Gandhi Road, Bengaluru – 560 001.
E-mail: neesha.srinivas@printersmysore.co.in
Website : www.printersmysore.com

ಬೇಡಿಕೆ ಈಡೇರಿಕೆಗೆ ಬೀದಿ ಬದಿ ವ್ಯಾಪಾರಿಗಳ ಪ್ರತಿಭಟನೆ

ಎತ್ತಂಗಡಿ ನಿಲ್ಲಿಸಿ, ರಕ್ಷಣೆ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೀದಿ ಬದಿ ವ್ಯಾಪಾರಿಗಳನ್ನು ಬುಲ್ಡೋಜರ್‌ಗಳ ಮೂಲಕ ಎತ್ತಂಗಡಿ ಮಾಡುವುದನ್ನು ನಿಲ್ಲಿಸಿ, ರಕ್ಷಣೆ ನೀಡಬೇಕು' ಎಂದು ಆಗ್ರಹಿಸಿ ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಬೀದಿಬದಿ ವ್ಯಾಪಾರಿಗಳ ಫೆಡರೇಷನ್ (ಸಿಐಟಿಯು) ಪ್ರತಿಭಟನೆ ನಡೆಸಿತು.

ಹಲವು ವರ್ಷಗಳಿಂದ ವ್ಯಾಪಾರ ಮಾಡಿಕೊಂಡು ಲಕ್ಷಾಂತರ ಮಂದಿ ಬದುಕು ಕಟ್ಟಿಕೊಂಡಿದ್ದಾರೆ. ಚಳಿ, ಮಳೆ, ಬಿಸಿಲು ಎನ್ನದೇ ಹೂವು, ಹಣ್ಣು, ಬಟ್ಟೆ, ಮಕ್ಕಳ ಆಟಿಕೆ, ಗೃಹ ಬಳಕೆಯ ಸಾಮಾನು, ಆಹಾರ ಪದಾರ್ಥಗಳ ವ್ಯಾಪಾರ ಮಾಡುತ್ತಿದ್ದಾರೆ. ಸಂಚಾರ ಸಮಸ್ಯೆ ಹೆಸರಿನಲ್ಲಿ ತೊಂದರೆ ನೀಡುವುದು ಹಾಗೂ ತೆರವುಗೊಳಿಸುವುದಕ್ಕೆ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಫೆಡರೇಷನ್ ಅಧ್ಯಕ್ಷ ಸುನಿಲ್ ಮಾತನಾಡಿ, 'ಬೀದಿಬದಿ ವ್ಯಾಪಾರಿಗಳ ಜೀವನೋಪಾಯ ಸಂರಕ್ಷಣೆ ಮತ್ತು ನಿಯಂತ್ರಣ ಅಧಿನಿಯಮ ಪ್ರಕಾರ ವ್ಯಾಪಾರಿಗಳ ರಕ್ಷಣೆಗೆ ಮುಂದಾಗಬೇಕು. ಸುಸಜ್ಜಿತ ವಲಯ ಗುರುತಿಸುವವರೆಗೂ ಸಮೀಕ್ಷೆ ಆಗಿರುವ ಸ್ಥಳಗಳಲ್ಲಿ ವ್ಯಾಪಾರಕ್ಕೆ ಅನುವು ಮಾಡಿಕೊಡಬೇಕು. ಅಧಿಕಾರಿಗಳು ಮತ್ತು ಪೊಲೀಸರಿಂದ ಆಗುವ ಅನಗತ್ಯ ತೊಂದರೆಗಳಿಗೆ ತಡೆ ಹಾಕಬೇಕು ಮತ್ತು ವ್ಯಾಪಾರಿಗಳ ವಸ್ತುಗಳನ್ನು ಹಾನಿ ಮಾಡುವವರಿಂದಲೇ ನಷ್ಟ ಭರಿಸಬೇಕು' ಎಂದು ಆಗ್ರಹಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಬೀದಿಬದಿ ವ್ಯಾಪಾರಿಗಳ ಫೆಡರೇಷನ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು

ಮುಖ್ಯಾಂಶಗಳು

- ಬೀದಿಬದಿ ವ್ಯಾಪಾರಿಗಳ ಫೆಡರೇಷನ್ ನೇತೃತ್ವದಲ್ಲಿ ಪ್ರತಿಭಟನೆ
- 'ಸಮೀಕ್ಷೆ ಆಗಿರುವ ಸ್ಥಳಗಳಲ್ಲಿ ವ್ಯಾಪಾರಕ್ಕೆ ಅನುವು ಮಾಡಿಕೊಡಿ'

'ಸಾಮಾಜಿಕ ಸುರಕ್ಷೆ ಖಾತ್ರಿಗೊಳಿಸಿ'

'ವ್ಯಾಪಾರಿಗಳಿಗೆ ಶಿಕ್ಷಣ, ಆರೋಗ್ಯ, ವಸತಿ ಸೇರಿ ಇತರೆ ಸಾಮಾಜಿಕ ಸುರಕ್ಷೆ ಖಾತ್ರಿಗೊಳಿಸಬೇಕು. ಡಿಜಿಟಲ್ ಸರ್ವೆ ಮಾಡಿ ಎಲ್ಲರಿಗೂ ಗುರುತಿನ ಚೀಟಿ ನೀಡಬೇಕು. ಕಲಂ 6ರ ಅಡಿ ಮಾರಾಟ ಪ್ರಮಾಣ ಪತ್ರ ನೀಡಬೇಕು. ಪಿ.ಎಂ ಸ್ವನಿಧಿಯಲ್ಲಿ ಜಾಮೀನು ರಹಿತ ಸಹಾಯಧನದ ಮೂಲಕ ಮೊದಲ ಕಂತಿನಲ್ಲೇ ಒಂದು ಲಕ್ಷ ರೂಪಾಯಿ ಸಾಲ ನೀಡಬೇಕು' ಎಂದು ಸುನಿಲ್ ಒತ್ತಾಯಿಸಿದರು.

'ಪಟ್ಟಣ ವ್ಯಾಪಾರ ಸಮಿತಿ ರಚಿಸಿ ತಿಂಗಳಿಗೊಮ್ಮೆ ಸಭೆ ಸೇರಿಸಿ, ವ್ಯಾಪಾರಿಗಳ ಕುಂದುಕೊರತೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು. ಬಜೆಟ್‌ನಲ್ಲಿ ವಿಶೇಷ ಅನುದಾನ ಕಲ್ಪಿಸಬೇಕು ಹಾಗೂ ರಾಜ್ಯದಲ್ಲಿ ಬೀದಿಬದಿ ವ್ಯಾಪಾರಿಗಳ ನಿಗಮ ರಚನೆ ಮಾಡಬೇಕು' ಎಂದರು.

ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮೀ, ಫೆಡರೇಷನ್ ಕಾರ್ಯದರ್ಶಿ ಸಿ.ಕುಮಾರಿ, ಮುಖಂಡರಾದ ಸುಬ್ರಹ್ಮಣ್ಯ, ರವಿಚಂದ್ರನ್, ಮುರುಗನ್, ವೆಂಕಟೇಶ್, ನಾಗರಾಜು, ರುದ್ರಾಂಭಿಕ, ನರೇಶ್ ಚಂದ್ರಶೇಖರ್ ಮೂರ್ತಿ, ವಸೀಂ, ಭಾಗವಹಿಸಿದ್ದರು.

ಎಇಇ, ಎಲೆಕ್ಟ್ರಿಕ್ ಗುತ್ತಿಗೆದಾರನಿಗೆ ಐದು ವರ್ಷ ಜೈಲು

ತುಮಕೂರು: ಲಂಚ ಪಡೆದ ಆರೋಪ ಸಾಬೀತಾಗಿದ್ದರಿಂದ ಕುಣಿಗಲ್ ಉಪ ವಿಭಾಗದ ಬೆಸ್ಕಾಂ ಎಇಇ ಆಗಿದ್ದ ಪಿ.ಎನ್. ಹನುಮಂತಯ್ಯ ಹಾಗೂ ಪರವಾನಗಿ ಪಡೆದ ಎಲೆಕ್ಟ್ರಿಕ್ ಗುತ್ತಿಗೆದಾರ ಪಿ.ಟಿ. ಶೇಷಾಚಲಯ್ಯ ಅವರಿಗೆ ಇಲ್ಲಿನ ಏಳನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 5 ವರ್ಷ ಸಾಧಾರಣ ಕಾರಾಗೃಹ ಶಿಕ್ಷೆ, ₹30 ಸಾವಿರ ದಂಡ ವಿಧಿಸಿ ಮಂಗಳವಾರ ತೀರ್ಪು ಪ್ರಕಟಿಸಿದೆ.

ದಂಡ ಕಟ್ಟಲು ವಿಫಲವಾದಲ್ಲಿ 9 ತಿಂಗಳ ಸಾದಾ ಕಾರಾಗೃಹ ಶಿಕ್ಷೆ ವಿಧಿಸಿ ನ್ಯಾಯಾಧೀಶೆ ಯಾಸ್ಮೀನ್ ಪರವೀನ ಲಾಡಖಾನ ಆದೇಶಿಸಿದ್ದಾರೆ.

ಲೋಕಾಯುಕ್ತ ಸಂಸ್ಥೆ ಪರವಾಗಿ ವಿಶೇಷ ಸಾರ್ವಜನಿಕ ಅಭಿಯೋಜಕ ಎನ್.ಬಸವರಾಜು ವಾದ ಮಂಡಿಸಿದ್ದರು.

ಪ್ರಕರಣದ ಹಿನ್ನೆಲೆ: ಕುಣಿಗಲ್ ತಾಲ್ಲೂಕಿನ ಕಂಪಲಾಪುರದ ಮನು ಎಂಬುವರು ಹೆಚ್ಚುವರಿ ವಿದ್ಯುತ್ ಪರಿವರ್ತಕಕ್ಕೆ (ಟಿಸಿ) ಅರ್ಜಿ ಹಾಕಿದ್ದರು. ಈ ಸಂಬಂಧ ಕುಣಿಗಲ್ ಬೆಸ್ಕಾಂ ಶಾಖಾಧಿಕಾರಿ ತಯಾರಿಸಿ ಕಳಿಸಿದ್ದ ಅಂದಾಜುಪಟ್ಟಿ ಮಂಜೂರಾತಿ ಕಡತಕ್ಕೆ ಸಹಿ ಮಾಡಲು ಕುಣಿಗಲ್ ಉಪವಿಭಾಗದ ಎಇಇ ಪಿ.ಎನ್.ಹನುಮಂತಯ್ಯ ಯಾರಾದರೂ ಕಂಟ್ರ್ಯಾಕ್ಟರ್ ಮೂಲಕ ಬರುವಂತೆ ತಿಳಿಸಿದ್ದರು.

ಬಳಿಕ ಮನು ಅವರು, ಎಲೆಕ್ಟ್ರಿಕ್ ಗುತ್ತಿಗೆದಾರ ಪಿ.ಟಿ.ಶೇಷಾಚಲಯ್ಯ ಅವರನ್ನು ಭೇಟಿ ಮಾಡಿದ್ದರು. ಕಡತಕ್ಕೆ ಸಹಿ ಮಾಡಿಸಿಕೊಡಲು ಎಇಇ ಪರವಾಗಿ ₹70 ಸಾವಿರ ಲಂಚಕ್ಕೆ ಒತ್ತಾಯಿಸಿದ್ದರು. 2014ರ ಜ.25ರಂದು ಮುಂಗಡ ₹30 ಸಾವಿರ ಲಂಚವನ್ನು ಪಡೆಯುವಾಗ ಪಿ.ಟಿ. ಶೇಷಾಚಲಯ್ಯ ಅವರು ಸಿಕ್ಕಿಬಿದ್ದಿದ್ದರು.

ನಿಯಂತ್ರಿಸಲು ಸರ್ಕಾರಕ್ಕೆ ಸಿ.ಪಿ.ಮುತ್ತಣ್ಣ ಒತ್ತಾಯ

'ಕೊಡಗಿನ ಮೇಲೆ ಹೆಚ್ಚಿದ ಒತ್ತಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಡಗು ಜಿಲ್ಲೆಯಲ್ಲಿ ನಗರೀಕರಣ, ಪ್ರವಾಸೋದ್ಯಮ ಮಿತಿ ಮೀರಿದ್ದು, ಒತ್ತಡ ಹೆಚ್ಚಾಗಿದೆ. ಹೀಗಾಗಿ, ಭೂ ಖರೀದಿಗೆ ನಿರ್ಬಂಧ ವಿಧಿಸಬೇಕು. ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಗುವುದು' ಎಂದು ಕೊಡಗು–ಕಾವೇರಿ ರಕ್ಷಣಾ ವೇದಿಕೆಯ ಸಂಚಾಲಕರೂ ಆದ ನಿವೃತ್ತ ಕರ್ನಲ್ ಸಿ.ಪಿ.ಮುತ್ತಣ್ಣ ಹೇಳಿದರು.

ಕರ್ನಲ್ ಸಿ.ಪಿ. ಮುತ್ತಣ್ಣ

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದ ಬೆಂಗಳೂರು, ಮಂಡ್ಯ, ಮೈಸೂರು, ತಮಿಳುನಾಡಿನ 8 ಕೋಟಿ ಜನರಿಗೆ ಕಾವೇರಿ ಜಲಾನಯನ ಪ್ರದೇಶ ಜೀವನಾಧಾರವಾಗಿದೆ. ಕೊಡಗಿನ ಭೂ ಸ್ವರೂಪದಲ್ಲಿ ಬದಲಾವಣೆ ಆಗುತ್ತಿದ್ದರೆ, ಮುಂದಿನ ದಶಕಗಳಲ್ಲಿ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ' ಎಂದರು.

'ಕಾವೇರಿ ರಕ್ಷಣೆ ಮಾಡಬೇಕೆಂದರೆ ಕೊಡಗು ಜಿಲ್ಲೆಯ ಭೂ ಸ್ವರೂಪವನ್ನು ಉಳಿಸಿಕೊಳ್ಳಬೇಕು. ಸ್ಥಳೀಯರು 6 ಲಕ್ಷ ಜನರಿದ್ದು, ಜೀವನ ನಿರ್ವಹಣೆಗೆ ಈ ನೆಲವನ್ನೇ ಆಶ್ರಯಿಸಿದ್ದಾರೆ. ತಲೆತಲಾಂತರದಿಂದ ವಾಸಿಸುವವರು, ಕೊಡಗಿನ ಜೀವ ವೈವಿಧ್ಯವನ್ನೂ ಉಳಿಸಿಕೊಂಡಿದ್ದಾರೆ. ಈಚೆಗಿನ ವರ್ಷಗಳಲ್ಲಿ ವರ್ಷಕ್ಕೆ 40 ಲಕ್ಷ ಪ್ರವಾಸಿಗರು ಹೊರಗಿನಿಂದ ಬರುತ್ತಿದ್ದಾರೆ. ಭೂಮಿ ಖರೀದಿ ಮಾಡಿ ಬಡಾವಣೆ, ಹೋಂ ಸ್ಟೇ, ರೆಸಾರ್ಟ್ ನಿರ್ಮಾಣದಲ್ಲಿ ತೊಡಗಿದ್ದಾರೆ. ಈ ಪ್ರಮಾಣದ ಪ್ರವಾಸೋದ್ಯಮದಿಂದ ಆಗುವ ಭಾರವನ್ನು ತಾಳಿಕೊಳ್ಳುವ ಧಾರಣಾ ಸಾಮರ್ಥ್ಯ ಕೊಡಗಿನಂತಹ ಪರಿಸರಕ್ಕೆ ಕಷ್ಟಕರ' ಎಂದು ಹೇಳಿದರು.

'ಪ್ರವಾಸೋದ್ಯಮದ ಆಕರ್ಷಣೆ ಹೆಚ್ಚುತ್ತಿರುವ ಜತೆಗೆ ಮಾನವ–ವನ್ಯಜೀವಿ ಸಂಘರ್ಷ ಉಲ್ಬಣಿಸಿದೆ. ಇದನ್ನು ತಡೆಗಟ್ಟಲು ಕಳೆದ ವರ್ಷವೇ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ, ನಾವು ತಯಾರಿಸಿರುವ ಪರಿಹಾರ ಕ್ರಮಗಳನ್ನು ಅವರಿಗೆ ಸಲ್ಲಿಸಲಾಗುವುದು' ಎಂದರು.

ಕೂರ್ಗ್ ವೆಲ್‌ನೆಸ್ ಫೌಂಡೇಷನ್ ಸ್ಥಾಪಕ ನಿಕ್ಕಿ ಪೊನ್ನಪ್ಪ, ಕೊಡವ ಗೌಡ ಸಮಾಜದ ಪ್ರವೀಣ್, ಸೋಮಣ್ಣ, ಮಹೇಶ್ ತಮ್ಮಯ್ಯ ಪಾಲ್ಗೊಂಡಿದ್ದರು.

ಬೇಡಿಕೆಗಳು ಏನು?

- ಭೂ ಕಂದಾಯ ಕಾಯ್ದೆ 1964ರ ನಿಬಂಧನೆಗಳನ್ನು ಪಾಲಿಸಬೇಕು. ವಾಣಿಜ್ಯ ಭೂ ಪರಿವರ್ತನೆಗೆ ಅವಕಾಶ ಕೊಡಬಾರದು
- ಕೊಡಗಿನ ಸ್ಥಳೀಯರು, ಜಮ್ಮಾ ಹಿಡುವಳಿದಾರರನ್ನು ಹೊರತುಪಡಿಸಿ, ಇತರ ಜನರು ಭೂ ಸ್ವಾಧೀನ ಪಡಿಸಿಕೊಳ್ಳುವುದನ್ನು ತಡೆಯಬೇಕು
- ಪೊನ್ನಂಪೇಟೆಯನ್ನು ಪಟ್ಟಣ ಪಂಚಾಯಿತಿ ಎಂದು ಘೋಷಿಸಿರುವ ಆದೇಶ ವಾಪಸ್ ಪಡೆದರೆ ನಗರೀಕರಣಕ್ಕೆ ತಡೆಯಾಗಲಿದೆ
- ಕೊಡವರಿಗೆ ಆರ್ಥಿಕ ಭದ್ರತೆ ನೀಡಲು ಕಾಫಿ ಮತ್ತು ಮೆಣಸಿಗೆ ಉತ್ತಮ ಬೆಲೆ ನೀಡಬೇಕು
- ಮಾನವ ವನ್ಯಜೀವಿ ಸಂಘರ್ಷದ ಶಾಶ್ವತ ತಡೆಗೆ ಅರಣ್ಯ ಇಲಾಖೆ ಮಾರ್ಗಸೂಚಿ ರೂಪಿಸಬೇಕು
- ಬಹುಪಥದ ಹೆದ್ದಾರಿಗಳು, ರೈಲು ಮಾರ್ಗಗಳ ಪ್ರಸ್ತಾವನೆ, ಮೈಸೂರು– ಕುಶಾಲನಗರ ರೈಲು ಯೋಜನೆ ಕೈ ಬಿಡಬೇಕು
- ಪ್ರವಾಸೋದ್ಯಮಕ್ಕೆ ನಿಯಂತ್ರಣ ಹೇರಬೇಕು. ಪ್ರವಾಸಿಗರ ಸಂಖ್ಯೆಯನ್ನೂ ಕಡಿಮೆಗೊಳಿಸಬೇಕು
- ಬುಡಕಟ್ಟು ಸಮುದಾಯಗಳ ಕಲ್ಯಾಣಕ್ಕಾಗಿ ಅರಣ್ಯ ಇಲಾಖೆಯಲ್ಲಿ ಉದ್ಯೋಗಾವಕಾಶ ನೀಡಬೇಕು
- ಅಕ್ರಮ ವಲಸಿಗರನ್ನು ಗುರುತಿಸಿ ಗಡಿಪಾರು ಮಾಡಬೇಕು

BGC
1876

ಬೆಂಗಳೂರು ಗಾಲ್ಫ್ ಕ್ಲಬ್

150ನೇ ವಾರ್ಷಿಕೋತ್ಸವದ ಸಂಭ್ರಮ

1876–2026

BANGALORE GOLF CLUB 1876 2026 150 Years

ಉದ್ಘಾಟನೆ

ಶ್ರೀ ಡಿ.ಕೆ. ಶಿವಕುಮಾರ್ (ಗೌರವಾನ್ವಿತ ಸದಸ್ಯರು, ಬಿಜಿಸಿ)
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ಸತೀಶ್ ಜಾರಕಿಹೊಳಿ
ಸನ್ಮಾನ್ಯ ಲೋಕೋಪಯೋಗಿ ಸಚಿವರು

ಗೌರವಾನ್ವಿತ ಉಪಸ್ಥಿತಿ
ಶ್ರೀ ಕೆ ಜೆ ಜಾರ್ಜ್ (ಗೌರವಾನ್ವಿತ ಸದಸ್ಯರು, ಬಿಜಿಸಿ)
ಸನ್ಮಾನ್ಯ ಇಂಧನ ಮತ್ತು ಪ್ರವಾಸೋದ್ಯಮ ಸಚಿವರು

ಗೌರವಾನ್ವಿತ ಅತಿಥಿಗಳು
ಶ್ರೀ ಬಸವರಾಜ ಎಸ್ ಬೊಮ್ಮಾಯಿ (ಗೌರವಾನ್ವಿತ ಸದಸ್ಯರು, ಬಿಜಿಸಿ)
ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು
ಹಾಗೂ ಸಂಸತ್ ಸದಸ್ಯರು

ಶ್ರೀ. ಪಿ.ಸಿ. ಮೋಹನ್ (ಗೌರವಾನ್ವಿತ ಸದಸ್ಯರು, ಬಿಜಿಸಿ)
ಸನ್ಮಾನ್ಯ ಸಂಸತ್ ಸದಸ್ಯರು

ಶ್ರೀ. ರಿಜ್ವಾನ್ ಅರ್ಷದ್
ಸನ್ಮಾನ್ಯ ವಿಧಾನಸಭಾ ಸದಸ್ಯರು

ಶ್ರೀ. ಕೆ. ಗೋವಿಂದರಾಜ್ (ಗೌರವಾನ್ವಿತ ಸದಸ್ಯರು, ಬಿಜಿಸಿ)
ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು
ಅಧ್ಯಕ್ಷರು–ಕರ್ನಾಟಕ ಒಲಿಂಪಿಕ್ ಅಸೋಸಿಯೇಷನ್

ಡಾ. ಶಾಲಿನಿ ರಜನೀಶ್
ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

150 YEARS 1876 2026 OF LEGACY

ಬಿಜಿಸಿಯ ಕ್ಯಾಪ್ಟನ್ ಮತ್ತು ವ್ಯವಸ್ಥಾಪಕ ಸಮಿತಿ

150ನೇ
ವರ್ಷದ ಸಂಭ್ರಮಾಚರಣೆ

24ನೇ ಜೂನ್ 2026, ಬುಧವಾರ

ನಗರದ ಸದ್ದುಗದ್ದಲಗಳ ನಡುವೆ ಮೃದು ಹಸಿರನ್ನು ವಿಶಾಲವಾಗಿ ಪಸರಿಸಿ ನಳನಳಿಸುತ್ತಿದೆ **ಬೆಂಗಳೂರು ಗಾಲ್ಫ್ ಕ್ಲಬ್. 1876ರಲ್ಲಿ ಸ್ಥಾಪನೆಯಾದ ಈ ಕ್ಲಬ್ 150 ವರ್ಷಗಳ ಪರಂಪರೆಯ ಹಸಿರು ಛಾಯೆಗಳಲ್ಲಿ ಹೆಣೆದ ಒಂದು ಜೀವಂತ ಕವನ.**

ಇಲ್ಲಿ ಮುಂಜಾನೆಯ ಸೂರ್ಯ ಕಿರಣಗಳಲ್ಲಿ, ಮಂಜಿನ ಹನಿಗಳಲ್ಲಿ ಹೊಳೆವ ಹಸಿರು ರೇಷ್ಮೆಯಂತಹ ಹುಲ್ಲು ಹಾಸಿನ ನಡುವೆ ಈ ಕ್ಲಬ್‌ನ ರಸವತ್ತಾದ ಕಥೆಯನ್ನು ಭಿತ್ತರಿಸಲು ಆಗಸದೆಡೆ ನಿಂತಿವೆ ನೀಲಗಿರಿ ಹಾಗೂ ಮಳೆ ಮರಗಳು(ರೈನ್ ಟ್ರೀ).

ಈ ಮರಗಳ ಗುಂಪುಗಳ ಮಧ್ಯೆ ಹಸಿರು ಹೆದ್ದಾರಿಯಂತೆ ನುಗ್ಗುತ್ತಿರುವ ಫೇರ್‌ವೇಗಳು, ಹಾರಾಡುವ ಬುಲ್ ಬುಲ್ ಪಕ್ಷಿಗಳು, ಹೊಳಪಿನ ಬಣ್ಣದ ಸನ್ ಬರ್ಡ್, ಮೈದುಂಬಿ ಹಾಡುವ ಮೈನಾಗಳು, ಹೂಗಳ ಮೇಲೆ ನರ್ತಿಸುತ್ತಿರುವ ಚಿಟ್ಟೆಗಳು, ಈ ಕ್ಲಬಿಗೆ ಜೀವ ಕಳೆ ತುಂಬುತ್ತಿವೆ. ಮೋಡಗಳೊಂದಿಗೆ ಪ್ರತಿಬಿಂಬಿಸುವ ಕೊಳಗಳು, ದಣಿದ ಕ್ರೀಡಾಪಟುಗಳ ಮನಗಳಿಗೆ ಮುದನೀಡಿ ಚೈತನ್ಯ ತುಂಬುತ್ತವೆ.

ಈ ಗಾಲ್ಫ್ ಮೈದಾನ ಧೂಳನ್ನು ನುಂಗಿ, ತಾಜಾತನವನ್ನು ಹೊರ ಹೊಮ್ಮುತ್ತಾ, ಶುದ್ಧ ಗಾಳಿಯನ್ನು ನೀಡುತ್ತಾ, ಬೇಸಿಗೆ ಬಿಸಿಲನ್ನು ನೀಗಿಸುತ್ತಾ, ಉಸಿರು ಕೋಶದಂತೆ ಪಸರಿಸಿದೆ.

ಈ ತಾಣ ಕೇವಲ ಸೌಂದರ್ಯ ಪ್ರತೀಕವಾಗಿರದೇ ಗಾಳಿಯನ್ನು ತಂಪಾಗಿಸುವ, ಪಕ್ಷಿಗಳಿಗೆ ಆಶ್ರಯ ನೀಡುವ ಅಪೂರ್ವದ ಹಸಿರು ಹೊದಿಕೆಯನ್ನು ನೀಡಿ ಬೆಂಗಳೂರಿಗೆ ಉಲ್ಲಾಸಕರ ವಾತಾವರಣವನ್ನು ನಿರ್ಮಿಸುತ್ತದೆ.

ಬೆಂಗಳೂರು ಗಾಲ್ಫ್ ಕ್ಲಬ್ಬಿನಲ್ಲಿ ಒಂದು ಸುತ್ತು ಆಟ, ಜೀವ ಸಂಕುಲಕ್ಕೆ ಆಶ್ರಯ ನೀಡುವ ಪ್ರಕೃತಿಯೊಂದಿಗಿನ ಒಡನಾಟ. ಪ್ರತಿ ಕ್ಷಣವು ನೆರಳು ಬೆಳಕಿನ ರಂಗು–ರಂಗಿನ ಪಕ್ಷಿ ಗಾಯನದ ಸುಮಧುರ ಭಾವದ ಆಹ್ಲಾದಕರ ಸುವಾಸನೆಯ ಮತ್ತು ಸೌಂದರ್ಯ ನಡುವಿನ ಒಂದು ಸಣ್ಣ ಪಯಣ.

150 ವರ್ಷಗಳ ಪರಂಪರೆ ಮತ್ತು ಸಂಪ್ರದಾಯದ ಸಂಭ್ರಮಾಚರಣೆ.

ಬಿಡಿಎ: ಸೈಕಲ್ ಸವಾರರಿಗೆ ಪ್ರತ್ಯೇಕ ಪಥ

ಪ್ರಮುಖ ಮುಖ್ಯರಸ್ತೆಯಲ್ಲಿ 10.3 ಕಿ.ಮೀ. ಉದ್ದದ ಟ್ರ್ಯಾಕ್ ನಿರ್ಮಾಣ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ವತಿಯಿಂದ ನಿರ್ಮಿಸುತ್ತಿರುವ ಮಾಗಡಿ ರಸ್ತೆ ಮತ್ತು ಮೈಸೂರು ರಸ್ತೆಯನ್ನು ಸಂಪರ್ಕಿಸುವ ಮುಖ್ಯರಸ್ತೆಯಲ್ಲಿ (ಮೇಜರ್ ಆರ್ಟೀರಿಯರ್ ರೋಡ್–ಎಂಎಆರ್) ಸೈಕಲ್ ಸವಾರರಿಗೆ ಪ್ರತ್ಯೇಕ ಪಥದ ವ್ಯವಸ್ಥೆ ಮಾಡಲಾಗಿದೆ.

11 ಕಿ.ಮೀ. ಎಂಎಆರ್ ಯೋಜನೆಯ ಭಾಗವಾಗಿ 10.3 ಕಿ.ಮೀ ಉದ್ದದ ಪ್ರತ್ಯೇಕ ಸೈಕಲ್ ಟ್ರ್ಯಾಕ್ ಸಿದ್ಧಪಡಿಸುವ ಕಾರ್ಯ ಭರದಿಂದ ಸಾಗಿದೆ. ವಾಹನ ದಟ್ಟಣೆಯಿಂದ ದೂರವಿರುವ ಈ ಪಥವು ಸೈಕಲ್ ಸವಾರರಿಗೆ ಸುಸಜ್ಜಿತ ಪ್ರಯಾಣದ ಅನುಭವ ನೀಡಲಿದೆ.

ಸೈಕಲ್ ಸವಾರರಿಗೆ ಉತ್ತೇಜನ ಕೊಡುವ ಮೂಲಕ, ಇಂಧನ ಅವಲಂಬನೆ ಕಡಿಮೆ ಮಾಡುವುದರೊಂದಿಗೆ ಪರಿಸರ ಮಾಲಿನ್ಯವನ್ನೂ ತಡೆಯುವ ಉದ್ದೇಶವಿದೆ. ಪ್ರತ್ಯೇಕ ಸೈಕ್ಲಿಂಗ್ ಮೂಲಸೌಕರ್ಯಗಳು ಕ್ಷೀಣಿಸುತ್ತಿರುವುದನ್ನು ಮನಗಂಡು ಇದನ್ನು ನಿರ್ಮಿಸಲಾಗಿದೆ. ಅಂಡರ್ ಪಾಸ್ ಪ್ರದೇಶ ಹೊರತುಪಡಿಸಿ ಸಂಪೂರ್ಣ ಟ್ರ್ಯಾಕ್ ಪ್ರತ್ಯೇಕವಾಗಿ ರೂಪುಗೊಂಡಿದೆ.

ಪ್ರಸ್ತುತ ಪಥದ ಅಂತಿಮ ಹಂತದ ಕೆಲಸಗಳು ಭರದಿಂದ ಸಾಗುತ್ತಿವೆ. ಸೂಚನಾ ಫಲಕಗಳ ಅಳವಡಿಕೆ, ರಸ್ತೆ ಗುರುತುಗಳ ರಚನೆ, ಅಂಡರ್ ಪಾಸ್‌ಗಳಿಗೆ ಬಣ್ಣ ಬಳಿಯಲಾಗುತ್ತಿದೆ.

‘ಪ್ರಮುಖ ಮುಖ್ಯರಸ್ತೆ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ. ತಿಂಗಳ ಅಂತ್ಯದಲ್ಲಿ ಮಾರ್ಗವನ್ನು ಸಾರ್ವಜನಿಕ ಸೇವೆಗೆ ಸರ್ಮಪಿಸುವ ಸಾಧ್ಯತೆ ಇದೆ. ವಾಹನ ದಟ್ಟಣೆ ಮಧ್ಯೆ ಸವಾರರಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರದ ಅನುಭವ ಕಲ್ಪಿಸುವ ಉದ್ದೇಶದಿಂದ ಯೋಜನೆ ರೂಪಿಸಲಾಗಿದೆ’ ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸುತ್ತಿರುವ ಮೇಜರ್ ಆರ್ಟೀರಿಯರ್ ರೋಡ್‌ನಲ್ಲಿ ವಿಶೇಷ ಸೈಕಲ್ ಪಥ

‘ನಗರದಲ್ಲಿ ಸೈಕಲ್ ಸವಾರಿ ಉತ್ತೇಜಿಸುವುದು, ಮೂಲಸೌಕರ್ಯ ಒದಗಿಸುವುದು ಯೋಜನೆಯ ಉದ್ದೇಶ. ಆರೋಗ್ಯಕರ ಜೀವನ ಶೈಲಿಯನ್ನು ಉತ್ತೇಜಿಸಲು ಸೈಕಲ್ ಪಥ ಅಭಿವೃದ್ಧಿಪಡಿಸಲಾಗುತ್ತಿದೆ’ ಎಂದರು.

‘ಪಥದಲ್ಲಿ ಸಾರ್ವಜನಿಕರು ಓಡಾಡಬಾರದು. ದೈಹಿಕ ಸದೃಢತೆ ಮತ್ತು ಮಾನಸಿಕ ಆರೋಗ್ಯಕ್ಕೆ ಸೈಕಲ್ ಸವಾರಿ ಸಹಕಾರಿ. ನಗರದಲ್ಲಿಇಂಥ ಪಥಗಳು ಕಡಿಮೆ ಇದೆ. ಇರುವ ಪಥಗಳನ್ನೂ ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ’ ಎಂದು ದೂರುತ್ತಾರೆ ಸೈಕಲ್ ಸವಾರರು.

2018ರಲ್ಲಿ ಯೋಜನೆ ಆರಂಭ

ಪ್ರಾಧಿಕಾರವು 2018ರಲ್ಲಿ ಯೋಜನೆ ಆರಂಭಿಸಿದ್ದು, ಇದು 300 ಅಡಿ ಅಗಲದ ದಶಪಥ ರಸ್ತೆ. ನಾಡಪ್ರಭು ಕೆಂಪೇಗೌಡ ಬಡಾವಣೆಯ ಎಲ್ಲ 9 ಬ್ಲಾಕ್‌ಗಳಿಗೆ ಸಂಪರ್ಕ ಕಲ್ಪಿಸಲಿದೆ. ಮಾಗಡಿ ರಸ್ತೆ (ಕಡಬಗೆರೆ ಕ್ರಾಸ್) ಮತ್ತು ಮೈಸೂರು ರಸ್ತೆ (ಚಲ್ಲಘಟ್ಟ ಮೆಟ್ರೊ ಡಿಪೊ) ಸಂಪರ್ಕವೂ ಸುಲಭವಾಗಲಿದೆ. ಎಂಎಆರ್‌ನಲ್ಲಿ 2.90 ಕಿ.ಮೀ, 5.10 ಕಿ.ಮೀ. ಹಾಗೂ 9.70 ಕಿ.ಮೀನಲ್ಲಿ ಅಂಡರ್‌ಪಾಸ್ ನಿರ್ಮಾಣವಾಗಿದೆ. ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಎಂಎಆರ್‌ನಲ್ಲಿ 64 ಕಿರು ಸೇತುವೆ, ಚಲ್ಲಘಟ್ಟ ಬಳಿ 250 ಮೀಟರ್ ಉದ್ದದ ಸುರಂಗ ರಸ್ತೆ ನಿರ್ಮಾಣದ ಜತೆಗೆ ರೈಲು ಕೆಳಸೇತುವೆ ಒಳಗೊಂಡಿದೆ.

ರಸ್ತೆ ಗುಂಡಿಗೆ ಮಾಡಿದ ವೆಚ್ಚ ಎಷ್ಟು: ಸಂಸದ ಪ್ರಶ್ನೆ

‘30 ದಿನಗಳಲ್ಲಿ ಶ್ವೇತಪತ್ರ ಮಂಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ರಸ್ತೆ ಗುಂಡಿಗಳ ದುರಸ್ತಿಗೆ ಮೂರು ವರ್ಷಗಳಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂಬ ಬಗ್ಗೆ 30 ದಿನಗಳಲ್ಲಿ ಶ್ವೇತಪತ್ರ ಬಿಡುಗಡೆ ಮಾಡಬೇಕು’ ಎಂದು ಸಂಸದ ತೇಜಸ್ವಿ ಸೂರ್ಯ ಒತ್ತಾಯಿಸಿದ್ದಾರೆ.

ಬೆಂಗಳೂರು ನಗರದ ಅಭಿವೃದ್ಧಿಗೆ ಸಂಬಂಧಿಸಿದಂತೆ 15 ಅಂಶಗಳನ್ನು ಒಳಗೊಂಡ ಪತ್ರವೊಂದನ್ನು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡರಿಗೆ ಬರೆದಿದ್ದು, ಈ ಕುರಿತು ತೇಜಸ್ವಿ ಅವರು ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

‘ತೆರಿಗೆದಾರರ ಹಣವನ್ನು ಈ ಕಾರ್ಯಕ್ಕೆ ಬಳಸಲಾಗುತ್ತಿದೆ. ಸಾರ್ವಜನಿಕರು ತೆರಿಗೆ ಕಟ್ಟದಿದ್ದರೆ ದಂಡ ಹಾಕುತ್ತಾರೆ. ಹಾಗಾದರೆ ನಮ್ಮ ರಸ್ತೆಗೆ ಜವಾಬ್ದಾರಿ ಯಾರು ಎಂಬುದನ್ನು ನಾವು ತಿಳಿಯಬೇಕು’ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಾವಿರಾರು ಕೋಟಿಯನ್ನು ಗುಂಡಿ ಮುಚ್ಚಲು ವ್ಯಯಿಸಿರುವುದಾಗಿ ಹೇಳಿದೆ. ಆದರೂ, ಗುಂಡಿಗಳು ಮಾತ್ರ ಹಾಗೇ ಇವೆ. ಎನ್‌ಸಿಆರ್‌ಬಿ ಮಾಹಿತಿ ಪ್ರಕಾರ ಗುಂಡಿಗೆ ಬಿದ್ದು ಸಾಯುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಹಾಗಾದರೆ ಹಣ ಎಲ್ಲಿ ಹೋಗಿದೆ ಎಂದು ಪ್ರಶ್ನಿಸಿದರು.

ನಗರದ ಸಮಗ್ರ ಅಭಿವೃದ್ಧಿಗೆ ಯೋಜನೆಯನ್ನು ರೂಪಿಸಬೇಕು. ನಗರದ ಜನರ ಜೀವನಮಟ್ಟ ಸುಧಾರಿಸುವ ಕ್ರಮಗಳಿಗೆ ಶೇ100 ರಷ್ಟು ಬೆಂಬಲವನ್ನು ಕೇಂದ್ರ ಸರ್ಕಾರದ ಮಟ್ಟದಲ್ಲಿ ನೀಡಲಾಗುವುದು. ಸಚಿವರಿಗೆ ಅಭಿವೃದ್ಧಿ ಸಂಬಂಧ ವಿವರವನ್ನು ಅಂಕಿ–ಅಂಶಗಳ ಸಮೇತ ನೀಡಿದ್ದೇನೆ. ರಾಜ್ಯ ಸರ್ಕಾರದ 30ಕ್ಕೂ ಹೆಚ್ಚು ಯೋಜನೆಗಳು ಬಾಕಿ ಇವೆ. ಯೋಜನೆ ಜಾರಿ ಮಾಡುವ ಮೊದಲು ಹಳೆಯ ಯೋಜನೆಗಳನ್ನು ಶೀಘ್ರ ಮುಗಿಸಬೇಕು ಎಂದು ತಿಳಿಸಿರುವುದಾಗಿ ಹೇಳಿದರು.

ಬಿಎಂಆರ್‌ಸಿಎಲ್, ಬಿಡಿಎ, ಬಿಎಂಎಲ್‌ಟಿಎ, ಕೆಆರ್‌ಐಡಿಎಲ್ ಸೇರಿ 12ಕ್ಕೂ ಹೆಚ್ಚು ಮೂಲಸೌಕರ್ಯ ಏಜೆನ್ಸಿಗಳು ಬೆಂಗಳೂರಿನಲ್ಲಿವೆ. ಇವುಗಳ ನಡುವೆ ಸಮನ್ವಯಕ್ಕೆ ಏಜೆನ್ಸಿ ಇಲ್ಲ. ಆದ್ದರಿಂದ, ಬಿಎಂಎಲ್‌ಟಿಎಗೆ ಅಧ್ಯಕ್ಷರ ನೇಮಕ ಮಾಡಿ ನೋಡಲ್ ಏಜೆನ್ಸಿ ಮಾಡಬೇಕೆಂದು ಮನವಿ ಮಾಡಿದ್ದೇನೆ ಎಂದರು.

ಕೇಂದ್ರಕ್ಕೆ ಪ್ರಸ್ತಾವ ಬಂದಿಲ್ಲ: ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದ ಅರ್ಬನ್ ಚಾಲೆಂಜ್ ಫಂಡ್ (ಯುಸಿಎಫ್) ಅಡಿ ₹1 ಲಕ್ಷ ಕೋಟಿ ಇಡಲಾಗಿದೆ. ರಾಜ್ಯ ಸರ್ಕಾರದಿಂದ ಈ ಯೋಜನೆಯ ಅಡಿ ಅನುದಾನಕ್ಕಾಗಿ ಪ್ರಸ್ತಾವ ಬಂದಿಲ್ಲ. ಸರಿಯಾದ ಡಿಪಿಆರ್ ಕೊಟ್ಟರೆ ಕೇಂದ್ರ ಹಣ ನೀಡುತ್ತದೆ ಎಂದರು.

‘ಗುಂಡಿ ಮುಚ್ಚುವ ಬಗ್ಗೆ ವಿಭಿನ್ನ ಹೇಳಿಕೆಗಳು’

ತೇಜಸ್ವಿ ಸೂರ್ಯ

‘ಈ ಹಿಂದೆ ಬೆಂಗಳೂರು ನಗರ ಅಭಿವೃದ್ಧಿ ಮಂತ್ರಿ ಆಗಿದ್ದ ಡಿ.ಕೆ.ಶಿವಕುಮಾರ್ ಅವರು ರಸ್ತೆ ಗುಂಡಿಗಳನ್ನು ಮುಚ್ಚುವ ಸಂಬಂಧ ವಿಭಿನ್ನ ಹೇಳಿಕೆಗಳನ್ನು ನೀಡಿದ್ದರು. ಇದರಲ್ಲಿ ಯಾವ ಹೇಳಿಕೆ ಸರಿ’ ಎಂದು ತೇಜಸ್ವಿ ಸೂರ್ಯ ಪ್ರಶ್ನಿಸಿದ್ದಾರೆ.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಗುಂಡಿ ಮುಚ್ಚಲು ₹7 ಕೋಟಿ ಖರ್ಚು ಮಾಡಿರುವುದಾಗಿ 2023ರ ಡಿಸೆಂಬರ್‌ನಲ್ಲಿ ಹೇಳಿದ್ದರು. 2024 ರ ಡಿಸೆಂಬರ್‌ನಲ್ಲಿ ಶೇ 63ರಷ್ಟು ಗುಂಡಿ ಜಾಸ್ತಿ ಆಗಿದೆ ಎಂದೂ ಹೇಳಿದ್ದರು. ಯಾವುದು ಸತ್ಯ’ ಎಂದು ಪ್ರಶ್ನಿಸಿದರು.

‘2025ರ ಆಗಸ್ಟ್‌ನಲ್ಲಿ ಬಿಬಿಎಂಪಿ ₹12 ಕೋಟಿಯನ್ನು ರಸ್ತೆ ಗುಂಡಿ ಮುಚ್ಚಲು ವೆಚ್ಚ ಮಾಡಿದೆ. 2025 ರ ಸೆಪ್ಟೆಂಬರ್‌ನಲ್ಲಿ ₹750 ಕೋಟಿಯನ್ನು ರಸ್ತೆ ಗುಂಡಿ ಮುಚ್ಚಲು ಘೋಷಣೆ ಮಾಡಿದರು. ಮತ್ತೆ ₹1100 ಕೋಟಿ ಅನುದಾನ ಗುಂಡಿ ಮುಚ್ಚಲು ಘೋಷಣೆ ಮಾಡಿದರು. ಹಾಗಾದರೆ ಯಾವ ಹಣ? ಎಲ್ಲಿ ಹೋಗುತ್ತಿದೆ?’ ಎಂದರು.

‘ಜಿಬಿಎ ರಚನೆ ಆದ ಬಳಿಕ ₹2,200 ಕೋಟಿ ಹಣ ನೀಡಿದ್ದೇವೆ ಎಂದು ಶಿವಕುಮಾರ್ ಹೇಳಿದರು. ಮತ್ತೆ ವೈಟ್ ಟಾಪಿಂಗ್‌ಗೆ ಹಣ ನೀಡಿದ್ದೇವೆ ಎಂದರು. ₹5,500 ಕೋಟಿ ವ್ಯಯಿಸಿ ರಸ್ತೆ ಮಾಡಿದ ಮೇಲೆ ಮುಖ್ಯಮಂತ್ರಿ ಆದರು’.

‘ಹೊಸ ನಗರಾಭಿವೃದ್ಧಿ ಸಚಿವರು ₹2,000 ಕೋಟಿ ರಸ್ತೆ ಗುಂಡಿಗೆ ಕೊಟ್ಟರು. ಒಂದೇ ವರ್ಷದಲ್ಲಿ ಸಾವಿರಾರು ಕೋಟಿ ಹಣ ಘೋಷಣೆ ಮಾಡಿದ್ದಾರೆ. ಹಣ ಬಿಡುಗಡೆ ಸಹ ಮಾಡ್ತಿದ್ದೇವೆ ಎನ್ನುತ್ತಾರೆ. ಹಾಗಾದರೆ ಗುಂಡಿ ಏಕೆ ಮುಚ್ಚುತ್ತಿಲ್ಲ’ ಎಂದು ಪ್ರಶ್ನಿಸಿದರು.

ಮುಖ್ಯಾಂಶಗಳು

- 15 ಅಂಶಗಳ ಪತ್ರ ಬರೆದ ತೇಜಸ್ವಿ ಸೂರ್ಯ
- ‘ರಾಜ್ಯ ಸರ್ಕಾರದ 30ಕ್ಕೂ ಹೆಚ್ಚು ಯೋಜನೆಗಳು ಬಾಕಿ ಇವೆ’
- ಬಿಎಂಎಲ್‌ಟಿಎ ಅಧ್ಯಕ್ಷರ ನೇಮಕಕ್ಕೆ ಮನವಿ

ಬಿಎಂಟಿಸಿ ‘ವಿಸ್ತಾರ ವ್ಯಾಪ್ತಿ’ಗೆ ಬಸ್ ಪಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೇಂದ್ರ ಭಾಗದಿಂದ 40 ಕಿ.ಮೀ.ವರೆಗಿನ ಪ್ರದೇಶವನ್ನು ‘ಸೀಮಿತ ವ್ಯಾಪ್ತಿ’ ಹಾಗೂ ಅದರಾಚೆಗಿನ ಪ್ರದೇಶವನ್ನು ‘ವಿಸ್ತಾರ ವ್ಯಾಪ್ತಿ’ ಎಂದು ಬಿಎಂಟಿಸಿ ವರ್ಗೀಕರಿಸಿದೆ. ಸೀಮಿತ ವ್ಯಾಪ್ತಿಯ ಪಾಸ್ ದರ ಎಂದಿನಂತೆ ಇರಲಿದೆ. ಹೊಸದಾಗಿ ಕಾರ್ಯಾಚರಣೆ ವಿಸ್ತರಿಸಿರುವ ‘ವಿಸ್ತಾರ ವ್ಯಾಪ್ತಿ’ಗೆ ಪಾಸ್ ದರ ನಿಗದಿ ಮಾಡಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪಾಸ್‌ಗಳು	ದರ
ಸಾಮಾನ್ಯ ವಿಸ್ತಾರ ದೈನಿಕ	₹120
ಸಾಮಾನ್ಯ ವಿಸ್ತಾರ ಸಾಪ್ತಾಹಿಕ	₹550
ಸಾಮಾನ್ಯ ಮಾಸಿಕ	₹1,200
ಸಾಮಾನ್ಯ ವಿಸ್ತಾರ ಮಾಸಿಕ	₹1,500

ಬೆಂಗಳೂರು ಟ್ರಾನ್ಸ್‌ಪೋರ್ಟ್ ಸರ್ವೀಸ್ (ಬಿಟಿಎಸ್) ಕಾಲದಲ್ಲಿ ಬೆಂಗಳೂರು ನಗರ ಪಾಲಿಕೆಯಿಂದ 20 ಕಿ.ಮೀ. ವರೆಗೆ ಬಿಟಿಎಸ್ ಕಾರ್ಯಾಚರಣೆ ವ್ಯಾಪ್ತಿ ಎಂದು ನಿಗದಿ ಪಡಿಸಲಾಗಿತ್ತು. ನಗರ ಪಾಲಿಕೆಯು ಬಿಬಿಎಂಪಿಯಾಗಿ ಮೇಲ್ದರ್ಜೆಗೆ ಏರಿತು. ಬಿಟಿಎಸ್ ಕೂಡ ಬಿಎಂಟಿಸಿ ಆಗಿತ್ತು. ಆಗ ಬಿಬಿಎಂಪಿ ವ್ಯಾಪ್ತಿಯಿಂದ 25 ಕಿ.ಮೀ.ವರೆಗೆ ಬಿಎಂಟಿಸಿ ಕಾರ್ಯಾಚರಣೆಯನ್ನು ವಿಸ್ತರಿಸಲಾಗಿತ್ತು. 2025ರಲ್ಲಿ ಬಿಬಿಎಂಪಿಯನ್ನು ಮೇಲ್ದರ್ಜೆಗೆ ಏರಿಸಿ ಜಿಬಿಎ ಮಾಡಲಾಗಿದೆ. ಅದಕ್ಕೆ ಸರಿಯಾಗಿ ಬಿಎಂಟಿಸಿ ಕಾರ್ಯಾಚರಣೆ ವ್ಯಾಪ್ತಿಯನ್ನು ಕೂಡ ವಿಸ್ತರಿಸಲಾಗಿದ್ದು, ಜಿಬಿಎ ವ್ಯಾಪ್ತಿಯಿಂದ 40 ಕಿ.ಮೀ. ಎಂದು ನಿಗದಿ ಮಾಡಲಾಗಿದೆ.

ನಗರದ ಕೇಂದ್ರ ಭಾಗದಿಂದ ಈವರೆಗೆ ಸುಮಾರು 40 ರಿಂದ 42 ಕಿ.ಮೀ. ವರೆಗೆ ಸಂಚಾರ ನಡೆಸುತ್ತಿದ್ದ ಬಸ್‌ಗಳು ಈಗ 65 ರಿಂದ 70 ಕಿ.ಮೀ. ವರೆಗೆ ವಿಸ್ತರಿಸಲು ಅವಕಾಶ ದೊರೆತಿದೆ. ಕನಕಪುರ, ರಾಮನಗರ, ಚನ್ನಪಟ್ಟಣ, ಮಾಗಡಿ, ಚಿಕ್ಕಬಳ್ಳಾಪುರ, ಮಾಲೂರು ಸೇರಿದಂತೆ ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರಮುಖ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಿಗೆ ಬಿಎಂಟಿಸಿ ತನ್ನ ಸಾರ್ವಜನಿಕ ಸಾರಿಗೆಯನ್ನು ವಿಸ್ತರಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಹೊಸ ಕಾರ್ಯಾಚರಣೆ ವ್ಯಾಪ್ತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಉದ್ದೇಶದಿಂದ ನಗರದ ಕೇಂದ್ರ ಭಾಗದಿಂದ ಸುಮಾರು 40 ಕಿ.ಮೀ. ವರೆಗಿನ ಪ್ರದೇಶವನ್ನು ‘ಸೀಮಿತ ವ್ಯಾಪ್ತಿ’ ಹಾಗೂ ಅದರಾಚೆಗಿನ ಪ್ರದೇಶವನ್ನು ‘ವಿಸ್ತಾರ ವ್ಯಾಪ್ತಿ’ ಎಂದು ವರ್ಗೀಕರಿಸಲಾಗಿದೆ. ಸೀಮಿತ ವ್ಯಾಪ್ತಿಗೆ ಈಗಾಗಲೇ ಇರುವ ಪಾಸ್‌ಗಳ ದರದಲ್ಲಿ ಯಾವುದೇ ಬದಲಾವಣೆ ಇಲ್ಲ. ವಿಸ್ತರಿಸಿರುವ ಮಾರ್ಗಗಳಲ್ಲಿ ಜೂನ್ 2ರಿಂದ ‘ಸಾಮಾನ್ಯ ವಿಸ್ತಾರ’ ದೈನಿಕ, ಸಾಪ್ತಾಹಿಕ, ಮಾಸಿಕ ಪಾಸುಗಳನ್ನು ಪರಿಚಯಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED ENGLISH MEDIUM TRAINED/ Untrained Teachers for Primary School to teach English, Social, Maths, Science, Computer, PUC assistant. Lady Graduates interested in teaching can also apply. Age limit below 40 yrs. Contact in person 10 am -3 pm -The Secretary, Deccan Educational Society®, Near Sampige Theater, Malleswaram. Mob: 9353382686/ 7094390262

WANTED URGENTLY Required Full-Time Lecturers in PHYSICS to Teach I & II PUC & COMMERCE for PRACTICAL Subject of B.Com & BBA Candidates with P.G with 1st Class & Minimum 2Years Experience, can apply the Secretary, Vidyavahini College, Anandanagar, Near Hebbal Bangalore-24, Email:vvpucollege@gmail.com Ph:9606516854, 080-23433507.

CAMLIN ENGLISH SCHOOL, 6th 'C' Main Hampinagar Bangalore. Wanted Teachers for English & Social, NTT for Immediate Appointment. CONTACT: Principal 080-23301363.

General

CITI JOBS, Bannerghatta Road Wanted IMMEDIATELY HR MANAGER/ EXECUTIVES, TELE-CALLERS. Good Salary Call: 9900001954

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

REQUIRED Hydrographic/ Geologist Consultant having minimum experience of 5 years for a company in Mumbai
Mail Resume to secretary@hindoffshore.com

"WANTED FRONT_OFFICE-EXECUTIVE, Marketing Manager/Executive`& HR.Manager with`5yrs_Exp; Tool_&_Die maker with`6yrs`Exp; Car_Driver with`10yrs`Exp. Salary as`per`industry standards for`a manufacturing company located`in Bommanahalli, near`HSR Layout, Bangalore-68. Send`CV`to: uppbangalore@gmail.com /`Contact: 9449817703"

Multiple Vacancy

Yeti REFRIGERATION
BANGALORE & ERODE
- Manager - BE with workshop experience
- Refrigeration Mechanics
- Truck, Bus, Car Air - conditioning Mechanics
- Trainees - Stipend provided
- Accountant
- Security Personnel
Send resume to:
Yeti Refrigeration (P) Ltd.
Ph.: 98441 21208
yeti.ref@gmail.com

Factory

HIRING MALE CANDIDATES BELOW 30 Years, for Pvt Ltd Co. Qualification: 10th or PUC Pass, In Around Rajajinagar Contact: 9902891620/ 9845579620

Hotel

CHAIN OF FOOD COURTS Wanted MANAGERS, COUNTER SALES EXECUTIVES Cum CASHIERS, LADY COOKS, WAITERS, HELPERS. Very Good Salary. Call: 99000-54462

Marketing & Sales

WANTED EXPERIENCED SALES EXECUTIVES FOR-UPVC WINDOWS IN BANGALORE GOOD SALARY INCENTIVES PETROL ALLOWANCE WILL BE PAID. 9740507785

BUSINESS

Business to Business

Finance

LOW CIBIL, GET HOME LOAN, CONSTRUCTION AND MORTGAGE LOANS AT AFFORDABLE RATE OF INTEREST. FREE LEGAL OPINION ON PROPERTY. CONTACT SOWMYA: 9845076700

PUBLIC NOTICE

RAMEE GROUP OF HOTEL'S
Invites Tenders for B'Adda,Yeda Republic (Koramangala), Ramee Guestline Hotels (Attibele)
- Indian Vegetables
- English Vegetables
- Fruits - Indian & Imported
- Sea Foods • Chicken / Eggs
- Mutton / Meats • Milk & Curd
- Oil • Grocery & Dry Provision
- Dry Fruits • Garlic
- Canned / Bottled / Tetra Pack Juices • Dairy Products - Butter / Cheese
- Bakery • Charcoal • Fuel Gel
- Cleaning Items • General & H/K / Tissue Papers
- Stationery /Printer Cartridges
- Cold Cuts (Chicken / Meats)
- Ice Cream / Kulfi • Farsan / Namkeen • Frozen Green Peas & Corn • Ice Cubes, Dry Ice,
- Cleaning Chemicals, Nursery and Footwear
Submit Sealed Tenders For Period: 01/08/2026 - 31/07/2027
Last Date of Submission 07/07/2026
Note: Detailed Tender Form and other particulars can be obtained on payment of Rs. 500 and is available with the Accounts Dept. at Bombay Adda Koramangala and Ramee Guestline Hotel. Attibele, From: 23rd June to 07th July 2026 to (11 am to 5 pm). Management reserves the right to issue, accept or reject any or all tender forms without assigning any reasons thereof.
Contact: Purchase Manager
Bombay Adda, 7th Block Koramangala, Ramee Guestline Hotels, Attibele, Plot 1/2, KIADB Attible industrial Area.
Ph: 9686233144 / 9900237932 / 9008853602, Email: purchase.blr@bombayadda.com

ಸೆಂಚ್ಯುರಿ ಕ್ಲಬ್
ನಂ.1, ಶೇಷಾದ್ರಿ ರಸ್ತೆ, ಬೆಂಗಳೂರು–560001
ಫೋನ್ : 22214121/22215122
ಸೆಂಚ್ಯುರಿ ಕ್ಲಬ್ ಸದಸ್ಯರ ಗಮನಕ್ಕೆ
ಶನಿವಾರ 27ನೇ ಜೂನ್ 2026 ರಂದು ವಾರ್ಷಿಕ ಸರ್ವಸದಸ್ಯರ ಮಹಾಸಭೆ ಸಂಜೆ 4:30 ಘಂಟೆಗೆ ಕ್ಲಬ್‌ನ ಆವರಣದಲ್ಲಿ ನಡೆಯಲಿದೆ.
ಸಹಿ/–
ಅಭಿಷೇಕ್ ಬೊಗ್ಗರಮ್ ಅರುಣ್ ಕುಮಾರ್
ಗೌ.ಕಾರ್ಯದರ್ಶಿ

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, SYED ASLAM and SYED ASLAM SYED GAIBAN, residing at # 87, Yelahanka Main Road, Doddabettahalli Layout, Vidyaranyapura Post, Bengaluru-560097, declare that the above names pertain to me only. Henceforth I shall be known as SYED ASLAM vide affidavit dated 18-06-2026 before notary H. Sridhar Rao, Bengaluru.

I, SAI PRASHANTH.K S/o.Anuradha Kamale R/a.B3-301 Brahmagiri BDA.Apartment Malagala`Outer RingRoad, Nagarbhavi Bengaluru 560072 have`changed my`Name`from K_SAI_PRASHANTH, SAI_PRASHANTH K, SAI PRASHANTH to`SAI PRASHANTH KAMBLE vide`affidavit dated:20.6.2026 before`Notary Devaraj.E Bengaluru

I, MOHAMMAD FAHAD SHOUKATH HUSSAIN Resding at 710, Ward. No.17, Zam zam Silk Industry, Bapujinagar, Chickballapur-562101, have changed my name to MOHAMMED FAHAD SHOUKATH HUSSAIN affidavit dated 18.06.2026 before notary K.H. Venkatappa, Chickballapur.

CHANGE OF NAME
I, POONAM KHATTAR, W/o Ashok Sharma, residing at B-2016, Sobha Suncrest Apartments, Off Kanakapura Main Road, Manavarthekaval, Thalaghattapura, Bengaluru - 560062, have changed my name to POORNIMA SHARMA vide affidavit dated 07-05-2026 before notary L Puttaraju, Bengaluru.

CHANGE OF NAME
I, Ravi Kumar C Koppal, R/at Flat No.302, 161, JJ Residency, Krishna Garden Layout, Mailsandra Village, Bengaluru-560059, have changed my minor son's name from DIGANTHA RAVIKUMAR KOPPAL to DIGANTH R KOPPAL, vide affidavit dt: 20.06.2026 before notary R. Ramesh, Bengaluru.

CHANGE OF NAME
I, CHAITRA RAVIKUMARA, residing at No.32212, 21st Floor, Prestige Jindal City, Manjunathanagar, Nagasandra, Bengaluru- 560073 have changed my name to CHAITHRA BALANNA vide affidavit dated 23-06-2026 sworn before notary B. Prasanna, Bengaluru. Henceforth I shall be called as CHAITHRA BALANNA only.

CHANGE OF NAME
I, RADHIKA PAI D/o Ramakrishna Borkatte Pai, resident of No. 14, Hublikar Plots, Sadhankeri, Dharwad, Karnataka, I have changed my name from RADHIKA VISHWAS BHAT to RADHIKA PAI, vide affidavit dated 23.06.2026 Sworn before Advocate and Notary L B Gade, Dharwad. Hence forth I shall be called RADHIKA PAI Only.

I, ANURADHA M/o.Sai Prashanth Kamble`and Sangeetha Praveen R/a.B3-301`Brahmagiri BDA.Apartment Malagala Outer`Ring Road`Nagarbhavi Bengaluru 560072 have`changed my`Name_from ANURADHA, ANURADHA_K, ANURADHA KAMALE VEERANNA`to ANURADHA_KAMALE vide`affidavit dated:20.6.2026 before`Notary Devaraj.E Bengaluru

I, CHRISTY Joseph S/O Lawrence D Mello born on 22-04-1998 residing at #3018, 6th Main Raja Kempagowda Extention, Channapatna , Bangalore south 562160 , have changed my name to Christy Joseph D Mello vide affidavit dated 26-05-2026 at Channapatna.

ರಾಮ ಮಂದಿರ ಹಣ ನಾಪತ್ತೆ ಪ್ರಕರಣ • ಬಿ.ಕೆ. ಹರಿಪ್ರಸಾದ್ ಒತ್ತಾಯ

‘ನ್ಯಾಯಾಧೀಶರಿಂದ ತನಿಖೆಯಾಗಲಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಅಯೋಧ್ಯೆಯ ರಾಮ ಮಂದಿರದಲ್ಲಿ ₹200 ಕೋಟಿ ಹಣ ನಾಪತ್ತೆ ಆಗಿರುವ ಬಗ್ಗೆ ವರದಿಯಾಗಿದ್ದು, ಬಿಜೆಪಿಗೆ ಯಾವುದೇ ಧಾರ್ಮಿಕ ಬದ್ಧತೆ ಇಲ್ಲ ಎಂಬುದನ್ನು ಇದು ಸಾಬೀತುಪಡಿಸಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಮಂಗಳವಾರ ಇಲ್ಲಿ ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಅಯೋಧ್ಯೆಯನ್ನು ವ್ಯವಹಾರದ ತಾಣವಾಗಿ ಮಾರ್ಪಡಿಸಿರುವ ಬಿಜೆಪಿಯವರು, ಭಕ್ತರು ನೀಡಿರುವ ಹಣವನ್ನು ದೋಚುತ್ತಿದ್ದಾರೆ. ಪ್ರಕರಣದ ತನಿಖೆಗೆ ರಚಿಸಲಾದ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ಸೂಕ್ತ ಫಲಿತಾಂಶ ದೊರೆಯುವ ವಿಶ್ವಾಸವಿಲ್ಲ. ಪ್ರಕರಣದ ತನಿಖೆ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ನಡೆಯಲಿ. ಈ ಪ್ರಕರಣದ ನೈತಿಕ ಹೊಣೆ ಹೊತ್ತು, ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡಲಿ’ ಎಂದರು.

‘ವಿಧಾನಸೌಧದ ಎ.ಸಿ ಕೊಠಡಿಯಲ್ಲಿ ರೈತರ ಭೂಮಿ ಬಗ್ಗೆ ತೀರ್ಮಾನಿಸುವುದು ಬೇಡ, ಬಾಧಿತ ರೈತರಲ್ಲಿ ಚರ್ಚಿಸಬೇಕು’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಬಿಡದಿಯಲ್ಲಿ ಕಾಂಗ್ರೆಸ್ ಶಾಸಕರೇ ಇದ್ದು, ಅವರು ಅಲ್ಲಿ ಅಧಿಕಾರಿಗಳ ಸಭೆ ನಡೆಸಿ, ಎಲ್ಲ ವಿಷಯಗಳನ್ನು ಚರ್ಚಿಸುತ್ತಾರೆ. ಅಗತ್ಯವಿದ್ದಲ್ಲಿ ನಾವು ಅಲ್ಲಿಗೆ ಹೋಗುತ್ತೇವೆ. ಆದರೆ, ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿ ಬಿಡದಿಯಲ್ಲಿ ಸಭೆ ನಡೆಸಬೇಕೆಂದು ಜೆಡಿಎಸ್‌ನವರು ಹೇಳಿರುವುದು ರಾಜಕೀಯ ಉದ್ದೇಶದ ಹೇಳಿಕೆಯಾಗಿದೆ. ಅದನ್ನೆಲ್ಲ ಕೇಳಲು ಆಗದು’ ಎಂದರು.

‘ಪಕ್ಷದ ಸಾಂಸ್ಥಿಕ ಪುನರ್‌ರಚನೆಯ ಭಾಗವಾಗಿ ಎಐಸಿಸಿ ಒಂದೂವರೆ ವರ್ಷದ ಹಿಂದೆ ಪ್ರಾರಂಭಿಸಿರುವ ‘ಸಂಘಟನ್ ಸೃಜನ್’ ಕಾರ್ಯಕ್ರಮದ ಅಡಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ನೇಮಕ ನಡೆಯಲಿದೆ. ಬೇರೆ ರಾಜ್ಯಗಳ ನಾಯಕರು ವೀಕ್ಷಕರಾಗಿ ಆಯಾ ಜಿಲ್ಲೆಗೆ ಬಂದು, ಜಿಲ್ಲೆಯಲ್ಲಿ ಕನಿಷ್ಠ ಏಳು ದಿನ ಇರುತ್ತಾರೆ. ಎಲ್ಲ ಬ್ಲಾಕ್‌ಗಳಲ್ಲಿ ಸಭೆ ನಡೆಸಿ, ಸದಸ್ಯರ ಅಭಿಪ್ರಾಯ ಪಡೆದು ಎಐಸಿಸಿಗೆ ವರದಿ ಸಲ್ಲಿಸುತ್ತಾರೆ. ಕನಿಷ್ಠ ಎರಡು, ಗರಿಷ್ಠ ಆರು ಹೆಸರುಗಳನ್ನು ಅವರು ಸೂಚಿಸಬಹುದು. ಹೈಕಮಾಂಡ್ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡುತ್ತದೆ’ ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

ನಾಳೆಯಿಂದ ಮತದಾರರ ಪಟ್ಟಿ ಪರಿಷ್ಕರಣೆ

ಬೆಂಗಳೂರು: ಐದು ನಗರ ಪಾಲಿಕೆಗಳ ಚುನಾವಣೆ ಹಿನ್ನೆಲೆಯಲ್ಲಿ ಪೂರ್ವ ನಗರ ಪಾಲಿಕೆಯ 23 ವಾರ್ಡ್‌ಗಳು, ದಕ್ಷಿಣ ನಗರ ಪಾಲಿಕೆಯ ಒಂದು ವಾರ್ಡ್ ಹಾಗೂ ಕೇಂದ್ರ ನಗರ ಪಾಲಿಕೆಯ ಮೂರು ವಾರ್ಡ್‌ಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಜೂನ್ 25ರಿಂದ ಆರಂಭವಾಗಲಿದೆ ಎಂದು ರಾಜ್ಯ ಚುನಾವಣಾ ಆಯೋಗ ತಿಳಿಸಿದೆ.

ಪೂರ್ವ ನಗರ ಪಾಲಿಕೆಯ ವಾರ್ಡ್ ಸಂಖ್ಯೆ 28ರಿಂದ 50ರವರೆಗೆ, ದಕ್ಷಿಣ ನಗರ ಪಾಲಿಕೆಯ ವಾರ್ಡ್ 31 ಹಾಗೂ ಕೇಂದ್ರ ನಗರ ಪಾಲಿಕೆಯ ವಾರ್ಡ್ ಸಂಖ್ಯೆ 57, 58, 59ರ ಮತದಾರರ ಪಟ್ಟಿಗಳಿಗೆ ಸಂಬಂಧಿಸಿದಂತೆ ಪ್ರಮುಖ ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರಿಂದ ಆಕ್ಷೇಪಗಳು ಸ್ವೀಕೃತವಾಗಿವೆ. ಈ ಹಿನ್ನೆಲೆಯಲ್ಲಿ ಈ ವಾರ್ಡ್‌ಗಳ ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಆಯೋಗ ತೀರ್ಮಾನಿಸಿದೆ ಎಂದು ತಿಳಿಸಲಾಗಿದೆ.

ಮನೆ ಮನೆ ಸಮೀಕ್ಷೆ ಸಂಬಂಧ ಬಿಎಲ್‌ಒಗಳಿಗೆ ಜೂನ್ 25ರಂದು ತರಬೇತಿ ನೀಡಲಾಗುತ್ತದೆ. ಜೂನ್ 26ರಂದು ಮನೆ ಮನೆ ಸಮೀಕ್ಷೆ ಕಾರ್ಯ ಪ್ರಾರಂಭ. ಜುಲೈ 9ರಂದು ಕರಡು ಮತದಾರರ ಪಟ್ಟಿ ಪ್ರಕಟ, ಜುಲೈ 10ರಿಂದ 26ರವರೆಗೆ ಕ್ಲೇಮ್ ಮತ್ತು ಆಕ್ಷೇಪಣೆ ಸಲ್ಲಿಕೆ, ಇತ್ಯರ್ಥ್ಯ, ಜುಲೈ 31ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಕಾರ್ಮಿಕರ ಹಣ ಬಳಕೆ: ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) 15 ಲಕ್ಷ ಸಸಿಗಳನ್ನು ನೆಡುವ ಕಾರ್ಯಕ್ರಮಕ್ಕೆ ಕಟ್ಟಡ ಕಾರ್ಮಿಕರ ಸೌಲಭ್ಯಗಳಿಗೆ ಮೀಸಲಾದ ಕಲ್ಯಾಣ ಮಂಡಳಿಯ ನಿಧಿ ₹10 ಕೋಟಿ ಬಳಕೆ ಮಾಡುವ ಕ್ರಮವನ್ನು ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ (ಸಿಡಬ್ಲ್ಯುಎಫ್ಐ–ಸಿಐಟಿಯು) ಖಂಡಿಸಿದೆ.

ಸಸಿ ನೆಡುವ ಕಾರ್ಯಕ್ರಮವನ್ನು ಸ್ವಾಗತಿಸಲಾಗುವುದು. ಆದರೆ, ಕಾರ್ಯಕ್ರಮಕ್ಕೆ ಬಡ ಕಾರ್ಮಿಕರ ನಿಧಿ ಬಳಸುವುದನ್ನು ಕೈಬಿಡಬೇಕೆಂದು ಆಗ್ರಹಿಸಿದೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರಿಗೆ ಪಿಂಚಣಿ, ವೈದ್ಯಕೀಯ ವಿದ್ಯಾರ್ಥಿ ವೇತನ, ಹೆರಿಗೆ ಭತ್ಯೆ, ಮರಣ ಪರಿಹಾರ ಇತ್ಯಾದಿಗಳಿಗಾಗಿ ಸಂಗ್ರಹವಾಗಿರುವ ನೂರಾರು ಕೋಟಿ ಹಣದಲ್ಲಿ ₹10 ಕೋಟಿಯನ್ನು ಖರ್ಚು ಮಾಡಲು ಹೊರಟಿರುವುದು ಸರಿಯಲ್ಲ ಎಂದು ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ತಿಳಿಸಿದ್ದಾರೆ.

ಕಲ್ಯಾಣ ಮಂಡಳಿಯಲ್ಲಿ ಚರ್ಚಿಸದೇ ಕಾರ್ಮಿಕ ಕಲ್ಯಾಣಕ್ಕೆ ಸಂಬಂಧವಿರದ ಸರ್ಕಾರದ ಇನ್ನೊಂದು ಇಲಾಖೆಯ ಕಾರ್ಯಕ್ರಮಕ್ಕೆ ಈ ರೀತಿ ನಿಧಿ ವಿನಿಯೋಗಿಸುವುದು ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್ ಆದೇಶದ ಸ್ಪಷ್ಟ ಉಲ್ಲಂಘನೆಯಾಗಿದೆ. ಶಿವರಾಂ ಕಾರಂತ ಬಡಾವಣೆಯಲ್ಲಿ 7.5 ಲಕ್ಷ ಸಸಿಗಳನ್ನು ನೆಡಲು ಹಾಗೂ ಇದಕ್ಕಾಗಿ 13,750 ಸಾವಿರ ಕಾರ್ಮಿಕರನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಕಾರ್ಮಿಕರಿಗೆ ತಲಾ ₹ 750 ಗೌರವಧನ ನೀಡಲಾಗುವುದೆಂದು ಕಾರ್ಮಿಕ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ. ಆದರೆ, ಇದರಲ್ಲಿ ನಕಲಿ ಕಾರ್ಮಿಕರ ಪಟ್ಟಿಯನ್ನು ಸೃಷ್ಟಿಸಿ, ಅಧಿಕಾರಿಗಳು ಸಿಬ್ಬಂದಿ ನೈಜ ಕಾರ್ಮಿಕರ ಹೆಸರಿನಲ್ಲಿ ಹಣ ದೋಚುವ ಯೋಜನೆ ರೂಪಿಸಿದ್ದಾರೆ ಎನ್ನುವುದು ಕಾರ್ಮಿಕರ ಆರೋಪವಾಗಿದೆ ಎಂದು ಹೇಳಿದ್ದಾರೆ. ಸಿಡಬ್ಲ್ಯುಎಫ್ಐ–ಸಿಐಟಿಯು, ಕಟ್ಟಡ ಕಾರ್ಮಿಕ ಸಂಘಗಳು, ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಕಲ್ಯಾಣ ಮಂಡಳಿ ಮುಂದೆ ಹೋರಾಟ ನಡೆಸಲು ತೀರ್ಮಾನಿಸಿವೆ. ಲೋಕಾಯುಕ್ತರಿಗೆ, ಕಾನೂನು ಸೇವಾ ಪ್ರಾಧಿಕಾರ ಹಾಗೂ ಹೈಕೋರ್ಟ್ ನ್ಯಾಯಮೂರ್ತಿಗಳ ಗಮನಕ್ಕೂ ತರಲಾಗುವುದು ಎಂದು ತಿಳಿಸಿದ್ದಾರೆ.

ಭಾಗವಹಿಸುವವರಿಗೆ ಡಿಜಿಟಲ್ ಪ್ರಮಾಣಪತ್ರ, ಪದಕ ಗೌರವ

ಸಸಿ ನೆಡುವ ಅಭಿಯಾನಕ್ಕೆ ಸಕಲ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ನಗರ ಪುನಶ್ಚೇತನ ಮಿಷನ್ 2026–30’ ಅಂಗವಾಗಿ ನಾಡಪ್ರಭು ಕೆಂಪೇಗೌಡ ದಿನಾಚರಣೆ ಪ್ರಯುಕ್ತ ಜೂನ್ 27ರಂದು ನಗರದ ವಿವಿಧ ಭಾಗಗಳಲ್ಲಿ ಸ್ಥಳೀಯ ತಳಿಯ 15 ಲಕ್ಷ ಸಸಿಗಳನ್ನು ನೆಡುವ ಅಭಿಯಾನಕ್ಕೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳು, ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ಸಾರ್ವಜನಿಕ ಸಂಘ–ಸಂಸ್ಥೆಗಳ ಸಹಭಾಗಿತ್ವದಲ್ಲಿ ಕೈಗೊಂಡಿರುವ ಅಭಿಯಾನವು, ನಗರದ ಹಸಿರು ವಿಸ್ತರಣೆಗೆ ಮಹತ್ವದ ಕೊಡುಗೆ ನೀಡಲಿದೆ.

ಡಾ. ಶಿವರಾಮ ಕಾರಂತ ಬಡಾವಣೆ, ನಾಡಪ್ರಭು ಕೆಂಪೇಗೌಡ ಬಡಾವಣೆ, ಬನಶಂಕರಿ 6ನೇ ಹಂತ, ಕೆರೆ ದಂಡೆಗಳು, ರಾಜಕಾಲುವೆಗಳ ಇಕ್ಕೆಲಗಳು, ಉದ್ಯಾನಗಳು ಹಾಗೂ ವಿವಿಧ ಪರಿಸರ ವಲಯಗಳಲ್ಲಿ ಸಸಿ ನೆಡುವ ಕಾರ್ಯ ನಡೆಯಲಿದೆ.

ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಅಧಿಕೃತ ಡಿಜಿಟಲ್ ಪ್ರಮಾಣಪತ್ರ ನೀಡಲಾಗುವುದು. ಜೊತೆಗೆ ‘ಹಸಿರು ಬೆಂಗಳೂರು ರೂವಾರಿಗಳು’ ಎಂಬ ಗೌರವ ಸಿಗಲಿದೆ. ಅತ್ಯುತ್ತಮ ಕೊಡುಗೆ ನೀಡುವವರಿಗೆ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ನೀಡಿ ಗೌರವಿಸಲಾಗುತ್ತದೆ.

ಈ ಸಂಬಂಧ ಜಿಬಿಎ ಮುಖ್ಯ ಕಚೇರಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಸಿದ್ಧತೆ ಕುರಿತು ಚರ್ಚಿಸಲಾಯಿತು. ಕಾರ್ಯಕ್ರಮಕ್ಕೆ ಅಗತ್ಯವಿರುವ ಸಸಿಗಳು, ಉಪಕರಣಗಳು, ಮಾರ್ಗಸೂಚಿ ಫಲಕಗಳು ಹಾಗೂ ಇತರೆ ಸಾಮಗ್ರಿಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು. ಪ್ರತಿಯೊಂದು ಹಂತದಲ್ಲೂ ಸಮರ್ಪಕ ಮೇಲ್ವಿಚಾರಣೆ ಹಾಗೂ ಪರಿಣಾಮಕಾರಿ ಸಮನ್ವಯ ಇರಬೇಕು ಎಂದು ಅಧಿಕಾರಿಗಳು ತಿಳಿಸಿದರು.

ಬಿಡಿಎ ಆಯುಕ್ತ ಪಿ. ಮಣಿವಣ್ಣನ್ ಮಾತನಾಡಿ, ಒಟ್ಟು 243 ಎಕರೆ ಪ್ರದೇಶವನ್ನು 49 ವಲಯಗಳಾಗಿ ಹಾಗೂ 314 ಸಸಿ ನೆಡುವ ಸ್ಥಳಗಳಾಗಿ ವಿಭಾಗಿಸಲಾಗಿದೆ. ಪ್ರತಿಯೊಂದು ವಲಯಕ್ಕೂ ಒಬ್ಬ ವಲಯ ಕಮಾಂಡರ್ ನಿಯೋಜಿಸಲಾಗಿದೆ. ಸಸಿ ನೆಡುವ ಕುರಿತ ಮಾಹಿತಿ ಹಾಗೂ ಸಸಿ ನೆಡಲು ನೋಂದಣಿ ಮಾಡಿಕೊಳ್ಳಲು https://greenbengalurubybda.in/ ವೆಬ್‌ಸೈಟ್‌ಗೆ ಭೇಟಿ ನೀಡಿ ಅಗತ್ಯ ಮಾಹಿತಿ ಪಡೆದುಕೊಳ್ಳಬಹುದು ಎಂದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ನಗರ ಪಾಲಿಕೆ ಆಯುಕ್ತರಾದ ರಮೇಶ್ ಡಿ.ಎಸ್., ಪೊಮ್ಮಲ ಸುನಿಲ್ ಕುಮಾರ್, ಕೆ.ಎನ್. ರಮೇಶ್, ಡಾ. ರಾಜೇಂದ್ರ ಕೆ.ವಿ., ಸಿಇಒ ಕರೀಗೌಡ, ವಿಶೇಷ ಆಯುಕ್ತ ವೆಂಕಟಾಚಲಪತಿ, ಬಿಡಿಎ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೆಟ್ರೊ, ಬಸ್ ವ್ಯವಸ್ಥೆ

ಸುಗಮ ಸಂಚಾರಕ್ಕಾಗಿ ಮೆಟ್ರೊ ರೈಲುಗಳ ಸಂಚಾರ ಹೆಚ್ಚಿಸಲಾಗುವುದು. ಜೊತೆಗೆ ಮೆಟ್ರೊ ನಿಲ್ದಾಣಗಳಿಂದ ಸಸಿ ನೆಡುವ ಸ್ಥಳಗಳವರೆಗೆ ಉಚಿತ ಬಸ್ ವ್ಯವಸ್ಥೆ ಒದಗಿಸಲಾಗುತ್ತದೆ. ಇದರಿಂದ ಸ್ಥಳಗಳಿಗೆ ತಲುಪುವುದು ಸುಲಭವಾಗಲಿದೆ.

ಶೌಚಾಲಯ ವ್ಯವಸ್ಥೆ, ಇತರೆ ಮೂಲ ಸೌಕರ್ಯ ಒದಗಿಸಲಾಗುತ್ತದೆ. ಆರೋಗ್ಯ ತುರ್ತು ಪರಿಸ್ಥಿತಿಗಳಿಗಾಗಿ ವೈದ್ಯರು ಹಾಗೂ ಶುಶ್ರೂಷಕರು ಇರಲಿದ್ದು, ವಾಹನ ನಿಲುಗಡೆ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಮ್ಯಾರಥಾನ್ ಸ್ಪರ್ಧೆ

ಜೂನ್ 27ರ ಬೆಳಿಗ್ಗೆ 6 ಗಂಟೆಗೆ 10 ಕಿ.ಮೀ. ಹಾಗೂ 5 ಕಿ.ಮೀ. ಮ್ಯಾರಥಾನ್ ಆಯೋಜಿಸಲಾಗಿದೆ. ಇದು ಎಂಎಆರ್‌ನಿಂದ ಚಲ್ಲಘಟ್ಟ ಮೆಟ್ರೊ ನಿಲ್ದಾಣದವರೆಗೆ ನಡೆಯಲಿದೆ.

https://mysamay.in/e/kempegowdarun ಲಿಂಕ್ ಬಳಸಿ ಮ್ಯಾರಾಥಾನ್‌ಗೆ ನೋಂದಣಿ ಮಾಡಿಕೊಳ್ಳಬಹುದು. ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿ ಮತ್ತು ಸಹಾಯಕ್ಕಾಗಿ 24 × 7 ಸಹಾಯವಾಣಿ 94831 66622 ಕಾರ್ಯನಿರ್ವಹಿಸಲಿದೆ.

ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಶಾಸಕಿ ಮಂಜುಳಾ ಲಿಂಬಾವಳಿ ಅವರು ಸಾರ್ವಜನಿಕರಿಗೆ ಸೌಲಭ್ಯ ವಿತರಿಸಿದರು

ಸೌಲಭ್ಯ ಸದ್ಬಳಕೆಗೆ ಸಲಹೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಗ್ರಾಮ ಪಂಚಾಯಿತಿ ನೀಡುವ ಸೌಲಭ್ಯಗಳನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಶಾಸಕಿ ಮಂಜುಳಾ ಲಿಂಬಾವಳಿ ಹೇಳಿದರು.

ಮಹದೇವಪುರ ಕ್ಷೇತ್ರದ ಬಿದರಹಳ್ಳಿಯಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಹಮ್ಮಿಕೊಂಡಿದ್ದ 2026-27ನೇ ಸಾಲಿನ ಮೊದಲನೇ ಗ್ರಾಮ ಸಭೆಯನ್ನು ಉದ್ಘಾಟಿಸಿ ಮಾತನಾಡಿ, 'ಪಂಚಾಯಿತಿ ವ್ಯಾಪ್ತಿಯಲ್ಲಿ ಹಳ್ಳಿಗಳ ಜೊತೆಗೆ ಹೊಸ ಬಡಾವಣೆಗಳು ಹೆಚ್ಚುತ್ತಿವೆ. ಕಾರ್ಮಿಕರು ಹೆಚ್ಚಿದ್ದಾರೆ. ಸೌಲಭ್ಯಗಳನ್ನು ಬಡವರಿಗೆ ತಲುಪಿಸಲು ಅಧಿಕಾರಿಗಳೂ ಶ್ರಮವಹಿಸಬೇಕು' ಎಂದರು.

ತಾಲ್ಲೂಕು ಪಂಚಾಯಿತಿ ಇಒ ಮಂಜುನಾಥ್ ಮಾತನಾಡಿದರು. ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ರಂಜೀತಾ, ಪಿಡಿಒ ಎಂ.ಎನ್.ಲೋಹಿತ್, ಕಾರ್ಯದರ್ಶಿ ಎನ್.ಮುನಿರಾಜು, ಮಾಜಿ ಅಧ್ಯಕ್ಷ ರಾಜೇಶ್ ಪಾಲ್ಗೊಂಡರು.

ಇದೇ ಸಂದರ್ಭದಲ್ಲಿ ಗರ್ಭಿಣಿಯರಿಗೆ ಸೀಮಂತ ಮಾಡಿ ಗೌರವಿಸಲಾಯಿತು. ಕ್ಷಯರೋಗಿಗಳಿಗೆ ಪೋಷಕಾಂಶಯುಕ್ತ ಕಿಟ್ ವಿತರಿಸಲಾಯಿತು. ಶಾಲೆಗಳಿಗೆ ಕಂಪ್ಯೂಟರ್ ಹಾಗೂ ಹತ್ತನೇ ತರಗತಿಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ವಿತರಿಸಲಾಯಿತು.

'ಕೃಷಿ ಅಭಿವೃದ್ಧಿ: ಸಮನ್ವಯ ಅಗತ್ಯ'

ಬೆಂಗಳೂರು: 'ಕೃಷಿ ಮತ್ತು ರೈತರ ಸಮಸ್ಯೆಗಳನ್ನು ಬಗೆಹರಿಸಲು ವಿಶ್ವವಿದ್ಯಾಲಯ ಮತ್ತು ಇಲಾಖೆಗಳ ಜೊತೆಗೆ ಸಮನ್ವಯ ಅಗತ್ಯ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯದ ನಿರ್ದೇಶಕ ವೈ.ಎನ್.ಶಿವಲಿಂಗಯ್ಯ ಪ್ರತಿಪಾದಿಸಿದರು.

ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ 'ಆತ್ಮ ಯೋಜನೆ'ಯಡಿ ಮಂಗಳವಾರ ಆರಂಭವಾದ 'ಕ್ರಿಯಾ ಯೋಜನೆ ಮತ್ತು ತರಬೇತಿ ಕಾರ್ಯಾಗಾರ' ಉದ್ಘಾಟಿಸಿ ಮಾತನಾಡಿದರು.

'ಡಿಜಿಟಲ್ ತಂತ್ರಜ್ಞಾನ, ಸುಸ್ಥಿರ ಕೃಷಿ ಪದ್ಧತಿ ಬಳಕೆ, ರೈತ ಉತ್ಪಾದಕ ಸಂಘಟನೆಗಳ ಬಲವರ್ಧನೆ ಬಗ್ಗೆ ರೈತರಲ್ಲಿ ಹೆಚ್ಚಿನ ಅರಿವು ಮೂಡಿಸುವುದು ಅಗತ್ಯ. ಆತ್ಮ ಯೋಜನೆಯ ಸಿಬ್ಬಂದಿಯು ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸವನ್ನು ಮಾಡಬೇಕು' ಎಂದರು.

'ಸ್ಥಳೀಯ ಮಟ್ಟದಲ್ಲಿಯೇ ತ್ವರಿತ ಪರಿಹಾರವನ್ನು ಒದಗಿಸಲು ಪ್ರಯತ್ನಿಸಿದರೆ ಕೃಷಿ ಕ್ಷೇತ್ರದ ಸುಸ್ಥಿರ ಅಭಿವೃದ್ಧಿ ಸಾಧ್ಯವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದ ಮುಖ್ಯಸ್ಥ ಕೆ.ಪಿ. ರಘುಪ್ರಸಾದ್, ಕೃಷೋನ್ನತಿ-ಕೃಷಿ ವಿಸ್ತರಣೆ ಉಪ ಅಭಿಯಾನ (ಆತ್ಮ) ಯೋಜನೆಯ ಸಂಯೋಜಕಿ ಆರ್.ಎಂ.ಸವಿತಾ, ಸಂಯೋಜಕ ಆರ್.ನಾರಾಯಣ ರೆಡ್ಡಿ ಪಾಲ್ಗೊಂಡಿದ್ದರು.

ಪರೀಕ್ಷೆ ತಪ್ಪಲು ಕಾರಣ ಪತ್ತೆ

ದಟ್ಟಣೆ ಸಮಸ್ಯೆ ಕಾರಣ ಅಲ್ಲ: ಪೊಲೀಸರಿಂದ ಫ್ಯಾಕ್ಟ್ ಚೆಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾನುವಾರ ಮಧ್ಯಾಹ್ನ ನಡೆದಿದ್ದ ನೀಟ್ ಮರು ಪರೀಕ್ಷೆಗೆ ಆರ್.ಟಿ ನಗರದ ಪರೀಕ್ಷಾರ್ಥಿ ಪರೀಕ್ಷೆಯಿಂದ ಹೊರಗುಳಿಯಲು 'ದಟ್ಟಣೆ ಸಮಸ್ಯೆ ಕಾರಣ ಅಲ್ಲ. ಮನೆಯಿಂದ ತಡವಾಗಿ ಹೊರಟಿದ್ದು ಹಾಗೂ ಪರೀಕ್ಷಾ ಕೇಂದ್ರಕ್ಕೆ ಹೊರಡಲು ಆಯ್ಕೆ ಮಾಡಿಕೊಂಡ ಮಾರ್ಗದಿಂದ ವಿಳಂಬವಾಗಿದೆ' ಎಂದು ಪೊಲೀಸರು ನಡೆಸಿದ ಫ್ಯಾಕ್ಟ್ ಚೆಕ್‌ನಿಂದ ಗೊತ್ತಾಗಿದೆ.

ನೀಟ್ ಮರುಪರೀಕ್ಷೆ

ಸಂಚಾರ ದಟ್ಟಣೆ ಸೇರಿದಂತೆ ನಾನಾ ಕಾರಣಗಳಿಂದ ತಡವಾಗಿ ಬಂದ ಮೂವರು ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರದ ಒಳಗೆ ಬಿಟ್ಟಿರಲಿಲ್ಲ. ಕೇಂದ್ರದ ಸಿಬ್ಬಂದಿ ವಾಪಸ್ ಕಳುಹಿಸಿದ್ದರಿಂದ ಕಣ್ಣೀರು ಹಾಕುತ್ತಲೇ ಮನೆಗೆ ತೆರಳುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಇದಕ್ಕೆ ಆಕ್ರೋಶ ವ್ಯಕ್ತವಾಗಿತ್ತು. ಈ ಬೆನ್ನಲ್ಲೇ ಪೊಲೀಸರು ಕಾರಣ ಪತ್ತೆಗೆ ಮುಂದಾಗಿದ್ದರು.

ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಸಮಾರಂಭದಿಂದಾಗಿ, ಸಂಚಾರ ದಟ್ಟಣೆ ಉಂಟಾಗಿ ಸಮಸ್ಯೆ ಆಗಿತ್ತು ಎಂದು ಆರೋಪಿಸಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ನಗರದ ಕಾನೂನು ಸುವ್ಯವಸ್ಥೆ ಹಾಗೂ ಸಂಚಾರ ಠಾಣೆಯ ಪೊಲೀಸರು ಫ್ಯಾಕ್ಟ್ ಚೆಕ್ ಮಾಡಿದಾಗ, ನೈಜ ಕಾರಣ ಏನು ಎಂಬುದು ಗೊತ್ತಾಗಿದೆ.

ಆರ್.ಸಿ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಮೂವರು ಅಭ್ಯರ್ಥಿಗಳು ಮೂರು ನಿಮಿಷ ತಡವಾಗಿ ಬಂದಿದ್ದರು. ಆ ಪೈಕಿ ಆರ್.ಟಿ ನಗರದಲ್ಲಿ ನೆಲಸಿದ್ದ ಪರೀಕ್ಷಾರ್ಥಿ, ಮನೆಯಿಂದ ಹೊರಟ ಸಮಯ ಆಧರಿಸಿ, ಪೊಲೀಸರು ವಿಶ್ಲೇಷಣೆ ನಡೆಸಿದ್ದಾರೆ.

ನೀಟ್ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನ 1.30ಕ್ಕೆ 'ಕಟ್ ಆಫ್ ಟೈಮ್' ನಿಗದಿ ಮಾಡಲಾಗಿತ್ತು. ಆದರೆ, ಆರ್‌ಟಿ ನಗರದ ಮನೆಯಿಂದ ಮಧ್ಯಾಹ್ನ 12.57ಕ್ಕೆ ಪರೀಕ್ಷಾರ್ಥಿ ಹೊರಟಿದ್ದು, ಪರೀಕ್ಷಾ ಕೇಂದ್ರಕ್ಕೆ ಮಧ್ಯಾಹ್ನ 1.33ಕ್ಕೆ ತಲುಪಿದ್ದರು ಎಂಬುದು ಫ್ಯಾಕ್ಟ್ ಚೆಕ್ ಮೂಲಕ ಗೊತ್ತಾಗಿದೆ. ಆರ್.ಟಿ ನಗರದಿಂದ ಪರೀಕ್ಷಾ ಕೇಂದ್ರಕ್ಕೆ ಹೋಗಲು ಹತ್ತಿರದ ಮಾರ್ಗವಿದ್ದರೂ ಪರೀಕ್ಷಾರ್ಥಿ ದೂರದ ಮಾರ್ಗವನ್ನೇ ಆಯ್ಕೆ ಮಾಡಿಕೊಂಡಿದ್ದರು ಎಂದು ಸಂಚಾರ ಪೊಲೀಸರು ಹೇಳಿದ್ದಾರೆ.

'ಪರೀಕ್ಷಾರ್ಥಿ ಪರೀಕ್ಷೆಯಿಂದ ಹೊರಗುಳಿಯಲು ದಟ್ಟಣೆ ಕಾರಣ ಅಲ್ಲ. ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ವೇಳೆ ಪರೀಕ್ಷೆಗೆ ಹೊರಡುವ ಸಮಯದಲ್ಲಿ ದಟ್ಟಣೆ ಸಾಮಾನ್ಯವಾಗಿತ್ತು. ಪೊಲೀಸ್ ಸಿಬ್ಬಂದಿ ಅಗತ್ಯವಿರುವ ಕಡೆಗಳಲ್ಲಿ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ' ಎಂದು ಪೊಲೀಸರು ಸ್ಪಷ್ಟನೆ ನೀಡಿದ್ದಾರೆ.

ತೇಜಸ್ವಿ ದಾಖಲೆ ಕೊಡಲಿ: ಪ್ರಿಯಾಂಕ್

'ಆರ್.ಟಿ ನಗರದ ಅಭ್ಯರ್ಥಿ ಮಧ್ಯಾಹ್ನ 12.57ಕ್ಕೆ ಮನೆ ಬಿಟ್ಟಿದ್ದಾರೆ. ಮಾಗಡಿಯಿಂದ ಬಂದ ಮತ್ತೊಬ್ಬರು ಹಳೇ ಹಾಲ್ ಟಿಕೆಟ್ ತಂದಿದ್ದರು. ಇದರಲ್ಲಿ ರಾಜ್ಯ ಸರ್ಕಾರದ ತಪ್ಪು ಏನಿದೆ? ಯಾವಾಗ ಮನೆ ಬಿಟ್ಟರು, ಯಾವಾಗ ಬಂದರು ಎಂಬುದಕ್ಕೆ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಇದೆ. ಹಳೆಯ ಪ್ರವೇಶ ಪತ್ರ ತಂದರೆ ಯಾರು ಹೊಣೆ? ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರ ಬಳಿ ದಾಖಲೆ ಇದ್ದರೆ ಕೊಡಲಿ' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

'ನೀಟ್' ತಪ್ಪಲು ವಿಳಂಬ ಕಾರಣ'

ಬೆಂಗಳೂರು: ಕಾಂಗ್ರೆಸ್ ಕಾರ್ಯಕ್ರಮದ ರ್‍ಯಾಲಿಯ ಸಂಚಾರ ದಟ್ಟಣೆಯಿಂದ ವಿದ್ಯಾರ್ಥಿಯೊಬ್ಬರು ನೀಟ್ ಬರೆಯಲು ಸಾಧ್ಯವಾಗಿಲ್ಲ ಎಂಬ ಬಿಜೆಪಿ ಆರೋಪವನ್ನು ಪೊಲೀಸರು ಪರಿಶೀಲಿಸಿದ್ದು, ವಿದ್ಯಾರ್ಥಿ ತಡವಾಗಿ ಮನೆಯಿಂದ ಹೊರಟಿದ್ದೇ ಪರೀಕ್ಷೆ ತಪ್ಪಲು ಕಾರಣ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹೇಳಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, 'ವಿದ್ಯಾರ್ಥಿಗಳ ಭವಿಷ್ಯದ ವಿಚಾರದಲ್ಲೂ ಬಿಜೆಪಿ ನಾಯಕರು ಸುಳ್ಳು ಹಾಗೂ ಕೃತಕ ಆಕ್ರೋಶದ ರಾಜಕಾರಣ ಮಾಡುತ್ತಿದ್ದಾರೆ. ನೀಟ್ ವಿಷಯದಲ್ಲಿ ಅವರ ನಾಟಕ ಬಯಲಾಗಿದೆ. ವಿದ್ಯಾರ್ಥಿ ಸಾಗಿದ ಮಾರ್ಗಗಳ ಸಿಸಿಟಿವಿ ದೃಶ್ಯಗಳು, ತನಿಖಾ ಮಾಹಿತಿಯಿಂದ ಸತ್ಯ ಅನಾವರಣಗೊಂಡಿದೆ' ಎಂದಿದ್ದಾರೆ.

'ಪರೀಕ್ಷಾ ಕೇಂದ್ರಕ್ಕೆ ತಡವಾಗಿ ತಲುಪಿದ ಘಟನೆಗೆ ಬೇರೆಯದೇ ಕಾರಣಗಳು ಪತ್ತೆಯಾಗಿವೆ. ಕೆಪಿಸಿಸಿ ಹಮ್ಮಿಕೊಂಡಿದ್ದ ರ್‍ಯಾಲಿಯಿಂದ ಸಮಸ್ಯೆಯಾಗಿಲ್ಲ. ವಿದ್ಯಾರ್ಥಿಗಳ ಸಂಕಷ್ಟವನ್ನೇ ರಾಜಕೀಯ ಲಾಭಕ್ಕಾಗಿ ಬಳಸಿಕೊಂಡು, ಸತ್ಯದ ಪರ ನಿಲ್ಲುವ ಬದಲು ತಪ್ಪು ಮಾಹಿತಿಯನ್ನು ಬಿಜೆಪಿ ನಾಯಕರು ಹರಿಬಿಟ್ಟಿದ್ದಾರೆ. ಕಾಂಗ್ರೆಸ್ ಪಕ್ಷ, ರಾಜ್ಯ ಸರ್ಕಾರವನ್ನು ಕಳಂಕಿತಗೊಳಿಸಲು ನಡೆದ ಪ್ರಯತ್ನಗಳನ್ನು ಕರ್ನಾಟಕ ಪೊಲೀಸರು ಸಾಕ್ಷ್ಯಾಧಾರಗಳ ಸಮೇತ ಬಯಲು ಮಾಡಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

'ಪೊಲೀಸರು, ಸಂಚಾರ ಪೊಲೀಸರ ವೃತ್ತಿಪರ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತವಾಗಿದೆ. ತನಿಖೆಯು ಸುಳ್ಳು ಕಥನವನ್ನು ಬಯಲಿಗೆಳೆದು, ವ್ಯವಸ್ಥೆಯ ಮೇಲಿನ ಸಾರ್ವಜನಿಕರ ವಿಶ್ವಾಸವನ್ನು ಮತ್ತಷ್ಟು ಬಲಪಡಿಸಿದ್ದಾರೆ. ಪ್ರಚಾರದ ಸುಳ್ಳುಗಳ ಅಡಿಯಲ್ಲಿ ಸತ್ಯವನ್ನು ಹೂತುಹಾಕಲು ಸಾಧ್ಯವಿಲ್ಲ. ಸುಳ್ಳು ಆರೋಪ ಮಾಡಿದವರು ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು' ಎಂದು ಒತ್ತಾಯಿಸಿದ್ದಾರೆ.

ಕರ್ನಾಟಕ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ–ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಘವೇಂದ್ರ ಶ್ರೀನಿವಾಸ್ ಭಟ್ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮಂಗಳವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿತು

ಚಿರತೆ ಓಡಾಟ; ಜನರಲ್ಲಿ ಆತಂಕ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸಮೀಪದ ಭೀಮನಕುಪ್ಪೆ ಕ್ರಾಸ್ ಬಳಿ ಮಂಗಳವಾರ ಮುಂಜಾನೆ 4.45ರ ಸುಮಾರಿಗೆ ಚಿರತೆ ಓಡಾಟ ಕಂಡು ಬಂದಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿದೆ.

ವರ್ಧಮಾನ್ ಪ್ಲಾಸ್ಟಿಕ್ ಹೆಸರಿನ ಚೇರ್ ತಯಾರಿಕಾ ಘಟಕದ ಬಳಿ ಚಿರತೆ ಕಾಣಿಸಿಕೊಂಡಿತ್ತು. ಕಾರ್ಖಾನೆಯ ಕಾವಲುಗಾರ ಜೋರು ಶಬ್ದ ಮಾಡಿದ್ದರಿಂದ ಪರಾರಿಯಾಯಿತು. ಈ ಪ್ರದೇಶದಲ್ಲಿ ಹಲವು ಕೈಗಾರಿಕಾ ಘಟಕಗಳಿದ್ದು, ನೂರಾರು ಮಂದಿ ಉದ್ಯೋಗ ಮಾಡುತ್ತಿದ್ದಾರೆ. ಅರಣ್ಯ ವಲಯ ವ್ಯಾಪ್ತಿಯಲ್ಲಿರುವ ವಿನಾಯಕನಗರ, ಬೈರೋಹಳ್ಳಿ, ಕೋಲೂರು, ಸೂಲಿಕೆರೆ ಗ್ರಾಮವೂ ಹತ್ತಿರದಲ್ಲೇ ಇದೆ.

ಕಾರ್ಖಾನೆ ಮಾಲೀಕ ಮಹಾವೀರ್ ಜೈನ್ ಮಾತನಾಡಿ, 'ಮೊದಲ ಬಾರಿಗೆ ಘಟಕದ ಆವರಣದ ಬಳಿ ಕಾಣಿಸಿಕೊಂಡಿರುವ ಚಿರತೆಯನ್ನು ಸೆರೆ ಹಿಡಿಯುವಂತೆ ಕಗ್ಗಲೀಪುರ ವಲಯ ಅರಣ್ಯಾಧಿಕಾರಿಗೆ ಮನವಿ ಮಾಡಲಾಗಿದೆ' ಎಂದರು.

'ವರ್ಧಮಾನ್ ಪ್ಲಾಸ್ಟಿಕ್ ಘಟಕದ ಬಳಿ ಕಂಡು ಬಂದ ಚಿರತೆ

'ಚಿರತೆಗಳಲ್ಲಿ ಸಂತಾನೋತ್ಪತ್ತಿ ಹೆಚ್ಚಿರುವುದರಿಂದ ಆಗಾಗ್ಗೆ ಜನ ವಸತಿ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತಿವೆ. ಇತ್ತೀಚೆಗಷ್ಟೇ ನಾಲ್ಕು ಚಿರತೆಗಳನ್ನು ಸೆರೆ ಹಿಡಿದು ರಾಜ್ಯದಲ್ಲಿನ ಬೇರೆ ಬೇರೆ ಕಾಡುಗಳಿಗೆ ಬಿಡಲಾಗಿದೆ. ಗ್ರಾಮಸ್ಥರ ಮನವಿ ಮೇರೆಗೆ ಮೂರು ಬೋನುಗಳನ್ನು ಇರಿಸಲಾಗಿದೆ. ಶೀಘ್ರದಲ್ಲೇ ಸೆರೆ ಹಿಡಿಯಲಾಗುವುದು. ಭಯಪಡುವ ಅಗತ್ಯವಿಲ್ಲ' ಎಂದು ಆರ್‌ಎಫ್‌ಒ ಎನ್.ಆರ್.ಕಾಂಬಳೆ ಪ್ರತಿಕ್ರಿಯಿಸಿದರು.

ಸರ್ಕಾರಿ ನೌಕರರಿಗೆ ಉಚಿತ ಆರೋಗ್ಯ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 40 ವರ್ಷ ಮೇಲ್ಪಟ್ಟ ಸರ್ಕಾರಿ ನೌಕರರಿಗೆ 'ಆರೋಗ್ಯ ಸಂಜೀವಿನಿ' ಯೋಜನೆಯಡಿ ಉಚಿತವಾಗಿ ಆರೋಗ್ಯ ತಪಾಸಣೆ ಸೌಲಭ್ಯ ಕಲ್ಪಿಸಿ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ಈ ಯೋಜನೆಯ ವ್ಯಾಪ್ತಿಯಿಂದ ಸ್ವಇಚ್ಛೆಯಿಂದ ಹೊರಗುಳಿದ 23,081 ಮಂದಿ ಹೊರತುಪಡಿಸಿ, 3,76,955 ಸರ್ಕಾರಿ ನೌಕರರು ಇದರ ಪ್ರಯೋಜನ ಪಡೆಯಬಹುದಾಗಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ರಕ್ತದೊತ್ತಡ, ಮಧುಮೇಹ, ಕಣ್ಣು, ಹೃದಯ, ಕಿಡ್ನಿ, ಇಎನ್‌ಟಿ ಸೇರಿದಂತೆ 6 ವಿಭಾಗಗಳಲ್ಲಿ ಸರ್ಕಾರಿ ಆಸ್ಪತ್ರೆ ಹಾಗೂ ಆರೋಗ್ಯ ಸಂಜೀವಿನಿ ಯೋಜನೆಯಡಿ ನೋಂದಾಯಿಸಿಕೊಂಡಿರುವ ಖಾಸಗಿ ಆಸ್ಪತ್ರೆಗಳಲ್ಲಿ ವಾರ್ಷಿಕ ಒಂದು ಬಾರಿ ತಪಾಸಣೆ ಮಾಡಿಸಿಕೊಳ್ಳಬಹುದು. ಪುರುಷರಿಗೆ ₹ 2 ಸಾವಿರ, ಮಹಿಳೆಯರಿಗೆ ಗರಿಷ್ಠ ₹2,200 ದರದೊಳಗೆ ಸೇವೆ ಪಡೆಯಬಹುದು ಎಂದು ತಿಳಿಸಿದ್ದಾರೆ.

ಈ ಸಂಬಂಧ ನೋಂದಾಯಿತ ಖಾಸಗಿ ಆಸ್ಪತ್ರೆಗಳೊಂದಿಗೆ ಸೂಕ್ತ ಒಡಂಬಡಿಕೆ ಮಾಡಿಕೊಳ್ಳಬೇಕು ಎಂದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ನಿರ್ದೇಶಕರಿಗೆ ಸೂಚಿಸಿದ್ದಾರೆ.

ರೈತರಿಂದ ಖರೀದಿ ನಾಫೆಡ್‌ಗೆ ಸೂಚನೆ

ನವದೆಹಲಿ (ಪಿಟಿಐ): ದ್ವಿದಳ ಧಾನ್ಯಗಳು ಹಾಗೂ ಎಣ್ಣೆಕಾಳುಗಳನ್ನು ರೈತರಿಂದಲೇ ನೇರವಾಗಿ ಖರೀದಿ ಮಾಡಬೇಕು, ಮಧ್ಯವರ್ತಿಗಳ ಪಾತ್ರವನ್ನು ಹೋಗಲಾಡಿಸಬೇಕು ಎಂದು ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಒಕ್ಕೂಟ (ನಾಫೆಡ್) ಮತ್ತು ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟಕ್ಕೆ (ಎನ್‌ಸಿಸಿಎಫ್) ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಮಂಗಳವಾರ ಸೂಚನೆ ನೀಡಿದ್ದಾರೆ.



ನಾಫೆಡ್‌ನ ಕೆಲವು ಯೋಜನೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದ್ವಿದಳ ಧಾನ್ಯಗಳು ಮತ್ತು ಎಣ್ಣೆಕಾಳುಗಳ ಉತ್ಪಾದನೆಯು ಈಚಿನ ವರ್ಷಗಳಲ್ಲಿ ಜಾಸ್ತಿ ಆಗಿದೆ. ಆದರೆ ಕನಿಷ್ಠ ಬೆಂಬಲ ಬೆಲೆಯು ಬೆಳೆಗಾರರನ್ನು ತಲುಪದೆ ಇದ್ದ ಕಾರಣಕ್ಕೆ ಇವುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧ್ಯವಾಗಿಲ್ಲ' ಎಂದು ಹೇಳಿದ್ದಾರೆ.

'ಮಧ್ಯಮವರ್ತಿಗಳ ಪಾತ್ರವನ್ನು ತೊಡೆಯುವ ಅಗತ್ಯವಿದೆ. ಪ್ರಯೋಜನಗಳು ರೈತರಿಗೆ ತಲುಪುವಂತೆ ಮಾಡಲು ನಾಫೆಡ್ ಮತ್ತು ಎನ್‌ಸಿಸಿಎಫ್ ರೈತರಿಂದಲೇ ಧಾನ್ಯ ಹಾಗೂ ಎಣ್ಣೆಕಾಳು ಖರೀದಿಸುವುದನ್ನು ಆರಂಭಿಸಲು ಇದು ಸರಿಯಾದ ಸಂದರ್ಭ' ಎಂದು ಶಾ ಅವರು ಹೇಳಿದ್ದಾರೆ.

ಈ ಕೆಲಸಕ್ಕೆ ಶಾ ಅವರು ಎರಡು ವರ್ಷಗಳ ಕಾಲಮಿತಿ ನಿಗದಿ ಮಾಡಿದ್ದಾರೆ. ಮಧ್ಯವರ್ತಿಗಳ ಪಾತ್ರ ಇಲ್ಲದೆ ಈ ಎರಡು ಸಹಕಾರ ಸಂಸ್ಥೆಗಳಿಗೆ ಮಾರಾಟ ಮಾಡಲು ರೈತರಿಗೆ ಸಾಧ್ಯವಾಗಲಿದೆ ಎಂದಿದ್ದಾರೆ.

ಕೊರತೆಯನ್ನು ನೀಗಿಸಿಕೊಳ್ಳಲು ದೇಶವು ಈಗ ವರ್ಷಕ್ಕೆ 70 ಲಕ್ಷ ಟನ್ ದ್ವಿದಳ ಧಾನ್ಯಗಳನ್ನು ಹಾಗೂ 1.6 ಕೋಟಿ ಟನ್ ಎಣ್ಣೆಕಾಳುಗಳನ್ನು ಆಮದು ಮಾಡಿಕೊಳ್ಳುತ್ತಿದೆ.

ನಾಫೆಡ್ ಸಂಸ್ಥೆಯು 2013ರಲ್ಲಿ ತೀವ್ರ ಸ್ವರೂಪದ ಹಣಕಾಸಿನ ಬಿಕ್ಕಟ್ಟಿಗೆ ಸಿಲುಕಿತ್ತು. ಆಗ ಅಸ್ತಿತ್ವ ಉಳಿಸಿಕೊಳ್ಳಲು ಅದಕ್ಕೆ ಸರ್ಕಾರದ ಮಧ್ಯಪ್ರವೇಶ ಅಗತ್ಯವಾಗಿತ್ತು ಎಂದು ಶಾ ಅವರು ನೆನಪಿಸಿಕೊಂಡರು. ಆದರೆ ಆ ನಂತರದಲ್ಲಿ ಸಂಸ್ಥೆಯ ವಾರ್ಷಿಕ ವಹಿವಾಟು ₹500 ಕೋಟಿಯಿಂದ ₹30 ಸಾವಿರ ಕೋಟಿಗೆ (2024–25ರಲ್ಲಿ) ಹೆಚ್ಚಾಗಿದೆ, ಸಂಸ್ಥೆಯು 76 ಲಕ್ಷ ರೈತರನ್ನು ತಲುಪಿದೆ ಎಂದಿದ್ದಾರೆ.

ಮಂಗಳವಾರ ಉದ್ಘಾಟನೆ ಆಗಿರುವ ನಾಫೆಕ್ಸ್.ಇನ್ (nafex.in) ವೇದಿಕೆಯು ಖರೀದಿಸಿದ ಧಾನ್ಯಗಳು ಹಾಗೂ ಎಣ್ಣೆಕಾಳುಗಳ ಪಾರದರ್ಶಕ ಹರಾಜು ಪ್ರಕ್ರಿಯೆ ಸಾಧ್ಯವಾಗಿಸಲಿದೆ. ಇದಕ್ಕೂ ಮೊದಲು ನಾಫೆಡ್ ಸಂಸ್ಥೆಯು ಹರಾಜು ಪ್ರಕ್ರಿಯೆಗೆ ಖಾಸಗಿ ವೇದಿಕೆಗಳನ್ನು ಆಶ್ರಯಿಸಿತ್ತು.

ಅಂಧ ಪತ್ನಿ ಕೊಂದು ಆತ್ಮಹತ್ಯೆ ಮಾಡಿಕೊಂಡ ಪತಿ

ಸಂಪಿಗೆಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ

ಪ್ರಜಾವಾಣಿ ವಾರ್ತೆ

ಸುಮಿತ್ರಾ ದೇವಿ, ನಂದನ್ ಪ್ರಸಾದ್

ಬೆಂಗಳೂರು: ವೃದ್ಧ ಪತ್ನಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ ಬಳಿಕ ಪತಿಯೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಂಪಿಗೆಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಸುಮಿತ್ರಾ ದೇವಿ (77) ಕೊಲೆಯಾದ ಮಹಿಳೆ. ಘಟನೆ ಬಳಿಕ ಪತಿ ನಂದನ್ ಪ್ರಸಾದ್ (83) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪ್ರತ್ಯೇಕ ಕೊಲೆ ಹಾಗೂ ಆತ್ಮಹತ್ಯೆ ಪ್ರಕರಣವನ್ನು ದಾಖಲಿಸಿ, ತನಿಖೆ ಕೈಗೊಳ್ಳ ಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನಗರದ ಚೊಕ್ಕನಾಯಕನಹಳ್ಳಿಯ ಅಪಾರ್ಟ್‌ಮೆಂಟ್ ಒಂದರಲ್ಲಿ ಬಿಹಾರದ ವೃದ್ಧ ದಂಪತಿ ವಾಸವಾಗಿದ್ದರು. ದಂಪತಿ ಪುತ್ರ ಕಿರಣ್ ಕುಮಾರ್ ಕಶ್ಯಪ್ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಪತ್ನಿ, ಮಕ್ಕಳು ಹಾಗೂ ಪೋಷಕರೊಂದಿಗೆ ಒಂದೇ ಮನೆಯಲ್ಲಿ ವಾಸವಾಗಿದ್ದಾರೆ.

ಸುಮಿತ್ರಾ ದೇವಿ ಅವರು ಅಂಧ ಹಾಗೂ ಕಿವುಡರಾಗಿದ್ದರು. ನಂದನ್ ಪ್ರಸಾದ್ ಅವರು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು. ತಿಂಗಳ ಹಿಂದೆಯಷ್ಟೇ ಮಗನ ಮನೆಗೆ ದಂಪತಿ ಬಂದಿದ್ದರು. ವಾರದ ಹಿಂದೆ ಮದುವೆ ಸಮಾರಂಭಕ್ಕಾಗಿ ಕಿರಣ್ ಕುಮಾರ್ ಅವರ ಪತ್ನಿ ಮತ್ತು ಮಗ ಬಿಹಾರಕ್ಕೆ ತೆರಳಿದ್ದರು.

ಅಪರಾಧ ಸುದ್ದಿ

ಪೋಷಕರನ್ನು ನೋಡಿಕೊಂಡು ಕಿರಣ್ ಅವರು ಮಗಳೊಂದಿಗೆ ಮನೆಯಲ್ಲಿದ್ದರು. ರಾತ್ರಿ ಊಟ ಮಾಡಿ ಕೊಠಡಿಯಲ್ಲಿ ಮಲಗಿದ್ದರು. ಬೆಳಿಗ್ಗೆ ತಂದೆ, ತಾಯಿ ಎಬ್ಬಿಸಲು ಹೋದಾಗ ಬಾಗಿಲು ತಟ್ಟಿದರೂ ತೆಗೆಯಲಿಲ್ಲ. ಅನುಮಾನಗೊಂಡು ಸುತ್ತಿಗೆಯಿಂದ ಬಾಗಿಲಿನ ಕೊಂಡಿ ಒಡೆದು ನೋಡಿದಾಗ ಮೃತಪಟ್ಟಿರುವುದು ಗೊತ್ತಾಗಿದೆ ಎಂದು ದೂರುದಾರರು ತಿಳಿಸಿದ್ದಾರೆ.

'ತಂದೆ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು. ತಾಯಿಯು ಅಂಧರಾಗಿದ್ದು, ಕಿವುಡರಾಗಿದ್ದಾರೆ. ತೊಂದರೆ ಕೊಡಬಾರದು ಎಂಬ ಉದ್ದೇಶದಿಂದ ತಾಯಿಯನ್ನು ದಿಂಬಿನಿಂದ ಉಸಿರುಗಟ್ಟಿಸಿ ಕೊಂದ ಬಳಿಕ ಅವರು ಕಿಟಕಿಯ ಸರಳಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಕಿರಣ್ ಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

ದೂರಿನ ಅನ್ವಯ ಪೊಲೀಸರು ಮೃತದೇಹಗಳನ್ನು ಆಸ್ಪತ್ರೆಗೆ ರವಾನಿಸಿದ್ದು, ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸ ಲಾಗುತ್ತದೆ.

ತಾಯಿ, ಮಗನ ಬಂಧನ

ಜಯಮ್ಮ

ಭಾಗ್ಯಲಕ್ಷ್ಮಿ

ಕುಶಾಲ್

ಬೆಂಗಳೂರು: ಕುಡಿತ ಬಿಡುವಂತೆ ಹೇಳಿದ ಅಜ್ಜಿಯನ್ನು ಮೊಮ್ಮಗ ತಾಯಿಯೊಂದಿಗೆ ಸೇರಿಕೊಂಡು ಕ್ರಿಕೆಟ್ ಬ್ಯಾಟ್ ಹಾಗೂ ದೊಣ್ಣೆಯಿಂದ ಹಲ್ಲೆ ನಡೆಸಿ, ಕೊಲೆ ಮಾಡಿರುವ ಘಟನೆ ಕೆಂಗೇರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಸುಭಾಷ್ ನಗರದಲ್ಲಿ ಶನಿವಾರ ಈ ಘಟನೆ ನಡೆದಿದ್ದು, ಜಯಮ್ಮ (70) ಎಂಬುವರು ಕೊಲೆಯಾಗಿದ್ದಾರೆ. ಮಗಳು ಭಾಗ್ಯಲಕ್ಷ್ಮಿ (49) ಮತ್ತು ಮೊಮ್ಮಗ ಕುಶಾಲ್ (26) ಎಂಬುವರನ್ನು ಬಂಧಿಸಿ, ತನಿಖೆ ಕೈಗೊಳ್ಳಲಾಗಿದೆ ಎಂದು ನೈರುತ್ಯ ವಿಭಾಗದ ಡಿಸಿಪಿ ಅನಿತಾ ಬಿ.ಹದ್ದಣ್ಣನವರ್ ತಿಳಿಸಿದ್ದಾರೆ.

ಕೆಂಗೇರಿಯ ಸುಭಾಷ್ ನಗರದ ಅಪಾರ್ಟ್‌ಮೆಂಟ್‌ನಲ್ಲಿ ಭಾಗ್ಯಲಕ್ಷ್ಮಿ ನಾಯ್ಕ್ ಮತ್ತು ಕುಶಾಲ್ ವಾಸವಾಗಿದ್ದಾರೆ. ಕುಶಾಲ್ ಮದ್ಯವ್ಯಸನಿಯಾಗಿದ್ದ ಕಾರಣ ವ್ಯಸನ ಮುಕ್ತ ಕೇಂದ್ರಕ್ಕೆ ಸೇರಿಸಿದ್ದರು. 3-4 ದಿನಗಳ ಹಿಂದೆ ಕುಶಾಲ್ ಕೇಂದ್ರದಿಂದ ಮನೆಗೆ ಬಂದಿದ್ದ.

ಹಾಸನ ಜಿಲ್ಲೆಯ ಹಣ್ಣಿನಕೆರೆ ಗ್ರಾಮದ ಜಯಮ್ಮ ಅವರು, ಎರಡು ತಿಂಗಳ ಹಿಂದೆ ಮಗಳ ಮನೆಗೆ ಬಂದಿದ್ದರು. ಬಂದಾಗಿನಿಂದಲೂ ಮನೆಯಲ್ಲಿ ಗಲಾಟೆ ನಡೆಯುತ್ತಿತ್ತು. ಜೂನ್ 20ರ ರಾತ್ರಿ ಮಗಳು, ಮೊಮ್ಮಗ ಕುಡಿದು ಗಲಾಟೆ ಮಾಡುತ್ತಿದ್ದರು. ಇದನ್ನು ಪ್ರಶ್ನೆ ಮಾಡಿದ್ದ ಜಯಮ್ಮಳೊಂದಿಗೆ ತಾಯಿ, ಮಗ ಗಲಾಟೆ ಮಾಡಿಕೊಂಡಿದ್ದರು. ಜಗಳ ವಿಕೋಪಕ್ಕೆ ತಿರುಗಿ, ಭಾಗ್ಯಲಕ್ಷ್ಮಿ ಜತೆ ಮಗ ಕುಶಾಲ್ ಸೇರಿಕೊಂಡು ಜಯಮ್ಮಳ ತಲೆಗೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದಾರೆ.

ಬಳಿಕ ಆರೋಪಿಗಳು ಯಾರಿಗೂ ತಿಳಿಯದಂತೆ ಶವವನ್ನು ಮನೆಯಲ್ಲೇ ಮುಚ್ಚಿಟ್ಟಿದ್ದರು. ಕೆಲ ಹೊತ್ತಿನ ಬಳಿಕ ಸ್ನೇಹಿತನಿಗೆ ಕರೆ ಮಾಡಿದ್ದ ಕುಶಾಲ್, ಅಜ್ಜಿ ತೀರಿಕೊಂಡಿದ್ದಾರೆ, ಕುಡಿಯಲು ಮದ್ಯ ತರುವಂತೆ ಹೇಳಿದ್ದ. ಸ್ನೇಹಿತ ಮನೆಗೆ ಬಂದ ಬಳಿಕ ಕೊಲೆಯ ವಿಚಾರ ಗೊತ್ತಾಗಿದೆ.

ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಆಸ್ಪತ್ರೆಗೆ ರವಾನಿಸಿ, ಮುಂದಿನ ತನಿಖೆ ಕೈಗೊಂಡಿದ್ದಾರೆ.

ಪಿ.ಜಿ ಹಾಸ್ಟೆಲ್ ಮಾಲೀಕನ ಕೊಲೆ

ಮಾಧವ್ ಮೇಟ್ಲಿ

ರಾಕೇಶ್

ಡಾನ್ ಬ್ರೈಟ್ಸನ್

ಬೆಂಗಳೂರು: ನಲ್ಲಿ ನೀರಿನಲ್ಲಿ ಕಾಲು ತೊಳೆಯುವ ವಿಚಾರಕ್ಕೆ ಶುರುವಾದ ಗಲಾಟೆ ಪಿ.ಜಿ. ಹಾಸ್ಟೆಲ್ ಮಾಲೀಕನ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ಕಸ್ತೂರಿ ನಗರದಲ್ಲಿ ನಡೆದಿದೆ.

ಲಕ್ಷ್ಮೀ ನರಸಿಂಹ ಪಿ.ಜಿ. ಹಾಸ್ಟೆಲ್ ಮಾಲೀಕ ಮಾಧವ್ ಮೇಟ್ಲಿ (37) ಕೊಲೆಯಾದವರು. ಆರೋಪಿಗಳಾದ ರಾಕೇಶ್ (21) ಹಾಗೂ ಡಾನ್ ಬ್ರೈಟ್ಸನ್ (20) ಎಂಬುವವರನ್ನು ಬಂಧಿಸಲಾಗಿದೆ. ಬ್ಯಾಟ್‌ನಿಂದ ಹೊಡೆದು ಮಾಧವ್ ಮೇಟ್ಲಿ ಅವರನ್ನು ಆರೋಪಿಗಳು ಕೊಲೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರ್.ಎಸ್.ಪಾಳ್ಯದ ನಿವಾಸಿ ಅಂತಿಮ ವರ್ಷದ ಬಿ.ಕಾಂ ವಿದ್ಯಾರ್ಥಿ ರಾಕೇಶ್ ಮತ್ತು ಬಿಬಿಎ ಮೊದಲ ವರ್ಷದ ವಿದ್ಯಾರ್ಥಿ ಡಾನ್ ಬ್ರೈಟ್ಸನ್ ಪಿ.ಜಿ ಹಾಸ್ಟೆಲ್ ಬಳಿ ಭಾನುವಾರ ಬಂದಿದ್ದಾರೆ. ಮದ್ಯಪಾನ ಮಾಡಿದ್ದ ಇಬ್ಬರೂ ನಲ್ಲಿ ನೀರಿನಲ್ಲಿ ಕಾಲು ತೊಳೆಯುತ್ತಿದ್ದರು. ಇದಕ್ಕೆ ಮಾಧವ್ ಅವರು ಆಕ್ಷೇಪ ವ್ಯಕ್ತಪಡಿಸಿದಾಗ ವಾಗ್ವಾದ ನಡೆದಿದೆ.

ಆಗ ಆರೋಪಿಗಳಿಗೆ ಹೊಡೆಯಲು ಮಾಧವ್ ಕ್ರಿಕೆಟ್ ಬ್ಯಾಟ್ ತಂದಿದ್ದರು. ಹೆದರಿದ ವಿದ್ಯಾರ್ಥಿಗಳು ಅವರ ಕೈಯಿಂದ ಬ್ಯಾಟ್ ಕಸಿದುಕೊಂಡು ಅವರ ಮೇಲೆ ಹಲ್ಲೆ ಮಾಡಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಮಾಧವ್ ಸ್ಥಳದಲ್ಲೇ ಕುಸಿದು ಬಿದ್ದರು. ಗಾಬರಿಗೊಂಡ ವಿದ್ಯಾರ್ಥಿಗಳು ಸ್ಥಳದಿಂದ ಪರಾರಿಯಾಗಿದ್ದರು. ಸ್ಥಳೀಯರು ಗಮನಿಸಿ ಅವರನ್ನು ಆಸ್ಪತ್ರೆಗೆ ಕರೆದೊಯ್ದರು. ಪರೀಕ್ಷಿಸಿದ ವೈದ್ಯರು, ಮಾರ್ಗಮಧ್ಯೆ ಮೃತಪಟ್ಟಿದ್ದಾರೆ ಎಂದು ತಿಳಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ರಾಮಮೂರ್ತಿ ನಗರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಇಬ್ಬರೂ ಆರೋಪಿಗಳನ್ನು ಬಂಧಿಸಿದ್ದಾರೆ.

ಸುದ್ದಿ 2 ನಿಮಿಷ

ನಗರದಲ್ಲಿ ನೀರಿನ ಕೊರತೆ: ಮುಂಜಾಗ್ರತೆ ವಹಿಸಲು ಸೂಚನೆ

ಬೆಂಗಳೂರು: 'ನಿರೀಕ್ಷಿತ ಪ್ರಮಾಣದಲ್ಲಿ ಮುಂಗಾರು ಮಳೆ ಆಗದಿರುವುದರಿಂದ, ಮುಂಬರುವ ದಿನಗಳಲ್ಲಿ ನಗರದಲ್ಲಿ ಕುಡಿಯುವ ನೀರಿನ ಕೊರತೆಯಾಗದಂತೆ ಮುಂಜಾಗ್ರತೆ ವಹಿಸಬೇಕು' ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷೆ ಎನ್.ಮಂಜುಳಾ ಸೂಚಿಸಿದರು.

ಮಂಡಳಿಯಲ್ಲಿ ಮಂಗಳವಾರ ವಲಯವಾರು ಮುಖ್ಯ ಎಂಜಿನಿಯರ್‌ಗಳೊಂದಿಗೆ ಸಭೆ ನಡೆಸಿದ ಅವರು, 'ನಗರದ ಅಂತರ್ಜಲ ಮಟ್ಟ ಹಾಗೂ ಪ್ರಸ್ತುತ ಬಳಕೆಯಲ್ಲಿರುವ ಕೊಳವೆಬಾವಿಗಳ ವಾಸ್ತವಿಕ ಸ್ಥಿತಿಗತಿ ಕುರಿತು ಭಾರತೀಯ ವಿಜ್ಞಾನ ಸಂಸ್ಥೆಯಿಂದ ಸಮಗ್ರ ವರದಿ ಪಡೆಯಬೇಕು' ಎಂದರು.

'ಸದ್ಯ ಕೆಆರ್‌ಎಸ್ ಜಲಾಶಯದಲ್ಲಿ ಲಭ್ಯವಿರುವ ನೀರಿನ ಪ್ರಮಾಣ ಹಾಗೂ ಅದನ್ನು ಅತ್ಯಂತ ಎಚ್ಚರಿಕೆಯಿಂದ ಬಳಸಬೇಕು' ಎಂದ ಅವರು, 'ಪರ್ಯಾಯ ವ್ಯವಸ್ಥೆಯಾಗಿ ಹೇಮಾವತಿ ಮತ್ತು ಕಬಿನಿ ಜಲಾಶಯಗಳಿಂದ ನಗರಕ್ಕೆ ನೀರು ಸರಬರಾಜು ಮಾಡುವ ಸಾಧ್ಯತೆಗಳ ಬಗ್ಗೆಯೂ ಪರಿಶೀಲಿಸಬೇಕು' ಎಂದು ಸೂಚಿಸಿದರು.

ನೀರಿನ ಕೊರತೆ ಮತ್ತಷ್ಟು ಹೆಚ್ಚಾದರೆ, ನಗರಕ್ಕೆ ಪೂರೈಸುವ ದೈನಂದಿನ ನೀರಿನ ಪ್ರಮಾಣದಲ್ಲಿ ವ್ಯತ್ಯಾಸ ಮಾಡುವ ಬಗ್ಗೆಯೂ ಚರ್ಚೆ ನಡೆಯಿತು.

ಜಲಮಂಡಳಿಯ ಪ್ರಧಾನ ಮುಖ್ಯ ಎಂಜಿನಿಯರ್ ಬಿ.ಎಸ್ ದಲಾಯತ್, ಮುಖ್ಯ ಎಂಜಿನಿಯರ್‌ಗಳಾದ ಎಸ್. ವಿ. ವೆಂಕಟೇಶ್, ದೇವರಾಜು, ಗಂಗಾಧರ್, ರಾಜಶೇಖರ್ ಹಾಗೂ ಮಹದೇವೇಗೌಡ ಪಾಲ್ಗೊಂಡರು.

ರಿಯಾಯಿತಿ ದಂಡ ಪಾವತಿ ₹3.75 ಕೋಟಿ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ಅವಕಾಶ ಕಲ್ಪಿಸಿದ್ದು, ಮೂರು ದಿನಗಳಲ್ಲಿ ₹3.75 ಕೋಟಿ ದಂಡ ಸಂಗ್ರಹವಾಗಿದೆ.

ಪೊಲೀಸ್ ಇಲಾಖೆಯಲ್ಲಿ ಸಂಚಾರ ಇ-ಚಲನ್‌ನಲ್ಲಿ ದಾಖಲಾದ ಪ್ರಕರಣಗಳಿಗೆ ದಂಡ ಪಾವತಿಸಲು ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ದಂಡವನ್ನು ಪಾವತಿಸಲು ಶೇ 50 ರಿಯಾಯಿತಿ ನೀಡಿ ಆದೇಶಿಸಲಾಗಿದೆ.

ದಂಡ ಪಾವತಿಯು ಜೂನ್ 21ರಿಂದ ಆರಂಭವಾಗಿದ್ದು, ಕಳೆದ ಮೂರು ದಿನದಲ್ಲಿ 1,23,141 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ಸಂಚಾರ ಪೊಲೀಸರು ಹೇಳಿದರು.

ಕಿಶನ್, ನಿವೇದಿತಾ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ



ನವಿಲು ಗರಿಗಳಿರುವ ಉಡುಪು ಧರಿಸಿ ರೀಲ್ಸ್ ಮಾಡಿದ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ನಟ ಕಿಶನ್ ಹಾಗೂ ನಟಿ ನಿವೇದಿತಾ ಗೌಡ

ಬೆಂಗಳೂರು: ನವಿಲು ಗರಿಗಳಿರುವ ಉಡುಪು ಧರಿಸಿ ರೀಲ್ಸ್ ಮಾಡಿದ ವಿಡಿಯೊವನ್ನು ಸಾಮಾಜಿಕ ಜಾಲತಾಣ ದಲ್ಲಿ ಹಂಚಿಕೊಂಡಿದ್ದ ನಟ ಕಿಶನ್ ಹಾಗೂ ನಟಿ ನಿವೇದಿತಾ ಗೌಡ ವಿರುದ್ಧ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಅರಣ್ಯ ಇಲಾಖೆಗೆ ದೂರು ನೀಡಿದ್ದಾರೆ.

ಕಿಶನ್ ಮತ್ತು ನಿವೇದಿತಾ ಗೌಡ ಅವರು ನವಿಲು ಗರಿಗಳಿರುವ ಉಡುಪು ಧರಿಸಿ ನಾಲ್ಕೈದು ದಿನಗಳ ಹಿಂದೆ ರೀಲ್ಸ್ ಮಾಡಿದ್ದರು. ನೈಜ ನವಿಲು ಗರಿಗಳನ್ನು ಬಳಸಿ ಉಡುಪು ತಯಾರಿಸಿ ಸಾರ್ವಜನಿಕವಾಗಿ ಪ್ರದರ್ಶಿಸಿರುವುದು ವನ್ಯಜೀವಿ ಸಂರಕ್ಷಣಾ ಕಾಯ್ದೆ-1972ರ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ದಿನೇಶ್ ಕಲ್ಲಹಳ್ಳಿ ಅವರು ಬೆಂಗಳೂರು ಪ್ರಾದೇಶಿಕ ನಗರ ವ್ಯಾಪ್ತಿಯ ಕಗ್ಗಲೀಪುರ ಅರಣ್ಯ ವಲಯ ಅಧಿಕಾರಿಗಳಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

'ನಿವೇದಿತಾ ಗೌಡ ಮತ್ತು ಕಿಶನ್ ಅವರಿಂದ ಗಂಭೀರವಾದ ಕಾನೂನು ಉಲ್ಲಂಘನೆ ಆಗಿದೆ. ಸಮಗ್ರ ತನಿಖೆ ನಡೆಸಿ, ಕಾನೂನು ಕ್ರಮ ಜರುಗಿಸಬೇಕು. ನವಿಲುಗಳನ್ನು ಎಲ್ಲಿ ಕೊಲ್ಲಲಾಗಿದೆ? ಯಾವ ಅಂಗಡಿಯಲ್ಲಿ ನವಿಲು ಗರಿಗಳನ್ನು ಮಾರಾಟ ಮಾಡಲಾಗಿದೆ ಎಂಬ ಬಗ್ಗೆ ಸಮರ್ಪಕ ತನಿಖೆ ನಡೆಸಬೇಕು. ದೂರು ದಾಖಲಿಸಿಕೊಂಡು ತನಿಖೆ ನಡೆಸುವಂತೆ ಹಿರಿಯ ಅಧಿಕಾರಿಗಳು ನಿರ್ದೇಶನ ನೀಡಬೇಕು' ಎಂದು ದೂರಿನಲ್ಲಿ ಕೋರಿದ್ದಾರೆ.

ಪರಿಶೀಲನಾ ಸಭೆಯಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ

'ಎಫ್‌ಎಸ್‌ಎಲ್ ಬಲಪಡಿಸಲು ಕ್ರಮ'

ಪ್ರಜಾವಾಣಿ ವಾರ್ತೆ

ಮಡಿವಾಳದ ಎಫ್‌ಎಸ್‌ಎಲ್ ಕಚೇರಿಗೆ ಮಂಗಳವಾರ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಭೇಟಿ ನೀಡಿ ಮಾಹಿತಿ ಪಡೆದರು

ಬೆಂಗಳೂರು: 'ಅಪರಾಧದ ತನಿಖೆಯಲ್ಲಿ ನಿಖರತೆ, ವೇಗ ಮತ್ತು ಪಾರದರ್ಶಕತೆ ತರಲು ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲಾಗುವುದು' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಮಡಿವಾಳದಲ್ಲಿನ ಎಫ್‌ಎಸ್‌ಎಲ್ ಕಚೇರಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲನಾ ಸಭೆ ನಡೆಸಿದ ಬಳಿಕ ಅವರು ಮಾತನಾಡಿದರು.

'ಎಫ್‌ಎಸ್‌ಎಲ್ ಅಪರಾಧ ತನಿಖೆಯಲ್ಲಿ ವೈಜ್ಞಾನಿಕ ನಿಖರತೆ, ತಾಂತ್ರಿಕ ಸಾಮರ್ಥ್ಯ ಮತ್ತು ವೇಗದ ವರದಿ ವ್ಯವಸ್ಥೆಯಲ್ಲಿ ದೇಶದ ಅತ್ಯುತ್ತಮ ಸಂಸ್ಥೆಗಳಲ್ಲಿ ಒಂದಾಗಿ ಬೆಳೆದಿದೆ' ಎಂದು ಹೇಳಿದರು.

'ರಾಜ್ಯದಲ್ಲಿ ಮೊದಲ ಬಾರಿಗೆ 'ವೈಲ್ಡ್ ಲೈಫ್ ಫೊರೆನ್ಸಿಕ್ ಘಟಕ' ಆರಂಭಿಸಲು ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಕಾರ್ಯಾರಂಭ ಮಾಡಲಿದೆ. ವನ್ಯಜೀವಿ ಅಪರಾಧಗಳು ಹಾಗೂ ಅಕ್ರಮ ಸಾಗಾಟ ಪ್ರಕರಣಗಳ ತನಿಖೆಗೂ ಇದು ನೆರವಾಗಲಿದೆ' ಎಂದು ಸಚಿವರು ಮಾಹಿತಿ ನೀಡಿದರು.

ಭರ್ತಿಗೆ ಕ್ರಮ: 'ಎಫ್‌ಎಸ್‌ಎಲ್‌ನಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ಕ್ರಮ ಕೈಗೊಂಡಿದೆ. ವೈಜ್ಞಾನಿಕ ಅಧಿಕಾರಿಗಳು ಸೇರಿದಂತೆ ಅಗತ್ಯ ಸಿಬ್ಬಂದಿ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಖರ್ಗೆ ಹೇಳಿದರು.

'ಕೆಲವು ವರ್ಷಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಾದರೂ, ತಂತ್ರಜ್ಞಾನ ಬಳಕೆ ಹಾಗೂ ಕಾರ್ಯ ಕ್ಷಮತೆಯಿಂದ ಹಲವು ವಿಭಾಗಗಳಲ್ಲಿ ವರದಿ ನೀಡುವ ಅವಧಿಯನ್ನು 40 ತಿಂಗಳಿಂದ ಕೇವಲ 1ರಿಂದ 4 ತಿಂಗಳಿಗೆ ಇಳಿಸಿರುವುದು ಇಲಾಖೆಯ ಮತ್ತೊಂದು ಸಾಧನೆ' ಎಂದು ಹೇಳಿದರು.

'ಕರ್ನಾಟಕ ಎಫ್‌ಎಸ್‌ಎಲ್‌ಗೆ ರಾಷ್ಟ್ರೀಯ ಮಾನ್ಯತಾ ಮಂಡಳಿ ಮಾನ್ಯತೆ ದೊರೆತಿದ್ದು, ಅಂತರರಾಷ್ಟ್ರೀಯ ಗುಣಮಟ್ಟದ ಮಾನದಂಡಗಳ ಅಡಿ ಕಾರ್ಯ ನಿರ್ವಹಿಸುತ್ತಿದೆ. ರಾಜ್ಯದ ಡಿಜಿಟಲ್ ಮತ್ತು ಮೊಬೈಲ್ ಫೊರೆನ್ಸಿಕ್ ವಿಭಾಗಗಳಿಗೆ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿ ಎಲೆಕ್ಟ್ರಾನಿಕ್ಸ್ ಎವಿಡೆನ್ಸ್ ಎಕ್ಸಾಮಿನರ್ ಸ್ಥಾನಮಾನ ದೊರೆತಿರುವುದು ದೇಶದಲ್ಲೇ ಗಮನಾರ್ಹ ಸಾಧನೆ' ಎಂದು ಸಚಿವರು ತಿಳಿಸಿದರು.

ಡಿಜಿಪಿ ಎಂ.ಎ.ಸಲೀಂ, ಎಡಿಜಿಪಿ ಪಿ.ಹರಿಶೇಖರ್, ಸಂಸ್ಥೆಯ ನಿರ್ದೇಶಕಿ ದಿವ್ಯಾ ಗೋಪಿನಾಥ್ ಹಾಜರಿದ್ದರು.

ಜೂಜು: 8 ಮಂದಿ ಸೆರೆ, ನಗದು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇತಮಾರನಹಳ್ಳಿಯ 12ನೇ ಕ್ರಾಸ್‌ನ ಮನೆಯೊಂದರಲ್ಲಿ ನಡೆಯುತ್ತಿದ್ದ ಜೂಜು ಅಡ್ಡೆಯ ಮೇಲೆ ಸುಬ್ರಮಣ್ಯನಗರ ಠಾಣೆಯ ಪೊಲೀಸರು ದಾಳಿ ನಡೆಸಿ, ಎಂಟು ಮಂದಿಯನ್ನು ಬಂಧಿಸಿದ್ದಾರೆ.

ಮನೆಯಲ್ಲಿದ್ದ ₹62 ಸಾವಿರ ನಗದು, ₹68 ಸಾವಿರ ಮೌಲ್ಯದ ವಿವಿಧ ಮಾದರಿಯ 18 ಲೀಟರ್ ಮದ್ಯ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಜೂಜಾಟ ಹಾಗೂ ಅಬಕಾರಿ ಕಾಯ್ದೆಯಡಿ ಸುಬ್ರಮಣ್ಯಪುರ ಠಾಣೆಯಲ್ಲಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಉತ್ತರ ವಿಭಾಗದ ಡಿಸಿಪಿ ಬಿ.ಎಸ್. ನೇಮಗೌಡ ಮಾರ್ಗದರ್ಶನದಲ್ಲಿ ಠಾಣೆ ಇನ್‌ಸ್ಪೆಕ್ಟರ್ ಎನ್.ಗುರುಪ್ರಸಾದ್ ನೇತೃತ್ವದ ತಂಡವು ಕಾರ್ಯಾಚರಣೆ ನಡೆಸಿದೆ.

'ಮಕರಂದ ವಿಶ್ವಮಾನವ ಸಂಸ್ಥೆ'ಯ 7ನೇ ಘಟಿಕೋತ್ಸವದಲ್ಲಿ ಕನ್ನಡ ಕಲಿತ ಅನ್ಯಭಾಷಿಕರು ಪ್ರಮಾಣ ಪತ್ರದೊಂದಿಗೆ ಸಂಭ್ರಮಿಸಿದರು

ಕನ್ನಡ ಕಲಿತ 536 ಅನ್ಯಭಾಷಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಕಲಿತ 536 ಅನ್ಯಭಾಷಿಕರು ಪ್ರಮಾಣ ಪತ್ರದೊಂದಿಗೆ ಸಂಭ್ರಮಿಸಿದರು.

ಕೆ.ಆರ್.ಪುರಂನ ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ 'ಮಕರಂದ ವಿಶ್ವಮಾನವ ಸಂಸ್ಥೆ'ಯು ಆಯೋಜಿಸಿದ್ದ 'ನನಗೆ ಕನ್ನಡ ಗೊತ್ತು' ಅಡಿಯಲ್ಲಿ 500 ಮಂದಿ ಮಾತನಾಡುವುದನ್ನು ಕಲಿತರೆ, 36 ಮಂದಿ ಓದುವ ಮತ್ತು ಬರೆಯುವ ಕೌಶಲವಿದೆ ಎಂದು ಹೆಮ್ಮೆಯಿಂದ ಬೀಗಿದರು.

7ನೇ ಘಟಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿದ ಮನೋವೈದ್ಯ ಡಾ.ಸಿ. ಆರ್.ಚಂದ್ರಶೇಖರ್, 'ಭಾಷೆ ಕೇವಲ ಸಂವಹನದ ಸಾಧನವಲ್ಲ, ಅದು ಸಂಸ್ಕೃತಿ ಮತ್ತು ಸಮಾಜದೊಂದಿಗೆ ಬೆಸೆಯುವ ಸೇತುವೆ' ಎಂದರು.

ಮಕರಂದ ಸಂಸ್ಥೆಯ ಮಾನಸ ಶಂಕರ್, ಕೇಂಬ್ರಿಡ್ಜ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಿ.ಕೆ.ಮೋಹನ್ ಬಾಬು, ಸಿಇಒ ನಿತಿನ್ ಮದನ್, ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್, ವಿಕ್ರಮ್ ರೈ, ಆರ್.ಕೆ.ಮೀನಾ, ಅಕ್ಷತಾ ಪಾಲ್ಗೊಂಡಿದ್ದರು.

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ನಗರದ ಹಲವೆಡೆ ಬುಧವಾರ ಬೆಳಿಗ್ಗೆಯಿಂದ ಸಂಜೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಬುಧವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 2: ಬನಗಿರಿನಗರ, ಪಾಪಯ್ಯ ಗಾರ್ಡನ್, ಬಾಲಾಜಿ ಕಲ್ಯಾಣ ಮಂಟಪ ಪ್ರದೇಶ, ಸಿದ್ದಮ್ಮ ಮತ್ತು ಸಿದ್ದಯ್ಯ ರೆಡ್ಡಿ ಪ್ರದೇಶ, ದಕ್ಷಿಣ 9ನೇ ಉಪ ವಿಭಾಗ ಕಚೇರಿ, ಜಯನಗರ ವಿಭಾಗ ಕಚೇರಿ, 30ನೇ ಮೇನ್, 30ನೇ ಕ್ರಾಸ್, ಬಿ.ಎನ್.ಎಂ. ಕಾಲೇಜು, ಬಿ.ಡಿ.ಎ. ಕಾಂಪ್ಲೆಕ್ಸ್, ದೇವಗಿರಿ ದೇವಸ್ಥಾನ, ಬಿಎಸ್‌ಎನ್‌ಎಲ್ ಕಚೇರಿ, ಬನಶಂಕರಿ 2ನೇ ಹಂತ, ಎಸ್‌ಎಲ್‌ವಿ ಹೋಟೆಲ್‌ನಿಂದ 24ನೇ ಕ್ರಾಸ್, ಉಪಾಹಾರ ಹೋಟೆಲ್, ಚನ್ನಮ್ಮನಕೆರೆ ಅಚುಕಟ್ಟು, ಮಂಜುನಾಥ ಕಾಲೊನಿ, ಬಿ.ಎಂ.ಟಿ.ಸಿ. ಡಿಟೊ, ರಾಜೀವ್ ನಗರ.

ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ಪದ್ಮನಾಭನಗರ, ರಾಘವೇಂದ್ರ ಲೇಔಟ್, ಕಿಡ್ನಿ ಫೌಂಡೇಷನ್, ಮಹಾ ರಾಜ ಆಸ್ಪತ್ರೆ, ಲಕ್ಷ್ಮೀಕಾಂತ ಕಲ್ಯಾಣ ಮಂಟಪ, ಪುಟ್ಟಲಿಂಗಯ್ಯ ರಸ್ತೆ, ಶ್ರವಂತಿ ಅಪಾರ್ಟ್‌ಮೆಂಟ್, ಆರ್.ಕೆ. ಲೇಔಟ್, ಕದಿರೇನಹಳ್ಳಿ, ಯಾರಬ್ ನಗರ, 9ನೇ ಮುಖ್ಯರಸ್ತೆ, ಮೋನೋ ಟೈಪ್, ಟೀಚರ್ಸ್ ಕಾಲೊನಿ, ಕಾವೇರಿ ನಗರ, ಅಂಬೇಡ್ಕರ್ ನಗರ, ಎಂ.ಎಂ. ಇಂಡಸ್ಟ್ರಿಯಲ್ ಪ್ರದೇಶ, ಅಂಚೆ ಕಚೇರಿ, ಎಂಎಂಐ, ಉಮಾ ಮಹೇಶ್ವರಿ ದೇವಸ್ಥಾನ (15ರಿಂದ 17ನೇ ಡಿ ಕ್ರಾಸ್‌ವರೆಗೆ).

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಗುರುವಾರ ಬೆಳಿಗ್ಗೆ 11ರಿಂದ ಸಂಜೆ 5ರವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಇರುವುದಿಲ್ಲ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಎ.ಕೆ. ಆಶ್ರಮ ರಸ್ತೆ, ದೇವೇಗೌಡ ರಸ್ತೆ, ಆರ್.ಟಿ. ನಗರ 1ನೇ ಬ್ಲಾಕ್, ತಿಮ್ಮಯ್ಯ ಗಾರ್ಡನ್, ಮೋದಿ ಗಾರ್ಡನ್, ಸೈನಿಕ ಪ್ರದೇಶ, ವೀರಣ್ಣಪಾಳ್ಯ, ಲುಂಬಿನಿ ಗಾರ್ಡನ್, ಜಲಮಂಡಳಿ ಶುದ್ಧೀಕರಣ ಘಟಕ, ಮರಿಯಣ್ಣಪಾಳ್ಯ, ಕಾಫಿ ಬೋರ್ಡ್ ಲೇಔಟ್, ಕೆಂಪಾಪುರ, ದಾಸರಹಳ್ಳಿ, ಮಾರುತಿ ಲೇಔಟ್, ಭುವನೇಶ್ವರಿ ನಗರ, ಬಿಇಎಲ್ ಕಾರ್ಪೊರೇಟ್ ಕಚೇರಿ, ಚಾಣಕ್ಯ ಲೇಔಟ್, ನಾಗವಾರ, ಎಂ.ಎಸ್. ರಾಮಯ್ಯ ನಾರ್ತ್ ಸಿಟಿ, ಥಣಿಸಂದ್ರ ಮುಖ್ಯ ರಸ್ತೆ, ಆಶೀರ್ವಾದ್ ನಗರ, ಅಮರಜ್ಯೋತಿ ಲೇಔಟ್, ರಾಚೇನಹಳ್ಳಿ ಮುಖ್ಯ ರಸ್ತೆ, ಮೇಸ್ತ್ರಿಪಾಳ್ಯ, ರಾಯಲ್ ಎನ್‌ಕ್ಲೇವ್, ಶ್ರೀರಾಮಪುರ ಗ್ರಾಮ, ವಿ.ಎಚ್. ಬಿ.ಸಿ.ಎಸ್ ಲೇಔಟ್, ವೀರಣ್ಣಪಾಳ್ಯ, ಜೋಜಪ್ಪ ಲೇಔಟ್, 17ನೇ ಕ್ರಾಸ್, ಗೋವಿಂದಪುರ, ಬೈರಪ್ಪ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶ.

ಬೆಳಿಗ್ಗೆ 10ರಿಂದ ಸಂಜೆ 4: ಹೊನ್ನೇನಹಳ್ಳಿ, ಸಿಂಗನಾಯಕನಹಳ್ಳಿ, ರಾಜಾನುಕುಂಟೆ, ಅಡ್ಡೆವಿಶ್ವನಾಥಪುರ, ಮಾರಸಂದ್ರ, ಶ್ರೀರಾಮನಹಳ್ಳಿ, ನೆಲಕುಂಟೆ, ಹನಿಯೂರು, ಚೆಲ್ಲಹಳ್ಳಿ, ಕರ್ಲಾಪುರ, ಕೆಎಂಎಫ್, ಇಟಗಲ್‌ಪುರ, ಅರಕೆರೆ, ಬೈರಾಪುರ, ದಿಬ್ಬೂರು, ಕಾಕೋಲು, ಸೊನ್ನೇನಹಳ್ಳಿ, ಸೆಂಚುರ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶ.

ಪುಟಾಣಿಗಳಿಗೆ ಅಕ್ಷರಾಭ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ವೃಷಭಾವತಿನಗರ, ಕಮಲಾನಗರ ಮತ್ತು ಕುರುಬರಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಗಳ 280 ವಿದ್ಯಾರ್ಥಿಗಳಿಗೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅಕ್ಷರಾಭ್ಯಾಸ ಮಾಡಿಸಿದರು.

ಈ ವೇಳೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಗೋಪಾಲಯ್ಯ, ನೆ.ಲ.ನರೇಂದ್ರಬಾಬು, ಮಾಜಿ ಉಪ ಮೇಯರ್ ಹೇಮಲತಾ ಗೋಪಾಲಯ್ಯ ಅವರು ಶುಭ ಕೋರಿದರು.

ಶಾಸಕ ಗೋಪಾಲಯ್ಯ ಮಾತನಾಡಿ, 'ಕ್ಷೇತ್ರ ವ್ಯಾಪ್ತಿಯಲ್ಲಿ ಐದು ಅತ್ಯುತ್ತಮ ಸರ್ಕಾರಿ ಶಾಲೆ ನಿರ್ಮಿಸಲಾಗಿದೆ. ಬಡವರ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬುದು ನಮ್ಮ ಗುರಿಯಾಗಿದೆ. 200 ಮಕ್ಕಳಿದ್ದ ಈ ಶಾಲೆಗಳಲ್ಲಿ ಏಳು ಸಾವಿರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ' ಎಂದರು.

ಡಿಡಿಪಿಐ ಆಂಜನಪ್ಪ, ಮುಖಂಡರಾದ ನಾಗರತ್ನ ಲೋಕೇಶ್, ಪದ್ಮಾವತಿ ಶ್ರೀನಿವಾಸ್, ಜಿ.ಮಂಜುನಾಥ್ ಗೌಡ, ಕಿರಣ್, ಜಿ.ಸಂಜಯ್ ಗೌಡ, ಬಿ.ವಿ. ಸೋಮಶೇಖರ್, ರಂಗನಾಥ್, ರಾಘವೇಂದ್ರ ಪಾಲ್ಗೊಂಡಿದ್ದರು.

ಸರ್ಕಾರಿ ಶಾಲೆಗಳ ಚಿಣ್ಣರಿಗೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅಕ್ಷರಾಭ್ಯಾಸ ಮಾಡಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಗೋವಿಂದಯ್ಯ ಪಾಲ್ಗೊಂಡಿದ್ದರು

ಜಿಲ್ಲಾ ಕೋರ್ಟ್‌ಗೆ ಹುಸಿ ಬಾಂಬ್ ಬೆದರಿಕೆ

ಮಡಿಕೇರಿ: ಇಲ್ಲಿನ ಕೊಡಗು ಜಿಲ್ಲಾ ನ್ಯಾಯಾಲಯಕ್ಕೆ ಮಂಗಳವಾರ ಬಂದ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಸಂದೇಶ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಸಿತ್ತು. ತಪಾಸಣೆ ನಂತರ ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ಗೊತ್ತಾಗಿದೆ.

ನಿಧನ ವಾರ್ತೆ

ಡಿ.ತುಳಸಿದಾಸ್



ಬೆಂಗಳೂರು: ಬಿಎಚ್‌ಸಿಎಸ್ ಬಡಾವಣೆ ನಿವಾಸಿ ಡಿ.ತುಳಸಿದಾಸ್ (80) ಮಂಗಳವಾರ ನಿಧನರಾದರು.

ಭಾರತೀಯ ದೂರವಾಣಿ ಕಾರ್ಖಾನೆಯ (ಐಟಿಐ) ಸಹಾಯಕ ಕಾರ್ಯದರ್ಶಿಯಾಗಿ ನಿವೃತ್ತರಾಗಿದ್ದ ಅವರು ಐಟಿಐ ನಿವೃತ್ತ ಅಧಿಕಾರಿಗಳ ಸಂಘದ ಉಪಾಧ್ಯಕ್ಷರಾಗಿದ್ದರು. ಅವರಿಗೆ ಮೂವರು ಪುತ್ರಿಯರು ಇದ್ದಾರೆ.

ಮೃತರ ಸ್ವಗೃಹ # 283, ಒಂದನೇ ಕ್ರಾಸ್, ಉತ್ತರಹಳ್ಳಿ ಮುಖ್ಯರಸ್ತೆ, ಬಿಎಚ್‌ಸಿಎಸ್ ಬಡಾವಣೆಯಲ್ಲಿ ಜೂನ್ 24ರ ಸಂಜೆ 4ರವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಂತರ ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದಿಂದ ಒಪ್ಪಂದ

ಮಾಲ್ಗುಡಿ ಅಮೃತ್ ಚಹಾ ಮಳಿಗೆಯಲ್ಲಿ ಮ್ಯಾಟ್

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ (ಎಡದಿಂದ) ಬಿ.ಸಿ.ಮುದ್ದುಗಂಗಾಧರ, ನಟರಾಜ್ ಜಾನಕಿರಾಮ್, ಸಿ.ಎನ್.ಶಿವಪ್ರಕಾಶ್ ಮತ್ತು ಶಿವರಾಜ್ ಕುಮಾರ್ ಅವರು ಮ್ಯಾಟ್‌ಗಳನ್ನು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮವು ಗ್ರಾಮೀಣ ಮಹಿಳೆಯರ ಮೂಲಕ ತಯಾರಿಸುವ ಡೋರ್ ಮ್ಯಾಟ್‌ಗಳನ್ನು ಮಾಲ್ಗುಡಿ ಅಮೃತ್ ಚಹಾ ಮಳಿಗೆಗಳಲ್ಲಿ ಪ್ರದರ್ಶನ ಮತ್ತು ಮಾರಾಟ ಮಾಡಲು ಒಪ್ಪಂದ ಏರ್ಪಟ್ಟಿದ್ದು, ನಿಗಮದ ಆವರಣದಲ್ಲಿ ಮಂಗಳವಾರ ಹಸಿರು ನಿಶಾನೆ ನೀಡಲಾಯಿತು.

ನಂತರ ಮಾತನಾಡಿದ ನಿಗಮದ ಅಧ್ಯಕ್ಷ ನಟರಾಜ್ ಜಾನಕಿರಾಮ್, 'ನಿಗಮವು ತಯಾರಿಸುತ್ತಿರುವ ಆಕರ್ಷಕ ಮತ್ತು ಪರಿಸರ ಸ್ನೇಹಿ ತೆಂಗಿನ ನಾರಿನ ಮ್ಯಾಟ್‌ಗಳು ಹಾಗೂ ವೈವಿಧ್ಯಮಯ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸುವಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ' ಎಂದು ತಿಳಿಸಿದರು.

'ಪರಿಸರ ಸಂರಕ್ಷಣೆ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿರುವ ಡಚ್ ಮ್ಯಾಟ್, ಕಾರಿಡಾರ್ ಮ್ಯಾಟ್, ರೋಲಿಂಗ್ ಮ್ಯಾಟ್, ಜಿಯೋ ಟೆಕ್ಸ್‌ಟೈಲ್ ಡೆಸ್ಕ್, ಹಾಸಿಗೆ ಮತ್ತು ದಿಂಬುಗಳು ನಿಗಮದ ಹಸಿರು ಉತ್ಪನ್ನಗಳನ್ನು ಹೆಚ್ಚು ಪ್ರಚಾರ ಮಾಡುವುದು ಈ ಒಪ್ಪಂದದ ಉದ್ದೇಶವಾಗಿದೆ' ಎಂದರು.

'ಪ್ರಧಾನ ಮಂತ್ರಿ ಸಣ್ಣ ಆಹಾರ ಸಂಸ್ಕರಣಾ ಉದ್ಯಮಗಳ ಉತ್ತೇಜನ ಯೋಜನೆಯ ಫಲಾನುಭವಿಯಾಗಿರುವ ಮಾಲ್ಗುಡಿ ಅಮೃತ್ ಚಹಾ ಸಂಸ್ಥೆಯ 89 ಮಳಿಗೆಗಳಲ್ಲಿ ಮ್ಯಾಟ್‌ಗಳ ಪ್ರದರ್ಶನ, ಮಾರಾಟ ನಡೆಯಲಿದೆ. ಮೊದಲ ಹಂತದಲ್ಲಿ ಬೆಂಗಳೂರಿನಲ್ಲಿರುವ 30 ಘಟಕಗಳಲ್ಲಿ ಮಾರಾಟ ಆರಂಭವಾಗಲಿದ್ದು ಶೇ 15ರಷ್ಟು ರಿಯಾಯಿತಿ ನೀಡಲಾಗುವುದು' ಎಂದರು.

> ಗ್ರಾಮೀಣ ಮಹಿಳೆಯರ ಉದ್ಯಮಶೀಲತೆಯನ್ನು ಉತ್ತೇಜಿಸಲು ನಿಗಮವು ಕೈಗೊಂಡಿರುವ ಪ್ರಯತ್ನ ಶ್ಲಾಘನೀಯವಾಗಿದೆ
> **ಎ.ಎಚ್.ವಿಶ್ವನಾಥ್,** ವಿಧಾನಪರಿಷತ್ ಸದಸ್ಯ

'ಕೇರಳ ರಾಜ್ಯ ಗೋಡಂಬಿ ಅಭಿವೃದ್ಧಿ ನಿಗಮದ ಆನ್‌ಲೈನ್ ಮಾರಾಟ ಸಹವರ್ತಿಗಳಾಗಿರುವ ವೀಣಾ ಶಿವಪ್ಪರೈ ಸಿವಿಲ್ ಇನ್‌ಫ್ರಾ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ಮಾಲ್ಗುಡಿ ಸಂಸ್ಥೆಯು ಮ್ಯಾಟ್‌ಗಳನ್ನು ಮಾರಾಟ ಮಾಡಲಿದೆ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್ ತಿಳಿಸಿದರು.

'ನಿಗಮದ 35 ಉತ್ಪಾದನಾ ಘಟಕಗಳಲ್ಲಿ ಹಸ್ತಚಾಲಿತ ಮ್ಯಾಟ್ ಫ್ರೇಮ್ ಬಳಸಿ ಸುಮಾರು 700 ಗ್ರಾಮೀಣ ಮಹಿಳೆಯರಿಗೆ ಉದ್ಯೋಗ ಕಲ್ಪಿಸಲಾಗಿದೆ. ತೆಂಗಿನ ನಾರಿನ ಉತ್ಪನ್ನಗಳನ್ನು ನಿಗಮದ ವಾಹನದಲ್ಲೇ ದೆಹಲಿ ಮತ್ತು ಜೈಪುರಕ್ಕೆ ಪೂರೈಸಲಾಗುತ್ತಿದೆ. ಜೈಪುರದಲ್ಲಿ ನಿಗಮವು ಖಾಸಗಿ ಸಹಭಾಗಿತ್ವದಲ್ಲಿ ಮಾರಾಟ ಮಳಿಗೆಯನ್ನೂ ತೆರೆದಿದೆ. ದೆಹಲಿ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಕ್ಕೆ ಸರಕು ಪೂರೈಸುವ ಏಜೆಂಟರನ್ನೂ ನಿಯೋಜಿಸಲಾಗಿದೆ. ಡಿಜಿಟಲ್ ಮಾರಾಟ ಹೆಚ್ಚಿಸಲು coirkarnataka.in ಹಾಗೂ ಇ-ಕಾಮರ್ಸ್ ವೆಬ್‌ಸೈಟ್ coirempower.com ರೂಪಿಸಲಾಗಿದೆ' ಎಂದು ಮಾಹಿತಿ ನೀಡಿದರು.

ವಿಧಾನ ಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್, ರಾಜ್ಯ ಮಾವು ಮಾರುಕಟ್ಟೆ ಮತ್ತು ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಸಿ.ಮುದ್ದುಗಂಗಾಧರ್, ಡಿ.ದೇವರಾಜ್ ಅರಸು ಟ್ರಕ್ ಟರ್ಮಿನಲ್ ಅಧ್ಯಕ್ಷ ವೈ.ಸಯೀದ್ ಅಹ್ಮದ್ ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು

'ಚಿತ್ರ ಭಾರತಿ' ಕಲಾ ಶಿಬಿರ: ದೇಶದ ವಿವಿಧ ರಾಜ್ಯಗಳ ಚಿತ್ರ ಪ್ರಕಾರಗಳ ಕಲಾಕೃತಿಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ಬೆಳಿಗ್ಗೆ 11ರಿಂದ 1 ಮತ್ತು ಮಧ್ಯಾಹ್ನ 3ರಿಂದ ಸಂಜೆ 6

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಪ್ರಜಾಪ್ರಭುತ್ವದಲ್ಲಿ ದಲಿತರ ಸ್ಥಾನ-ಮಾನ ಕುರಿತು ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಸತೀಶ್ ಜಾರಕಿಹೊಳಿ, ಪುಷ್ಪನಮನ: ಪಿ.ಎಂ. ನರೇಂದ್ರಸ್ವಾಮಿ, ಅಧ್ಯಕ್ಷತೆ: ಶ್ಯಾಮರಾವ್ ಘಾಟ್ಗೆ, ಆಯೋಜನೆ: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ನಾಗವಾರ ಬಣ), ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ಸುಧನ್ವಾರ್ಜುನ' ಯಕ್ಷಗಾನ ಪ್ರಸಂಗ: ಅತಿಥಿ ಕಲಾವಿದರ ಕೂಡುವಿಕೆಯಲ್ಲಿ, ಆಯೋಜನೆ: ಪಟಾಲಮ್ಮ ದೇವಿ ಸೇವಾ ಸಮಿತಿ, ಸ್ಥಳ: ಪಟಾಲಮ್ಮ ದೇವಿ ದೇವಸ್ಥಾನ, ಎಚ್‌ಎಸ್‌ಆರ್ ಲೇಔಟ್, ಸಂಜೆ 7

ದತ್ತಿ ಕಾರ್ಯಕ್ರಮ: 'ಹರಿಶ್ಚಂದ್ರ ಕಾವ್ಯ'ದ ಗಾನರಾಣಿಯರ ಪ್ರಸಂಗ ವಾಚನ: ಲಕ್ಷ್ಮಣದಾಸ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

26ನೇ ವರ್ಷದ ಪ್ರವಚನ ವಾಹಿನಿ: 'ಭಾಗವತದಲ್ಲಿ ನಾರಾಯಣ ಪರ್ವ' ಕುರಿತು ಉಪನ್ಯಾಸ: ಪವಮಾನಾಚಾರ್ ಮಡನೂರು, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ರಾಮಾಂಜನೇಯಸ್ವಾಮಿ ಮಹಾ ಕುಂಭಾಭಿಷೇಕ ಮಹೋತ್ಸವ: ದಾಸರ ಪದಗಳ ಗಾಯನ: ಮೈಸೂರು ರಾಮಚಂದ್ರಾಚಾರ್ ಆಯೋಜನೆ ಮತ್ತು ಸ್ಥಳ: ರಾಮಾಂಜನೇಯ ದೇವಸ್ಥಾನ, 2ನೇ ಮುಖ್ಯರಸ್ತೆ, ನಾಗಸಂದ್ರ, ಸಂಜೆ 7

'ನೀ ನಾನಾದ್ರೆ ನಾ ನೀನೇನಾ' ನಾಟಕ ಪ್ರದರ್ಶನ: ನಿರ್ದೇಶನ: ವಿನಯ್ ಶಾಸ್ತ್ರಿ, ತಂಡ: ವ್ಯಾಸ್ಪ್ ಥಿಯೇಟರ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ.ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

‘ಟೌನ್‌ಶಿಪ್: ರೈತರ ಒಕ್ಕಲೆಬ್ಬಿಸುವುದಿಲ್ಲ’

ಕುಮಾರಸ್ವಾಮಿ ರಾಜಕೀಯ ಮಾಡುತ್ತಿದ್ದಾರೆ: ಜಿ.ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಡದಿ ಟೌನ್‌ಶಿಪ್‌ಗಾಗಿ ರೈತರನ್ನು ಒಕ್ಕಲೆಬ್ಬಿಸುವ ಯೋಜನೆ ಇಲ್ಲ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಸಹಾಯಕ್ಕೆ ಸಲಹೆಗಳನ್ನು ನೀಡುವ ಬದಲಿಗೆ ರಾಜಕೀಯ ಮಾಡುತ್ತಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಮಾಜಿ ಸಚಿವ ಎಚ್.ಕೆ.ಪಾಟೀಲ ಅವರ ನಿವಾಸದ ಬಳಿ ಸುದ್ದಿಗಾರರ ಜತೆ ಪರಮೇಶ್ವರ ಮಾತನಾಡಿದರು.

ಪರಮೇಶ್ವರ

‘ಕುಮಾರಸ್ವಾಮಿ ಕಾಂಗ್ರೆಸ್ ನಾಯಕರ ಹಳೆಯ ಹೇಳಿಕೆಗಳನ್ನು ತೋರಿಸಿ, ರಾಜಕೀಯ ಮಾಡಲು ಹೊರಟಿದ್ದಾರೆ. ವೃಥಾ ಆರೋಪ ಮಾಡುವ ಬದಲು ಯೋಜನೆ ಸಂಬಂಧ ಉತ್ತಮ ಸಲಹೆಗಳನ್ನು ನೀಡಲಿ. ಆಗ ನಾವು ಅವರ ಅನುಮಾನಗಳು ಮತ್ತು ಆರೋಪಗಳಿಗೆ ಸೂಕ್ತ ಉತ್ತರ ನೀಡುತ್ತೇವೆ. ಈ ತೀರ್ಮಾನ ಕೈಗೊಳ್ಳಲು ಕಾರಣವೇನು ಎಂಬುದಕ್ಕೆ ಉತ್ತರ ಕೊಡಲು ಸಿದ್ಧರಿದ್ದೇನೆ. ಕುಮಾರಸ್ವಾಮಿ ಅವರು ಬಿಡದಿಗೆ ಹೋರಾಟ ಮಾಡುತ್ತೇವೆ ಎಂದರೆ ರಾಜಕೀಯ ಕಾರಣಕ್ಕಾಗಿ ಮಾಡುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ’ ಎಂದು ಕುಟುಕಿದರು.

‘ರೈತರನ್ನು ಒಕ್ಕಲೆಬ್ಬಿಸುವುದು ಬೇಡ ಎನ್ನುವುದು ನಮ್ಮ ಉದ್ದೇಶವೂ ಆಗಿದೆ. ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಪೂರ್ಣ ಒಪ್ಪಿಗೆ ಮೇಲೆ ಯೋಜನೆ ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಿದ್ದೇವೆ. ಕೆಲವು ರೈತರು ತಮ್ಮದು ಒಣ ಭೂಮಿ, ಇದರಿಂದ ಅನುಕೂಲ ಇಲ್ಲ. ಈ ಭೂಮಿ ಕೊಡಲು ಸಿದ್ಧರಿದ್ದೇವೆ, ಹೆಚ್ಚು ಪರಿಹಾರದ ಹಣ ಕೊಡಿ ಎಂದು ಕೇಳುತ್ತಿದ್ದಾರೆ. ನಾವು ಅಂಥವರಿಗೆ ಅವರ ಬೇಡಿಕೆ ನೋಡಿ ಸಮಾಧಾನಕರ ಪರಿಹಾರದ ಹಣ ನೀಡಿದರೆ ಅವರು ಬೇರೆ ಕಡೆ ಜಮೀನು ತೆಗೆದುಕೊಳ್ಳುತ್ತಾರೆ. ಕೃಷಿಯಲ್ಲಿ ಮುಂದುವರೆಯುತ್ತಾರೆ. ನಾವು ಈ ದೃಷ್ಟಿಕೋನದಲ್ಲಿ ಮುಂದುವರಿಯುತ್ತಿದ್ದೇವೆ. ಇದರಲ್ಲಿ ರಾಜಕೀಯ ಮಾಡಲು ಹೊರಟರೆ ಕಷ್ಟ’ ಎಂದರು.

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಷ್ಠೆ ಬಿಡಬೇಕು. ಸಾಕಷ್ಟು ಸರ್ಕಾರಿ ಜಮೀನುಗಳಿದ್ದು, ರೈತರಿಗೆ ತೊಂದರೆಯಾಗದಂತೆ ಅಲ್ಲಿ ಟೌನ್‌ಶಿಪ್ ಮಾಡಲಿ

ಬಸವರಾಜ ಬೊಮ್ಮಾಯಿ, ಸಂಸದ

‘ಬಿಡದಿಯೇ ಏಕೆ? ಬೇರೆ ಭಾಗದವರು ರೈತರಲ್ಲವೇ?’

ಬೆಂಗಳೂರು: ‘ಸರ್ಜಾಪುರ, ಚಿಕ್ಕಬಳ್ಳಾಪುರ, ಜಂಗಮಕೋಟೆ, ದೊಡ್ಡಬಳ್ಳಾಪುರದಲ್ಲಿ ವಿವಿಧ ಯೋಜನೆಗಳಿಗೆ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ. ಹಾಸನದಲ್ಲಿ ಮಂಜೂರಾತಿಗೂ ಮುನ್ನವೇ ಐಐಟಿ ಕಾಲೇಜಿಗಾಗಿ 1,800 ಎಕರೆ ಭೂಸ್ವಾಧೀನ ಮಾಡಿದ್ದಾರೆ. ಅಲ್ಲಿ ಹೋರಾಟ ಮಾಡದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಅವರ ಪುತ್ರ ನಿಖಿಲ್ ಬಿಡದಿಯಲ್ಲಿ ಮಾತ್ರ ಏಕೆ ವಿರೋಧ ಮಾಡುತ್ತಿದ್ದಾರೆ’ ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಬೈರಮಂಗಲದ ಚರ್ಚೆಗೆ ಬರುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆಹ್ವಾನಿಸಿದ್ದಾರೆ. ಇದು ಬಾಲಿಶ ವರ್ತನೆ’ ಎಂದರು.

‘ಪ್ರಬುದ್ಧ ನಾಯಕರಂತೆ ವರ್ತಿಸಬೇಕಾದ ಜನ್ಮ ಕುಮಾರಸ್ವಾಮಿ ಅವರಿಗಿಲ್ಲ. ಅವರ ಮಾತು ಕೇಳಿ ಬಂದರೆ ಎರಡೂ ಕಡೆಯ ರೈತರ ಹೊಡೆದಾಟಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರೈತರ ಹೋರಾಟ ಮುಗಿದಿದೆ. ಈಗ ರಾಜಕೀಯ ಆಯಾಮ ತೆರೆದುಕೊಂಡಿದೆ. ರಾಜಕೀಯ ವಿಚಾರ ಎಂದಾಗ ಪಕ್ಷದ ಕಾರ್ಯಕರ್ತರು ಸೇರುತ್ತಾರೆ. ಗಲಾಟೆಯಾದರೆ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಉದ್ಭವಿಸಲಿದೆ. ರಾಜ್ಯ ಸರ್ಕಾರದ ತಲೆಗೆ ಕಟ್ಟುವ ದುರಾಲೋಚನೆ ಇಟ್ಟುಕೊಂಡಿದ್ದಾರೆ. ಇಂತಹ ಅವಘಡಗಳಿಗೆ ಅವಕಾಶ ನೀಡಲು ಸಾಧ್ಯವಿಲ್ಲ’ ಎಂದರು.

‘ಬಿಡದಿಯಲ್ಲಿನ ತಮ್ಮ 35 ಎಕರೆ ಜಾಗ ಉಳಿಸಿಕೊಳ್ಳಲು ಕುಮಾರಸ್ವಾಮಿ ಹೋರಾಟ ಮಾಡುತ್ತಿದ್ದಾರೆ. ಮೈಸೂರು, ಮಂಡ್ಯದಿಂದ ಹಣ ಕೊಟ್ಟು, ಜನರನ್ನು ಕರೆಸಿಕೊಂಡು ಪ್ರತಿಭಟನೆ ನಡೆಸುತ್ತಿದ್ದಾರೆ. ವಾಸ್ತವದಲ್ಲಿ ಬಿಡದಿ ಯೋಜನೆಗೆ ಬಹುತೇಕ ರೈತರು ಒಪ್ಪಿಗೆ ನೀಡಿದ್ದಾರೆ. ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಮುಂದುವರಿಯುತ್ತೇವೆ. ಕೆಂಪುವಲಯದಲ್ಲಿ ₹1 ಕೋಟಿಗೂ ಅಧಿಕ ಪರಿಹಾರ ನೀಡಲು ಅವಕಾಶವಿಲ್ಲ. ಹಿಂದೆ 500 ಎಕರೆ ವರ್ಗಾವಣೆಯಾಗಿದ್ದು, ₹50 ಲಕ್ಷದಿಂದ ₹80 ಲಕ್ಷ ಪರಿಹಾರ ನೀಡಲಾಗಿತ್ತು. ಈಗ ₹2.50 ಕೋಟಿ ನೀಡುತ್ತಿದ್ದೇವೆ. ಹಣ ಬೇಡ ಎಂದವರಿಗೆ ಬದಲಿ ಭೂಮಿಯನ್ನೂ ಪರಿಹಾರವಾಗಿ ನೀಡಲಾಗುತ್ತಿದೆ. ಒಪ್ಪಿಗೆ ನೀಡಿದ ರೈತರ ಪಟ್ಟಿಯನ್ನು ಶೀಘ್ರ ಬಿಡುಗಡೆ ಮಾಡುತ್ತೇವೆ’ ಎಂದು ಮಾಹಿತಿ ನೀಡಿದರು.

‘ಕುಮಾರಸ್ವಾಮಿ ಮತ್ತು ನಿಖಿಲ್ ಅವರು ಬಿಡದಿ ವಿಚಾರ ಕೈಬಿಟ್ಟು ಎಚ್.ಡಿ.ದೇವೇಗೌಡರು, ಎಚ್.ಡಿ.ರೇವಣ್ಣ ಅವರು ಹಾಸನದಲ್ಲಿ ಸ್ವಾಧೀನಪಡಿಸಿರುವ ಭೂಮಿಯನ್ನು ಮೊದಲು ಬಿಡಿಸಿಕೊಡಬೇಕು. ಕುಮಾರಸ್ವಾಮಿ ದೃಷ್ಟಿಯಲ್ಲಿ ಬೇರೆ ಭಾಗದವರು ರೈತರಲ್ಲವೇ ಎಂದು ಪ್ರಶ್ನಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಕುಮಾರಸ್ವಾಮಿಗೆ ಬಿಡದಿಯಲ್ಲೇ ವಾಸ್ತವ್ಯ ಹೂಡು ಎಂದು ಹೇಳಿ ಕಳುಹಿಸಿದ್ದಾರಾ? ಕೇಂದ್ರ ಸಚಿವರಾದವರು ಬೇರೆ ರಾಜ್ಯಗಳಿಗೆ ಹೋಗಿ, ಇಲಾಖೆ ಕೆಲಸ ಮಾಡಬೇಕು. ಜೆಪಿ ಭವನ, ಬಿಡದಿಯಲ್ಲೇ ಬೀಡುಬಿಡುವುದಲ್ಲ

ಎಚ್.ಸಿ.ಬಾಲಕೃಷ್ಣ, ಶಾಸಕ, ಮಾಗಡಿ

ಕನ್ವೆನ್ಷನ್ ಸೆಂಟರ್, ಸಭಾಂಗಣ ಲೋಕಾರ್ಪಣೆ

ವಿವಾಹ, ಸಿನಿಮಾಗೆ ಐಷಾರಾಮಿ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ, ನಿಶ್ಚಿತಾರ್ಥ, ಆರತಕ್ಷತೆ ಸೇರಿದಂತೆ ಶುಭ ಕಾರ್ಯಗಳಿಗೆ ಹವಾನಿಯಂತ್ರಿತ ಸಮುದಾಯ ಭವನ, ಸಿನಿಮಾ, ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಐಷಾರಾಮಿ ಸಭಾಂಗಣವನ್ನು ಯಡಿಯೂರು ವಾರ್ಡ್‌ನಲ್ಲಿ ಅನಾವರಣಗೊಳಿಸಲಾಗಿದೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಶುಭ ಸಮಾರಂಭಗಳಿಗೆ ಸಂಪೂರ್ಣ ಹವಾನಿಯಂತ್ರಿತ ವ್ಯವಸ್ಥೆಯೊಂದಿಗೆ ‘ಅ.ನ.ಕೃ. ಕನ್ವೆನ್ಷನ್ ಸೆಂಟರ್’ ನಿರ್ಮಿಸಲಾಗಿದೆ. ಚಲನ ಚಿತ್ರೋತ್ಸವ, ಸಿನಿಮಾ ಬಿಡುಗಡೆ ಪೂರ್ವ ಕಾರ್ಯಕ್ರಮ, ಸಾಂಸ್ಕೃತಿಕ / ರಂಗಭೂಮಿ ಕಾರ್ಯಕ್ರಮಗಳು, ಶಾಲಾ-ಕಾಲೇಜು ವಾರ್ಷಿಕೋತ್ಸವಗಳಿಗಾಗಿ ಮಲ್ಟಿಪ್ಲೆಕ್ಸ್‌ಗೆ ಸೆಡ್ಡುಹೊಡೆಯುವಂತೆ ಅಂತರರಾಷ್ಟ್ರೀಯ ಗುಣಮಟ್ಟ, ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಡಾ. ಪುನೀತ್ ರಾಜ್‌ಕುಮಾರ್ ಸಭಾಂಗಣ ನಿರ್ಮಿಸಲಾಗಿದೆ.

ಯಡಿಯೂರು ವಾರ್ಡ್‌ನ ಐತಿಹಾಸಿಕ ಯಡಿಯೂರು ಕೆರೆಯ ಎದುರಿರುವ ಈ ಸಭಾಂಗಣಗಳಿಗೆ ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದ ತೇಜಸ್ವಿ ಸೂರ್ಯ, ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಅನಕೃ ಅವರ ಪುತ್ರ ಗೌತಮ್ ಅವರು ಸೋಮವಾರ ಚಾಲನೆ ನೀಡಿದರು.

‘ಅ.ನ.ಕೃ. ಕನ್ವೆನ್ಷನ್ ಸೆಂಟರ್’ನಲ್ಲಿ 700 ಜನ ಆಸೀನರಾಗಬಹುದಾದ ಸಭಾಂಗಣವಿದ್ದು, 300ಕ್ಕೂ ಹೆಚ್ಚು ಜನ ಒಂದೇ ಬಾರಿಗೆ ಊಟ ಮಾಡಬಹುದಾದ ‘ಭೋಜನಾಲಯ’ವಿದೆ. ಎಂಟು ಕೊಠಡಿಗಳೂ ಸೇರಿದಂತೆ ಸಂಪೂರ್ಣ ಹವಾನಿಯಂತ್ರಿತವಾದ ಈ ಸೆಂಟರ್‌ಗೆ ಒಂದೂವರೆ ದಿನಕ್ಕೆ ₹70 ಸಾವಿರ ಬಾಡಿಗೆ ನಿಗದಿಪಡಿಸಲಾಗಿದೆ.

ಡಾ. ಪುನೀತ್ ರಾಜ್‌ಕುಮಾರ್ ಸಭಾಂಗಣದಲ್ಲಿ 322 ಐಷಾರಾಮಿ ಆಸನಗಳಿದ್ದು, ಸರೌಂಡ್ ಸೌಂಡ್ ವ್ಯವಸ್ಥೆಯನ್ನು ಒಳಗೊಂಡಿದ್ದು, ಪ್ರತಿ ಚಟುವಟಿಕೆಗೆ ₹25 ಸಾವಿರ ಬಾಡಿಗೆ ನಿಗದಿಯಾಗಿದೆ.

ಪಾಲಿಕೆಯ ಮಾಜಿ ಸದಸ್ಯರಾದ ಪೂರ್ಣಿಮಾ ರಮೇಶ್, ಎ.ಎಚ್. ಬಸವರಾಜ್, ಎಲ್. ಗೋವಿಂದರಾಜು, ಗೋವಿಂದ ನಾಯ್ಡು ಸಮಾರಂಭದಲ್ಲಿ ಹಾಜರಿದ್ದರು.

ಯಡಿಯೂರಿನಲ್ಲಿ ಸಭಾಂಗಣಗಳಿಗೆ ಆರ್.ಅಶೋಕ, ತೇಜಸ್ವಿ ಸೂರ್ಯ, ಅಶ್ವಿನಿ ಪುನೀತ್ ರಾಜ್‌ಕುಮಾರ್, ಗೌತಮ್, ಎನ್‌ಆರ್ ರಮೇಶ್ ಅವರು ಸೋಮವಾರ ಚಾಲನೆ ನೀಡಿದರು

₹16 ಕೋಟಿಯಲ್ಲಿ 7 ಅಂತಸ್ತು

ಬಿಬಿಎಂಪಿ ಇದ್ದಾಗ 2020ರಲ್ಲಿ ಆರಂಭವಾಗಿದ್ದ ಕಾಮಗಾರಿ ಇದೀಗ ಪೂರ್ಣಗೊಂಡಿದ್ದು, ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವತಿಯಿಂದ ಇದರ ನಿರ್ವಹಣೆಯಾಗಲಿದೆ. ಸುಮಾರು ₹16 ಕೋಟಿ ವೆಚ್ಚದಲ್ಲಿ ಏಳು ಅಂತಸ್ತಿನ ಅತ್ಯಾಧುನಿಕ ವ್ಯವಸ್ಥೆಯ ಕಟ್ಟಡವನ್ನು ನಿರ್ಮಿಸಲಾಗಿದೆ ಎಂದು ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ ಎನ್.ಆರ್. ರಮೇಶ್ ತಿಳಿಸಿದರು.

‘ಕಟ್ಟಡದಲ್ಲಿ ಒಂದು ಅಂತಸ್ತನ್ನು ವಾಹನ ನಿಲುಗಡೆಗೆ ಮೀಸಲಿರಿಸಲಾಗಿದೆ. ಮೊದಲ ಮೂರು ಅಂತಸ್ತಿನಲ್ಲಿ ಅ.ನ.ಕೃ. ಕನ್ವೆನ್ಷನ್ ಸೆಂಟರ್ ಇದ್ದು, ಅದರ ಮೇಲಿನ ಮೂರು ಅಂತಸ್ತಿನಲ್ಲಿ ಡಾ. ಪುನೀತ್ ರಾಜ್‌ಕುಮಾರ್ ಸಭಾಂಗಣವಿದೆ’ ಎಂದು ಮಾಹಿತಿ ನೀಡಿದರು.

ಜುಲೈ 1ರಿಂದ ಬುಕಿಂಗ್ ಆರಂಭವಾಗಲಿದ್ದು, ಜುಲೈ 5ರಿಂದ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ನೀರು ಹರಿಸಲು ಒಪ್ಪದ ರಾಜ್ಯ

ಪ್ರಜಾವಾಣಿ ವಾರ್ತೆ



- 40 ಟಿಎಂಸಿ ಅಡಿ ನೀರಿಗೆ ತಮಿಳುನಾಡು ಪಟ್ಟು
- ‘ಮುಂದಿನ ಸಭೆಯಲ್ಲಿ ನಿರ್ಧಾರ’

ಕಾವೇರಿ

ನವದೆಹಲಿ: ಕರ್ನಾಟಕದ ನಾಲ್ಕು ಜಲಾಶಯಗಳಿಂದ ಜುಲೈ ಅಂತ್ಯದವರೆಗೆ 40 ಟಿಎಂಸಿ ಅಡಿ ನೀರು ಹರಿಸಲು ನಿರ್ದೇಶನ ನೀಡಬೇಕು ಎಂದು ತಮಿಳುನಾಡು ಸರ್ಕಾರ ಪಟ್ಟು ಹಿಡಿಯಿತು. ಇದಕ್ಕೆ ಕರ್ನಾಟಕ ಸರ್ಕಾರ ಒಪ್ಪಿಗೆ ಸೂಚಿಸಲಿಲ್ಲ.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ ಎಸ್.ಕೆ. ಹಲ್ದಾರ್ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಮಂಗಳವಾರ ನಡೆದ ಪ್ರಾಧಿಕಾರದ 52ನೇ ಸಭೆಯಲ್ಲಿ ರಾಜ್ಯದ ಜಲಾಶಯಗಳ ಸ್ಥಿತಿಗತಿಯನ್ನು ಕರ್ನಾಟಕದ ಅಧಿಕಾರಿಗಳು ಬಿಚ್ಚಿಟ್ಟರು.

ಸಭೆಯಲ್ಲಿ ಹಾಜರಿದ್ದ ಭಾರತೀಯ ಹವಾಮಾನ ಇಲಾಖೆಯ ಅಧಿಕಾರಿಗಳು, ‘ಕರ್ನಾಟಕದಲ್ಲಿ ಮುಂಗಾರು ಮಳೆ ವೇಗ ಪಡೆದುಕೊಂಡಿಲ್ಲ. ಇದರಿಂದಾಗಿ, ನಾಲ್ಕು ಜಲಾಶಯಗಳಿಗೆ ನೀರು ಹರಿದು ಬಂದಿಲ್ಲ. ಮುಂದಿನ ಕೆಲವೇ ದಿನಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆ ಇದೆ’ ಎಂದರು.

ಕರ್ನಾಟಕ ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳು, ‘ನಾಲ್ಕು ಜಲಾಶಯಗಳಲ್ಲಿ ನೀರಿನ ಪ್ರಮಾಣ ಬಹಳ ಕಡಿಮೆ ಇದೆ. ಇದು ಕುಡಿಯುವ ಉದ್ದೇಶಕ್ಕೆ ಮಾತ್ರ ಸಾಕು. ಈಗಿನ ಪರಿಸ್ಥಿತಿಯಲ್ಲಿ ಕೃಷಿ ಚಟುವಟಿಕೆಗೆ ನೀರು ಹರಿಸಲು ಸಾಧ್ಯವಿಲ್ಲ. ತಮಿಳುನಾಡು ಸರ್ಕಾರ ಸನ್ನಿವೇಶ ಅರ್ಥ ಮಾಡಿಕೊಳ್ಳಬೇಕು. ಬರದ ಛಾಯೆ ಆವರಿಸಿದೆ. ಇಂಥ ಸನ್ನಿವೇಶದಲ್ಲಿ ನೆರೆ ರಾಜ್ಯ ಒತ್ತಡ ಹೇರುವುದು ಸರಿಯಲ್ಲ’ ಎಂದು ಅಭಿಪ್ರಾಯಪಟ್ಟರು.

ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾದರೆ, ನೀರನ್ನು ಹೇಗೆ ಹಂಚಿಕೊಳ್ಳಬೇಕು ಎಂಬ ಸಂಕಷ್ಟ ಸೂತ್ರ ಇಲ್ಲ. ಇದರಿಂದಾಗಿ, ಮಳೆ ಕೊರತೆ ವರ್ಷಗಳಲ್ಲಿ ಸಮಸ್ಯೆ ಸೃಷ್ಟಿಯಾಗುತ್ತಿದೆ. ಸಂಕಷ್ಟ ಸೂತ್ರ ರೂಪಿಸಬೇಕು ಎಂದು ಅವರು ಪ್ರಾಧಿಕಾರವನ್ನು ಒತ್ತಾಯಿಸಿದರು.

ತಮಿಳುನಾಡು ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು, ‘ಕಾವೇರಿ ನ್ಯಾಯಮಂಡಳಿ ತೀರ್ಪಿನ ಪ್ರಕಾರ, ಕರ್ನಾಟಕ ಸರ್ಕಾರವು ಜೂನ್‌ನಲ್ಲಿ 9.19 ಟಿಎಂಸಿ ಅಡಿ ನೀರು ಹರಿಸಬೇಕು. ಜೂನ್ 22ರ ವರೆಗೆ 6.73 ಟಿಎಂಸಿ ಅಡಿ ನೀರು ಹರಿಸಬೇಕಿತ್ತು. ಆದರೆ, ರಾಜ್ಯಕ್ಕೆ ಹರಿದು ಬಂದಿರುವುದು 2.66 ಟಿಎಂಸಿ ಅಡಿ ನೀರು ಮಾತ್ರ’ ಎಂದರು.

‘ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇದೆ ಎಂದು ಕರ್ನಾಟಕ ಸಬೂಬು ಹೇಳುತ್ತಿದೆ. ಆದರೆ, ಫೆಬ್ರುವರಿಯಿಂದ ಮೇವರೆಗೆ ಹೆಚ್ಚುವರಿ ನೀರನ್ನು ಕರ್ನಾಟಕ ಬಳಸಿದೆ. ಇದರಿಂದ ಸಮಸ್ಯೆ ಸೃಷ್ಟಿಯಾಗಿದೆ’ ಎಂದು ಆರೋಪಿಸಿದರು.

ಜೂನ್ ಪಾಲಿನ 9.19 ಟಿಎಂಸಿ ಅಡಿ ಮತ್ತು ಜುಲೈ ಪಾಲಿನ 31.24 ಟಿಎಂಸಿ ಅಡಿ ನೀರು ಹರಿಸಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ಅವರು ಪ್ರಾಧಿಕಾರವನ್ನು ಒತ್ತಾಯಿಸಿದರು.

ಉಭಯ ರಾಜ್ಯಗಳ ಅಧಿಕಾರಿಗಳ ವಾದ ಹಾಗೂ ಹವಾಮಾನ ಇಲಾಖೆಯ ಅಭಿಪ್ರಾಯ ಆಲಿಸಿದ ಪ್ರಾಧಿಕಾರವು, ‘ಮಳೆ ಕೊರತೆಯಾಗಿರುವುದರಿಂದ ಸಮಸ್ಯೆ ಉಂಟಾಗಿದೆ. ಕೆಲವೇ ದಿನಗಳಲ್ಲಿ ಪರಿಸ್ಥಿತಿ ಸುಧಾರಿಸಬಹುದು. ಸ್ವಲ್ಪ ದಿನ ಕಾದು ನೋಡೋಣ. ನೀರು ಹರಿಸುವ ವಿಷಯದ ಬಗ್ಗೆ ಮುಂದಿನ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳೋಣ’ ಎಂದು ಅಭಿಪ್ರಾಯಪಟ್ಟಿತು.

ಮುಖ್ಯಮಂತ್ರಿ ಪಂಥಾಹ್ವಾನಕ್ಕೆ ಸಿದ್ಧ

ಹಾರೋಹಳ್ಳಿ (ರಾಮನಗರ): ‘ಬಿಡದಿ ಟೌನ್‌ಶಿಪ್ ಯೋಜನೆ ವಿಧಾನಸೌಧದ ನಾಲ್ಕು ಗೋಡೆಗಳ ಮಧ್ಯೆ ಕೂತು ಚರ್ಚಿಸುವ ವಿಷಯವಲ್ಲ. ಇದು ರೈತರ ಬದುಕಿನ ಪ್ರಶ್ನೆ. ಹಾಗಾಗಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಟೌನ್‌ಶಿಪ್ ಕುರಿತು ಚರ್ಚಿಸಲು ಬೈರಮಂಗಲಕ್ಕೆ ಬರಬೇಕು’ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಹಾರೋಹಳ್ಳಿ ಹೋಬಳಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸನ್ಮಾನ್ಯ ಕುಮಾರಣ್ಣ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಚರ್ಚೆ ಬೇಕಾದರೆ ಬೈರಮಂಗಲ ಸರ್ಕಲ್‌ಗೆ ಬನ್ನಿ. ಬಾಧಿತ ರೈತರ ಸಮ್ಮುಖದಲ್ಲೇ ಬಹಿರಂಗವಾಗಿ ಚರ್ಚೆ ಮಾಡೋಣ ಎಂದು ಮುಖ್ಯಮಂತ್ರಿಗಳಿಗೆ ಆಹ್ವಾನ ನೀಡಿದ್ದಾರೆ’ ಎಂದರು.

‘ವಿವಾದಕ್ಕೆ ಇತ್ಯಾರ್ಥವಾಗಬೇಕಾದರೆ ಒಂದೇ ಮಾರ್ಗ. ಮುಖ್ಯಮಂತ್ರಿಗಳೇ ಸ್ಥಳಕ್ಕೆ ಬಂದು ರೈತರೊಂದಿಗೆ ನೇರವಾಗಿ ಚರ್ಚೆ ಮಾಡಬೇಕು. ಟೌನ್‌ಶಿಪ್ ಯೋಜನೆಗೆ ಸ್ಥಳೀಯ ರೈತರು ಸಹಮತ ವ್ಯಕ್ತಪಡಿಸಿದರೆ ಸರ್ಕಾರ ಮುಂದುವರಿಯಲಿ. ವಿರೋಧ ವ್ಯಕ್ತಪಡಿಸಿದರೆ ಮುಖ್ಯಮಂತ್ರಿಗಳೇ ಜನರಿಗೆ ಉತ್ತರ ನೀಡಬೇಕು’ ಎಂದು ಸವಾಲು ಹಾಕಿದರು.

ರೌಡಿಗಳ ಮನೆ ಪರಿಶೀಲನೆ: ಡಿಸಿಪಿ ಎಚ್ಚರಿಕೆ

ಬೆಂಗಳೂರು: ಉತ್ತರ ವಿಭಾಗದ ರೌಡಿ ನಿಗ್ರಹ ಪಡೆ ಪೊಲೀಸರು ದಿಢೀರ್ ಕಾರ್ಯಾಚರಣೆ ನಡೆಸಿ ರೌಡಿಗಳ ಮನೆಗಳಲ್ಲಿ ಪರಿಶೀಲನೆ ನಡೆಸಿ, ಕಾನೂನು ಬಾಹಿರ ಚಟುವಟಿಕೆ ಹಾಗೂ ಅಪರಾಧ ಗಳಲ್ಲಿ ಭಾಗಿಯಾಗದಂತೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ಡಿಸಿಪಿ ಬಿ.ಎಸ್.ನೇಮಗೌಡ ನೇತೃತ್ವ ದಲ್ಲಿ ಮೂರು ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತರು, 13 ಪೊಲೀಸ್ ಠಾಣೆಗಳ ಇನ್‌ಸ್ಪೆಕ್ಟರ್‌ಗಳು ಮತ್ತು ರೌಡಿ ನಿಗ್ರಹ ಪಡೆಗಳು ವಿಶೇಷ ಕಾರ್ಯಾಚರಣೆ ನಡೆಸಿದವು.

ಠಾಣಾ ವ್ಯಾಪ್ತಿಯಲ್ಲಿರುವ 97 ರೌಡಿಗಳ ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಸ್ತುತ ಅವರು ನಿರ್ವಹಿಸುತ್ತಿರುವ ಕೆಲಸದ ಮಾಹಿತಿ ಸಂಗ್ರಹಿಸಿದರು. ನ್ಯಾಯಾಲಯದ ವಿಚಾರಣೆ ವೇಳೆ ತಪ್ಪದೇ ಹಾಜರಾಗುವಂತೆ ತಾಕೀತು ಮಾಡಲಾಯಿತು.

ಮೆಟ್ರೊ ಸಂಚಾರ ಸ್ಥಗಿತ: ಪ್ರಯಾಣಿಕರ ಪರದಾಟ

ಒಂದನೇ ಪುಟದಿಂದ...

ನಾಲ್ಕು ಮಂದಿಗೆ ₹ 600 ಎಂದು ಖಡಾಖಂಡಿತವಾಗಿ ಹೇಳುತ್ತಿದ್ದರು. ಬೇರೆ ಕಡೆಗೆ ಹೊರಡಬೇಕಿದ್ದವರು ಇನ್ನೂ ಹೆಚ್ಚಿನ ಹಣವನ್ನು ಪಾವತಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಶಿವಾಜಿನಗರಕ್ಕೆ ₹100 ನಿಗದಿ ಮಾಡಿದ್ದರು.

ಬಾರದ ರ‍್ಯಾಪಿಡೊ: ಆಟೊ ರಿಕ್ಷಾಗಳ ದುಬಾರಿ ದರ ಒಪ್ಪದವರು, ರ‍್ಯಾಪಿಡೊ ಸೇರಿದಂತೆ ಸಾರಿಗೆ ಸೌಕರ್ಯ ಕಲ್ಪಿಸುವ ಆ್ಯಪ್‌ಗಳ ಮೂಲಕ ಬೈಕ್, ಆಟೊ ರಿಕ್ಷಾಗಳನ್ನು ಬಳಸಲು ಮುಂದಾದವರಿಗೂ ದರ ಏರಿಕೆಯ ಬಿಸಿ ಮುಟ್ಟಿತು.

ಶಿವಮೊಗ್ಗದ ಬಸ್ ಹತ್ತಲು ಮೆಜೆಸ್ಟಿಕ್‌ಗೆ ಹೊರಡಬೇಕಿದ್ದ ಚೇತನ್ ಎಂಬುವವರು, ಬುಕ್ ಮಾಡಿ, ನಿಗದಿಪಡಿಸಿದ್ದಕ್ಕಿಂತ ಮೂರ್ನಾಲ್ಕು ಪಟ್ಟು ಹೆಚ್ಚು ಹಣವನ್ನು ಕೊಡಲು ಒಪ್ಪಿದರೂ ‘ಕ್ಯಾಪ್ಟನ್’ಗಳಲ್ಲಿ ಯಾರೂ ಬರಲು ಒಪ್ಪದ್ದರಿಂದ ಅಸಹಾಯಕತೆಯಿಂದ ನಿಂತಿದ್ದರು. ಪೀಣ್ಯ 2ನೇ ಹಂತದಿಂದ ಸುಂಕದಕಟ್ಟೆಗೆ ಹೋಗಲು ಎಂ.ಜಿ.ರಸ್ತೆ ನಿಲ್ದಾಣಕ್ಕೆ ಬಂದಿದ್ದ ಐಶ್ವರ್ಯ ಮತ್ತು ಚೇತನಾ ಅವರಿಗೂ ತೊಂದರೆಯಾಗಿತ್ತು. ಅವರು ತಮ್ಮ ಪೋಷಕರಿಗೆ ಕರೆ ಮಾಡಿ ಕಾಯುತ್ತಾ ನಿಂತಿದ್ದರು.

ವೈಟ್‌ಫೀಲ್ಡ್ (ಕಾಡುಗೋಡಿ)–ಇಂದಿರಾನಗರ ಮತ್ತು ಚಲ್ಲಘಟ್ಟ–ನಾಡಪ್ರಭು ಕೆಂಪೇಗೌಡ ನಿಲ್ದಾಣ (ಮೆಜೆಸ್ಟಿಕ್) ನಡುವೆ ರಾತ್ರಿ 9 ಗಂಟೆ ಬಳಿಕ ರೈಲುಗಳು ಎಂದಿನಂತೆ ಸಂಚರಿಸಿದವು.

ಎಂ.ಜಿ ರಸ್ತೆಯಲ್ಲಿ ಮಂಗಳವಾರ ರಾತ್ರಿ ಕಂಡುಬಂದ ಜನದಟ್ಟಣೆ – ಪ್ರಜಾವಾಣಿ ಚಿತ್ರ

ಬಸ್ ಬಂದರೂ ಏರದ ಜನ!

ಮೆಟ್ರೊ ರೈಲು ಸಂಚಾರ ಸ್ಥಗಿತಗೊಂಡಿದ್ದರಿಂದ ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚುತ್ತಿದ್ದಂತೆಯೇ, ಬಿಎಂಟಿಸಿ ವತಿಯಿಂದ ಪರ್ಯಾಯವಾಗಿ ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಶಿವಾಜಿನಗರಕ್ಕೆ ತೆರಳುವ ಬಸ್‌ಗಳನ್ನು ಎಂ.ಜಿ.ರಸ್ತೆ ಮೂಲಕವೇ ಸಂಚರಿಸುವ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಬಸ್‌ಗಳು ಬಂದು ನಿಂತರೂ ಜನ ಏರದೆ ಇರುವುದು ಸಾರಿಗೆ ಸಂಸ್ಥೆಯ ಸಿಬ್ಬಂದಿಯನ್ನು ಪೇಚಿಗೆ ಸಿಲುಕಿಸಿತ್ತು.

‘ಶಿವಾಜಿನಗರಕ್ಕೆ ಹೋಗಿ, ಅಲ್ಲಿಂದ ನೀವು ಹೋಗಬೇಕಾದೆಡೆಗೆ ಕರೆದೊಯ್ಯುವ ಬಸ್‌ಗಳು ಸಿಗುತ್ತವೆ’ ಎಂದು ಸಿಬ್ಬಂದಿ ಪದೇ ಪದೇ ಹೇಳಿದರೂ ಜನ ನಿಂತಲ್ಲೇ ನಿಂತಿದ್ದರು. ಕೊನೆಗೆ ಪೊಲೀಸರು ಬಂದು, ‘ಇಲ್ಲಿ ನಿಲ್ಲಬಾರದು’ ಎಂದು ಬಲವಂತವಾಗಿ ಕಳಿಸುವ ಪ್ರಯತ್ನ ಮಾಡಿದರು.

ಭಣಗುಟ್ಟಿದ ಆಟೊ ಪ್ರಿಪೇಯ್ಡ್ ಕೌಂಟರ್

ಎಂ.ಜಿ.ರಸ್ತೆ ಮೆಟ್ರೊ ರೈಲು ಮುಂಭಾಗದಲ್ಲಿ ಸಾರ್ವಜನಿಕರಿಗೆ ನೆರವಾಗಲೆಂದೇ ಸ್ಥಾಪಿಸಿರುವ ‘ನಮ್ಮ ಮೆಟ್ರೊ’ ಮತ್ತು ಬೆಂಗಳೂರು ನಗರ ಸಂಚಾರ ಪೊಲೀಸ್ ಚೌಕಿ ಯಾವೊಬ್ಬ ಸಿಬ್ಬಂದಿಯೂ ಇಲ್ಲದೆ ಭಣಗುಡುತ್ತಿತ್ತು.

ಕೆಲವು ಪ್ರಯಾಣಿಕರು ನೆರವಿಗಾಗಿ ಈ ಚೌಕಿ ಬಳಿಗೆ ಬಂದು ನಿರಾಶರಾಗಿ ವಾಪಸು ಹೋಗುತ್ತಿದ್ದುದು ಕಂಡುಬಂತು. ಅದರ ಮುಂದೆಯೇ ಆಟೊ ರಿಕ್ಷಾದವರು ಮನಬಂದಂತೆ ಪ್ರಯಾಣದರವನ್ನು ನಿಗದಿಪಡಿಸಿ, ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಿದ್ದರು. ಸ್ಥಳದಲ್ಲೇ ಇದ್ದ ಸಂಚಾರ ಪೊಲೀಸ್ ಒಬ್ಬರನ್ನು ಈ ಬಗ್ಗೆ ಕೇಳಿದಾಗ, ‘ಚೌಕಿಯಲ್ಲಿರುವ ಸಿಬ್ಬಂದಿ ನಿಲ್ದಾಣದ ಒಳಗೆ ಹೋಗಿರಬೇಕು. ನಮಗೆ ತಿಳಿದಿಲ್ಲ. ಮೆಟ್ರೊ ಸಿಬ್ಬಂದಿಯನ್ನು ಸಂಪರ್ಕಿಸಿ’ ಎಂದು ಹೇಳಿ, ಜನರನ್ನು ನಿಯಂತ್ರಿಸುವತ್ತ ಗಮನ ಹರಿಸಿದರು.

ತಾಂತ್ರಿಕ ಸಮಸ್ಯೆ

- ಕಬ್ಬನ್ ಪಾರ್ಕ್ ನಿಲ್ದಾಣದಲ್ಲಿ ಮೂರನೇ ಹಳಿಯಲ್ಲಿ (ವಿದ್ಯುತ್ ಪೂರೈಕೆಗೆ ಇರುವಂತಹದ್ದು) ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಸಂಚಾರ ಸ್ಥಗಿತ
- ದುರಸ್ತಿಪಡಿಸುವ ಪ್ರಯತ್ನದಲ್ಲಿ ಯಶ ಕಾಣದ ತಾಂತ್ರಿಕ ಸಿಬ್ಬಂದಿ
- 2011ರಲ್ಲಿ ಮೆಟ್ರೊ ಸಂಚಾರ ಶುರುವಾದ ಬಳಿಕ ದೊಡ್ಡಮಟ್ಟದ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿರುವುದು ಇದೇ ಮೊದಲು
- ಅರ್ಧ ಗಂಟೆ ರೈಲಿನ ಒಳಗೆ ಇದ್ದ ಪ್ರಯಾಣಿಕರು
- ಲೋಕೊ ಪೈಲಟ್ ಬಾಗಿಲುಗಳನ್ನು ತೆಗೆದ ಬಳಿಕ ಹೊರಗೆ ಬಂದ ಪ್ರಯಾಣಿಕರು
- ಆರು ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ತೊಂದರೆ
- ಆಟೊ, ಬಸ್‌ಗಳು ಸಿಗದೆ ಪ್ರಯಾಣಿಕರ ಪರದಾಟ
- ಸಾರ್ವಜನಿಕರ ಸುರಕ್ಷತೆಗಾಗಿ ನಿಲ್ದಾಣಗಳಲ್ಲಿ ಹೆಚ್ಚುವರಿ ಭದ್ರತಾ ಸಿಬ್ಬಂದಿ ನಿಯೋಜನೆ

ತಾಂತ್ರಿಕ ಸಮಸ್ಯೆ ಬಗೆಹರಿಸುವ ಪ್ರಯತ್ನ ನಡೆದಿದ್ದು, ಅಲ್ಲಿಯವರೆಗೂ ಪ್ರಯಾಣಿಕರು ಪರ್ಯಾಯ ಸಾರಿಗೆಯನ್ನು ಬಳಸಬೇಕು

ಬಿ.ಎಲ್.ಯಶವಂತ ಚವಾಣ್, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ, ಬಿಎಂಆರ್‌ಸಿಎಲ್

ಅಂಗವಿಕಲೆಯ ಗರ್ಭಕೋಶ ತೆಗೆಯಲು ಹೈಕೋರ್ಟ್ ಸಮ್ಮತಿ

ಬೆಂಗಳೂರು: ದೈಹಿಕವಾಗಿ ಅಭಿವೃದ್ಧಿ ಹೊಂದಿದ್ದರೂ ಬೌದ್ಧಿಕ ಮತ್ತು ಮಾನಸಿಕ ವಿಕಲತೆಯಿಂದ ಬಳಲುತ್ತಿರುವ 23 ವರ್ಷದ ಯುವತಿಗೆ ಗರ್ಭಕೋಶ (ಹಿಸ್ಟೆರಕ್ಟಮಿ) ತೆಗೆಯುವ ಶಸ್ತ್ರಚಿಕಿತ್ಸೆಗೆ ಹೈಕೋರ್ಟ್ ಅನುಮತಿ ನೀಡಿದೆ.

‘ನಮ್ಮ ಮಗಳ ಆರೋಗ್ಯದ ದೃಷ್ಟಿಯಿಂದ ಅವಳ ಗರ್ಭಕೋಶ ತೆಗೆಸುವ ಶಸ್ತ್ರಚಿಕಿತ್ಸೆಗೆ ಅನುಮತಿ ನೀಡಬೇಕು’ ಎಂದು ಕೋರಿ ಯುವತಿಯ ಪೋಷಕರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಯುವತಿಯ ಕುರಿತಾದ ವೈದ್ಯಕೀಯ ವರದಿಗಳು, ತಜ್ಞರ ಅಭಿಪ್ರಾಯಗಳು ಹಾಗೂ ಪ್ರಕರಣದ ಸನ್ನಿವೇಶಗಳನ್ನು ಪರಿಶೀಲಿಸಿದ ಬಳಿಕ, ಯುವತಿಯ ಹಿತಾಸಕ್ತಿ ಮತ್ತು ಕಲ್ಯಾಣಕ್ಕಾಗಿ ಶಸ್ತ್ರಚಿಕಿತ್ಸೆಗೆ ಅನುಮತಿ ನೀಡಲಾಗಿದೆ’ ಎಂದು ನ್ಯಾಯಪೀಠ ತಿಳಿಸಿದೆ.

‘ವೈದ್ಯಕೀಯ ಮಂಡಳಿಯ ಶಿಫಾರಸಿನ ಅನ್ವಯ ಕಾನೂನಿಗೆ ಅನುಗುಣವಾಗಿ ಶಸ್ತ್ರಚಿಕಿತ್ಸೆ ನಡೆಸಲು ವ್ಯವಸ್ಥೆ ಮಾಡಬೇಕು. ಅಗತ್ಯ ಕೌನ್ಸೆಲಿಂಗ್ ನಡೆಸಿದ ಬಳಿಕ ಯುವತಿಯ ‘ಟೋಟಲ್ ಅಬ್ಡಾಮಿನಲ್ ಹಿಸ್ಟೆರಕ್ಟಮಿ’ (ಗರ್ಭಾಶಯವನ್ನು ಶಸ್ತ್ರಚಿಕಿತ್ಸೆ ಮೂಲಕ ತೆಗೆಯುವುದು) ಮಾಡಬೇಕು’ ಎಂದು ನಗರದ ವಾಣಿವಿಲಾಸ ಆಸ್ಪತ್ರೆಗೆ ನಿರ್ದೇಶಿಸಿದೆ.

‘ಶಸ್ತ್ರಚಿಕಿತ್ಸೆಯ ಬಳಿಕ ತಜ್ಞ ವೈದ್ಯರು ರೋಗಿಯ ಚೇತರಿಕೆಯ ಮೇಲ್ವಿಚಾರಣೆ ನಡೆಸಬೇಕು. ಶಸ್ತ್ರಚಿಕಿತ್ಸೆ ವಿಧಾನ ಮತ್ತು ರೋಗಿಯ ನಂತರದ ಆರೋಗ್ಯ ಸ್ಥಿತಿಯ ಕುರಿತ ಸಂಕ್ಷಿಪ್ತ ವರದಿಯನ್ನು ಮುಂದಿನ ಎಂಟು ವಾರಗಳಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಬೇಕು’ ಎಂದು ನಿರ್ದೇಶಿಸಿದೆ.

ಅರ್ಜಿ ವಿಚಾರಣೆ ವೇಳೆ ನ್ಯಾಯಪೀಠದ ನಿರ್ದೇಶನದಂತೆ ವಾಣಿವಿಲಾಸ ಆಸ್ಪತ್ರೆಯ ವಿವಿಧ ವಿಭಾಗಗಳ ವೈದ್ಯರನ್ನು ಒಳಗೊಂಡ ವೈದ್ಯಕೀಯ ಮಂಡಳಿ ರಚನೆ ಮಾಡಲಾಗಿತ್ತು.

ಭಾರತ ತಂಡಕ್ಕೆ ಅಭಿನವ್, ಶೈನಾ ಆಯ್ಕೆ

ಬೆಂಗಳೂರು: ಕರ್ನಾಟಕದ ಉದಯೋನ್ಮುಖ ಆಟಗಾರರಾದ ಅಭಿನವ್ ಗರ್ಗ್, ಧ್ಯಾನ್ ಸಂತೋಷ್ ಹಾಗೂ ಶೈನಾ ಮಣಿಮುತ್ತು ಅವರು ಜಪಾನ್‌ನ ಯತ್ಸುಶಿರೊದಲ್ಲಿ ಇದೇ 26ರಂದು ಆರಂಭವಾಗುವ 19 ವರ್ಷದೊಳಗಿನವರ ಏಷ್ಯಾ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ರಾಜ್ಯದ ಆದರ್ಶಿಣಿ ಶ್ರೀ ಎನ್.ಬಿ. ಹಾಗೂ ಒಡಿಶಾದ ಭರವಸೆಯ ಆಟಗಾರ್ತಿ ತನ್ವಿ ಪತ್ರಿ ಅವರು ಬಾಲಕಿಯರ ಸಿಂಗಲ್ಸ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಅಭಿನವ್ ಹಾಗೂ ತನ್ವಿ ಅವರು ಬೆಂಗಳೂರಿನಲ್ಲಿ ‘ಮೇ’ನಲ್ಲಿ ನಡೆದ ಅಖಿಲ ಭಾರತ 19 ವರ್ಷದೊಳಗಿನವರ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಜೂನಿಯರ್ ಪುರುಷರ ಮತ್ತು ಜೂನಿಯರ್ ಮಹಿಳೆಯರ ಸಿಂಗಲ್ಸ್ ಕಿರೀಟ ಗೆದ್ದುಕೊಂಡಿದ್ದಾರೆ.

ಶಿವಮೊಗ್ಗದ ಅವಳಿ ಸಹೋದರರಾದ ಪವನ್ ಎಸ್. ಹಾಗೂ ಪುನೀತ್ ಎಸ್. ಅವರು ಬಾಲಕರ ಡಬಲ್ಸ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ. ಪುನೀತ್ ಹಾಗೂ ಬೆಂಗಳೂರಿನ ಅದಿತಿ ದೀಪಕ್ ರಾಜ್ ಜೋಡಿ ಮಿಶ್ರ ಡಬಲ್ಸ್ ತಂಡದಲ್ಲಿ ಸ್ಥಾನ ಪಡೆದಿದೆ.

ಅರ್ಜನ್ ಸಿಂಗ್ ಹಾಕಿ: ವಾಯುಪಡೆ ಶುಭಾರಂಭ

ಬೆಂಗಳೂರು: ಆತಿಥೇಯ ವಾಯುಪಡೆ ತಂಡವು ಮಂಗಳವಾರ ಆರಂಭಗೊಂಡ ಏಳನೇ ಆವೃತ್ತಿಯ ಏರ್ ಮಾರ್ಷಲ್ ಅರ್ಜನ್ ಸಿಂಗ್ ಸ್ಮಾರಕ ರಾಷ್ಟ್ರೀಯ ಹಾಕಿ ಟೂರ್ನಿಯಲ್ಲಿ 2–0 ಗೋಲುಗಳಿಂದ ಸೇನಾಪಡೆ (ಸದರ್ನ್ ಕಮಾಂಡ್) ತಂಡವನ್ನು ಸೋಲಿಸಿ ಶುಭಾರಂಭ ಮಾಡಿತು.

ಜಾಲಹಳ್ಳಿ ವಾಯುನೆಲೆಯಲ್ಲಿನ ಏರ್ ಮಾರ್ಷಲ್ ಅಮಿತ್ ಸಿಂಗ್ ಬಕ್ಷಿ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಾಯುಪಡೆ ತಂಡದ ವಿನಾಯಕ್ ಸಂತೋಷ್ ಹಂದೆ ಹಾಗೂ ಸುಖನಾಥ್ ಗುರಿಯಾ ತಲಾ ಒಂದು ಗೋಲು ಗಳಿಸಿದರು.

‘ಅಗ್ನಿವೀರ’ ವಿನಾಯಕ್ ಅವರು ಪಂದ್ಯದ ಆಟಗಾರ ಗೌರವಕ್ಕೂ ಪಾತ್ರರಾದರು.

ವಾಯುಪಡೆಯ ಕ್ರೀಡಾ ನಿಯಂತ್ರಣ ಮಂಡಳಿ ಆಯೋಜಿಸಿರುವ ಈ ಟೂರ್ನಿಯಲ್ಲಿ ದೇಶದ ವಿವಿಧ ಭಾಗಗಳ 16 ತಂಡಗಳು ಭಾಗವಹಿಸುತ್ತಿವೆ.

ವಚನ್ ಎಚ್.ಯು

ಅರ್ಚನಾ ತ್ಯಾಗರಾಜನ್

ವಚನ್, ಅರ್ಚನಾ ದಾಖಲೆ

ಫ್ರೀ ಡೈವಿಂಗ್

ಬೆಂಗಳೂರು: ಈಜುಪಟುಗಳಾದ ವಚನ್ ಎಚ್.ಯು. ಮತ್ತು ಅರ್ಚನಾ ತ್ಯಾಗರಾಜನ್ ಅವರು ಹಂಗರಿಯ ಬುಡಾಪೆಸ್ಟ್‌ನಲ್ಲಿ ಈಚೆಗೆ ನಡೆದ ವಿಶ್ವ ಅಪ್ನಿಯಾ– 2026 ಪೂಲ್ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು ಮೂರು ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದಾರೆ.

ಬೆಂಗಳೂರಿನ ವಕೀಲರಾಗಿರುವ ವಚನ್ ಅವರು ಫ್ರೀ ಡೈವಿಂಗ್‌ನ ಡಿವೈಎನ್‌ಬಿ ಸ್ಪರ್ಧೆಯಲ್ಲಿ ಒಂದೇ ಉಸಿರಿನಲ್ಲಿ 153 ಮೀ. ಕ್ರಮಿಸಿ, ತಮ್ಮದೇ ದಾಖಲೆಯನ್ನು (137 ಮೀ). ಉತ್ತಮಪಡಿಸಿಕೊಂಡರು. ಅಲ್ಲದೆ, ಡಿವೈಎನ್ ಸ್ಪರ್ಧೆಯಲ್ಲೂ ಒಂದೇ ಉಸಿರಿನಲ್ಲಿ 148 ಮೀ. ದೂರ ಸಾಗಿ ಮುಂಬೈನ ಅಕ್ಷಯ್ ತಟ್ಟೆ (128 ಮೀ) ಅವರ ದಾಖಲೆಯನ್ನು ಮುರಿದರು.

ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿರುವ ತಮಿಳುನಾಡಿನ ಅರ್ಚನಾ ಅವರು ಫ್ರೀ ಡೈವಿಂಗ್ (ಡಿವೈಎನ್) ಸ್ಪರ್ಧೆಯಲ್ಲಿ ಒಂದೇ ಉಸಿರಿನಲ್ಲಿ 127 ಮೀ. ದೂರ ಸಾಗಿ, ತಮ್ಮದೇ ದಾಖಲೆಯನ್ನು (118 ಮೀ) ಸುಧಾರಿಸಿಕೊಂಡರು. ವಚನ್, ಅರ್ಚನಾ ಮತ್ತು ಅಕ್ಷಯ್ ಅವರು ಭಾರತವನ್ನು ಪ್ರತಿನಿಧಿಸಿದ್ದರು.

ಇದೇ ವೇಳೆ ಅರ್ಚನಾ ಶಂಕರ ನಾರಾಯಣನ್ ಅವರು ಫ್ರೀ ಡೈವಿಂಗ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸಹಾಯಕ ತೀರ್ಪುಗಾರರಾಗಿ ಸೇವೆ ಸಲ್ಲಿಸಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

‘ಫ್ರೀ ಡೈವಿಂಗ್ ಎಂದರೆ ಬಾಹ್ಯ ಉಸಿರಾಟದ ಉಪಕರಣವನ್ನು ಬಳಸದೆ ಒಂದೇ ಉಸಿರಿನಲ್ಲಿ ಡೈವಿಂಗ್ ಮಾಡುವುದು ಅಥವಾ ನೀರಿನೊಳಗೆ ಈಜುವುದಾಗಿದೆ. ಸ್ಪರ್ಧೆಗಳಲ್ಲಿ ಅಥ್ಲೀಟ್‌ಗಳು ಒಂದೇ ಉಸಿರಿನಲ್ಲಿ ಸಾಧ್ಯವಾದಷ್ಟು ಗರಿಷ್ಠ ಸಮತಲ ದೂರವನ್ನು ಕ್ರಮಿಸುವ ಗುರಿಯನ್ನು ಹೊಂದಿರುತ್ತಾರೆ. ಇದಕ್ಕೆ ಹಲವು ತಿಂಗಳ ಉಸಿರಾಟದ ತರಬೇತಿ, ದೈಹಿಕ ಸ್ಥಿತಿ ಮತ್ತು ಅಸಾಧಾರಣ ಮಾನಸಿಕ ಸದೃಢತೆ ಅಗತ್ಯ ಇರುತ್ತದೆ’ ಎಂದು ವಚನ್ ಎಚ್.ಯು. ತಿಳಿಸಿದ್ದಾರೆ.

ಮೈಸೂರು ರೇಸ್

ಗೋಲ್ಡ್ ರೈಡ್ ಗೆಲ್ಲುವ ನಿರೀಕ್ಷೆ

ಎಸ್.ವಿ.ಸುಬ್ರಮಣ್ಯಂ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗೋಲ್ಡ್ ರೈಡ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪೈಲಟ್ ಆಫೀಸರ್ 2, ಮಿಸ್ಟಿಕಲ್ ಈವ್ 7, ಏರ್ ಬೆಂಡರ್ 1
2ನೇ ರೇಸ್: ಕೆರೊಲಿನಾ ಸ್ಪ್ರಿಂಗ್ಸ್ 1, ಗಿಮ್ಮಿ 8, ಬ್ರಾಕ್‌ಸ್ಟನ್ 9
3ನೇ ರೇಸ್: ವಿಂಡ್‌ಬೋರ್ನ್ 10, ಆಬ್ಸೊಲ್ಯೂಟ್ ಕಾಂಕ್ವರರ್ 3, ಬಯೋಮೆಟ್ರಿಕ್ 4
4ನೇ ರೇಸ್: ತೆರೆಸಾ 5, ಎಲ್ಸಾ 6, ನಜೋಮಿ 2
5ನೇ ರೇಸ್: ಹಬಿಬ್ಬಿ 6, ಶೀಬಾ 1, ಅಡ್ಮಿರಲ್ ಶಾ 2
6ನೇ ರೇಸ್: ಗೋಲ್ಡ್ ರೈಡ್ 5, ಡ್ರಿಸಾನ 8, ಓಪಸ್ ಒನ್ 10
7ನೇ ರೇಸ್: ಚೀಫ್ ಅಡ್ಮಿರಲ್ 12, ವಿಶ್ವಾಸ್ 7, ಕ್ಲಿಂಪ್ಟ್ 3
8ನೇ ರೇಸ್: ಸೆಲ್ಮಾ 6, ಕ್ಲೌಡಿ ಹಿಲ್ಸ್ 2, ಒನ್ ಡೈಮಂಡ್ 1

ಉತ್ತಮ ಬೆಟ್: ಕೆರೊಲಿನಾ ಸ್ಪ್ರಿಂಗ್ಸ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
4,5,6,7,8	1,2,3	3,4,5	6,7,8

ಸಂವಿಧಾನದಲ್ಲಿ ಭಾಷೆಗಳು ನಡೆದ ಹಾದಿಯನ್ನು ದಾಖಲಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರ

‘ಸಮಾನ ಅವಕಾಶ ನೀಡಿದ ಸಂವಿಧಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠವಾದ ಸಂವಿಧಾನ ಭಾರತದ್ದಾಗಿದ್ದು, ಇದು ಎಲ್ಲಾ ಭಾಷೆ, ಧರ್ಮ ಮತ್ತು ಸಂಸ್ಕೃತಿಯ ಜನರಿಗೆ ಸಮಾನ ಅವಕಾಶಗಳನ್ನು ನೀಡಿದೆ’ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ ಶ್ಲಾಘಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಅವರು ಸಂಪಾದಿಸಿದ ‘ಸಂವಿಧಾನ ನುಡಿ ಸಂಹಿತೆ’ ಕೃತಿಯನ್ನು ಜನಾರ್ಪಣೆ ಮಾಡಿ, ಮಾತನಾಡಿದರು.

‘ಕಠಿಣ ಸಂದರ್ಭಗಳಲ್ಲಿಯೂ ದೇಶದ ಅಖಂಡತೆ ಮತ್ತು ಏಕತೆಯನ್ನು ಕಾಪಾಡಿಕೊಂಡಿರುವುದು ನಮ್ಮ ರಾಷ್ಟ್ರದ ಹೆಗ್ಗಳಿಕೆ. ಇದು ಸಾಧ್ಯವಾಗುವಲ್ಲಿ ಸಂವಿಧಾನದ ಪಾತ್ರವೇ ಪ್ರಧಾನ. ಸಂವಿಧಾನ ಒದಗಿಸಿದ ಅವಕಾಶಗಳಡಿ ಕೆಲಸ ಮಾಡುವ ಸರ್ಕಾರಿ ಅಧಿಕಾರಿಗಳು, ಸಮಾಜದಲ್ಲಿ ಮಹತ್ತರ ಬದಲಾವಣೆ ತರುವ ಸಾಮರ್ಥ್ಯ ಹೊಂದಿರುತ್ತಾರೆ. ಸಂವಿಧಾನ ನೀಡಿರುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡು, ಜನ ಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸುವ ಕೆಲಸ ಮಾಡಬೇಕು’ ಎಂದು ಹೇಳಿದರು.

ಕೃತಿಯ ಬಗ್ಗೆ ಮಾತನಾಡಿದ ಪ್ರಾಧ್ಯಾಪಕ ಎ.ನಾರಾಯಣ, ‘ಸಂವಿಧಾನ ಕೂಡ ಕಥಾ ರೂಪದಲ್ಲಿ ಜನರನ್ನು ತಲುಪಬೇಕು. ನಮ್ಮ ಸ್ವಾತಂತ್ರ್ಯ ಸಂಗ್ರಾಮ ಮತ್ತು ಸಂವಿಧಾನವನ್ನು ಇನ್ನಷ್ಟು ಮೌಲ್ಯಾಧಾರಿತವಾಗಿ ಗ್ರಹಿಸಬೇಕಾದ ಅವಶ್ಯಕತೆಯಿದೆ’ ಎಂದು ಅಭಿಪ್ರಾಯಪಟ್ಟರು.

ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ‘ಈ ಕೃತಿ ಪ್ರಾಧಿಕಾರದ ಭಾಷಾ ಪರ ಆಶಯಗಳಿಗೆ ಮಹತ್ವದ ಸೇರ್ಪಡೆ’ ಎಂದರು.

ಸಂತೋಷ ಹಾನಗಲ್ಲ, ‘ಈ ಕೃತಿಯಲ್ಲಿ ಒಂಬತ್ತು ಅಧ್ಯಾಯಗಳಿದ್ದು, ಭಾಷೆಗಳ ಕುರಿತು ಸಂವಿಧಾನ ಸಭೆಯಲ್ಲಿ ನಡೆದ ಚರ್ಚೆಗಳು, ಅಧಿಕೃತ ಭಾಷೆಗಳ ಆಯ್ಕೆ, ಭಾಷಾ ಆಯೋಗದ ಮಹತ್ವ, 1956ರ ರಾಜ್ಯಗಳ ಪುನರ್ ವಿಂಗಡಣಾ ಕಾಯ್ದೆ, ಭಾಷೆಗಳ ಕುರಿತು ಕೇಂದ್ರ ಹಾಗೂ ರಾಜ್ಯದ ಕಾಯ್ದೆಗಳ ಮಹತ್ವದ ಮಾಹಿತಿಯನ್ನೂ ಕೃತಿ ಒಳಗೊಂಡಿದೆ’ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ.ಮಂಜುನಾಥ್, ಇಲಾಖೆಯ ನಿರ್ದೇಶಕ ಬಿ.ಎಸ್. ಮಂಜುನಾಥ ಸ್ವಾಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ದಾಕ್ಷಾಯಿಣಿ ಹುಡೇದ, ಯಾಕೂಬ್ ಖಾದರ್, ರವಿಕುಮಾರ್ ನೀಹ ಹಾಗೂ ಟಿ. ತಿಮ್ಮೇಶ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂತೋಷ ಹಾನಗಲ್ಲ, ಬಿ.ಎಸ್. ಮಂಜುನಾಥ ಸ್ವಾಮಿ, ಜೆ. ಮಂಜುನಾಥ್, ಶಿವರಾಜ್ ಪಾಟೀಲ, ಪುರುಷೋತ್ತಮ ಬಿಳಿಮಲೆ ಮತ್ತು ಎ. ನಾರಾಯಣ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಮಿದುಳಿನ ಹೊರಗುತ್ತಿಗೆ!

• ಡಿ.ಎಂ.ಘನಶ್ಯಾಮ

ಇತ್ತೀಚೆಗೆ ಕೃತಕ ಬುದ್ಧಿಮತ್ತೆಯನ್ನು ಕುರಿತು ಕಾರ್ಯಾಗಾರವೊಂದಲ್ಲಿ ಭಾಗವಹಿಸಿದ್ದೆ. ಅಲ್ಲಿ ತಂತ್ರಜ್ಞ ವೈ.ಎನ್. ಮಧುಸೂದನ ಅವರ ಮಾತು ನನ್ನ ಮನಸ್ಸಿನಲ್ಲಿ ಆಳವಾಗಿ ಬೇರೂರಿತು:

'ಎಐ ಬಳಸುವಾಗ ಅತ್ಯಂತ ಎಚ್ಚರ ಅಗತ್ಯ. ಇಲ್ಲವಾದರೆ, ಅದು ನಮ್ಮ ಶೈಲಿ, ಆಲೋಚನಾ ಕ್ರಮ ಮತ್ತು ಸೃಜನಶೀಲತೆಯನ್ನು ಸಂಪೂರ್ಣವಾಗಿ ಆವರಿಸಿಕೊಂಡು ನಮ್ಮನ್ನು ಭ್ರಮಾಲೋಕಕ್ಕೆ ದೂಡುತ್ತದೆ.'

'ಎಐ' ಎಂಬ ಒಮ್ಮುಖ ಓಟದಲ್ಲಿ ನಾವು ಎದುರಿಸುತ್ತಿರುವ ಬೌದ್ಧಿಕ ದಿವಾಳಿತನದ ಅಪಾಯಗಳು ಆಗ ನಿಧಾನವಾಗಿ ತೆರೆದುಕೊಳ್ಳಲಾರಂಭಿಸಿದವು. ಮನುಷ್ಯರು ಸಂಪೂರ್ಣ ಎಐ ಅವಲಂಬಿತರಾದರೆ, ಬೌದ್ಧಿಕವಾಗಿ ಜಡವಾಗಿಬಿಡುವ ಆತಂಕ ಈಗ ಎದುರಾಗಿದೆ.

ಆಪ್ತರ ಫೋನ್ ನಂಬರ್ ನೆನಪಿದೆಯೇ?

ಕೇವಲ ಎರಡು ದಶಕಗಳ ಹಿಂದೆ ದಿನಸಿ ಅಂಗಡಿ, ಫ್ಯಾಮಿಲಿ ಡಾಕ್ಟರ್, ಸಂಬಂಧಿಕರ ದೂರವಾಣಿ ಸಂಖ್ಯೆಗಳೆಲ್ಲ ನಮ್ಮ ಮಿದುಳಿನಲ್ಲೇ ಅಚ್ಚೊತ್ತಿರುತ್ತಿದ್ದವು. ಇಂದು, ಮಿದುಳನ್ನು ಸ್ಮಾರ್ಟ್‌ಫೋನ್‌ಗೆ 'ಹೊರಗುತ್ತಿಗೆ' ನೀಡಿದ ಪರಿಣಾಮವಾಗಿ, ನಮ್ಮದೇ ಆಪ್ತರ ಸಂಖ್ಯೆಗಳೂ ಮರೆತುಹೋಗಿವೆ. ಕಚೇರಿಯ ಇಮೇಲ್, ಪ್ರಾಜೆಕ್ಟ್ ವರದಿ, ಸುದ್ದಿಮನೆಗಳ ವಿಶ್ಲೇಷಣೆ, ಅಷ್ಟೇಕೆ ವಿದ್ಯಾರ್ಥಿಗಳ ಹೋಮ್‌ವರ್ಕ್‌ಗಳಿಗೂ ಈಗ ಮಿದುಳಿನ ಬಳಕೆಯಾಗುತ್ತಿಲ್ಲ; ಸರ್ವವೂ 'ಎಐಮಯ'ವಾಗಿದೆ.

ಯಾವುದೇ ಕೆಲಸವನ್ನು ಮಾಡಲು ಮಿದುಳಿಗೆ ಪರಿಶ್ರಮ ಬೇಕಾಗುತ್ತದೆ. ಈ ಮಾನಸಿಕ ಶ್ರಮವನ್ನು ತಗ್ಗಿಸಲು ಬಾಹ್ಯ ಸಾಧನಗಳನ್ನು ಅವಲಂಬಿಸುವ ಪ್ರಕ್ರಿಯೆಯನ್ನು ಮನಶ್ಶಾಸ್ತ್ರಜ್ಞರು ಮತ್ತು ನರವಿಜ್ಞಾನಿಗಳು 'ಮಿದುಳಿನ ಹೊರಗುತ್ತಿಗೆ' (Cognitive Offloading) ಎಂದು ಕರೆಯುತ್ತಾರೆ. ತಂತ್ರಜ್ಞಾನವು ಬದುಕನ್ನು ಸುಲಲಿತಗೊಳಿಸುತ್ತದೆ ಎಂಬ ಸಂತಸವಿದ್ದರೂ, ಮತ್ತೊಂದು ನಿಟ್ಟಿನಲ್ಲಿ ಅದು ತಂದೊಡ್ಡಿರುವ ಮಾನಸಿಕ ಸವಾಲುಗಳು ಅಗಾಧವಾಗಿವೆ.

ಹೊಸ ಸವಾಲು

ನಮ್ಮ ಮಿದುಳಿನಲ್ಲಿ 'ವರ್ಕಿಂಗ್ ಮೆಮೊರಿ' ಮತ್ತು 'ಲಾಂಗ್-ಟರ್ಮ್ ಮೆಮೊರಿ' ಎಂಬ ವಿಭಾಗಗಳಿವೆ. ಮನುಷ್ಯ ಬಹುಕಾಲದಿಂದಲೂ ಮಿದುಳಿನ ಮೇಲಿನ ಒತ್ತಡ ಇಳಿಸುವ ಪ್ರಯತ್ನವನ್ನು ಮಾಡುತ್ತಲೇ ಇದ್ದಾನೆ. ಶಿಲಾಯುಗದ ಕಾಲದ ಗುಹಾಚಿತ್ರಗಳು, ಅಕ್ಷರಗಳ ಆವಿಷ್ಕಾರ ಸಹ ಇಂಥದ್ದೇ ಪ್ರಯತ್ನದ ಭಾಗ. ಅಂದರೆ ವಿಷಯ ಇಷ್ಟೇ, ಈ 'ಕಾಗ್ನಿಟಿವ್ ಆಫ್‌ಲೋಡಿಂಗ್' ಎನ್ನುವುದು ಇತ್ತೀಚಿನ ವಿದ್ಯಮಾನವಲ್ಲ. ಇದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆದರೆ, ಎಐ ಪ್ರವೇಶದ ನಂತರ ಮಿದುಳಿನ ಸ್ಮರಣೆಗೆ ಎಕ್ಸ್‌ಟರ್ನಲ್ ಹಾರ್ಡ್‌ಡಿಸ್ಕ್ ಜೋಡಿಸಿದಂತಾಗಿದೆ.

ಜನರೇಟಿವ್ ಎಐಗೆ ಮೊದಲು ಇದ್ದ-ಈಗಲೂ ಇರುವ ಕ್ಯಾಲ್ಕುಲೇಟರ್, ಜಿಪಿಎಸ್‌ನಂತಹ ಸಾಧನಗಳು ನಮ್ಮ ಆಲೋಚನಾ ಶಕ್ತಿಯನ್ನು ಕಿತ್ತುಕೊಂಡಿರಲಿಲ್ಲ. ಆದರೆ, ಎಐ ಪ್ರವೇಶವು ಮನುಷ್ಯನ 'ವಿಮರ್ಶಾತ್ಮಕ ಚಿಂತನೆ' (Critical Thinking) ಮತ್ತು ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನೇ ಹೊರಗುತ್ತಿಗೆಗೆ ನೀಡುವಂತೆ ಮಾಡಿದೆ. ಇದು ಅಪಾಯಕಾರಿ ಬೆಳವಣಿಗೆ.

ಮಾನವದೇಹದಲ್ಲಿ ಅತಿಹೆಚ್ಚು ಶಕ್ತಿಯನ್ನು ಬೇಡುವ ಅಂಗ ಮಿದುಳು. ದೇಹದ ಒಟ್ಟು ತೂಕದ ಶೇ. 2ರಷ್ಟಿರುವ ಮಿದುಳು, ಶೇ. 20ರಷ್ಟು ಶಕ್ತಿಯನ್ನು ಬಳಸಿಕೊಳ್ಳುತ್ತದೆ. ಹೀಗಾಗಿ, ಶಕ್ತಿಯನ್ನು ಉಳಿಸಲು ಅದು ಸದಾ ಸುಲಭದ ದಾರಿ ಹುಡುಕುತ್ತದೆ. 15 ನಿಮಿಷಗಳ ಕಾಲ ಓದಿ ಅರ್ಥೈಸಬೇಕಾದ ವರದಿಯನ್ನು, ಎಐ ಕೇವಲ 5 ಸೆಕೆಂಡುಗಳಲ್ಲಿ ಸಾರಾಂಶವನ್ನಾಗಿಸಿ ನೀಡಿದಾಗ, ಮಿದುಳು ಸಹಜವಾಗಿಯೇ ಎಐ ಮೊರೆಹೋಗುತ್ತದೆ.

ಕುಸಿಯುತ್ತಿರುವ ವಿಶ್ಲೇಷಣಾ ಸಾಮರ್ಥ್ಯ

ಇಂದಿನ ಯುವಜನರ ನೆನಪಿನ ಶಕ್ತಿ ಮತ್ತು ವಿಶ್ಲೇಷಣಾ ಸಾಮರ್ಥ್ಯವನ್ನು ಹಿಂದಿನ ತಲೆಮಾರಿಗೆ ಹೋಲಿಸಿದರೆ 'ಹೊರಗುತ್ತಿಗೆ'ಯ ದುಷ್ಪರಿಣಾಮಗಳು ಅರಿವಿಗೆ ಬರುತ್ತವೆ. ಇಂಟರ್ನೆಟ್ ಸಂಪರ್ಕ ಕಡಿತಗೊಂಡರೆ ಅಕ್ಷರಶಃ ಕಂಗಾಲಾಗುತ್ತಾರೆ. ಪದಸಂಪತ್ತು ಮತ್ತು ಸ್ವಂತ ವಾಕ್ಯರಚನೆಯ ಸಾಮರ್ಥ್ಯ ಕ್ಷೀಣಿಸುತ್ತಿದೆ. ಭಾವನೆಗಳಿದ್ದರೂ ವ್ಯಕ್ತಪಡಿಸಲು ಭಾಷೆಯ ಕೊರತೆ ಕಾಡುತ್ತಿದೆ. ಎಐ ನೀಡುವ ಉತ್ತರಗಳನ್ನೇ ತಮ್ಮ ಜ್ಞಾನವೆಂದು ಭ್ರಮಿಸುವ 'Illusion of competence' ಅವರನ್ನು ಆವರಿಸಿದೆ. ಗೂಗಲ್ ಮ್ಯಾಪ್ ಮೇಲಿನ ಅತಿಯಾದ ಅವಲಂಬನೆಯಿಂದಾಗಿ, ರಸ್ತೆಗಳನ್ನು ಗುರುತಿಟ್ಟುಕೊಳ್ಳುವ, ಸಮಾಜವನ್ನು ಗಮನಿಸುವ ಶಕ್ತಿಯನ್ನು ಮಿದುಳು ಕಳೆದುಕೊಳ್ಳುತ್ತಿದೆ.

ಇದಕ್ಕೇನು ಪರಿಹಾರ?

ಸಮಸ್ಯೆ ಸೃಷ್ಟಿಸಿಕೊಂಡ ಮನುಷ್ಯನಿಗೆ ಪರಿಹಾರವೂ ತಿಳಿದಿರುತ್ತದೆ. ಅಜೀರ್ಣವಾದಾಗ ಉಪವಾಸ ಮಾಡುವಂತೆ, ಎಐ ಬಳಕೆಯಿಂದ ಕ್ಷೀಣಿಸುತ್ತಿರುವ ಮಿದುಳಿಗೆ 'ಡಿಜಿಟಲ್ ಉಪವಾಸ'ದ ಅಗತ್ಯವಿದೆ. ಮಿದುಳು ಕಲಿಯುವುದೇ ನಿರಂತರ ಕಸರತ್ತಿನಿಂದ. ಯಾವುದೇ ಮಾಹಿತಿ ಅಥವಾ ಪದ ಹೊಳೆಯದಿದ್ದಾಗ ತಕ್ಷಣ ಎಐ ಮೊರೆಹೋಗುವ ಬದಲು, ಕನಿಷ್ಠ 10 ಸೆಕೆಂಡುಗಳ ಕಾಲ ಸ್ವತಃ ಯೋಚಿಸುವ ಅಭ್ಯಾಸ ರೂಢಿಸಿಕೊಳ್ಳಿ. ಆಧುನಿಕ ಬದುಕಿನಲ್ಲಿ ತಂತ್ರಜ್ಞಾನ ನಮ್ಮ ಶತ್ರುವಲ್ಲ; ಅವುಗಳಿಂದ ದೂರ ಓಡಬೇಕಾದ ಅಗತ್ಯವೂ ಇಲ್ಲ. ಆದರೆ, ಅವುಗಳ ಮೇಲಿನ ಅಂಧ ಅವಲಂಬನೆಯಷ್ಟೇ ಅಪಾಯಕಾರಿ. ❖



ನಾಲಿಗೆ ಮೇಲಿನ ಪತ್ತೆದಾರರು!

• ಎಸ್.ಎನ್.ಹೆಗಡೆ

'ಕಣ್ಣು ಮುಚ್ಚಿ ಬಾಯಿ ತೆರೆ' ಎಂದು ಯಾರಾದರೂ ನಿಮಗೆ ಹೇಳಿದರು ಎಂದುಕೊಳ್ಳಿ; ನೀವು ಅಂತೆಯೇ ಕಣ್ಣು ಮುಚ್ಚಿ ಬಾಯಿ ತೆರೆಯುತ್ತೀರಿ. ಅವರು ನಿಮ್ಮ ನಾಲಿಗೆಯ ಮೇಲೆ ಸಿಹಿವಸ್ತುವೊಂದನ್ನು ಇಡುತ್ತಾರೆ. ಆ ವಸ್ತುವನ್ನು ನೀವು ನೋಡಿರದಿದ್ದರೂ, ಅದನ್ನು ಗುರುತಿಸಬಲ್ಲಿರಿ! ಅವರು ನಿಮ್ಮ ನಾಲಿಗೆಯ ಮೇಲೆ ಇಟ್ಟ ಸಿಹಿ ಯಾವುದು ಎಂದು ಸುಲಭವಾಗಿ ನಿಮಗೆ ತಿಳಿಯುತ್ತದೆ. ಕಣ್ಣು ಮುಚ್ಚಿಕೊಂಡಿದ್ದರೂ, ನಾಲಿಗೆಗೆ ಸಿಹಿ ತಗುಲಿದಾಕ್ಷಣ ಇದು ಸಕ್ಕರೆ, ಇದು ಮಾವಿನಹಣ್ಣು, ಇದು ಕಿತ್ತಳೆ, ಇದು ಪಾಯಸ – ಹೀಗೆ ವಿವಿಧ ಮೂಲದ ಸಿಹಿಯನ್ನು ನೀವು ಗುರುತಿಸುತ್ತೀರಿ! ನಾಲಿಗೆಗೆ ಪ್ರತ್ಯೇಕವಾದ ಕಣ್ಣಂತೂ ಇಲ್ಲ. ಆದರೂ ಇಷ್ಟು ಖಚಿತವಾಗಿ ನಾಲಿಗೆ ಈ ವಸ್ತುಗಳನ್ನು ಹೇಗೆ ಪತ್ತೆ ಹಚ್ಚುತ್ತದೆ?

ಆಂಗಿಕ ಅಧ್ಯಯನಗಳ ಆಧಾರದ ಮೇಲೆ ಇಪ್ಪತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ನಾಲಿಗೆಯ ವಿವಿಧ ಭಾಗಗಳಲ್ಲಿ ಹರಡಿರುವ ವಿವಿಧ ರುಚಿಮೊಗ್ಗುಗಳು (ಟೇಸ್ಟ್ ಬಡ್ಸ್) ಸಿಹಿಯನ್ನು ಸೇರಿದಂತೆ ವಿವಿಧ ವಸ್ತುಗಳ ರುಚಿಯನ್ನು ಕಂಡುಹಿಡಿಯಬಲ್ಲವು ಎಂದು ಕಂಡುಹಿಡಿಯಲಾಗಿತ್ತು. ಕಳೆದ ಎರಡು ದಶಕಗಳ ಸಂಶೋಧನೆಗಳ ಮೂಲಕ ವಿಜ್ಞಾನಿಗಳು ಆಣ್ವಿಕ ಮಟ್ಟದ ಸಂಶೋಧನೆಗಳ ಮೂಲಕ ರುಚಿಯನ್ನು ಪತ್ತೆ ಹಚ್ಚುವ ಕೆಲವು ರುಚಿಗ್ರಾಹಕಗಳನ್ನು ಕಂಡು ಹಿಡಿದಿದ್ದಾರೆ! ರುಚಿಗ್ರಹಣಶಕ್ತಿ ಒಂದು ಸಂಕೀರ್ಣ ಕ್ರಿಯೆ ಎಂದು ಈ ಅಧ್ಯಯನಗಳು ತಿಳಿಸುತ್ತಿವೆ.

ನಾವು ಸೇವಿಸುವ ಸಿಹಿ, ರಾಸಾಯನಿಕವಾಗಿ ಶರ್ಕರಗಳು ಅಥವಾ ಕಾರ್ಬೋಹೈಡ್ರೇಟ್‌ಗಳು. ಶರ್ಕರಗಳಲ್ಲಿ ಇಂಗಾಲ, ಜಲಜನಕ ಮತ್ತು ಆಮ್ಲಜನಕಗಳು 1:2:1 ಪ್ರಮಾಣದಲ್ಲಿದ್ದು, ಈ ಅಣುಗಳು ಉಂಗುರಾಕಾರದಲ್ಲಿ ಒಂದಕ್ಕೊಂದು ಸೇರಿಕೊಂಡಿರುತ್ತವೆ. ಯಾವುದೇ ಶರ್ಕರವನ್ನು ಅದರಲ್ಲಿರುವ ಉಂಗುರಗಳ ಸಂಖ್ಯೆ ಮತ್ತು ರಚನೆಗಳನ್ನು ಆಧರಿಸಿ ವರ್ಗೀಕರಿಸಲಾಗುತ್ತದೆ. ಶರ್ಕರಗಳು ಶಕ್ತಿಯ ಆಗರಗಳು. ಅವು ಜೀರ್ಣವಾಗಿ ಕೋಶಗತವಾದಾಗ ಜೀವಕೋಶಗಳಲ್ಲಿ ಶಕ್ತಿ ಉತ್ಪಾದನೆಯಾಗುತ್ತದೆ. ಶರೀರದ ಎಲ್ಲ ಕ್ರಿಯೆಗಳಿಗೆ ಈ ಶಕ್ತಿ ಅಗತ್ಯ.

ನಾವು ತಿನ್ನುವ ಸಕ್ಕರೆ ರಾಸಾಯನಿಕವಾಗಿ 'ಸುಕ್ರೋಸ್' ಎಂಬ ಶರ್ಕರ. ಗ್ಲುಕೋಸ್, ಫ್ರುಕ್ಟೋಸ್, ಮಾಲ್ಟೋಸ್, ಲ್ಯಾಕ್ಟೋಸ್, ಗ್ಯಾಲಕ್ಟೋಸ್ ಮುಂತಾದವು ಕೂಡ ವಿವಿಧ ಶರ್ಕರಗಳು. ಅವೂ ನಮಗೆ ಶಕ್ತಿಯನ್ನು ನೀಡುತ್ತವೆ. ವಿವಿಧ ಸಿಹಿವಸ್ತುಗಳಲ್ಲಿ ವಿವಿಧ ಶರ್ಕರಗಳು ಭಿನ್ನ ಪ್ರಮಾಣದಲ್ಲಿ ಸೇರಿರುತ್ತವೆ. ಸಿಹಿಪದಾರ್ಥಗಳಲ್ಲಿ ಇರುವ ಶರ್ಕರ ಹಾಗೂ ಅವುಗಳ ಪ್ರಮಾಣವನ್ನು ಅವಲಂಬಿಸಿ ಸಿಹಿಯ ಸ್ವಾದ ಬದಲಾಗುತ್ತದೆ.

ಸಿಹಿಕಾರಕಗಳ ಸಿಹಿಯ ಪ್ರಮಾಣದಲ್ಲಿಯೂ ವ್ಯತ್ಯಾಸಗಳಿರುತ್ತವೆ. ಉದಾಹರಣೆಗೆ, ಮೂಲ ಶರ್ಕರ ಅಣು ಎಂದು ಪರಿಗಣಿಸಲಾಗುವ ಗ್ಲೂಕೋಸ್ ಸಾಮಾನ್ಯ ಸಕ್ಕರೆ ಅಥವಾ ಸುಕ್ರೋಸ್‌ಗಿಂತ ಕಡಿಮೆ ಸಿಹಿ ಇರುತ್ತದೆ. ಜೇನುತುಪ್ಪದಲ್ಲಿರುವ ಫ್ರಕ್ಟೋಸ್ ಸುಕ್ರೋಸ್‌ಗಿಂತ ಹೆಚ್ಚು ಸಿಹಿ. ಸ್ಟಾರ್ಚ್, ಸೆಲ್ಯುಲೋಸ್ ಮುಂತಾದವು ಶರ್ಕರಗಳೇ ಆದರೂ ಅವು ಸಕ್ಕರೆಯಷ್ಟು ಸಿಹಿಯಾಗಿರುವುದಿಲ್ಲ. ಇವೆಲ್ಲವೂ ನೈಸರ್ಗಿಕ ಸಿಹಿಕಾರಕಗಳು. ನೈಸರ್ಗಿಕ ಸಿಹಿಕಾರಕಗಳಲ್ಲದೆ ಕೆಲವು ಕೃತಕ ಸಿಹಿಕಾರಕಗಳೂ ಇವೆ. ಸ್ಯಾಕ್ರರಿನ್, ಸುಕ್ರಲೋಸ್ ಮತ್ತು ಆಸ್ಪರ್ಟೇಮ್ ಮುಂತಾದವು ಶರ್ಕರಗಳಲ್ಲದಿದ್ದರೂ ಸಿಹಿರುಚಿಯನ್ನು ನೀಡುತ್ತವೆ. ಇವು ಸುಕ್ರೋಸ್‌ಗಿಂತ ಅಧಿಕ ಸಿಹಿಯನ್ನು ನೀಡುತ್ತವೆ.

ರುಚಿಗ್ರಹಣದ ಮುಖ್ಯಭಾಗ ನಾಲಿಗೆಯ ವಿವಿಧ ಭಾಗಗಳಲ್ಲಿ ಹರಡಿರುವ ರುಚಿಮೊಗ್ಗುಗಳು. 20ನೆಯ ಶತಮಾನದ ಅಂತ್ಯದವರೆಗೂ ನಾಲಿಗೆ ಮಾತ್ರ ಸಿಹಿಯನ್ನು ಗುರುತಿಸಬಲ್ಲದು ಎಂದು ಭಾವಿಸಲಾಗಿತ್ತು. ಕಳೆದ ಎರಡು ದಶಕಗಳ ಸಂಶೋಧನೆಗಳು, ಬಾಯಿ ಅಥವಾ ನಾಲಿಗೆಯಷ್ಟೇ ಅಲ್ಲದೆ ಜಠರ, ಕರುಳು, ಮೇದೋಜೀರಕ ಗ್ರಂಥಿ, ಶ್ವಾಸನಾಳಗಳಲ್ಲಿಯೂ ರುಚಿಮೊಗ್ಗುಗಳಿರುತ್ತವೆ ಎಂದು ತಿಳಿಸಿವೆ.

ರುಚಿಮೊಗ್ಗುಗಳಲ್ಲಿ ರುಚಿಗ್ರಹಿಕೆಯು ವಿಶೇಷ ರುಚಿಗ್ರಾಹಕ ಕೋಶಗಳು, ಗ್ರಾಹಕ ಪ್ರೋಟೀನ್‌ಗಳು, ಜೀವಕೋಶಗಳ ಒಳಗೆ ವಿಶಿಷ್ಟ ಸಂಕೇತ ವಾಹಕಮಾರ್ಗಗಳು, ನರತುದಿಗಳನ್ನು ಇರುತ್ತವೆ. ಸಿಹಿಯನ್ನು ಗ್ರಹಿಸುವ ಸಾಮರ್ಥ್ಯ ಈ ಎಲ್ಲ ಭಾಗಗಳು, ನರ ಹಾಗೂ ಮಿದುಳಿನ ವಿಶ್ಲೇಷಣಾ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಈ ಮಾರ್ಗದಲ್ಲಿ ನಡೆಯುವ ಸಂಕೀರ್ಣ ಆಣ್ವಿಕ ಕ್ರಿಯೆಗಳಿಂದಾಗಿ ನಾವು ಸಿಹಿಯನ್ನು ಗುರುತಿಸಿ ಅದನ್ನು ಸ್ಮರಣೆಯಲ್ಲಿಟ್ಟುಕೊಳ್ಳುತ್ತೇವೆ.

ಪ್ರತಿಯೊಂದು ರುಚಿಮೊಗ್ಗಿನಲ್ಲಿ ರುಚಿಗ್ರಾಹಕ ಜೀವಕೋಶಗಳಿರುತ್ತವೆ. ಈ ಜೀವಕೋಶಗಳ ಕೋಶಪೊರೆಯಲ್ಲಿ ರುಚಿಗ್ರಾಹಕಗಳಿರುತ್ತವೆ. ರುಚಿಗ್ರಾಹಕಗಳು ಪ್ರೋಟೀನ್‌ಗಳು. ಅವು ಆನುವಂಶೀಯವಾಗಿದ್ದು, ವ್ಯಕ್ತಿಯ ಡಿಎನ್‌ಎಯ (ಜೀನ್‌ನ) ನಿರ್ದೇಶನದ ಮುಖಾಂತರ ಸಂಶ್ಲೇಷಣೆಗೊಳ್ಳುತ್ತವೆ. ಮುಖ್ಯವಾಗಿ 'ಟಿ' ಮತ್ತು 'ಆರ್' ಎಂಬ ಎರಡು ಮುಖ್ಯ ಜೀನ್‌ಗಳಿದ್ದು, ಪ್ರತಿಯೊಂದರಲ್ಲಿ ಕನಿಷ್ಠ ಮೂರು ವಿಧಗಳಿವೆ. ಅವುಗಳನ್ನು ಟಿ1ಆರ್1, ಟಿ1ಆರ್2, ಮುಂತಾದ ಸಂಯೋಜನೆಯಲ್ಲಿ ಗುರುತಿಸಲಾಗುತ್ತದೆ. ಪ್ರತಿಯೊಂದು ಸಂಯೋಜನೆಯು ಕೂಡ ಒಂದೊಂದು ಬಗೆಯ ರುಚಿಯನ್ನು ಗುರುತಿಸುತ್ತದೆ. ಟಿ1ಆರ್2 + ಟಿ1ಆರ್3 ಸಂಯೋಜನೆಯು ಸಿಹಿಯನ್ನು ಗುರುತಿಸಲು ಮೀಸಲಾದ ಗ್ರಾಹಕ ಪ್ರೋಟೀನ್. ಈ ಪ್ರೋಟೀನ್‌ನ ರಚನೆ ಹಾಗೂ ರುಚಿಕಾರಕಗಳ ನಡುವಿನ ಸಂವಹನದ ಮೂಲಕ ಶರೀರವು ರುಚಿಯನ್ನು ಗ್ರಹಿಸುತ್ತದೆ.

ನಾಲಿಗೆಯ ಮೇಲೆ ಸಿಹಿಯನ್ನು ಹಾಕಿದಾಗ ಉತ್ಪನ್ನವಾಗುವ ಲಾಲಾರಸದಲ್ಲಿ ಶರ್ಕರ ಕರಗುತ್ತದೆ. ಆಗ ಅದು ರುಚಿಕೋಶಗಳ ಸಂಪರ್ಕಕ್ಕೆ ಬರುತ್ತದೆ. ಕೋಶಗಳ ಹೊರಮೈಯಲ್ಲಿರುವ ಟಿ1ಆರ್2 + ಟಿ1ಆರ್3 ರುಚಿಗ್ರಾಹಕಗಳು ಹಾಗೂ ಸಿಹಿಕಣಗಳ ನಡುವೆ ಬೀಗ ಮತ್ತು ಕೀಲಿಯಂತೆ ಸಂಪರ್ಕವೇರ್ಪಡುತ್ತದೆ. ನಿರ್ದಿಷ್ಟ ಸಿಹಿಕಣ ನಿರ್ದಿಷ್ಟ ಗ್ರಾಹಕದೊಂದಿಗೆ ಮಾತ್ರ ಸಂಯೋಗ ಹೊಂದಬಲ್ಲದು. ಈ ಸಂಯೋಗದಿಂದ ಜೀವಕೋಶದಲ್ಲಿ ಸರಪಣಿಯೋಪಾದಿಯಲ್ಲಿ ಒಂದರ ನಂತರ ಇನ್ನೊಂದರಂತೆ ಆಣ್ವಿಕ ಮಾರ್ಪಾಡು ಉಂಟಾಗುತ್ತದೆ. ಜೀವಕೋಶಗಳನ್ನು ನರಗಳೊಂದಿಗೆ ಜೋಡಿಸುವ ನರತಂತುಗಳು ಈ ಬದಲಾವಣೆಯನ್ನು ಗುರುತಿಸುತ್ತವೆ. ಈಗ ಸಿಹಿ–ಸಂವೇದನೆ ವಿದ್ಯುತ್ ಆವೇಗದಂತೆ ಬದಲಾಗಿ, ನರತಂತುಗಳ ಮೂಲಕ ಮಿದುಳನ್ನು ತಲುಪುತ್ತದೆ. ಮಿದುಳು ಸಿಹಿಯನ್ನು ಗುರುತಿಸುತ್ತದೆ. ಇಷ್ಟೆಲ್ಲ ಕ್ರಿಯೆಗಳು ಕ್ಷಣಮಾತ್ರದಲ್ಲಿ ನಡೆಯುವುದರಿಂದ ಸಿಹಿ ನಾಲಿಗೆಯ ಮೇಲೆ ಬಿದ್ದ ತಕ್ಷಣ ನಮಗೆ ಸಿಹಿಯ ಅನುಭವವಾಗುತ್ತದೆ.

ನವಜಾತ ಶಿಶುಗಳು ಸಹ ಸಿಹಿಯನ್ನು ಗುರುತಿಸಬಲ್ಲವು. ಮಗು ಬೆಳೆಯುತ್ತಿದ್ದಂತೆ ವಿವಿಧ ಸಿಹಿವಸ್ತುಗಳನ್ನು ಗುರುತಿಸುವ ಸಾಮರ್ಥ್ಯ ಹೆಚ್ಚುತ್ತದೆ. ಸಿಹಿಯು ಮಿದುಳಿನಲ್ಲಿ ಸಿಹಿಗ್ರಾಹಕ ಕೇಂದ್ರಗಳನ್ನು ಸಕ್ರಿಯಗೊಳಿಸುವುದರ ಮೂಲಕ ಆಹ್ಲಾದಕರ ಭಾವನೆಗಳನ್ನು ಉಂಟುಮಾಡುತ್ತದೆ. ಸಿಹಿಗ್ರಾಹಕಗಳ ಸಂಶ್ಲೇಷಣೆ ಜೀನ್‌ಗಳನ್ನು ಅವಲಂಬಿಸಿರುವುದರಿಂದ ಸಿಹಿಯ ಅಪೇಕ್ಷೆಯು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಾಗುತ್ತದೆ. ಹೀಗಾಗಿ ಕೆಲವರಿಗೆ ಸಿಹಿ ಬಹಳ ಇಷ್ಟ, ಕೆಲವರು ಹೆಚ್ಚು ಸಿಹಿಯನ್ನು ಇಷ್ಟಪಡುವುದಿಲ್ಲ.

ಕ್ರಯೋ-ಎಲೆಕ್ಟ್ರಾನ್ ಸೂಕ್ಷ್ಮದರ್ಶಕವನ್ನು ಬಳಸಿಕೊಂಡು ವಿಜ್ಞಾನಿಗಳು ಈಗ ಈ ಗ್ರಾಹಕಗಳ ನಿಖರವಾದ ರಚನೆಯನ್ನು ಅಧ್ಯಯನ ಮಾಡುತ್ತಿದ್ದಾರೆ. ಈ ಅಧ್ಯಯನಗಳು ಸಿಹಿ ಅಣುಗಳು ಆಣ್ವಿಕ ಮಟ್ಟದಲ್ಲಿ ಗ್ರಾಹಕಗಳೊಂದಿಗೆ ಹೇಗೆ ಸಂವಹನ ನಡೆಸುತ್ತವೆ ಎಂಬುದನ್ನು ಗಮನಿಸಲು ಅನುವು ಮಾಡಿಕೊಡುತ್ತದೆ. ಇಂತಹ ಅಧ್ಯಯನಗಳಿಂದ ಭವಿಷ್ಯದಲ್ಲಿ ಆರೋಗ್ಯಕರ ಮತ್ತು ಸುರಕ್ಷಿತ ಬದಲಿ ಸಕ್ಕರೆಗಳನ್ನು ಕಂಡುಹಿಡಿಯಲು ಸಾಧ್ಯವಾಗಬಹುದು ಹಾಗೂ ಸಕ್ಕರೆ ಆಧಾರಿತ ಕಾಯಿಲೆಗಳ ನಿಯಂತ್ರಣವನ್ನೂ ಕಂಡುಹಿಡಿಯಬಹುದು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

10) ಯಾವುದಕ್ಕೆ ತಟಸ್ಥೀಕರಣ ಕ್ರಿಯೆ ಎನ್ನುವರು?

ಉತ್ತರ:– ಆಮ್ಲ ಮತ್ತು ಪ್ರತ್ಯಾಮ್ಲಗಳ ನಡುವಿನ ಕ್ರಿಯೆಯಿಂದ ಲವಣ ಮತ್ತು ನೀರು ಉಂಟಾಗುವುದನ್ನು ತಟಸ್ಥೀಕರಣ ಕ್ರಿಯೆ ಎನ್ನುವರು.

11) ಲೋಹೀಯ ಆಕ್ಸೈಡ್‌ಗಳನ್ನು ಪ್ರತ್ಯಾಮ್ಲೀಯ ಆಕ್ಸೈಡ್‌ಗಳು ಎನ್ನುವರು, ಏಕೆ.?

ಉತ್ತರ:– ಲೋಹೀಯ ಆಕ್ಸೈಡ್‌ಗಳು ಆಮ್ಲಗಳೊಂದಿಗೆ ವರ್ತಿಸಿ ಲವಣ ಮತ್ತು ನೀರನ್ನು ಉಂಟುಮಾಡುತ್ತವೆ. ಇದು ಪ್ರತ್ಯಾಮ್ಲದೊಂದಿಗೆ ಆಮ್ಲದ ಕ್ರಿಯೆಯಂತೆಯೇ ಇರುವುದರಿಂದ, ಲೋಹೀಯ ಆಕ್ಸೈಡ್‌ಗಳನ್ನು ಪ್ರತ್ಯಾಮ್ಲೀಯ ಆಕ್ಸೈಡ್‌ಗಳು ಎನ್ನುವರು.

12) ಅಲೋಹದ ಆಕ್ಸೈಡ್‌ಗಳು ಆಮ್ಲೀಯ ಗುಣ ಹೊಂದಿವೆ ಎಂದು ನಾವು ಹೇಗೆ ನಿರ್ಣಯಿಸಬಹುದು.?

ಉತ್ತರ:– ಕಾರ್ಬನ್ ಡೈಆಕ್ಸೈಡ್ ಮತ್ತು ಕ್ಯಾಲ್ಸಿಯಂ ಹೈಡ್ರಾಕ್ಸೈಡ್(ಸುಣ್ಣದ ತಿಳಿನೀರು)ಗಳ ನಡುವಣ ಕ್ರಿಯೆಯನ್ನು ನೋಡಿದ್ದಾಗ ಪ್ರತ್ಯಾಮ್ಲವಾದ ಕ್ಯಾಲ್ಸಿಯಂ ಹೈಡ್ರಾಕ್ಸೈಡ್, ಕಾರ್ಬನ್ ಡೈಆಕ್ಸೈಡ್‌ನೊಂದಿಗೆ ವರ್ತಿಸಿ ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುತ್ತದೆ. ಇದು ಪ್ರತ್ಯಾಮ್ಲ ಮತ್ತು ಆಮ್ಲಗಳ ನಡುವಿನ ಕ್ರಿಯೆಯಂತೆಯೇ ಇರುವುದರಿಂದ, ಅಲೋಹದ ಆಕ್ಸೈಡ್‌ಗಳು ಆಮ್ಲೀಯ ಗುಣ ಹೊಂದಿವೆ ಎಂದು ನಾವು ನಿರ್ಣಯಿಸಬಹುದು.

13) ಕ್ಷಾರದ ಬಗ್ಗೆ ಬರೆಯಿರಿ

ಉತ್ತರ:– ಕ್ಷಾರವು ನೀರಿನಲ್ಲಿ ವಿಲೀನವಾಗುವ ಒಂದು ಪ್ರತ್ಯಾಮ್ಲ. ಅವು ಮುಟ್ಟಲು ಸಾಬೂನಿನಂತಿದ್ದು, ಕಹಿ ರುಚಿ ಮತ್ತು ಸಂಕ್ಷಾರಕ ಗುಣ ಹೊಂದಿವೆ. ಅವು ಹಾನಿಯನ್ನು ಉಂಟುಮಾಡಬಹುದಾದ್ದರಿಂದ ಅವುಗಳನ್ನು ಮುಟ್ಟುವುದಾಗಲೀ ಅಥವಾ ರುಚಿ ನೋಡುವುದಾಗಲೀ ಮಾಡಬಾರದು.

14) ಯಾವ ಪ್ರಕ್ರಿಯೆಯು ತೀವ್ರ ಬಹಿರುಷ್ಣಕವಾಗಿದೆ?

ಉತ್ತರ:– ಆಮ್ಲ ಮತ್ತು ಪ್ರತ್ಯಾಮ್ಲವನ್ನು ನೀರಿನಲ್ಲಿ ವಿಲೀನಗೊಳಿಸುವ ಪ್ರಕ್ರಿಯೆಯು ತೀವ್ರ ಬಹಿರುಷ್ಣಕವಾಗಿದೆ.

15) ಯಾವ ಪ್ರಕ್ರಿಯೆಯನ್ನು ಸಾರರಿಕ್ತಗೊಳಿಸುವಿಕೆ ಎಂದು ಕರೆಯುತ್ತಾರೆ?

ಉತ್ತರ:– ಆಮ್ಲ ಅಥವಾ ಪ್ರತ್ಯಾಮ್ಲವನ್ನು ನೀರಿನೊಂದಿಗೆ ಮಿಶ್ರಣ ಮಾಡಿದಾಗ ಏಕಮಾನ ಗಾತ್ರದಲ್ಲಿರುವ ಅಯಾನು (H_3O^+/OH^-)ಗಳ ಸಾರತೆಯು ಕಡಿಮೆಯಾಗುತ್ತದೆ ಈ ಪ್ರಕ್ರಿಯೆಯನ್ನು ಸಾರರಿಕ್ತಗೊಳಿಸುವಿಕೆ ಎಂದು ಕರೆಯುತ್ತಾರೆ ಮತ್ತು ಇವುಗಳನ್ನು ಸಾರರಿಕ್ತ ಆಮ್ಲ ಅಥವಾ ಸಾರರಿಕ್ತ ಪ್ರತ್ಯಾಮ್ಲ ಎನ್ನುತ್ತಾರೆ.

16) ಆಮ್ಲವನ್ನು ಸಾರರಿಕ್ತಗೊಳಿಸುವಾಗ, ಆಮ್ಲವನ್ನೇ ನೀರಿಗೆ ಸೇರಿಸಬೇಕೆಂದೂ ಮತ್ತು ಆಮ್ಲಕ್ಕೆ ನೀರನ್ನು ಸೇರಿಸಬಾರದೆಂದು ಶಿಫಾರಸು ಮಾಡುವುದೇಕೆ?

ಉತ್ತರ:– ನೀರನ್ನು ಸಾರೀಕೃತ ಆಮ್ಲಕ್ಕೆ ಸೇರಿಸಿದರೆ ಉತ್ಪತ್ತಿಯಾಗುವ ಉಷ್ಣವು ಮಿಶ್ರಣ ಹೊರಸಿಡಿಯುವಂತೆ ಮಾಡಬಹುದು ಮತ್ತು ಸುಟ್ಟ ಗಾಯಗಳು ಉಂಟಾಗಬಹುದು. ಅತಿಯಾದ ಬಿಸಿಯಾಗುವಿಕೆಯಿಂದ ಗಾಜಿನ ಸಂಗ್ರಾಹಕವೂ ಒಡೆಯಬಹುದು.

17) pH ಮಾನದ ಬಗ್ಗೆ ಬರೆಯಿರಿ

ಉತ್ತರ:– ದ್ರಾವಣದಲ್ಲಿನ ಹೈಡ್ರೋಜನ್ ಅಯಾನುಗಳ ಸಾರತೆಯನ್ನು ಅಳೆಯಲು pH ಮಾನ ಎಂಬ ಅಳತೆಯನ್ನು ಅಭಿವೃದ್ಧಿಪಡಿಸಲಾಗಿದೆ. pHನಲ್ಲಿರುವ p ಜರ್ಮನ್ ಭಾಷೆಯ 'potenz' ಎಂಬ ಪದವಾಗಿದ್ದು 'ಸಾಮರ್ಥ್ಯ' ಎಂಬ ಅರ್ಥ ಹೊಂದಿದೆ. pH ಅಳತೆಪಟ್ಟಿಯಲ್ಲಿ ನಾವು ಸಾಮಾನ್ಯವಾಗಿ 0 (ತೀವ್ರ ಆಮ್ಲೀಯ) ದಿಂದ 14 (ತೀವ್ರ ಕ್ಷಾರೀಯ)ರವರೆಗೆ ಅಳೆಯಬಹುದು. pH ಅನ್ನು ಸರಳವಾಗಿ ದ್ರಾವಣದ ಆಮ್ಲೀಯ ಅಥವಾ ಪ್ರತ್ಯಾಮ್ಲೀಯ ಸ್ವಭಾವವನ್ನು ಸೂಚಿಸುವ ಸಂಖ್ಯೆಯಾಗಿ ಭಾವಿಸಬೇಕು.

ಹೈಡ್ರೋನಿಯಂ ಅಯಾನುಗಳ ಸಾರತೆ ಹೆಚ್ಚಿದ್ದಷ್ಟೂ pH ಮೌಲ್ಯ ಕಡಿಮೆ ಇರುತ್ತದೆ.

ತಟಸ್ಥ ದ್ರಾವಣದ pH ಮೌಲ್ಯ 7. pH ಅಳತೆಯಲ್ಲಿ 7ಕ್ಕಿಂತ ಕಡಿಮೆ ಬೆಲೆ ಆಮ್ಲೀಯ ದ್ರಾವಣವನ್ನು ಪ್ರತಿನಿಧಿಸುತ್ತದೆ.

pH ಮೌಲ್ಯ 7 ರಿಂದ 14ರೆಡೆಗೆ ಹೆಚ್ಚಾದಂತೆ, ಇದು ದ್ರಾವಣದಲ್ಲಿನ OH– ಅಯಾನುಗಳ ಸಾರತೆ ಹೆಚ್ಚುವುದನ್ನು ಸೂಚಿಸುತ್ತದೆ. ಅಂದರೆ ಕ್ಷಾರದ ಶಕ್ತಿ ಹೆಚ್ಚುತ್ತದೆ

ಸಾಮಾನ್ಯವಾಗಿ ಸಾರ್ವತ್ರಿಕ ಸೂಚಕದಿಂದ ಮಾಡಲ್ಪಟ್ಟ ಕಾಗದವನ್ನು pH ಅಳೆಯಲು ಬಳಸುತ್ತಾರೆ.



18) ನಮ್ಮ ದೇಹವು ಯಾವ pH ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ?

ಉತ್ತರ:– ನಮ್ಮ ದೇಹವು 7.0 ಯಿಂದ 7.8 pH ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ

19) ಮಳೆ ನೀರಿನ pH ಮೌಲ್ಯ ....ಕ್ಕಿಂತ ಕಡಿಮೆಯಾದಾಗ ಅದನ್ನು ಆಮ್ಲಮಳೆ ಎನ್ನುತ್ತಾರೆ.

ಉತ್ತರ:– 5.6

20) ಆಮ್ಲಮಳೆಯು ನದಿಗೆ ಹರಿದಾಗ ಏನಾಗುತ್ತದೆ?

ಉತ್ತರ:– **ಆಮ್ಲಮಳೆಯು ನದಿಗೆ ಹರಿದಾಗ** ಇದು ನದಿಯ ನೀರಿನ **pH**ಅನ್ನು ಕಡಿಮೆ ಮಾಡುತ್ತದೆ. ಇಂತಹ ನದಿಗಳಲ್ಲಿ ಜಲಚರಗಳ ಉಳಿವು ದುಸ್ತರವಾಗುತ್ತದೆ.

21) ನಮ್ಮ ಜಠರವು ಯಾವ ಆಮ್ಲ ಉತ್ಪಾದಿಸುತ್ತದೆ?

ಉತ್ತರ:– ನಮ್ಮ ಜಠರವು ಹೈಡ್ರೋಕ್ಲೋರಿಕ್ ಆಮ್ಲ ಉತ್ಪಾದಿಸುತ್ತದೆ

22) ಸಾಮಾನ್ಯವಾಗಿ ಜನರು ಯಾವಾಗ ಆಮ್ಲಶಾಮಕ (antacid) ಎಂದು ಕರೆಯಲ್ಪಡುವ ಪ್ರತ್ಯಾಮ್ಲಗಳನ್ನು ಬಳಸುತ್ತಾರೆ?

ಉತ್ತರ:– (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ — CHEMISTRY

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ELECTROCHEMISTRY

25. Write a brief note on Sacrificial Protection method of preventing corrosion.

Ans:- (...........Contd)

eaction. Atoms of zinc will be oxidized in preference to the iron atoms. Sometimes surface of iron is coated with tin metal or any other coating like copper, and this process is known as tinning or tin plating. It may be noted that tin is not as effective as zinc since it lies above iron in the electrochemical series as it is evident from its E° value.

$$Sn^{2+}(aq) + 2e^- \rightleftharpoons Sn(s); E^\circ = -0.14\,V$$

Thus, tin will be effective in checking the rusting of iron as long as the surface of iron is not exposed to the atmosphere. However, If scratches are formed on the surface, then iron will participate in the redox reaction being more reactive than tin and rusting of iron will re-start. This clearly shows that galvanization should be preferred to tinning to check the rusting of iron.

26. What is the significance of the electrochemical series?

Ans:- The significance of the electrochemical series are as follows-

(1) The metals on the top of the list(+ve) are good reducing agents and the metals at the bottom of the list(-ve) are good oxidising agents.

(2) A metal in the electrochemical series can displace another metal below it in the series, from a solution of the salt

(3) Metals which are above hydrogen in the list can liberate hydrogen gas from dilute acids whereas metals which come below hydrogen cannot.

(4) The list helps in the selective discharge of different elements from a mixture of their ions

27. Give reason, why Copper cannot displace hydrogen from acid?

Ans:- Copper is found to be below hydrogen in the electrochemical series, hence the reduction potential of Cu is more than that of hydrogen. So, Cu cannot reduce H+ ions to hydrogen. Thus Cu does not displace hydrogen from an acid.

28. Give reason, why zinc displaces hydrogen from acid?

Ans:- Zinc is found to be situated above hydrogen in the electrochemical series, hence the reduction potential of hydrogen is more than that of Zinc. Hence H^+ ions are easily reduced to hydrogen. Zinc gets oxidized to Zn^{2+} ions. Thus zinc displaces hydrogen from HCl.

$$Zn \rightarrow Zn^{2+} + 2e^-, \quad 2H^+ + 2e \rightarrow H_2\uparrow$$

29. Give reason, why zinc displaces copper form $CuSO_4$?

Ans:- Zinc is found above copper in the electrochemical series, so the reduction potential of copper is higher than that of zinc. Hence, the copper ions are more easily reduced to Cu and Zn is more easily oxidized to Zn^{2+} giving electrons for reduction. Hence, zinc displaces copper form $CuSO_4$.

30. Write a brief note on the Electrical protection method of preventing corrosion.

Ans:- Electrical protection (cathodic protection) - This method is used for the protection of submerged structures, ships and underground pipes



Protection of underground pipe or tank by cathodic protection

$$Mg^{2+}(aq) + 2e^- \rightarrow Mg(s); E^\circ = -2.37\,V$$
$$Fe^{2+}(aq) + 2e^- \rightarrow Fe(s); E^\circ = -0.44\,V$$

In this method, the exposed surface of iron is protected by connecting it to some more active metal such as magnesium, zinc or aluminium. The more active metal acts as anode and loses electrons in preference to iron. Thus, in case an underground iron pipe is connected to a block of magnesium, then the later will be corroded due to its lesser reduction potential than iron. Therefore, it will protect iron against rusting. It is also a case of sacrificial protection.

31. Write a note on Daniell Cell.

Ans:- Daniell cell:- is a modified electrochemical cell in which Zn-$CuSO_4$ reaction takes place.

The cell contains a porous pot in place of a salt bridge. It helps in separating the two electrolytes present in their respective half cells and also allows the migration of ions from one half cell to the other in order to maintain the neutral character of the electrolytes.



Daniell Cell

In the Daniel cell, a zinc rod immersed in $ZnSO_4$ solution acts as the oxidation half cell. In the reduction half cell, the copper vessel itself acts as the cathode while the saturated solution of copper sulphate acts as the electrolyte. A few crystals of copper sulphate are also added to maintain the concentration of the electrolyte. The chemical reactions involved are the same as in the electrochemical cell.

(Contd........)

ಲಂಚ: ಎಂಜಿನಿಯರ್, ಕಂದಾಯ ನಿರೀಕ್ಷಕ ಸೆರೆ

ಪ್ರಜಾವಾಣಿ ವಾರ್ತೆ

ಧರ್ಮರಾಜ ಬೆಡಸಗಾಂವ

ಬಸವರಾಜ ಬಿಸನಾಳ

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): ಲಂಚ ಪಡೆದ ಆರೋಪದಲ್ಲಿ ಮಂಗಳವಾರ ಹೆಸ್ಕಾಂ ಪ್ರಭಾವ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಧರ್ಮರಾಜ ಬೆಡಸಗಾಂವ ಮತ್ತು ಕಂದಾಯ ನಿರೀಕ್ಷಕ ಬಸವರಾಜ ಬಿಸನಾಳ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ವಿದ್ಯುತ್ ಕಾಮಗಾರಿಗಾಗಿ ಗುತ್ತಿಗೆದಾರ ಶಿವಯೋಗಿ ಕೂಡಲಮಠ ಎಂಬುವರಿಂದ ₹65 ಸಾವಿರ ಪಡೆಯುವಾಗ ಧರ್ಮರಾಜ ಅವರನ್ನು ಮತ್ತು ಫಾರ್ಮ್‌ಹೌಸ್ ಪರವಾನಗಿ ನೀಡಲು ರೈತ ನಾರಾಯಣ ಅರೆಜೋಗಿ ಅವರಿಂದ ₹15 ಸಾವಿರ ಪಡೆಯುವಾಗ ಬಸವರಾಜ ಅವರನ್ನು ಬಂಧಿಸಲಾಯಿತು' ಎಂದು ಲೋಕಾಯುಕ್ತ ಎಸ್‌.ಪಿ ಕುಮಾರಚಂದ್ರ ತಿಳಿಸಿದರು. ಡಿಎಸ್‌ಪಿ ಧನ್ಯಾ ನಾಯಕ, ಇನ್‌ಸ್ಪೆಕ್ಟರ್ ವಿನಾಯಕ ಬಿಲ್ಲವ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಎಇಇ ತಿಪ್ಪೇಸ್ವಾಮಿ ಬಳಿ ₹2.14 ಕೋಟಿ ಅಕ್ರಮ ಆಸ್ತಿ

ಪ್ರಜಾವಾಣಿ ವಾರ್ತೆ

ತಿಪ್ಪೇಸ್ವಾಮಿ

ತಿಪ್ಪೇಸ್ವಾಮಿ ಮನೆಯಲ್ಲಿ ಪತ್ತೆಯಾದ ಹಣ, ಆಭರಣ

ಬಳ್ಳಾರಿ: ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳಿಕೆ ಆರೋಪದ ಮೇಲೆ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಪಂಚಾಯತ್ ರಾಜ್ ಇಲಾಖೆಯ ಎಂಜಿನಿಯರಿಂಗ್ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ವೆಶ್ಗಾರ ತಿಪ್ಪೇಸ್ವಾಮಿ ಅವರ ಮನೆ ಮತ್ತು ಕಚೇರಿ ಸೇರಿ ಒಟ್ಟು 3 ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿದರು.

ತಿಪ್ಪೇಸ್ವಾಮಿ ಅವರು ₹2.14 ಕೋಟಿಯಷ್ಟು ಅಕ್ರಮ ಆಸ್ತಿ ಹೊಂದಿದ್ದು, ಇದು ಅವರ ಕಾನೂನುಬದ್ಧ ಆದಾಯಕ್ಕಿಂತ ಶೇ 174.01ರಷ್ಟು ಅಧಿಕ ಎಂದು ತಿಳಿದುಬಂದಿದೆ.

ಅವರ ಬಳಿ ಒಟ್ಟು ₹48.15 ಲಕ್ಷ ಮೌಲ್ಯದ 12 ನಿವೇಶನ, ₹1.15 ಕೋಟಿ ಮೌಲ್ಯದ 2 ಮನೆ, ₹29.20 ಲಕ್ಷ ಮೌಲ್ಯದ 8.1 ಎಕರೆ ವಿಸ್ತೀರ್ಣದ ಕೃಷಿ ಜಮೀನು, ₹3.51 ಲಕ್ಷ ನಗದು, ₹41 ಲಕ್ಷ ಮೌಲ್ಯದ ಚಿನ್ನ, ₹75,885 ಮೌಲ್ಯದ ಬೆಳ್ಳಿ ಆಭರಣ, ₹8.35 ಲಕ್ಷ ಮೌಲ್ಯದ ವಾಹನ, ₹67.76 ಲಕ್ಷ ಮೌಲ್ಯದ ಇತರೆ ಸಾಮಗ್ರಿಗಳು ಇವೆ ಎಂದು ಮೂಲಗಳು ತಿಳಿಸಿವೆ. ಬಳ್ಳಾರಿ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಈ ಕುರಿತು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ರಾಜ್ಯ ಬರಪೀಡಿತವೆಂದು ಘೋಷಿಸಿ: ಬೊಮ್ಮಾಯಿ

ಗದಗ: 'ರಾಜ್ಯದಲ್ಲಿ ಮಳೆ ಕೊರತೆಯಾಗಿದ್ದು, ಸರ್ಕಾರ ಸಮೀಕ್ಷೆ ನಡೆಸಿ ಬರಪೀಡಿತ ಎಂದು ಘೋಷಿಸಲಿ. ಆನಂತರ ಕೇಂದ್ರ ಸರ್ಕಾರ ಅಗತ್ಯ ಅನುದಾನ ಒದಗಿಸುತ್ತದೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

'ರಾಜ್ಯದಲ್ಲಿ ಕೃಷಿ ಸಚಿವರಿಲ್ಲ. ಇಲಾಖೆ ಏನು ಮಾಡುತ್ತಿದೆ ಎಂಬುದೇ ಗೊತ್ತಿಲ್ಲ. ಪರ್ಯಾಯ ಬೆಳೆ, ಅಲ್ಪಕಾಲಿಕ ಬೆಳೆ ಬೆಳೆಯಿರಿ ಎಂಬ ಇಲಾಖೆಯ ಸಲಹೆ ಹೊಸದೇನಲ್ಲ. ಒಟ್ಟಾರೆ, ರೈತರ ಪಾಲಿಗೆ ಇಲಾಖೆ ಸತ್ತಂತಿದೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ವಿಬಿ–ಜಿ ರಾಮ್ ಜಿ ಯೋಜನೆಯಡಿ ಕೇಂದ್ರವು 100 ದಿನಗಳ ಕೆಲಸಕ್ಕೆ ಅನುದಾನ ನೀಡುತ್ತಿದ್ದು, ಉಳಿದ 25 ದಿನಗಳಿಗಷ್ಟೇ ರಾಜ್ಯ ಸರ್ಕಾರ ಹಣ ನೀಡಬೇಕಿದೆ. ವಿವಿಧ ರಾಜ್ಯಗಳು ಇದನ್ನು ಅಂಗೀಕರಿಸಿ, ಅನುಷ್ಠಾನಗೊಳಿಸಿವೆ. ರಾಜ್ಯದಲ್ಲಿ ರೈತರ ಹಿತದೃಷ್ಟಿಯಿಂದ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು' ಎಂದರು.

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿ, ದೊಡ್ಡನೆಕ್ಕುಂದಿ ವಿಭಾಗ, ಫೀನಿಕ್ಸ್ ಮಾಲ್ ಎದುರು, ಆರ್‌ಹೆಚ್‌ಬಿ ಕಾಲೋನಿ, ವೈಟ್‌ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು – 560 048

ಸಂ : ಬೆಂಪೂನಪಾ/ಕಾಅ/ದೊನೆಕು/ಟೆಂಡ/01/2026–27 ದಿನಾಂಕ : 23.06.2026

ಟೆಂಡರ್‌ಗಳಿಗಾಗಿ ಆಹ್ವಾನ (ಅಲ್ಪಾವಧಿ)
(ಜಿಒಕೆ ಕೆಪಿಪಿಪಿ ಮೂಲಕ)

ಕಾರ್ಯಪಾಲಕ ಅಭಿಯಂತರರು, ದೊಡ್ಡನೆಕ್ಕುಂದಿ ವಿಭಾಗ, ಇವರು, ಸಿ ಪಿ ಡಬ್ಲ್ಯೂ ಡಿ / ಕೆಪಿ ಡಬ್ಲ್ಯೂ ಡಿ /ರೈಲ್ವೇಸ್ /ಎಂಇಎಸ್ ಅಥವಾ ಯಾವುದೇ ರಾಜ್ಯ/ ಕೇಂದ್ರ ಸರಕಾರದ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವ ಕಾಮಗಾರಿಗಳಿಗೆ ಐಟಂ ದರದ ಟೆಂಡರ್ ಆಹ್ವಾನಿಸಿದೆ. ಗುತ್ತಿಗೆದಾರರು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್ಮೆಂಟ್ ವೆಬ್‌ಸೈಟ್ https://kppp.karnataka.gov.in/eportal/index.seam ಮೂಲಕ ಗುತ್ತಿಗೆದಾರರ ಲಾಗಿನ್ ಅಡಿಯಲ್ಲಿ ಟೆಂಡರ್ ಸಲ್ಲಿಸಬಹುದು.

ಕ್ರ. ಸಂ.	ಕಾಮಗಾರಿಗಳ ವಿವರ/ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)/ ಇಎಂಡಿ (ರೂ. ಗಳಲ್ಲಿ)/ಪೂರ್ಣಗೊಳಿಸುವ ಅವಧಿ
1	Comprehensive Development of Roads and Drains and other allied works in ward no. 43-Doddannekkundi, 42-Priyadarshini, 44-Ashwathnagar, 37-Kundalahalli, 36-Bharath Aikya,35-Garudacharpalya in Doddanekkundi Division of Mahadevapura Constituency. (Annexure-2, Sl No.21 to 26). Amount put to Tender : **Rs.980.00 Lakhs**, EMD (in Rupees): **Rs.14,70,000/-. Period of Completion : 09 Months.**

ಕಾರ್ಯಕ್ರಮಗಳ ವೇಳಾಪಟ್ಟಿ :
1. ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30.06.2026 ಮಧ್ಯಾನ 3.00 ಗಂಟೆಯ ಒಳಗೆ
2. ಪ್ರೀ ಬಿಡ್ ಮೀಟಿಂಗ್‌ನ ದಿನಾಂಕ ಮತ್ತು ಸಮಯ : 30.06.2026 ಸಂಜೆ 4.00 ಗಂಟೆಗೆ.
3. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : 04.07.2026 ಸಂಜೆ 4.00 ಗಂಟೆಯ ವರೆಗೆ.
4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 06.07.2026 ಸಂಜೆ 04.30 ಗಂಟೆಗೆ.
5. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 07.07.2026 ಸಂಜೆ 04.00 ಗಂಟೆಗೆ.
6. ಟೆಂಡರ್‌ಗಳ ಮಾನ್ಯತೆ : 180 ದಿನಗಳು.

ಟೆಂಡರ್ ಗೆ ಸಂಬಂಧಿಸಿದ ಇತರ ನಿಯಮ ಮತ್ತು ಷರತ್ತುಗಳಿಗೆ ಟೆಂಡರ್ ದಸ್ತಾವೇಜು ಗಳನ್ನು ಉಲ್ಲೇಖಿಸಬಹುದು ಮತ್ತು ಯಾವುದೇ ತಿದ್ದುಪಡಿ /ಸೇರ್ಪಡೆಗಳನ್ನು https://kppp.Karnataka.gov.in ನಲ್ಲಿ ಮಾತ್ರ ಪ್ರಕಟಿಸಲಾಗುವುದು ಅಥವಾ ಕೆ ಪಿ ಪಿ ಪಿ ಪೋರ್ಟಲ್ ಸಂಪರ್ಕಿಸಿ

ಸಹಿ/– ಕಾರ್ಯಪಾಲಕ ಅಭಿಯಂತರರು, ದೊಡ್ಡನೆಕ್ಕುಂದಿ ವಿಭಾಗ, ಬಿಇಸಿಸಿ

ಕಾವೇರಿ ನೀರಾವರಿ ನಿಗಮ ನಿಯಮಿತ,
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು ಕಛೇರಿ, ಕಬಿನಿ ನಾಲಾ ವಿತರಣಾ ವಿಭಾಗ, ತಿ. ನರಸೀಪುರ–571124, ಮೈಸೂರು ಜಿಲ್ಲೆ.
Ph: 08227-261362 E-Mail eekedtnp@yahoo.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 06/2026–27 ದಿನಾಂಕ: 19.06.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಮೈಸೂರು / ಬೆಂಗಳೂರು ಇವರ ಪರವಾಗಿ ಲೋಕೋಪಯೋಗಿ ಇಲಾಖೆ/FIRM REGISTRATION CERTIFICATE UNDER UDHYAM/ MSME ರ ಅರ್ಹ ವರ್ಗದಲ್ಲಿ ಹೆಸರು ನೋಂದಾಯಿತ ಗುತ್ತಿಗೆದಾರರಿಂದ 2 ಕಾಮಗಾರಿಗಳಿಗೆ ಐಟಂವಾರು ದರದ ಅಲ್ಪಾವಧಿ ಟೆಂಡರ್‌ನ್ನು ಕೆಪಿಪಿ–ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು. ಅರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರಗಳನ್ನು ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ನ ಜೊತೆಗೆ ಸಲ್ಲಿಸುವುದು. ಇ.ಎಂ.ಡಿ ಹಣ ಹಾಗೂ ಪ್ರೊಸೆಸ್ಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು. ಕಾಮಗಾರಿಗಿಟ್ಟ ಗರಿಷ್ಠ ಮೊತ್ತ ರೂ.78.76 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ.25.42 ಲಕ್ಷಗಳು, ಸದರಿ ಕಾಮಗಾರಿಯ ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿ: 25.06.2026 ಸಾಯಂಕಾಲ 4.00 ಗಂಟೆವರೆಗೆ. ಆನ್ ಲೈನ್ ಮೂಲಕ ಭರ್ತಿಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿ: 29.06.2026 ಸಾಯಂಕಾಲ 5.30 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿ: 01.07.2026 ಬೆಳಿಗ್ಗೆ 11.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿ: 06.07.2026 ಬೆಳಿಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ, ಕಬಿನಿ ನಾಲಾ ವಿತರಣಾ ವಿಭಾಗ, ಟಿ.ನರಸೀಪುರ.
DIPR/DDMYS/360/KSMCA/241/2026-27

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಆಡಳಿತ ವಿಭಾಗ
ಎಂಎಸ್‌ಐಎಲ್ ಹೌಸ್, ನಂ.36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560 052.
ದೂರವಾಣಿ : 080–22264021–25
ಸಂಖ್ಯೆ: ಎಂಎಸ್‌ಐಎಲ್/ಆಡಳಿತ/076/2026–27 ದಿನಾಂಕ: 24.06.2026

ಪ್ರಕಟಣೆ

ಮಾರಾಟ ಪ್ರತಿನಿಧಿ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಸಂಸ್ಥೆಯ ಅಧಿಕೃತ ಜಾಲತಾಣದಲ್ಲಿ ಮತ್ತು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು

ಕೃಷ್ಣಾ ಭಾಗ್ಯಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ,
ಕೃಭಾಜನಿನಿ ನಾಎದಂಕಾ ವಿಭಾಗ, ರೋಡಲಬಂಡಾ–584127
ತಾ: ಲಿಂಗಸುಗೂರು ಜಿ: ರಾಯಚೂರು. email:kbjnlnlbc4@gmail.com
ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/26–27/355 ದಿನಾಂಕ: 22.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ Super Grade Electrical Contractors License & Manpower Registration Certificate issued by the Department of Labour, Gok. ರವ ರಿಂದ Dismantling of CT's and Providing CT's to 220 KV Sub-Station at Balakundi village under Koppal LIS on emergency Basis. KBJNL/2026-27/SS/WORK_INDENT2858 ಎಂಬ ಕಾಮಗಾರಿಗೆ ಸಂಬಂಧಿಸಿದಂತೆ, ಏಕ–ಲಕೋಟೆ ಶೇಕಡಾವಾರು ದರದ ಟೆಂಡರ್‌ನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ನ್ನು ಅರ್ಹ ಗುತ್ತಿಗೆದಾರರು ದಿನಾಂಕ 23.06.2026 ರಿಂದ 03.07.2026 ರ ಸಾಯಂಕಾಲ 5.00 ಗಂಟೆಯವರೆಗೆ www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ ಹಾಗೂ ಸದರಿ ಕಾಮಗಾರಿಯ ಬಿಡ್ಡನ್ನು ದಿ. 04.07.2026 ಸಾಯಂಕಾಲ 5.15 ಗಂಟೆಗೆ ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಇ–ಟೆಂಡರಿಂಗ್ ವೆಬ್‌ಸೈಟ್ www.kppp.karnataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರು,
ಕೃಭಾಜನಿನಿ, ನಾಎದಂಕಾ ವಿಭಾಗ,
ರೋಡಲಬಂಡಾ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಯಾದಗಿರ.
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ ರಾಜ್ ಇಂಜಿನೀಯರಿಂಗ್, ವಿಭಾಗ,
ಎನ್.ವಿ.ಎಮ್. ಹೋಟೆಲ್ ಎದುರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ–585202.
ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/5054/2026–27/ 553 ದಿನಾಂಕ: 23.06.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW-1 & 3
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಗಳ ವಿವರ.: (1) ಸುರಪೂರ ತಾಲೂಕಿನ ಮಾವಿನಮಟ್ಟಿ ಗ್ರಾಮದ ಎಸ್.ಸಿ. ವಾರ್ಡ ಮಾಲಗತ್ತಿ ರಸ್ತೆ ನಿರ್ಮಾಣ & ಹುಣಸಗಿ ತಾಲೂಕಿನ ಬಾಲದ ಗಿಡದ ತಾಂಡಾದಲ್ಲಿ ಸಿ.ಸಿ. ರಸ್ತೆ ನಿರ್ಮಾಣ RDPR/2026-27/RD/WORK_INDENT27448 (2) ಸುರಪುರ ತಾಲ್ಲೂಕಿನ ಪರಸನಹಳ್ಳಿ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನ ಅಭಿವೃದ್ಧಿ ಕಾಮಗಾರಿ RDPR/2026-27/RD/WORK_INDENT27430 2) ಲೆಕ್ಕ ಶೀರ್ಷಿಕೆ: 2025–26ನೇ ಸಾಲಿನ 5054 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯೋಜನೆ ಮತ್ತು 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ 3) ಟೆಂಡರಿಗಿಟ್ಟ ಅಂದಾಜು ಮೊತ್ತ:ಕನಿಷ್ಠ 15.00 ಮತ್ತು ಗರಿಷ್ಠ ರೂ. 75.00 ಲಕ್ಷ 4) ಗುತ್ತಿಗೆದಾರರ ದರ್ಜೆ:4ನೇ ದರ್ಜೆ ಮೇಲ್ಪಟ್ಟು 5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ: 24.06.2026 ರಿಂದ 04.07.2026 ಸಾಯಂಕಾಲ 4:00 ಗಂಟೆವರೆಗೆ 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ :ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ :04.07.2026 ಸಾಯಂಕಾಲ 4:00 ಗಂಟೆವರೆಗೆ 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ಡ್ KW-3: 06.07.2026 ಬೆಳ್ಳಿಗೆ 10.00 ನಂತರ 9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ಡ್: KW-1: 06.07.2026 ಬೆಳ್ಳಿಗೆ 10.00 ನಂತರ 10) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ಡ್ KW-3: 10.07.2026 ಬೆಳ್ಳಿಗೆ 11:00 ನಂತರ 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ): ಕಾರ್ಯಪಾಲಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಎನ್.ವಿ.ಎಮ್. ಹೋಟೆಲ್ ಎದುರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ–585202 12) ಅಂತರಜಾಲ ತಾಣದ ವಿಳಾಸ:https://kppp.karnataka.gov.in

ಸೂಚನೆ :– ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ಯಾದಗಿರ.
ವಾ.ಸಾ.ಸಂ.ಇ/ಯಾದಗಿರಿ/126/ಕೆ.ಎಸ್.ಎಂ.ಸಿ&ಎ/2026–27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
No.EE/MID/VJP/AE-2/NON-NBD&SCP/TND/2026-27/ Date:23.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೊಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು :– ಒಟ್ಟು 1 ಕಾಮಗಾರಿ (4ನೇ ಕರೆ), ಟೆಂಡರಿಗಿಟ್ಟ ಮೊತ್ತ **ರೂ.451.77 ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು (11) ತಿಂಗಳುಗಳು.**

4702 ಎಸ್.ಸಿ.ಪಿ. ಕಾಮಗಾರಿಗಳು :– ಒಟ್ಟು 1 ಕಾಮಗಾರಿ(2ನೇ ಕರೆ), ಟೆಂಡರಿಗಿಟ್ಟ ಮೊತ್ತ **ರೂ.3.60ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **23.06.2026** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **02.07.2026** ರ 17–30 ಘಂಟೆವರೆಗೆ ಸ್ವೀಕರಿಸಲಾಗುವದು. ದಿನಾಂಕ: **29.06.2026** ರಂದು ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ–ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ: **01.07.2026** ರ 17–30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ(ಫೋನಃ–080–25501216 ಮತ್ತು 080–25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ
ವಾಸಾಸಂಇ/ವಿಜಯಪುರ/171/ಕೆಎಸ್‌ಎಂಸಿಎ/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
No: EE/ UTP /RNR/MadagMasur/LIS-Hangal/ Call-3/PB-2/ 2026-27/568 Date: 08-06-2026.

(ಕೆ.ಪಿ.ಪಿ ಪೋರ್ಟಲ್ ಮುಖಾಂತರ) ಟೆಂಡರ್ ಪ್ರಕಟಣೆ ಕರೆ–3
ದ್ವಿ – ಲಕೋಟೆ ಪದ್ಧತಿ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮದಗ ಮಾಸೂರು ಕೆರೆಯ ಎಡದಂಡೆ ಮತ್ತು ಬಲದಂಡೆ ಕಾಲುವೆಗಳ ಆಧುನೀಕರಣ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 4701 ಮದಗ ಮಾಸೂರು ಯೋಜನೆ ರಡಿ ಕಾಮಗಾರಿಯ ಟೆಂಡರ್‌ನ್ನು ಉಲ್ಲೇಖಿತ ಪತ್ರ (1) ರನ್ವಯ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಯ ಟೆಂಡರ್ ಮೊತ್ತ ರೂ.5031.68 ಲಕ್ಷಗಳು (GST ಸೇರಿ) ಇರುತ್ತದೆ ಮತ್ತು ಇ.ಎಂ.ಡಿ ಮೊತ್ತವು ರೂ:42.64 ಲಕ್ಷಗಳ ವರೆಗೆ ಇರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) https://kppp.karnataka.gov.inನಲ್ಲಿ ನೋಡಿಕೊಂಡುತುಂಬತಕ್ಕದ್ದು. (1) ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ:22–06–2026 ರಿಂದ 31–07–2026ರ ಸಂಜೆ 5.00 ರವರೆಗೆ (2) ಪ್ರೀ–ಬಿಡ್ ಮೀಟಿಂಗ್ ದಿನಾಂಕ:13–07–2026 ಸಂಜೆ 4.00 ಕ್ಕೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿ., 4ನೇ ಮಹಡಿ ಕಾಫೀ ಬೋರ್ಡ್ ಕಟ್ಟಡ, ನಂ.01 ಡಾ॥ ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು ರವರ ಕಛೇರಿಯಲ್ಲಿ. (3) ಟೆಂಡರ್ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 22–07–2026 ಸಂಜೆ 4.00 ರ ವರೆಗೆ (4) ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 31–07–2026 ರ ಸಂಜೆ 5.00 ರ ವರೆಗೆ (5) ದಿನಾಂಕ 01–08–2026 ರಂದು ಸಂಜೆ 5.30 ಗಂಟೆಗೆ ತಾಂತ್ರಿಕ ಬಿಡ್ಡನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು.

ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ.(08373) 297332 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ,
ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.
420

ಸಕ್ಷಮ ಪ್ರಾಧಿಕಾರಿ ಹಾಗೂ ಅಪರ ಪ್ರಾದೇಶಿಕ ಆಯುಕ್ತರು,
ಪ್ರಾದೇಶಿಕ ಆಯುಕ್ತರವರ ಕಚೇರಿ, ಕಂದಾಯ ಇಲಾಖೆ, ಬೆಂಗಳೂರು ವಿಭಾಗ ಮತ್ತು ನೋಡಲ್ ಅಧಿಕಾರಿ,
ಪದನಿಮಿತ್ತ ಕಾರ್ಯದರ್ಶಿ (ಆರ್ಥಿಕ ಅಪರಾಧಗಳು)ರವರ ಕಾರ್ಯಾಲಯ, ಬೆಂಗಳೂರು
ಬಿಎಂಟಿಸಿ ಬಿಲ್ಡಿಂಗ್, 2ನೇ ಮಹಡಿ, ಶಾಂತಿನಗರ, ಕೆ.ಎಚ್ ರಸ್ತೆ, ಬೆಂಗಳೂರು–560027

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ಅಪರ ಪ್ರಾದೇಶಿಕ ಆಯುಕ್ತರು ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis)

ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. Clear Title: RTC and Khata stands in the name of Competent Authority and Auctioning Authority

ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆ

ಕ್ರ. ಸಂ.	ಆಸ್ತಿಯ ವಿವರಗಳು (Clear Title by Court in Order No. Misc.No.414/2025 & 1204/2024)	ಕನಿಷ್ಠ ಬೆಲೆ (ರೂ)	ಇಎಂಡಿ (ರೂ)	ಬಿಡ್ ಮೌಲ್ಯ ಹೆಚ್ಚಳ (ರೂ)	Clear Title	ಷರಾ
1.	ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಅರಿಶಿನಕುಂಟೆ ಗ್ರಾಮ ವ್ಯಾಪ್ತಿಯ ದಾನೋಜಿಪಾಳ್ಯದಲ್ಲಿರುವ ಕಣ್ವ ನಗರದಲ್ಲಿನ ಸರ್ವೇ ನಂಬರ್ 93/6 ಮತ್ತು 94/7ರಲ್ಲಿ ಅಭಿವೃದ್ಧಿಪಡಿಸಲಾದ, ಖಾತಾ ಸಂಖ್ಯೆ 65 ಹಾಗೂ ಸೈಟ್ ನಂ. 65/69 ರಿಂದ 65/78ರವರೆಗೆ ಒಟ್ಟು 10 ಸೈಟ್‌ಗಳನ್ನು ಒಳಗೊಂಡ, ಪ್ರತಿ ಸೈಟ್‌ವು 40 ಅಡಿ x 400 ಅಡಿ ಅಳತೆಯುಳ್ಳ, ಒಟ್ಟು 16,000 ಚದರ ಅಡಿ ವಿಸ್ತೀರ್ಣದ ಭೂಮಿಯ ಮೇಲೆ ನಿರ್ಮಿಸಲ್ಪಟ್ಟ, ನೆಲ ಮಹಡಿ, ಮೊದಲ ಮಹಡಿ ಮತ್ತು ದ್ವಿತೀಯ ಮಹಡಿಗಳನ್ನು ಹೊಂದಿದ್ದು, 1042.80 ಚದರ ಮೀಟರ್ ನಿರ್ಮಿತ ಪ್ರದೇಶವಿರುವ 'ಕಣ್ವ ಪಬ್ಲಿಕ್ ಸ್ಕೂಲ್' ಎಂಬ ಶಾಲಾ ಆವರಣದ ಸಮಸ್ತ ಭಾಗ ಮತ್ತು ಪಾಲು. Google Location: https://maps.app.goo.gl/tjiAwYUFDMZJgnmo6, Latitude and Longitude: 13.082460, 77.403144	7,45,00,000/- (ಭೂಮಿ ಮೌಲ್ಯ ರೂ.4,89,69,565/– + ಕಟ್ಟಡ ಮೌಲ್ಯ ರೂ.2,55,30,435/– = ಒಟ್ಟು ರೂ.7,45,00,000/–) ಏಳು ಕೋಟಿ ನಲವತ್ತೈದು ಲಕ್ಷ ರೂಪಾಯಿಗಳು ಮಾತ್ರ.	14,90,000 ಹದಿನಾಲ್ಕು ಲಕ್ಷ ತೊಂಬತ್ತು ಸಾವಿರ ರೂಪಾಯಿಗಳು ಮಾತ್ರ.	3,75,000 ಮೂರು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ.	ಖಾತಾ ಸರ್ಕಾರವು ನೇಮಿಸಿದ ಸಕ್ಷಮ ಪ್ರಾಧಿಕಾರ ಮತ್ತು ಹರಾಜು ಪ್ರಾಧಿಕಾರದ ಹೆಸರಿನಲ್ಲಿ ದಾಖಲಾಗಿರುತ್ತದೆ.	ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ MFA 7922/2025 ರಲ್ಲಿ ಪ್ರಕರಣವೊಂದು ಬಾಕಿ ಇದೆ. ಈ ಆಸ್ತಿಯ ವಿರುದ್ಧ ಯಾವುದೇ ಮಧ್ಯಂತರ ಆದೇಶವಿಲ್ಲ.
2.	ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡೇನಹಳ್ಳಿ ಗ್ರಾಮದ ಸ.ನಂ.5/4 ರಲ್ಲಿ 2–37 ಎ–ಗು ಪರಿವರ್ತಿತ ಜಮೀನು ಇದ್ದು, ಈ ಪೈಕಿ 0–26 ಗುಂಟೆ "ಕಣ್ವ ಇಂಟರ್ ನ್ಯಾಷನಲ್ ಶಾಲೆ""ಇರುತ್ತದೆ. ಉಳಿಕೆ ಪ್ರದೇಶ ಖಾಲಿ ಇರುತ್ತದೆ. ಶಾಲಾ ಕಟ್ಟಡದ ವಿಸ್ತೀರ್ಣ 1784.425 ಚದರ ಅಡಿಗಳು. Google Location: https://maps.app.goo.gl/6zaXPWtEu4HKSjbG9, Latitude and Longitude: 13.473623, 77.232849	3,62,00,000/- (ಜಮೀನಿನ ಬೆಲೆ ರೂ.1,19,11,600 + ಕಟ್ಟಡ ಬೆಲೆ ರೂ.2,42,88,400/– ಒಟ್ಟು ರೂ.3,62,00,000/–) ರೂ. ಮೂರು ಕೋಟಿ ಅರವತ್ತೆರಡು ಲಕ್ಷಗಳು ಮಾತ್ರ.	7,25,000 ಏಳು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು	1,81,000 ಒಂದು ಲಕ್ಷದ ಎಂಬತ್ತೊಂದು ಸಾವಿರ ರೂಪಾಯಿಗಳು	ಖಾತಾ ಸರ್ಕಾರವು ನೇಮಿಸಿದ ಸಕ್ಷಮ ಪ್ರಾಧಿಕಾರ ಮತ್ತು ಹರಾಜು ಪ್ರಾಧಿಕಾರದ ಹೆಸರಿನಲ್ಲಿ ದಾಖಲಾಗಿರುತ್ತದೆ.	ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ WP 8764/2026 ರಲ್ಲಿ ಪ್ರಕರಣವೊಂದು ಬಾಕಿ ಇದೆ. ಈ ಆಸ್ತಿಯ ವಿರುದ್ಧ ಯಾವುದೇ ಮಧ್ಯಂತರ ಆದೇಶವಿಲ್ಲ.

ತಪಾಸಣೆಯ ದಿನಾಂಕ ಮತ್ತು ಸಮಯ.	ಪ್ರೀ–ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ.	ಬಿಡ್‌ಗಳ ಸಲ್ಲಿಕೆ ಮತ್ತು ಇಎಮ್‌ಡಿ ಸಲ್ಲಿಕೆಯ ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
04 ಜುಲೈ 2026, ಶನಿವಾರ 11:00 am to 5:00 pm	07 ಜುಲೈ 2026, ಮಂಗಳವಾರ, 3:00PM to 4:00 PM. ಸ್ಥಳ: ಪ್ರಾದೇಶಿಕ ಆಯುಕ್ತರ ಕಛೇರಿ, 2ನೇ ಮಹಡಿ, 'ಸಿ' ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–560027.	10 ಜುಲೈ 2026, ಶುಕ್ರವಾರ ಸಂಜೆ 5:00 ಗಂಟೆಯೊಳಗೆ	14 ಜುಲೈ 2026, ಮಂಗಳವಾರ 11.00am to 1.00pm

ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ, https://kppp.karnataka.gov.in ಗೆ ಲಾಗಿನ್ ಮಾಡಬಹುದು. (ಹೆಲ್ಪ್‌ಡೆಸ್ಕ್ ಸಂಖ್ಯೆ: 080–46010000, 080–68948777) ಹರಾಜಿಗೆ ಸಂಬಂಧಿಸಿದ ಮಾಹಿತಿಯ ಅಗತ್ಯವಿರುವ ಆಸಕ್ತ ಬಿಡ್‌ದಾರರು ಸಕ್ಷಮ ಪ್ರಾಧಿಕಾರಿ & ಅಪರ ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ, 2ನೇ ಮಹಡಿ, 'ಸಿ' ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆಎಚ್ ರಸ್ತೆ, ಶಾಂತಿನಗರ, ಬೆಂಗಳೂರು–560027, ಇವರನ್ನು ಸಂಪರ್ಕಿಸಬಹುದು.
ಇ–ಮೇಲ್ ಐಡಿ: arckauction@gmail.com ಅಥವಾ ಮೊಬೈಲ್ ಸಂಖ್ಯೆ: 8310421191 ನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 24.06.2026 DIPR/CP/1306/ZEN/2026-27

ಸಹಿ/–
ಅಪರ ಪ್ರಾದೇಶಿಕ ಆಯುಕ್ತರು ಮತ್ತು ಸಕ್ಷಮ ಪ್ರಾಧಿಕಾರ ಪ್ರಾದೇಶಿಕ ಆಯುಕ್ತರ ಕಚೇರಿ,
ಬೆಂಗಳೂರು ವಿಭಾಗ, ಬೆಂಗಳೂರು.

ಸಾರ್ವಜನಿಕ ಸೂಚನೆ
(ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್ರಪ್ಸಿ ಸಂಹಿತೆ, 2016ರ ಸೆಕ್ಷನ್ 130(1)(b) & 130(2)ರ ಅಡಿಯಲ್ಲಿ)

ಮೆಸರ್ಸ್. ಸದರ್ನ್ ಬ್ಯಾಟರೀಸ್ ಪ್ರೈವೇಟ್ ಲಿಮಿಟೆಡ್ (SBPL) (U31404KA1996PTC019739) ವೈಯಕ್ತಿಕ ಜಾಮೀನುದಾರರಾದ ಶ್ರೀ. ಬಿ. ರಾಧಾಕೃಷ್ಣನ್, ಶ್ರೀ. ಆರ್. ಸುದರ್ಶನ್ ಮತ್ತು ಶ್ರೀ. ಆರ್. ಶ್ರೀನಿವಾಸನ್ ಅವರ ಸಾಲದಾತರ ಗಮನಕ್ಕೆ

ಪ್ರಸ್ತುತ ವಿವರಗಳು

1.	ಸಾಲಗಾರರ/ವೈಯಕ್ತಿಕ ಜಾಮೀನುದಾರರ ಹೆಸರು ಮತ್ತು ವಿಳಾಸ	**1. ಶ್ರೀ. ಬಿ. ರಾಧಾಕೃಷ್ಣನ್** 41, ಹಾರ್ಮನಿ ಕ್ಲಾಸಿಕ್ ಆರ್ಚರ್ಡ್, ಬೆಂಗಳೂರು – 560061 **2. ಶ್ರೀ. ಆರ್. ಸುದರ್ಶನ್** 41, ಹಾರ್ಮನಿ ಕ್ಲಾಸಿಕ್ ಆರ್ಚರ್ಡ್, ಬೆಂಗಳೂರು– 560061 **3. ಶ್ರೀ. ಆರ್. ಶ್ರೀನಿವಾಸನ್** 41, ಹಾರ್ಮನಿ ಕ್ಲಾಸಿಕ್ ಆರ್ಚರ್ಡ್, ಬೆಂಗಳೂರು– 560061
2.	ಸಾಲಗಾರರ/ವೈಯಕ್ತಿಕ ಜಾಮೀನುದಾರರ ವಿಷಯದಲ್ಲಿ ಆದೇಶ ಮತ್ತು ದಿವಾಳಿತನದ ಆರಂಭದ ದಿನಾಂಕದ ವಿವರಗಳು	1. ಶ್ರೀ. ಬಿ. ರಾಧಾಕೃಷ್ಣನ್ CP (IB) No.22/BB/2026 9ನೇ ಏಪ್ರಿಲ್ 2026ರಂದು* 2. ಶ್ರೀ. ಆರ್. ಸುದರ್ಶನ್ CP (IB) No.23/BB/2026 9ನೇ ಏಪ್ರಿಲ್ 2026ರಂದು* 3. ಶ್ರೀ. ಆರ್. ಶ್ರೀನಿವಾಸನ್ CP (IB) No.24/BB/2026 9ನೇ ಏಪ್ರಿಲ್ 2026ರಂದು*
3.	ದಿವಾಳಿತನ ಟ್ರಸ್ಟಿಯಾಗಿ (Bankruptcy Trustee) ನಿಯೋಜಿಸಲ್ಪಟ್ಟಿರುವ ಇನ್ಸಾಲ್ವೆನ್ಸಿ ವೃತ್ತಿಪರರ ಹೆಸರು, ನೋಂದಾವಣಾ ಸಂಖ್ಯೆ, ಈಮೈಲ್ ಐಡಿ ಹಾಗೂ ವಿಳಾಸ – ವ್ಯವಹಾರದ ಸಲುವಾಗಿ	**ಶ್ರೀ ರವೀಂದ್ರ ಬೆಳೆಯೂರ್** IBBI/IPA-001/IP-P00189 / 2017-18/10368 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 560011 ಟೆಲಿ: +91 80 26540193 ಈಮೈಲ್: ravi@beleyur.com Process Email: bt.pgs.southern.batteries@beleyur.com
4.	ಕ್ಲೇಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	07ನೇ ಜುಲೈ, 2026

ಈ ಮೂಲಕ ನೋಟೀಸು ನೀಡಲಾಗುತ್ತಿದೆ: ಏನೆಂದರೆ ಮೆಸರ್ಸ್. ಸದರ್ನ್ ಬ್ಯಾಟರೀಸ್ ಪ್ರೈವೇಟ್ ಲಿಮಿಟೆಡ್‌ನ ವೈಯಕ್ತಿಕ ಜಾಮೀನುದಾರರಾದ ಶ್ರೀ. ಬಿ. ರಾಧಾಕೃಷ್ಣನ್, ಶ್ರೀ. ಆರ್. ಸುದರ್ಶನ್ ಮತ್ತು ಶ್ರೀ. ಆರ್. ಶ್ರೀನಿವಾಸನ್ ಇವರ ವಿರುದ್ಧ ದಿವಾಳಿತನ ಪ್ರಕ್ರಿಯೆಯನ್ನು ಆರಂಭಿಸುವಂತೆ 9ನೇ ಏಪ್ರಿಲ್ 2026ರಂದು *(11ನೇ ಜೂನ್ 2026ರಂದು ಸಂಬಂಧಿಸಿದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ ಹಾಗೂ ಆರ್ಥಿಕ ಸಾಲಗಾರರ ಕಾನೂನು ಸಲಹೆಗಾರರಿಂದ ಆದೇಶದ ಪ್ರತಿಯನ್ನು 22ನೇ ಜೂನ್ 2026ರಂದು ಸ್ವೀಕರಿಸಲಾಗಿದೆ.) ಮಾನ್ಯ ನ್ಯಾಶನಲ್ ಕಂಪನಿ ಲಾ ಟ್ರೈಬ್ಯೂನಲ್, ಬೆಂಗಳೂರು ಆದೇಶಿಸಿದೆ.

ಮೆಸರ್ಸ್. ಸದರ್ನ್ ಬ್ಯಾಟರೀಸ್ ಪ್ರೈವೇಟ್ ಲಿಮಿಟೆಡ್‌ನ ವಿಷಯದಲ್ಲಿ ವೈಯಕ್ತಿಕ ಜಾಮೀನುದಾರರಾದ ಈ ಮೇಲಿನವರ ಸಾಲದಾತರು, 7ನೇ ಜುಲೈ 2026ರಂದು ಇಲ್ಲವೇ ಮುಂಚಿತವಾಗಿ ತಮ್ಮ ಕ್ಲೇಮುಗಳನ್ನು ಆಧಾರಗಳ ಸಮೇತ ನಿಗದಿತ ಪ್ರಪತ್ರದಲ್ಲಿ, ದಿವಾಳಿತನ ಟ್ರಸ್ಟಿಯವರಿಗೆ ಮೇಲೆ ಕಲಂ 3ರಲ್ಲಿ ತಿಳಿಸಿದ ವಿಳಾಸಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗುತ್ತಿದೆ.

ಸುಳ್ಳಾದ ಅಥವಾ ದಾರಿತಪ್ಪಿಸುವಂತಹ ಕ್ಲೇಮುಗಳನ್ನು ಸಲ್ಲಿಸಿದಲ್ಲಿ ಅಂತಹವರು ದಂಡರ್ಹವಾಗುತ್ತಾರೆ.

ಸಹಿ/–
ರವೀಂದ್ರ ಬೆಳೆಯೂರ್
ದಿನಾಂಕ: 23.06.2026
ಸ್ಥಳ: ಬೆಂಗಳೂರು ನೋಂದಣಿ ಸಂ. IBBI/IPA-001/IP-P00189/2017-18/10368

ವಸತಿ ಶಾಲೆಗಳಿಗೆ ನೇರ ದಾಖಲಾತಿ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತನ್ನ ಅಧೀನದಲ್ಲಿರುವ ವಸತಿ ಶಾಲೆಗಳಲ್ಲಿ 2026–27ನೇ ಸಾಲಿಗೆ 6ನೇ ತರಗತಿಗೆ ಪ್ರವೇಶ ಪಡೆಯುವ ವಿಶೇಷ ವರ್ಗದ ಮಕ್ಕಳಿಗೆ ನೇರ ದಾಖಲಾತಿ ಪಡೆಯುವ ಅವಕಾಶ ಕಲ್ಪಿಸಿದೆ.

ಸಫಾಯಿ ಕರ್ಮಚಾರಿ, ಗುರುತಿಸಲ್ಪಟ್ಟ ಶೌಚಗುಂಡಿ ಸ್ವಚ್ಛತಾ ಕಾರ್ಮಿಕರು, ಚಿಂದಿ ಆಯುವವರು, ಸ್ಮಶಾನ ಕಾರ್ಮಿಕರ ಮಕ್ಕಳು, ಬಾಲ ಕಾರ್ಮಿಕರು, ಜೀತ ವಿಮುಕ್ತ ಕಾರ್ಮಿಕರ ಮಕ್ಕಳು, ಗುರುತಿಸಿರುವ ಮಾಜಿ ದೇವದಾಸಿಯರ ಮಕ್ಕಳು, ಸಂಚಾರಿ ಕುರಿಗಾಹಿಗಳ ಮಕ್ಕಳು, ಶೇ 25ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು, ಎಚ್.ಐ.ವಿ.ಗೆ ತುತ್ತಾದ ಪೋಷಕರ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳು, ಗುರುತಿಸಿರುವ ಅಲೆಮಾರಿ, ಅರೆ ಅಲೆಮಾರಿ ಸೇರಿ ವಿಶೇಷ ವರ್ಗದ ಮಕ್ಕಳಿಗೆ ಶೇ 50ರಷ್ಟು ಸೀಟುಗಳನ್ನು ಪ್ರವೇಶ ಪರೀಕ್ಷೆಯಿಲ್ಲದೆ ಒದಗಿಸಲಾಗುತ್ತದೆ ಎಂದು ಸಂಘದ ಕಾರ್ಯ ನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ. ಕೆಇಎ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಹೇಳಿದ್ದಾರೆ.

ವಾಸಸ್ಥಳ ದೃಢೀಕರಣ ಪತ್ರಕ್ಕಿಲ್ಲ ಮಾನ್ಯತೆ

ಶಾಶ್ವತ ವಾಸಸ್ಥಾನ ದೃಢೀಕರಣ ಪತ್ರಕ್ಕಷ್ಟೇ ದೊರೆಯಲಿದೆ ಕಿಮ್ಮತ್ತು

• ಜಯಸಿಂಹ ಆರ್.

ಮುಖ್ಯಾಂಶಗಳು

- ಉಪ ತಹಶೀಲ್ದಾರ್, ಮೇಲಿನ ಹಂತದ ಅಧಿಕಾರಿಗಳು ನೀಡಿದರಷ್ಟೇ ಮಾನ್ಯತೆ
- ಪಿಡಿಒ ನೀಡುವ 'ವಾಸಸ್ಥಳ ದೃಢೀಕರಣ ಪತ್ರ' ಎಸ್‌ಐಆರ್ ಪಟ್ಟಿಯಲ್ಲಿಲ್ಲ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಅಗತ್ಯ ದಾಖಲೆಗಳು ಇಲ್ಲದ ಮತದಾರರಿಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೇ 'ವಾಸಸ್ಥಳ ದೃಢೀಕರಣ ಪತ್ರ' ನೀಡಲು ರಾಜ್ಯ ಸರ್ಕಾರವು ಮುಂದಾಗಿದೆ. ಎಸ್‌ಐಆರ್ ಮಾರ್ಗಸೂಚಿಗಳ ಪ್ರಕಾರ, ಈ ಪ್ರಮಾಣಪತ್ರವು ಮಾನ್ಯವಾಗುವುದಿಲ್ಲ.

ಮತದಾರರು ತಾವು ಭಾರತದ ಪೌರರು ಎಂಬುದನ್ನು ಸಾಬೀತುಪಡಿಸಲು ಎಸ್‌ಐಆರ್ ವೇಳೆ 11 ವಿವಿಧ ದಾಖಲೆಗಳಲ್ಲಿ ಒಂದನ್ನು ಸಲ್ಲಿಸಬೇಕು. ಈ 11ರ ಪೈಕಿ ಎರಡನೇ ಕ್ರಮಸಂಖ್ಯೆಯಲ್ಲಿ, 'ಶಾಶ್ವತ ನಿವಾಸಿ ಪ್ರಮಾಣ ಪತ್ರ'ವನ್ನು ಪಟ್ಟಿಮಾಡಿದೆ.

ರಾಜ್ಯದ ಅರ್ಹ ಮತದಾರರು ಎಸ್‌ಐಆರ್ ಮೂಲಕ ಮತದಾನದ ಹಕ್ಕು ಕಳೆದುಕೊಳ್ಳಬಾರದು. ಇದಕ್ಕಾಗಿ ಅರ್ಹರಿಗೆ ವಾಸಸ್ಥಳ ದೃಢೀಕರಣ ಪ್ರಮಾಣಪತ್ರ ನೀಡಲಾಗುತ್ತದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದರು. ಇದೇ ಜೂನ್ 13ರಂದು ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿತ್ತು. ಅದರಂತೆ 'ವಾಸಸ್ಥಳ ದೃಢೀಕರಣ ಪತ್ರ' ನೀಡುವ ಅಧಿಕಾರವನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಒ) ನೀಡಿ, ಸರ್ಕಾರವು ಇದೇ 20ರಂದು ಆದೇಶಿಸಿತ್ತು.

ರಾಜ್ಯ ಸರ್ಕಾರವು ನೀಡಲು ಹೊರಟಿರುವ 'ವಾಸಸ್ಥಳ ದೃಢೀಕರಣ ಪತ್ರ'ಕ್ಕೂ, ಭಾರತೀಯ ಚುನಾವಣಾ ಆಯೋಗವು ಪಟ್ಟಿ ಮಾಡಿರುವ 'ಶಾಶ್ವತ ನಿವಾಸಿ ಪ್ರಮಾಣಪತ್ರ'ಕ್ಕೂ ವ್ಯತ್ಯಾಸ ವಿದೆ. ವಾಸಸ್ಥಳ ದೃಢೀಕರಣ ಪತ್ರವು ವಿಳಾಸ ದೃಢೀಕರಣದ ದಾಖಲೆಯಾದರೆ, ಶಾಶ್ವತ ನಿವಾಸಿ ಪ್ರಮಾಣಪತ್ರವು ಪೌರತ್ವದ ದೃಢೀಕರಣದ ದಾಖಲೆ.

ಎಸ್‌ಐಆರ್

ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ನಡೆಯುತ್ತಿದ್ದ ವೇಳೆ ರಾಜ್ಯ ಸರ್ಕಾರವು ಮತದಾರರಿಗೆ 'ಶಾಶ್ವತ ನಿವಾಸಿ ಪ್ರಮಾಣ ಪತ್ರ'ವನ್ನು ನೀಡಿತ್ತು. ಈ ಪತ್ರಗಳನ್ನು ಮಾನ್ಯ ಮಾಡಬಹುದೇ ಎಂದು ಸ್ಪಷ್ಟನೆ ಕೇಳಿ ಅಲ್ಲಿನ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿಯು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದರು. ಫೆಬ್ರುವರಿ 6ರಂದು ಚುನಾವಣಾ ಆಯೋಗವು ಪಶ್ಚಿಮ ಬಂಗಾಳ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿಗೆ ಪತ್ರ ಬರೆದು, 'ಜಿಲ್ಲಾಧಿಕಾರಿ, ಹೆಚ್ಚುವರಿ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ಕಲೆಕ್ಟರ್ ಮಟ್ಟದ ಅಧಿಕಾರಿಗಳು ನೀಡಿದ ಶಾಶ್ವತ ನಿವಾಸಿ ಪ್ರಮಾಣಪತ್ರವನ್ನು ಮಾತ್ರ ಪರಿಗಣಿಸಿ' ಎಂದು ಸೂಚಿಸಿತ್ತು.

'ರಾಜ್ಯದಲ್ಲಿ ಉಪ ತಹಶೀಲ್ದಾರ್ ಮತ್ತು ಅದಕ್ಕಿಂತ ಮೇಲಿನ ಹುದ್ದೆಯಲ್ಲಿರುವ ಅಧಿಕಾರಿಗಳು ಮಾತ್ರವೇ ಶಾಶ್ವತ ನಿವಾಸಿ ಪ್ರಮಾಣಪತ್ರ ನೀಡುವ ಅಧಿಕಾರ ಹೊಂದಿದ್ದಾರೆ. ಅವರು ನೀಡುವ ಪ್ರಮಾಣಪತ್ರವು ಎಸ್‌ಐಆರ್‌ನಲ್ಲಿ ಮಾನ್ಯವಾಗಲಿದೆ. ಆದರೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನೀಡಲಾಗುವ ವಾಸಸ್ಥಳ ದೃಢೀಕರಣ ಪತ್ರಕ್ಕೆ ಆ ಮಾನ್ಯತೆ ಇರುವುದಿಲ್ಲ' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯ ಮೂಲಗಳು ತಿಳಿಸಿವೆ.

'ನಿಯಮಗಳು ಬದಲಾಗುವುದಿಲ್ಲ'

'ಎಸ್‌ಐಆರ್ ಪ್ರಕ್ರಿಯೆಯ ಮಾರ್ಗಸೂಚಿ ಮತ್ತು ನಿಯಮಗಳನ್ನು ಭಾರತೀಯ ಚುನಾವಣಾ ಆಯೋಗವು ಸಿದ್ಧಪಡಿಸಿದೆ. ಇಡೀ ದೇಶಕ್ಕೆ ಅದು ಏಕಪ್ರಕಾರವಾಗಿ ಅನ್ವಯವಾಗುತ್ತದೆ. ಎಸ್‌ಐಆರ್ ಪ್ರಕ್ರಿಯೆ ವೇಳೆ ಒದಗಿಸಬೇಕಾದ ದಾಖಲೆಗಳಲ್ಲಿ 'ಶಾಶ್ವತ ನಿವಾಸಿ ಪ್ರಮಾಣಪತ್ರ'ವೂ ಇದೆ. ಆದರೆ, ಸೂಚಿತ ಅಧಿಕಾರಿಗಳು ನೀಡಿದಾಗ ಮಾತ್ರ ಆ ಪ್ರಮಾಣಪತ್ರಗಳು ಮಾನ್ಯವಾಗುತ್ತವೆ. ಕರ್ನಾಟಕದಲ್ಲಿ ಈ ನಿಯಮ ಬದಲಾಗುವುದಿಲ್ಲ' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯ ಮೂಲಗಳು ಸ್ಪಷ್ಟಪಡಿಸಿವೆ.

'ಪಶ್ಚಿಮ ಬಂಗಾಳದಲ್ಲಿ ಉಪವಿಭಾಗಾಧಿಕಾರಿಯ ಅಧೀನ ಅಧಿಕಾರಿಗಳು ನೀಡಿದ್ದ ಶಾಶ್ವತ ನಿವಾಸಿ ಪ್ರಮಾಣಪತ್ರವನ್ನು ಹಲವು ಮತದಾರರು ಸಲ್ಲಿಸಿದ್ದರು. ಅವುಗಳು ಮಾನ್ಯವಾಗಿಲ್ಲ. ಹೀಗಾಗಿ ಹೊಸದಾಗಿ ಪ್ರಮಾಣಪತ್ರಗಳನ್ನು ಸಲ್ಲಿಸಿ ಎಂದು ಮತದಾರರ ನೋಂದಣಾಧಿಕಾರಿಗಳು ಮತದಾರರಿಗೆ ನೋಟಿಸ್ ನೀಡಿದ್ದರು. ಕರ್ನಾಟಕದಲ್ಲಿ ಉಪ ತಹಶೀಲ್ದಾರ್ ದರ್ಜೆಗಿಂತ ಕೆಳಹಂತದ ಅಧಿಕಾರಿಗಳು ನೀಡುವ ಪ್ರಮಾಣಪತ್ರಗಳು ಮಾನ್ಯವಾಗುವುದಿಲ್ಲ' ಎಂದು ವಿವರಿಸಿದರು.

'ಶಾಶ್ವತ ನಿವಾಸಿ ಪ್ರಮಾಣಪತ್ರ ಪಡೆಯಲು ಸಲ್ಲಿಸುವ ಅರ್ಜಿಯ ಜತೆಗೆ ಕೆಲ ದಾಖಲೆ ಪತ್ರಗಳನ್ನೂ ಒದಗಿಸಬೇಕು. ಆಧಾರ್, ಮತದಾರರ ಗುರುತಿನ ಚೀಟಿ (ಎಪಿಕ್), ಗುರುತಿನ ದಾಖಲೆ, ಪಾಸ್‌ಪೋರ್ಟ್, ಪಡಿತರ ಚೀಟಿಯನ್ನು ಒದಗಿಸಬೇಕು. ಈ ಪೈಕಿ ಪಾಸ್‌ಪೋರ್ಟ್ ಇದ್ದರೆ, ಶಾಶ್ವತ ನಿವಾಸಿ ಪ್ರಮಾಣಪತ್ರ ಇಲ್ಲದಿದ್ದರೂ ಎಸ್‌ಐಆರ್‌ನಲ್ಲಿ ಪರಿಗಣಿಸಲಾಗುತ್ತದೆ. ಹೀಗಾಗಿ ರಾಜ್ಯ ಸರ್ಕಾರವು ಕೊಡಲು ಹೊರಟಿರುವ 'ವಾಸಸ್ಥಳ ದೃಢೀಕರಣ ಪತ್ರ'ದಿಂದ ಹೆಚ್ಚಿನ ಉಪಯೋಗವಾಗುವುದಿಲ್ಲ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಆರ್‌ಎಸ್‌ಎಸ್ ವಿರುದ್ಧ ಸಂಸದ ಅವಾಚ್ಯ ಪದ ಪ್ರಯೋಗ ಆರೋಪ

ವಿಜಯಪುರ: ಸಂಸದ ರಮೇಶ ಜಿಗಜಿಣಗಿ ಅವರು ತಮಗೆ ಫೋನ್ ಕರೆ ಮಾಡಿದ್ದ ವ್ಯಕ್ತಿಯೊಬ್ಬರ ಜೊತೆ ಮಾತನಾಡುವಾಗ ಆರ್‌ಎಸ್‌ಎಸ್ ಕುರಿತು ಅವಾಚ್ಯ ಪದ ಪ್ರಯೋಗಿಸಿರುವ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ನೀವೂ ಒಬ್ಬ ದಲಿತ ಸಮುದಾಯದವರಾಗಿ ಆರ್‌ಎಸ್‌ಎಸ್ ವಿಷಯ ದಲಿತ ಮನುಷ್ಯನಿಗೆ ಏಕೆ ಬೇಕು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಏಕೆ ಹೇಳಿದ್ದೀರಿ?' ಎಂದು ಕರೆ ಮಾಡಿದ್ದ ವ್ಯಕ್ತಿ ಸಂಸದ ಜಿಗಜಿಣಗಿ ಅವರ ಬಳಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಆ ವ್ಯಕ್ತಿಯ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಜಿಗಜಿಣಗಿ ಅವರು, 'ಆರ್‌ಎಸ್‌ಎಸ್‌ನವರು ತುಂಬಾ ಡೇಂಜರ್...' ಮಕ್ಕಳು, ಅವರನ್ನು ಎದುರು ಹಾಕಿಕೊಂಡವರು ಯಾರೂ ಉಳಿದಿಲ್ಲ' ಎಂದು ಹೇಳಿರುವ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗಿದೆ.

ಆರ್‌ಎಸ್‌ಎಸ್‌ಗೆ ಗೊತ್ತು: ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸಂಸದ ರಮೇಶ ಜಿಗಜಿಣಗಿ, 'ನಾನೇನು ಎಂಬುದು ಆರ್‌ಎಸ್‌ಎಸ್‌ನವರಿಗೆ ಗೊತ್ತು. ನನ್ನ ಮತ್ತು ಆರ್‌ಎಸ್‌ಎಸ್ ನಡುವೆ ಹುಳಿ ಹಿಂಡಲು ಕೆಲವರು ವಿಫಲ ಯತ್ನ ನಡೆಸಿದ್ದಾರೆ. ಇದರಿಂದ ಯಾವುದೇ ಪ್ರಯೋಜನವಾಗದು. ನಾನು, ಆರ್‌ಎಸ್‌ಎಸ್ ಅಥವಾ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನಾಗಲಿ ನಿಂದಿಸಿಲ್ಲ. ನನಗೆ ಫೋನ್ ಕರೆ ಮಾಡಿದ್ದ ವ್ಯಕ್ತಿಯ ಜೊತೆ ಮಾತನಾಡುವಾಗ ಆತನಿಗೆ ಬುದ್ಧಿವಾದ ಹೇಳಿದ್ದೇನೆ ಅಷ್ಟೇ' ಎಂದರು.



ಹರಿಹರ: ಶಂಕಿತ ಉಗ್ರನ ಬಂಧನ

ದಾವಣಗೆರೆ: ಜಿಲ್ಲೆಯ ಹರಿಹರ ತಾಲ್ಲೂಕಿನ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಶಂಕಿತ ಉಗ್ರನೊಬ್ಬನನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಉತ್ತರಪ್ರದೇಶದ ಶಹಜಹಾನ್‌ಪುರದ ಸೊಹೇಲ್ (20) ಬಂಧಿತ. ಈತ ಕಾರ್ಖಾನೆಯೊಂದರಲ್ಲಿ ಪೇಂಟಿಂಗ್ ಕೆಲಸ ಮಾಡಿಕೊಂಡಿದ್ದ. ಜೂನ್ 4ರಂದು ತುಮಕೂರು ಮತ್ತು ದಾವಣಗೆರೆಯಲ್ಲಿ ಬಂಧಿತರಾದ ಶಂಕಿತ ಉಗ್ರರು ನೀಡಿದ ಸುಳಿವು ಆಧರಿಸಿ ಕಾರ್ಯಾಚರಣೆ ನಡೆಸಲಾಗಿದೆ.

'ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ)ಯ ಸೂಚನೆಯ ಮೇರೆಗೆ ಜಿಲ್ಲಾ ಪೊಲೀಸರು ಮಂಗಳವಾರ ನಸುಕಿನಲ್ಲಿ ಕಾರ್ಯಾಚರಣೆ ನಡೆಸಿ ಶಂಕಿತ ಆರೋಪಿಯನ್ನು ಬಂಧಿಸಿದ್ದಾರೆ. ಪ್ರಾಥಮಿಕ ವಿಚಾರಣೆ ಪೂರ್ಣಗೊಳಿಸಿ ತುಮಕೂರು ಪೊಲೀಸರಿಗೆ ಹಸ್ತಾಂತರಿಸಲಾಗಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

ಭಯೋತ್ಪಾದಕ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಯು ಶಂಕಿತ ಉಗ್ರನ ಮೊಬೈಲ್‌ನಲ್ಲಿದ್ದ ವಾಟ್ಸ್ ಆ್ಯಪ್‌ನಲ್ಲಿ ಪತ್ತೆಯಾಗಿದೆ. ಪಾಕಿಸ್ತಾನದ ಅನೇಕರ ಜೊತೆಗೆ ಆರೋಪಿಯು ಸಂಪರ್ಕದಲ್ಲಿರುವುದು ಗೊತ್ತಾಗಿದೆ ಎಂದು ಮೂಲಗಳು ವಿವರಿಸಿವೆ.

'ಗ್ಯಾರಂಟಿ' ನಿಲ್ಲಿಸಲು ಯತ್ನ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸಲು ಸರ್ಕಾರಕ್ಕೆ ಮನಸ್ಸಿಲ್ಲ. ಹಣವೂ ಇಲ್ಲ. ವಿವಿಧ ಮಾನದಂಡ ಹೇರಿ ಫಲಾನುಭವಿಗಳನ್ನು ಅರ್ಹರು ಮತ್ತು ಅನರ್ಹರು ಎಂದು ಪಟ್ಟಿ ಮಾಡಿ, ಯೋಜನೆ ಹಿಂಪಡೆಯಲು ಪ್ರಯತ್ನಿಸುತ್ತಿದೆ' ಎಂದು ಸಂಸದ ಜಗದೀಶ ಶೆಟ್ಟರ್ ಆರೋಪಿಸಿದರು.

'ಕಳೆದ ವಿಧಾನಸಭೆ ಚುನಾವಣೆಯಲ್ಲಿ 'ಗ್ಯಾರಂಟಿ' ಹೆಸರಿನಲ್ಲಿ ಜನರನ್ನು ಮರಳು ಮಾಡಿ ಕಾಂಗ್ರೆಸ್‌ನವರು ಗೆದ್ದರು. ಈಗ ನೇರವಾಗಿ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಿದರೆ, ಜನರಿಂದ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ. ಪಕ್ಷಕ್ಕೆ ಕೆಟ್ಟ ಹೆಸರು ಬರುತ್ತದೆ. ಅದಕ್ಕೆ ಅರ್ಹರು, ಅನರ್ಹರು ಎಂದು ಪಟ್ಟಿ ಮಾಡಿ ಫಲಾನುಭವಿಗಳನ್ನು ಯೋಜನೆಗಳಿಂದ ಹೊರಗಿಡುತ್ತಿದ್ದಾರೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ನಾವು ಈ ಯೋಜನೆಗಳ ವಿರೋಧಿಗಳಲ್ಲ. ಆದರೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ರಾಜ್ಯದಲ್ಲಿ ಅಭಿವೃದ್ಧಿಯೇ ಸ್ಥಗಿತವಾಗಿದೆ. ವಿವಿಧ ಕಾಮಗಾರಿ ಕೈಗೊಂಡ ಗುತ್ತಿಗೆದಾರರಿಗೆ ₹40 ಸಾವಿರ ಕೋಟಿ ಬಿಲ್ ಪಾವತಿ ಬಾಕಿ ಇದೆ. ಇದರಿಂದ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ' ಎಂದರು.

'ಪದ್ಮ' ಪ್ರದಾನ

ರಾಷ್ಟ್ರಪತಿ ಭವನದ ಗಣತಂತ್ರ ಮಂಟಪದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕನ್ನಡಿಗರಾದ ಪ್ರಭಾಕರ ಕೋರೆ, ಡಾ. ಸುರೇಶ್ ಹನಗವಾಡಿ ಮತ್ತು ಶುಭಾ ವೆಂಕಟೇಶ್ ಅಯ್ಯಂಗಾರ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ಹಾಗೂ ಮಲಯಾಳಂ ನಟ ಮಮ್ಮೂಟ್ಟಿ ಅವರಿಗೆ ಪದ್ಮಭೂಷಣ ಪ್ರಶಸ್ತಿ ಪ್ರದಾನ ಮಾಡಿದರು



ಪ್ರಭಾಕರ ಕೋರೆ

ಶುಭಾ ವೆಂಕಟೇಶ ಅಯ್ಯಂಗಾರ್

ಡಾ. ಸುರೇಶ್ ಹನಗವಾಡಿ

ಮಮ್ಮೂಟ್ಟಿ

'ಅಡ್ಡಮತದಾನ: ಇಬ್ಬರೇ ಹೊಣೆ'

ಒಂದನೇ ಪುಟದಿಂದ...

ಅಲ್ಲದೇ 'ಈ ಘಟನೆಯಿಂದ ಪಕ್ಷಕ್ಕೆ ತೀವ್ರ ಮುಜುಗರ ಉಂಟಾಗಿದೆ' ಎಂದು ನಿತಿನ್ ನವೀನ್ ಅವರು ಅಸಮಾಧಾನ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

'ಚುನಾವಣೆ ಸಂದರ್ಭದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಯಲ್ಲಿ ಸಮನ್ವಯ ಇರಲಿಲ್ಲ. ಅಡ್ಡ ಮತದಾನ ಮಾಡಬಹುದಾದ ಶಾಸಕರ ಮೇಲೆ ನಿಗಾ ವಹಿಸಲಿಲ್ಲ. ನಿಮ್ಮ ನಿರ್ಲಕ್ಷ್ಯದಿಂದಲೇ ಪಕ್ಷಕ್ಕೆ ಹಿನ್ನಡೆಯಾಗಿದೆ. ಮುಂದೆ ಇಂತಹ ಪ್ರಮಾದವಾಗದಂತೆ ಎಚ್ಚರಿಕೆ ವಹಿಸಬೇಕು' ಎಂದು ತಾಕೀತು ಮಾಡಿದರು ಎಂದು ಗೊತ್ತಾಗಿದೆ.

'ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿರುವವರನ್ನು ಸುಮ್ಮನೆ ಬಿಡುವ ಪ್ರಶ್ನೆಯೇ ಇಲ್ಲ. ಅವರ ವಿರುದ್ಧ ನಾವೇ ಮಾಹಿತಿಯನ್ನು ಸಂಗ್ರಹಿಸುತ್ತಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ನಿತಿನ್ ನವೀನ್ ಅವರು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

ನಿತಿನ್ ನವೀನ್ ಅವರು ವಿಜಯೇಂದ್ರ, ಅಶೋಕ, ವಿಧಾನಸಭೆಯಲ್ಲಿ ವಿರೋಧ ಪಕ್ಷದ ಮುಖ್ಯಸಚೇತಕ ದೊಡ್ಡನಗೌಡ ಪಾಟೀಲ, ಪರಿಷತ್ತಿನಲ್ಲಿ ವಿರೋಧ ಪಕ್ಷದ ಮುಖ್ಯಸಚೇತಕ ಎನ್. ರವಿಕುಮಾರ್ ಅವರ ಜತೆಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿ ಮಾಹಿತಿ ಪಡೆದರು. ಬಳಿಕ ನಾಲ್ವರ ಜತೆಗೆ ಸಮಾಲೋಚನೆ ನಡೆಸಿದರು.

ಆ ಬಳಿಕ, ರಾಜ್ಯ ನಾಯಕರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನೂ ಭೇಟಿ ಮಾಡಿ ಮಾಹಿತಿ ನೀಡಿದರು. 'ಪಕ್ಷದ ಮೂವರು ಶಾಸಕರು ಅಡ್ಡ ಮತದಾನ ಮಾಡಿದ್ದಾರೆ' ಎಂದೂ ರಾಜ್ಯದ ನಾಯಕರು ಈ ವೇಳೆ ತಿಳಿಸಿದರು ಎಂದು ಗೊತ್ತಾಗಿದೆ.

ವರದಿ ಇಂದು ಸಲ್ಲಿಕೆ

ಒಂದನೇ ಪುಟದಿಂದ...

ಲಿಂಗರಾಜ ಪಾಟೀಲ ಅವರಿಗೆ ನಿಗದಿ ಮಾಡಲಾಗಿದ್ದ 30 ಶಾಸಕರ ಪಟ್ಟಿಯಲ್ಲಿದ್ದ ಕೆಲವರು ಮತ್ತು ಜೆಡಿಎಸ್‌ಗೆ ಮತ ಹಾಕಲು ಸೂಚಿಸಿದ್ದ ಮೂವರು ಶಾಸಕರನ್ನೂ ಪ್ರಶ್ನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರಾಥಮಿಕ ವರದಿಯನ್ನು ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರಿಗೆ ಸಲ್ಲಿಸಲಿದೆ. ಅಂತಿಮ ವರದಿಯನ್ನು ಕೆಲವು ದಿನಗಳ ಬಳಿಕ ಸಲ್ಲಿಸಲಿದೆ.

'ಸವಿಸ್ತಾರ ಮಾಹಿತಿ'

'ವಿಪ್ ಉಲ್ಲಂಘಿಸಿದ ಬಗ್ಗೆ ಸವಿಸ್ತಾರವಾಗಿ ಮಾಹಿತಿಯನ್ನು ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರಿಗೆ ನೀಡಿದ್ದೇವೆ' ಎಂದು ಬಿ.ವೈ. ವಿಜಯೇಂದ್ರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಪ್ರಕರಣದ ಬಗ್ಗೆ ರಾಷ್ಟ್ರೀಯ ಅಧ್ಯಕ್ಷರು ತಮ್ಮ ಮೂಲದಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಪಕ್ಷಕ್ಕೆ ಅನ್ಯಾಯ ಹಾಗೂ ದ್ರೋಹ ಮಾಡಿದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದ್ದಾರೆ' ಎಂದರು.

'ಕ್ಷಮಿಸಲು ಸಾಧ್ಯವಿಲ್ಲ'

'ಭಿಕ್ಷುಕರಂತೆ ಟಿಕೆಟ್ ಪಡೆದು, ಗೆದ್ದು ಈಗ ಮೋಸ ಮಾಡಿದ್ದಾರೆ. ಪಕ್ಷಕ್ಕೆ ಮೋಸ ಮಾಡಿದವರಿಗೆ ಎಂದೆಂದೂ ಮರೆಯದಂತಹ ಪಾಠ ಕಲಿಸದೇ ಬಿಡುವುದಿಲ್ಲ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿ,'ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಅಂಕಿ–ಅಂಶಗಳು ರಾಷ್ಟ್ರಿಯ ಅಧ್ಯಕ್ಷರ ಬಳಿ ಇದೆ. ನಾವೂ ಕೂಡ ಮಾಹಿತಿ ನೀಡಿದ್ದೇವೆ. ಪಕ್ಷಕ್ಕೆ ದ್ರೋಹ ಬಗೆದವರಿಗೆ, ಮೋಸ ಮಾಡಿದವರಿಗೆ ತಕ್ಕ ಪಾಠ ಕಲಿಸುವುದಾಗಿಯೂ ಹೇಳಿದ್ದಾರೆ' ಎಂದರು.

ಮೀಸಲು ಹೆಚ್ಚಳ: ಜುಲೈ 15ಕ್ಕೆ ಅಂತಿಮ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಉದ್ಯೋಗಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಒಟ್ಟು ಮೀಸಲು ಪ್ರಮಾಣವನ್ನು ಶೇ50 ರಿಂದ 56ಕ್ಕೆ ಹೆಚ್ಚಳ ಮಾಡುವ ಕುರಿತಾದ ಮೇಲ್ಮನವಿಗಳ ಅಂತಿಮ ವಿಚಾರಣೆಯನ್ನು ಹೈಕೋರ್ಟ್ ಜುಲೈ 15ಕ್ಕೆ ನಿಗದಿಪಡಿಸಿದೆ.

ಮೀಸಲು ಅಧಿಸೂಚನೆ ರದ್ದು ಕೋರಿ ಸಾಮಾಜಿಕ ಕಾರ್ಯಕರ್ತ ಮಹೇಂದ್ರ ಕುಮಾರ್ ಮಿತ್ರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಗೂ 2023ರಲ್ಲಿ ಈ ಹಿಂದಿನ ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ಕಾಯ್ದೆಯನ್ನು ರದ್ದುಗೊಳಿಸಿದ; ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಸ್‌ಎಟಿ) ಆದೇಶದ ವಿರುದ್ಧ ಸರ್ಕಾರ ಮತ್ತಿತರರು ಸಲ್ಲಿಸಿರುವ ಮೇಲ್ಮನವಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಮೇಲ್ಮನವಿಗಳ ಸಂಬಂಧ ಲಿಖಿತ ವಾದಾಂಶ ಸಲ್ಲಿಸಲಾಗಿದ್ದು, ಮುಂದಿನ ವಾರ ಯಾವುದೇ ದಿನ ವಿಚಾರಣೆಗೆ ನಿಗದಿ ಮಾಡಬಹುದು' ಎಂದು ಕೋರಿದರು.

ಏತನ್ಮಧ್ಯೆ, ಕೆಪಿಎಸ್‌ಸಿ ಪರ ಹಾಜರಾಗಿದ್ದ ರೂಬೆನ್ ಜಾಕೊಬ್, '2023-2024ನೇ ಸಾಲಿನ 384 ಗೆಜೆಟೆಟ್ ಪ್ರೊಬೇಷನರಿ ಹುದ್ದೆಗಳ ನೇಮಕಕ್ಕೆ ಸಂಬಂಧಿಸಿದ ಸಂದರ್ಶನ ಪ್ರಕ್ರಿಯೆ ಪೂರ್ಣಗೊಂಡಿದೆ. ಆದರೆ, ಫಲಿತಾಂಶ ಪ್ರಕಟಿಸುವಂತಿಲ್ಲ ಎಂದು ನ್ಯಾಯಾಲಯ ಮಧ್ಯಂತರ ಆದೇಶ ನೀಡಿರುವುದರಿಂದ ತೊಂದರೆ ಆಗುತ್ತಿದೆ. ಆದ್ದರಿಂದ, ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲು ಅನುಮತಿ ನೀಡಬೇಕು' ಎಂದು ಕೋರಿದರು.

ಇದಕ್ಕೆ ನ್ಯಾಯಪೀಠ, 'ಬಾಕಿ ಇರುವ ಅರ್ಜಿಗಳನ್ನು ಆದಷ್ಟು ಬೇಗ ಪರಿಗಣಿಸಿ ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ನಾವು ಎಲ್ಲಾ ಅರ್ಜಿಗಳ ವಿಚಾರಣೆಗೆ ಸಿದ್ಧವಿದ್ದೇವೆ. ಸರ್ಕಾರ ಸಿದ್ಧ ಎಂದರೆ ಇಂದಿನಿಂದಲೇ ವಿಚಾರಣೆ ಕೈಗೆತ್ತಿಕೊಳ್ಳಲಿದೆ' ಎಂದಿತು. ಅಂತಿಮವಾಗಿ, 'ಅಡ್ವೊಕೇಟ್ ಜನರಲ್ ಮನವಿ ಮೇರೆಗೆ ಅಂತಿಮ ವಿಚಾರಣೆಯನ್ನು ಜುಲೈ 15ಕ್ಕೆ ನಿಗದಿಪಡಿಸಲಾಗುವುದು. ಉಭಯ ಪಕ್ಷಗಾರರು ವಾದ-ಪ್ರತಿವಾದಕ್ಕೆ ಸಿದ್ಧರಾಗಿ ಬನ್ನಿ' ಎಂದು ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪಿ.ಎಸ್.ರಾಜಗೋಪಾಲ್, ಸರ್ಕಾರಕ್ಕೆ ನಿರ್ದೇಶಿಸಿತು.

ಒಳಮೀಸಲಾತಿ: ಸರ್ಕಾರಕ್ಕೆ ನೋಟಿಸ್

ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಹಂಚಿಕೆ ಮತ್ತು ವರ್ಗೀಕರಣದ ಆದೇಶವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಆದೇಶ ಪ್ರಶ್ನಿಸಿ, 'ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಒಕ್ಕೂಟ'ದ ಅಧ್ಯಕ್ಷ ಶೇಷಪ್ಪ ಅಂದೋಳ್ಳು ಸೇರಿದಂತೆ ಒಟ್ಟು ಎಂಟು ಜನರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಚ್.ವಿ.ಮಂಜುನಾಥ್ ಅವರ ವಾದ ಆಲಿಸಿದ ನ್ಯಾಯಪೀಠ ಪ್ರತಿವಾದಿಗಳಾದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಲು ಆದೇಶಿಸಿತು.

ವಿದೇಶಿ ದೇಣಿಗೆ ನಿಯಮ ಬಿಗಿ

ಒಂದನೇ ಪುಟದಿಂದ...

ಆದರೆ ಧಾರ್ಮಿಕ ಉದ್ದೇಶಗಳ ಅಡಿಯಲ್ಲಿ ಮೂರು ಚಟುವಟಿಕೆಗಳನ್ನು ಅಂದರೆ– ಧಾರ್ಮಿಕ ತತ್ವಶಾಸ್ತ್ರದ ದಾಖಲೀಕರಣ ಮತ್ತು ಸಂರಕ್ಷಣೆಯಲ್ಲಿ ತೊಡಗಿರುವ ಸಂಸ್ಥೆಗಳ ನಿರ್ವಹಣೆ, ಧಾರ್ಮಿಕ ಶಿಕ್ಷಣ ನೀಡುವುದು ಹಾಗೂ ಸ್ಥಳೀಯ ನಂಬಿಕೆಗಳ ಸಂರಕ್ಷಣೆಯ ಕೆಲಸವನ್ನು 'ಮತಾಂತರವನ್ನು ಹೊರತುಪಡಿಸಿ' ಕೈಗೊಳ್ಳಬೇಕು ಎಂದು ನಿಯಮವು ಸೂಚಿಸುತ್ತದೆ.

ಸಾಂಸ್ಕೃತಿಕ ಉದ್ದೇಶಗಳಡಿ ದೃಶ್ಯಕಲೆ, ಶಿಲ್ಪಕಲೆ, ಸಿನಿಮಾ, ಛಾಯಾಗ್ರಹಣ ಮತ್ತು ರಾಜಕೀಯ ಹಾಗೂ ಸೈದ್ಧಾಂತಿಕ ವಿಷಯಗಳನ್ನು ಹೊರತುಪಡಿಸಿ ಭಾರತೀಯ ಸಂಪ್ರದಾಯಗಳಿಂದ ಪ್ರೇರಿತವಾದ ಸಮಕಾಲೀನ ಕಲೆಗಳ ಪ್ರಚಾರಕ್ಕಾಗಿ ವಿದೇಶಿ ದೇಣಿಗೆ ಬಳಸಬಹುದು. ಭರತನಾಟ್ಯ, ಕಥಕ್, ಒಡಿಸ್ಸಿ, ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ ಮತ್ತು ಯಕ್ಷಗಾನ ಕಲೆಗಳಿಗೆ ಬೆಂಬಲ ನೀಡಲೂ ದೇಣಿಗೆ ಪಡೆಯಬಹುದು.

ವಿಶ್ರಾಂತಿ: ಕೇರಳಂಗೆ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದ 21 ದಿನಗಳ ನಂತರ ಸಿದ್ದರಾಮಯ್ಯ ವಿಶ್ರಾಂತಿಗಾಗಿ ತಮ್ಮ ಕೆಲವೇ ಆಪ್ತರ ಜತೆಗೆ ಕೇರಳಂನ ಫಾರಂ ಹೌಸ್‌ವೊಂದಕ್ಕೆ ತೆರಳಿದ್ದಾರೆ.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಅವರು ಯಾವುದೇ ಸಾರ್ವಜನಿಕ ಸಮಾರಂಭಗಳಲ್ಲಿ ಕಾಣಿಸಿಕೊಂಡಿರಲಿಲ್ಲ. ಆದರೆ, ನಿತ್ಯವೂ ಅವರ ಮನೆಗೆ ಆಪ್ತ ಶಾಸಕರು, ಸಚಿವ ಸ್ಥಾನದ ಆಕಾಂಕ್ಷಿಗಳು, ಅಭಿಮಾನಿಗಳ ದಂಡು ಭೇಟಿ ನೀಡುತ್ತಿತ್ತು. ವಿಧಾನಸಭೆಯಿಂದ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಜೂನ್ 18ರಂದು ನಡೆದ ಚುನಾವಣೆಯಲ್ಲಿ ಸಿದ್ದರಾಮಯ್ಯ ಮತ ಚಲಾಯಿಸಿದ್ದರು.

ನಂತರ ಜೂನ್ 21ರಂದು ಅರಮನೆ ಮೈದಾನದಲ್ಲಿ ನಡೆದ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರ ಪದಗ್ರಹಣ ಸಮಾರಂಭದಲ್ಲಿ ಭಾಗವಹಿಸಿ, ಭಾಷಣ ಮಾಡಿದ್ದರು. ಕಾರ್ಯಕ್ರಮದ ತರುವಾಯ ವಿಶ್ರಾಂತಿಗಾಗಿ ಕೇರಳಂನತ್ತ ಪಯಣ ಬೆಳೆಸಿದ್ದಾರೆ.

ಕಾಂಗ್ರೆಸ್ ಅಧಿಕಾರದಲ್ಲಿ ಇಲ್ಲದಿದ್ದಾಗ ಅವರು ಪ್ರತಿ ವರ್ಷ ವಿಶ್ರಾಂತಿಗಾಗಿ ಕೇರಳಂಗೆ ಹೋಗುತ್ತಿದ್ದರು. 2018–19ರಲ್ಲಿ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಧರ್ಮಸ್ಥಳ ಸಮೀಪದ ಉಜಿರೆಯಲ್ಲಿರುವ ಪ್ರಕೃತಿ ಚಿಕಿತ್ಸಾ ಕೇಂದ್ರ 'ಶಾಂತಿವನ'ಕ್ಕೆ ಹೋಗಿದ್ದರು. ಅಲ್ಲಿ ಆಪ್ತರ ಜತೆ ಸಮಾಲೋಚನೆಯನ್ನೂ ನಡೆಸಿದ್ದರು. ಈ ವಿಶ್ರಾಂತಿಯು ನಂತರದ ರಾಜಕೀಯ ಬೆಳವಣಿಗೆಗಳಿಗೆ ಕಾರಣವಾಗಿತ್ತು.

ಶಿಕ್ಷಕನ ವಿರುದ್ಧ ಪೋಕ್ಸೊ ದಾಖಲು

ಹೂವಿನಹಡಗಲಿ: ತಾಲ್ಲೂಕಿನ ಗ್ರಾಮವೊಂದರ ಸರ್ಕಾರಿ ಪ್ರೌಢಶಾಲೆಯ 8ನೇ ತರಗತಿ ವಿದ್ಯಾರ್ಥಿನಿಯೊಂದಿಗೆ ಅನುಚಿತ ವರ್ತಿಸಿದ ಶಿಕ್ಷಕನ ವಿರುದ್ಧ ಇಟ್ಟಿಗಿ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪೋಕ್ಸೋ ಅಡಿ ಪ್ರಕರಣ ದಾಖಲಾಗಿದೆ.

ಶಾಲೆಗೆ ಪೂರೈಕೆಯಾಗಿದ್ದ ಸಮವಸ್ತ್ರಗಳನ್ನು ಜೋಡಿಸುವಂತೆ ಕೊಠಡಿಗೆ ಕರೆಸಿಕೊಂಡ ಶಿಕ್ಷಕ ವಿದ್ಯಾರ್ಥಿನಿ ಜತೆಗೆ ಅನುಚಿತವಾಗಿ ವರ್ತಿಸಿದ್ದಾನೆ. ತಕ್ಷಣ ಬಾಲಕಿ ಮನೆಗೆ ತೆರಳಿ ವಿಷಯ ತಿಳಿಸಿದ್ದು, ಪೋಷಕರು ಶಾಲೆ ಮುಂದೆ ಗಲಾಟೆ ಮಾಡಿದ್ದಾರೆ. ಪೊಲೀಸರು ಮಧ್ಯಪ್ರವೇಶಿಸಿ, ಶಿಕ್ಷಕನನ್ನು ವಶಕ್ಕೆ ಪಡೆದು ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಪೋಷಕರ ದೂರಿನ ಮೇರೆಗೆ ಪೊಲಿಸರು ಪೋಕ್ಸೋ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ರೈತ ಹೋರಾಟಕ್ಕೆ 100 ದಿನ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ 13 ಹಳ್ಳಿಗಳಲ್ಲಿ ಕೆಐಎಡಿಬಿಯ ಭೂ ಸ್ವಾಧೀನ ವಿರೋಧಿಸಿ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಭವನದ ಎದುರು ರೈತ ಸಂಘ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಮಂಗಳವಾರ 100 ದಿನ ಪೂರ್ಣಗೊಳಿಸಿದೆ.

ಮಹಿಳೆಯರು ಸರ್ಕಾರ ಮತ್ತು ಕೆಐಎಡಿಬಿ ವಿರುದ್ಧ ಪೊರಕೆ ಚಳವಳಿ ನಡೆಸಿ, 'ಯಾವುದೇ ಕಾರಣಕ್ಕೂ ಭೂಮಿ ಬಿಡಲ್ಲ' ಎಂದರು.

ನಿಧನ ವಾರ್ತೆ

ಖಾಝಿ ಅಲ್ ಹಾಜ್ ತ್ವಾಕಾ ಅಹ್ಮದ್ ಮುಸ್ಲಿಯಾರ್

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಖಾಝಿ ಅಲ್ ಹಾಜ್ ತ್ವಾಕಾ ಅಹ್ಮದ್ ಮುಸ್ಲಿಯಾರ್ (78) ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು. ಅವರಿಗೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಖಾಝಿಯಾಗಿ 2010ರಲ್ಲಿ ಅಧಿಕಾರ ಸ್ವೀಕರಿಸಿದ್ದರು.ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳ ರಾಜ್ಯದ 200ಕ್ಕೂ ಅಧಿಕ ಜಮಾತ್‌ಗಳ ಖಾಝಿಯಾಗಿದ್ದರು. ಇಸ್ಲಾಂನ ಕರ್ಮಶಾಸ್ತ್ರ ಪಂಡಿತರಾಗಿದ್ದ ಅವರು, ಧಾರ್ಮಿಕ ವಿಚಾರಗಳ ಜೊತೆಗೆ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ವರದಕ್ಷಿಣೆ ವಿರುದ್ಧವೂ ಆಂದೋಲನ ರೂಪಿಸಿದ್ದರು.

ಮೂಡುಬಿದಿರೆ ಸಮೀಪದ ಕಾಶಿಪಟ್ಣದಲ್ಲಿ ಅವರು 2012ರಲ್ಲಿ ಸ್ಥಾಪಿಸಿರುವ 'ದಾರುಲ್ ನೂರ್' ಎಂಬ ವಿದ್ಯಾಸಂಸ್ಥೆ ಬಡ ವಿದ್ಯಾರ್ಥಿಗಳಿಗೆ ಧಾರ್ಮಿಕ, ಲೌಕಿಕ ಶಿಕ್ಷಣ ನೀಡುತ್ತಿದೆ. ಸಮಸ್ತ ಕೇಂದ್ರ ಮುಶಾವರ ಸದಸ್ಯ ಹಾಗೂ ಜಿಲ್ಲಾ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಅವರ ದಫನ ಕಾರ್ಯವು ಕಾಶಿಪಟ್ಣದ ದಾರುಲ್ ನೂರ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಬುಧವಾರ (ಜೂನ್ 24) ಬೆಳಿಗ್ಗೆ 8 ಗಂಟೆಗೆ ನಡೆಯಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ.

ದೂರುದಾರರ ಕುಟುಂಬಕ್ಕೆ ವಚನಾನಂದ ಸ್ವಾಮೀಜಿ ಬೆದರಿಕೆ: ಹಿರಿಯ ವಕೀಲ ರವಿಶಂಕರ್ ಆರೋಪ

ನಿರೀಕ್ಷಣಾ ಜಾಮೀನು ಸರಿಯಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಪೋಕ್ಸೊ ಕಾಯ್ದೆಯ ಅಡಿಯಲ್ಲಿ ದೂರು ನೀಡಿದ ಕಾರಣ ಸಂತ್ರಸ್ತ ಬಾಲಕನ ಕುಟುಂಬಕ್ಕೆ ಹರಿಹರದ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಬೆದರಿಕೆ ಹಾಕಿದ್ದಾರೆ' ಎಂದು ಬಾಲಕನ ತಾಯಿಯ ಪರ ಹಿರಿಯ ವಕೀಲರು ಹೈಕೋರ್ಟ್‌ಗೆ ಅರುಹಿದರು.

'ವಚನಾನಂದ ಸ್ವಾಮೀಜಿಗೆ ನೀಡಲಾಗಿರುವ ನಿರೀಕ್ಷಣಾ ಜಾಮೀನು ರದ್ದುಪಡಿಸಬೇಕು' ಎಂದು ಕೋರಿ ಸಂತ್ರಸ್ತ ಬಾಲಕನೊಬ್ಬನ ತಾಯಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಂತ್ರಸ್ತ ಬಾಲಕನ ತಾಯಿಯ ಪರವಾಗಿ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಡಿ.ಆರ್. ರವಿಶಂಕರ್, ಬೆದರಿಕೆಯ ಬಗ್ಗೆ ವಿವರಿಸಿದರು. 'ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ' ಎಂದು ಹೇಳಿದರು.

ಅಂತೆಯೇ, 'ಎಫ್‌ಐಆರ್ ದಾಖಲಿಸಿದ ನಂತರ ಸ್ವಾಮೀಜಿ ನಮ್ಮ ಅರ್ಜಿದಾರರಿಗೆ ಬೆದರಿಕೆ ಹಾಕಿದ್ದಾರೆ. ನಿರೀಕ್ಷಣಾ ಜಾಮೀನು ರದ್ದುಪಡಿಸುವಂತೆ ಕೋರಿ ಪ್ರಾಸಿಕ್ಯೂಷನ್ ಕೂಡ ದಾವಣಗೆರೆ ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದೆ. ವಿಚಾರಣೆ ನಡೆಸಿರುವ ನ್ಯಾಯಾಲಯ; ಹೈಕೋರ್ಟ್‌ನಲ್ಲಿ ಈ ಅರ್ಜಿ ದಾಖಲಾಗಿರುವ ಹಿನ್ನೆಲೆಯಲ್ಲಿ ಆದೇಶವನ್ನು ಕಾಯ್ದಿರಿಸಿದ್ದು, ಇದೇ 30ಕ್ಕೆ ಮುದ್ದತು ನಿಗದಿಪಡಿಸಿದೆ' ಎಂದು ಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದ್ದರೆ ನಿರೀಕ್ಷಣಾ ಜಾಮೀನು ರದ್ದುಪಡಿಸಲಾಗುವುದು. ನಿಯಮಿತ (ರೆಗ್ಯುಲರ್) ಜಾಮೀನು ಪಡೆದುಕೊಳ್ಳಲಿ. ದೋಷಾರೋಪ ಪಟ್ಟಿ ಸಲ್ಲಿಕೆಯಾದರೆ ನಿರೀಕ್ಷಣಾ ಜಾಮೀನು ರದ್ದಾಗಬೇಕು ಎಂದೇನಿಲ್ಲ. ಆದರೆ, ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವ ವಿಧಾನ ಸರ್ವಥಾ ಸರಿಯಲ್ಲ' ಎಂದು ಪುನಃ ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

'ನಿರೀಕ್ಷಣಾ ಜಾಮೀನು ನೀಡಿ ವಿಚಾರಣಾ ನ್ಯಾಯಾಲಯ ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ, ನಿಯಮಿತ ಜಾಮೀನು ಪಡೆದುಕೊಳ್ಳಲು ಸ್ವಾತಂತ್ರ್ಯ ಕಲ್ಪಿಸಲಾಗುವುದು. ಎರಡು ವಾರಗಳವರೆಗೆ ಸ್ವಾಮೀಜಿಯನ್ನು ಬಂಧಿಸದಂತೆ ಆದೇಶಿಸಲಾಗುವುದು. ಅರ್ಜಿದಾರರು ಈಗಾಗಲೇ ನಿರೀಕ್ಷಣಾ ಜಾಮೀನಿನ ಲಾಭ ಪಡೆದಿರುವುದರಿಂದ, 10-15 ದಿನಗಳ ಕಾಲಾವಕಾಶ ನೀಡಲಾಗುವುದು. ಅಷ್ಟರಲ್ಲಿ ನಿಯಮಿತ ಜಾಮೀನು ಪಡೆದುಕೊಳ್ಳಲಿ' ಎಂದು ಹೇಳಿತು.

ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ದೋಷಾರೋಪ ಪಟ್ಟಿ ಸಲ್ಲಿಸಲು ಮುಂದಾದರೂ, 'ನ್ಯಾಯಪೀಠ ಪ್ರತಿವಾದಿ ಪರ ವಕೀಲರು ವಕಾಲತ್ತು ಸಲ್ಲಿಸಲಿ' ಎಂದು ಸ್ವೀಕರಿಸಿಲಿಲ್ಲ. ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಲಾಗಿದೆ.

ಪ್ರಕರಣ: ವಚನಾನಂದ ಸ್ವಾಮೀಜಿ ವಿರುದ್ಧ ಸಂತ್ರಸ್ತ ಬಾಲಕನೊಬ್ಬನ ತಾಯಿ 2026ರ ಮೇ 7ರಂದು ದೂರು ನೀಡಿದ್ದು, ಮೇ 8ರಂದು ಪೋಕ್ಸೊ ಕಾಯ್ದೆಯ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಕಲಂ 4, 6, 8, 10 ಮತ್ತು 12ರ ಅಡಿ ಎಫ್‌ಐಆರ್ ದಾಖಲಿಸಲಾಗಿದೆ. ಇದಕ್ಕೂ ಮೊದಲೇ ಅಂದರೆ ಮೇ 6ರಂದು ದಾವಣಗೆರೆಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಸ್ವಾಮೀಜಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

> ಯಾವ ಕಾರಣಕ್ಕೂ ಈ ನಿರೀಕ್ಷಣಾ ಜಾಮೀನು ಆದೇಶ ಹಾಗೇ ಉಳಿಯಲು ಸಾಧ್ಯವಿಲ್ಲ. ಇಂಥ ಮಂಜೂರಾತಿಗೆ ಅವಕಾಶವೇ ಇಲ್ಲ. ಅದು ರದ್ದಾಗಲೇಬೇಕಿದೆ
>
> **ನ್ಯಾ.ಎಂ.ನಾಗಪ್ರಸನ್ನ**

ಬಾಲಕರೂ ಸುರಕ್ಷಿತವಾಗಿಲ್ಲವೇ?

'ಮಠದ ಟ್ರಸ್ಟಿಗಳು ಹಾಗೂ ಸ್ವಾಮೀಜಿ ನಡುವೆ ವ್ಯಾಜ್ಯ ನಡೆದಿದೆ. ಸ್ವಾಮೀಜಿಯನ್ನು ಟ್ರಸ್ಟಿಗಳು ಮಠದಿಂದ ಹೊರಗೆ ಹಾಕಿದ್ದಾರೆ. ತದನಂತರ ಸುದ್ದಿಗೋಷ್ಠಿ ನಡೆಸಿ, ಸ್ವಾಮೀಜಿ ವಿರುದ್ಧ ಪೋಕ್ಸೊ ದೂರು ದಾಖಲಿಸುವುದಾಗಿ ಹೇಳಿಕೆ ನೀಡಿದ್ದಾರೆ. ಇದೊಂದು ಸುಳ್ಳು ದೂರು. ಈ ಪ್ರಕರಣದಲ್ಲಿ ನಾನು ವಕಾಲತ್ತು ಸಲ್ಲಿಸುವವನಿದ್ದೇನೆ. ನಾನಿನ್ನೂ ದಾಖಲೆಗಳನ್ನು ಓದಿಲ್ಲ. ಕಾಲಾವಕಾಶ ನೀಡಬೇಕು' ಎಂದು ವಿಚಾರಣೆ ವೇಳೆ ವಚನಾನಂದ ಸ್ವಾಮೀಜಿ ಪರ ಹಾಜರಾಗಿದ್ದ ವಕೀಲರು ಕೋರಿದರು.

ಇದಕ್ಕೆ ನ್ಯಾಯಪೀಠ, 'ಬಾಲಕಿಯರು ಸುರಕ್ಷಿತವಾಗಿಲ್ಲ ಎಂದುಕೊಂಡರೆ, ಬಾಲಕರೂ ಸುರಕ್ಷಿತವಾಗಿಲ್ಲವೇ' ಎಂದು ತೀವ್ರ ಆಘಾತ ವ್ಯಕ್ತಪಡಿಸಿತು.

₹4 ಕೋಟಿ ವಂಚನೆ; ದ್ವಿತೀಯ ದರ್ಜೆ ಸಹಾಯಕಿ ಬಂಧನ

ಪ್ರಜಾವಾಣಿ ವಾರ್ತೆ

ಸೌಮ್ಯ

ರಮೇಶ್

ಮಧುಗಿರಿ: ನೌಕರರ ಗಳಿಕೆ ರಜೆ ನಗದೀಕರಣ ಮಂಜೂರಾತಿ ಪ್ರಕರಣದಲ್ಲಿ ₹4.24 ಕೋಟಿ ವಂಚಿಸಿದ್ದ ಆರೋಪಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯಿತಿ ದ್ವಿತೀಯ ದರ್ಜೆ ಸಹಾಯಕಿ ಸೌಮ್ಯ ಹಾಗೂ ಅವರ ಪತಿ ಜಿ.ಆರ್. ರಮೇಶ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಅಕ್ರಮ ಬೆಳಕಿಗೆ ಬರುತ್ತಿದ್ದಂತೆ ಸೌಮ್ಯ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು. ಅಕ್ರಮದಲ್ಲಿ ಭಾಗಿಯಾಗಿರುವ ಪತಿ ಜತೆಗೆ ತಲೆಮರೆಸಿಕೊಂಡಿದ್ದರು. ಸೋಮವಾರ ರಾತ್ರಿ ಪೊಲೀಸರು ಇಬ್ಬರನ್ನೂ ಬಂಧಿಸಿದರು.

ತಾ.ಪಂ.ನಲ್ಲಿ ಕೆಲಸ ನಿರ್ವಹಿಸಿ ನಿವೃತ್ತರಾದ ನೌಕರರ ಖಾತೆಗೆ ಗಳಿಕೆ ರಜೆ ಹಣ ವರ್ಗಾವಣೆಯಲ್ಲಿ ಅಕ್ರಮ ನಡೆಸಿದ್ದರು. ನೌಕರರು ಮತ್ತು ಅವರ ಕುಟುಂಬಸ್ಥರ ಹೆಸರಿನಲ್ಲಿರುವ ರೆಸಿಪಿಟೆಂಟ್ ಐ.ಡಿ ಬಳಸಿಕೊಂಡು ವಿವಿಧ ಬ್ಯಾಂಕ್ ಖಾತೆಗಳಿಗೆ 118 ಬಾರಿ ಬಿಲ್‌ಗಳನ್ನು ಸೃಜಿಸಿ, ಒಟ್ಟು ₹4,24,06,997 ಹಣ ದುರುಪಯೋಗ ಪಡಿಸಿಕೊಂಡಿದ್ದರು. ನೌಕರರ ಕುಟುಂಬದವರಿಗೆ ಸೇರಬೇಕಾದ ಹಣವನ್ನು ತಮ್ಮ ಪತಿ ಸೇರಿದಂತೆ ಸಂಬಂಧಿಕರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದ ಆರೋಪ ಎದುರಿಸುತ್ತಿದ್ದಾರೆ.

ಗಳಿಕೆ ರಜೆ ಹಣವನ್ನು ಸೌಮ್ಯ ತಮ್ಮ ಪತಿ ರಮೇಶ್ ಅವರ ನಾಲ್ಕು ಖಾತೆಗಳಿಗೆ ₹2 ಕೋಟಿಗೂ ಹೆಚ್ಚು ವರ್ಗಾವಣೆ ಮಾಡಿದ್ದರು ಎನ್ನಲಾಗಿದೆ. ಜತೆಗೆ ಶಿವಲೀಲಾ, ಪ್ರವೀಣ್, ಸುಮಾ, ಮೀನಾಕ್ಷಿ ಎಂಬವರ ವಿರುದ್ಧವೂ ಪ್ರಕರಣ ದಾಖಲಾಗಿತ್ತು. ದೂರು ದಾಖಲಾದ ಎರಡೂವರೆ ತಿಂಗಳ ನಂತರ ಮಧುಗಿರಿ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದು, ವಿಚಾರಣೆಗೆ ಒಳಪಡಿಸಿದ್ದಾರೆ.

ಪಶು ವಿ.ವಿ. ನೇಮಕಾತಿಗೆ ಅಪಸ್ವರ

ಕುಲಪತಿ ಅಧಿಕಾರಾವಧಿ ಮುಗಿಯುವ ವೇಳೆ ಬೋಧಕ ಹುದ್ದೆಗಳಿಗೆ ಅಧಿಸೂಚನೆ

• ಶಶಿಕಾಂತ ಎಸ್.ಶೆಂಬೆಳ್ಳಿ

ರಾಜ್ಯಪಾಲರು ಹಾಗೂ ಸರ್ಕಾರದಿಂದ ಅನುಮತಿ ಪಡೆದ ನಂತರವೇ ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗಿದೆ

ಪ್ರೊ. ಕೆ.ಸಿ. ವೀರಣ್ಣ, ಕುಲಪತಿ, ಪಶು ವಿವಿ

ಬೀದರ್: ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಸಿ. ವೀರಣ್ಣ ಅವರು ತಮ್ಮ ಅಧಿಕಾರಾವಧಿ ಕೊನೆಗೊಳ್ಳುವ ವೇಳೆ ನಿಯಮಗಳನ್ನು ಗಾಳಿಗೆ ತೂರಿ ತರಾತುರಿಯಲ್ಲಿ ಬೋಧಕ ಹುದ್ದೆಗಳ ನೇಮಕಾತಿಗೆ ಮುಂದಾಗಿದ್ದಾರೆ ಎಂಬ ಅಪಸ್ವರ ಕೇಳಿ ಬಂದಿದೆ.

ಕುಲಪತಿ ಅವರ ಅಧಿಕಾರಾವಧಿಯು ಜುಲೈ 11ರಂದು ಮುಗಿಯಲಿದೆ. ಶೀಘ್ರದಲ್ಲೇ ಹೊಸ ಕುಲಪತಿ ನೇಮಕ ಪ್ರಕ್ರಿಯೆ ಆರಂಭಗೊಳ್ಳಲಿದೆ. ಇದರ ನಡುವೆಯೇ ಕಳೆದ ಮೇ 21ರಂದು 96 ಬೋಧಕ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದೆ. ಜೂ. 23ರಂದು ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನೂ ಪ್ರಕಟಿಸಲಾಗಿದ್ದು, 30ರಂದು ದಾಖಲೆಗಳ ಪರಿಶೀಲನೆ ನಡೆಯಲಿದೆ. ಜುಲೈ 3ರಂದು ಕನ್ನಡ ಭಾಷಾ ವಿಷಯದ ಪರೀಕ್ಷೆ ಜರುಗಲಿದೆ. ಜು.4ರಿಂದ 7ರವರೆಗೆ ಸಂದರ್ಶನ ನಡೆಯಲಿದೆ.

'ಕೇಂದ್ರ ಶಿಕ್ಷಣ ಸಚಿವಾಲಯದ ನಿಯಮಗಳ ಪ್ರಕಾರ, ಕುಲಪತಿ ಅಧಿಕಾರ ಅವಧಿ ಮುಗಿಯುವ ಎರಡು ತಿಂಗಳು ಮೊದಲು ಯಾವುದೇ ತರಹದ ನೇಮಕಾತಿ ಮಾಡುವಂತಿಲ್ಲ. ಹೀಗಿದ್ದರೂ ನಿಯಮಗಳನ್ನು ಗಾಳಿಗೆ ತೂರಿ ನೇಮಕಾತಿ ನಡೆಸಲಾಗುತ್ತಿದೆ. ಇತ್ತೀಚೆಗೆ ವಿವಿ ವ್ಯಾಪ್ತಿಯ ಪುತ್ತೂರು ಕಾಲೇಜಿನ ನೇಮಕಾತಿಯಲ್ಲಿ ವ್ಯಾಪಕ ಅಕ್ರಮ ನಡೆದಿದ್ದು, ಅಭ್ಯರ್ಥಿಗಳಿಂದ ಹಣ ಪಡೆದು ನೇಮಕಾತಿ ಆದೇಶ ನೀಡಲಾಗಿದೆ ಎಂಬ ಆರೋಪಗಳು ಕೇಳಿ ಬಂದಿವೆ. ಈಗ ಪಶು ವಿವಿ ನೇಮಕಾತಿಯಲ್ಲೂ ಇದೇ ಮಾತು ಕೇಳಿ ಬರುತ್ತಿದೆ. ಹೀಗಾಗಿ ಈ ನೇಮಕಾತಿ ಪ್ರಕ್ರಿಯೆ ನಿಲ್ಲಿಸಬೇಕು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕೆಲ ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

'ಕುಲಪತಿ ಅಧಿಕಾರ ಅವಧಿ ಕೊನೆಗೊಳ್ಳಲು ಎರಡೂವರೆ ತಿಂಗಳು ಇದ್ದಾಗ ಯಾವುದೇ ರೀತಿಯ ನೇಮಕಾತಿ ಮಾಡುವುದು ಸರಿಯಲ್ಲ. ಅಕ್ರಮ ನಡೆಯುವ ಸಾಧ್ಯತೆ ಹೆಚ್ಚಿರುತ್ತದೆ. ನೇಮಕಾತಿಗೆ ಇಷ್ಟು ದಿನಗಳವರೆಗೆ ತೋರಿಸದ ಆಸಕ್ತಿಯನ್ನು ಅಧಿಕಾರದ ಅವಧಿ ಮುಕ್ತಾಯದ ಹಂತದಲ್ಲೇಕೆ ತೋರಿಸಲಾಗುತ್ತಿದೆ' ಎಂದು ವಿ.ವಿಯ ಹಿರಿಯ ಪ್ರಾಧ್ಯಾಪಕರೊಬ್ಬರು ಪ್ರಶ್ನಿಸಿದ್ದಾರೆ.

ಪ್ರವಾಸೋದ್ಯಮಕ್ಕೆ ಉತ್ತೇಜನ 'ನಮ್ಮ ಗೈಡ್' ಆನ್‌ಲೈನ್ ವೇದಿಕೆ

ಪ್ರಜಾವಾಣಿ ವಾರ್ತೆ

'ನಮ್ಮ ಗೈಡ್' ಆನ್‌ಲೈನ್ ಎಂಬ ವಿನೂತನ ವೇದಿಕೆಯ ನಿರ್ಮಾಣದಲ್ಲಿ ರಾಜ್ಯದ ಪ್ರತಿಭಾವಂತ ನವೋದ್ಯಮಿಗಳಿಗೆ ಅವಕಾಶ ನೀಡಲಾಗುವುದು

ಕೆ.ಜೆ. ಜಾರ್ಜ್, ಪ್ರವಾಸೋದ್ಯಮ ಸಚಿವ

ಬೆಂಗಳೂರು: ರಾಜ್ಯದ ಪ್ರವಾಸೋದ್ಯಮ ಕ್ಷೇತ್ರವನ್ನು ಇನ್ನಷ್ಟು ಅಭಿವೃದ್ಧಿಪಡಿಸುವ ಮತ್ತು ಪ್ರವಾಸಿಗರಿಗೆ ವಿಶ್ವ ದರ್ಜೆಯ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ 'ನಮ್ಮ ಗೈಡ್' ಎಂಬ ಆನ್‌ಲೈನ್ ವೇದಿಕೆ ಸಿದ್ಧಪಡಿಸಲು ಪ್ರವಾಸೋದ್ಯಮ ಇಲಾಖೆ ಮುಂದಾಗಿದೆ.

ರಾಜ್ಯದ ಯಾವುದೇ ಪ್ರವಾಸಿ ತಾಣಕ್ಕೆ ಭೇಟಿ ನೀಡುವ ದೇಶ-ವಿದೇಶಗಳ ಪ್ರವಾಸಿಗರಿಗೆ ಆಯಾ ಪ್ರದೇಶದ ಇತಿಹಾಸ, ಸಂಸ್ಕೃತಿ ಮತ್ತು ಮಹತ್ವದ ಬಗ್ಗೆ ನಿಖರ ಮಾಹಿತಿ ನೀಡುವಲ್ಲಿ ಸ್ಥಳೀಯ ಗೈಡ್‌ಗಳ ಸೇವೆ ಪ್ರಮುಖವಾಗಿದೆ. ವಿದೇಶಗಳಲ್ಲಿ ತಮಗೆ ಬೇಕಾದ ಗೈಡ್‌ಗಳನ್ನು ಆನ್‌ಲೈನ್ ಮೂಲಕವೇ ಕಾಯ್ದಿರಿಸುವ ವ್ಯವಸ್ಥೆ ಇದೆ. ಇದೇ ಮಾದರಿಯ ಅತ್ಯಾಧುನಿಕ ಆನ್‌ಲೈನ್ ವೇದಿಕೆಯನ್ನು ಕರ್ನಾಟಕ ರಾಜ್ಯದಲ್ಲೂ ಪ್ರಾರಂಭಿಸುವುದು ಇಲಾಖೆಯ ಪ್ರಮುಖ ಉದ್ದೇಶ. ಈ ಹಿನ್ನೆಲೆಯಲ್ಲಿ ಹೊಸ ವೆಬ್‌ಸೈಟ್ ಹಾಗೂ ಆ್ಯಪ್ ರಚನೆ ಸಿದ್ಧತೆ ನಡೆದಿದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಈ ನೂತನ ಆನ್‌ಲೈನ್ ವೇದಿಕೆಯಿಂದ ಪ್ರವಾಸಿಗರು ಸ್ಥಳೀಯ ಗೈಡ್‌ಗಳನ್ನು ಸುಲಭವಾಗಿ ಸಂಪರ್ಕಿಸಬಹುದು. ಪ್ರವಾಸಿ ತಾಣಗಳನ್ನು ಸರಿಯಾಗಿ ಹಾಗೂ ಅರ್ಥಪೂರ್ಣವಾಗಿ ವೀಕ್ಷಿಸಲು ಅನುಕೂಲವಾಗಲಿದೆ. ಅಲ್ಲದೇ, ಪ್ರವಾಸಿ ಸ್ಥಳಗಳ ಸ್ವಚ್ಛತೆ ಕಾಪಾಡಲು ಮತ್ತು ಅವುಗಳ ಸಮರ್ಪಕ ನಿರ್ವಹಣೆಯಲ್ಲಿ ಗೈಡ್‌ಗಳು ಸಕ್ರಿಯವಾಗಿ ಪಾಲ್ಗೊಳ್ಳಲು ಇದು ಸಹಕಾರಿಯಾಗಲಿದೆ. ಇದರಿಂದ ಈಗಾಗಲೇ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿಯಾಗಿರುವ ಗೈಡ್‌ಗಳಿಗೆ ಹೆಚ್ಚಿನ ಕೆಲಸವೂ ದೊರೆಯಲಿದೆ ಎಂದು ಹೇಳಿದೆ.

ಈ ಯೋಜನೆಯನ್ನು ತ್ವರಿತವಾಗಿ ಸಾಕಾರಗೊಳಿಸಲು ರಾಜ್ಯದಲ್ಲಿರುವ ನವೋದ್ಯಮಗಳು ಸೇರಿದಂತೆ ತಂತ್ರಜ್ಞಾನದಲ್ಲಿ ಆಸಕ್ತಿ ಹೊಂದಿರುವ ಸಂಸ್ಥೆಗಳಿಗೆ ಆಹ್ವಾನ ನೀಡಲು ಇಲಾಖೆ ಕ್ರಮ ಕೈಗೊಳ್ಳುತ್ತಿದೆ ಎಂದು ತಿಳಿಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಇಂಧನ ಮತ್ತು ಪ್ರವಾಸೋದ್ಯಮ ಸಚಿವ ಕೆ.ಜೆ.ಜಾರ್ಜ್, 'ನಮ್ಮ ಗೈಡ್ ವೆಬ್‌ಸೈಟ್ ಮತ್ತು ಆ್ಯಪ್ ಅಭಿವೃದ್ಧಿ ಪಡಿಸಲಾಗುತ್ತಿದೆ. ಇದರಿಂದ ಪ್ರವಾಸಿಗರಿಗೆ ಉತ್ತಮ ಮಾಹಿತಿ ಮತ್ತು ಉತ್ತಮ ಅನುಭವ ದೊರೆಯುವುದರ ಜೊತೆಗೆ, ನಮ್ಮ ಐತಿಹಾಸಿಕ ಮತ್ತು ನೈಸರ್ಗಿಕ ತಾಣಗಳ ಸ್ವಚ್ಛತೆ ಹಾಗೂ ನಿರ್ವಹಣೆಗೆ ಹೆಚ್ಚಿನ ಬಲ ಸಿಗಲಿದೆ' ಎಂದಿದ್ದಾರೆ.

'ಪುಣೆ: ಭಾವಿ ಪತಿಯನ್ನು ಕಣಿವೆಗೆ ನೂಕಿದಳು'

ಒಂದನೇ ಪುಟದಿಂದ...

ಅವರ ಮದುವೆಗಾಗಿ ಎರಡೂ ಕುಟುಂಬಗಳು ಭರ್ಜರಿ ಸಿದ್ಧತೆ ಮಾಡಿದ್ದವು. ನವೆಂಬರ್‌ನಲ್ಲಿ ಮದುವೆ ನಿಗದಿಯಾಗಿತ್ತು.

ಮದುವೆಗಾಗಿ ರಾಜಸ್ಥಾನದ ಉದಯಪುರದ ಅರಮನೆಯನ್ನು ₹17 ಕೋಟಿಗೆ ಕಾಯ್ದಿರಿಸಿದ್ದ ಕುಟುಂಬಗಳು, ಅತಿಥಿಗಳನ್ನು ಕರೆದೊಯ್ಯುವುದಕ್ಕಾಗಿ ಎರಡು ವಿಮಾನಗಳನ್ನು ಕಾಯ್ದಿರಿಸಿದ್ದವು ಎಂದು ಮೂಲಗಳು ಹೇಳಿವೆ.

ಸಿಯಾ ಅವರ ಜನ್ಮದಿನಾಚರಣೆಗಾಗಿ ಜೂನ್ 18ರಂದು ಕೇತನ್ ಲೋಹಾಗಢಕ್ಕೆ ಚಾರಣ ಹೋಗಿದ್ದರು.

ಸಿಯಾ ಹೇಳಿದ್ದು: 'ಕೇತನ್ ಅವರು ಸಿಯಾ ಹಾಗೂ ತಮ್ಮ ಸ್ನೇಹಿತರೊಂದಿಗೆ ಲೋಹಾಗಢಕ್ಕೆ ಚಾರಣಕ್ಕೆ ತೆರಳಿದ್ದರು. ಈ ವೇಳೆ, ಛಾಯಾಚಿತ್ರಗಳನ್ನು ತೆಗೆಯುತ್ತಿದ್ದರು. ಜೋರಾಗಿ ಗಾಳಿ ಬೀಸಿದ್ದರಿಂದ ಅವರು ಅಂದಾಜು 400 ಅಡಿ ಆಳದ ಕಣಿವೆಗೆ ಬಿದ್ದು ಸಾವನ್ನಪ್ಪಿದರು' ಎಂದು ಪೊಲೀಸರು ಈ ಮೊದಲು ಹೇಳಿದ್ದರು.

'ಲೋಹಾಗಢಕ್ಕೆ ಹೋಗಿದ್ದಾಗ ಫೋಟೊ ತೆಗೆಸಿಕೊಳ್ಳುತ್ತಿದ್ದೆವು. ಈ ವೇಳೆ ಆಯ ತಪ್ಪಿ ಕಣಿವೆಗೆ ಬಿದ್ದು, ಕೇತನ್ ಮೃತಪಟ್ಟರು' ಎಂದು ಸಿಯಾ ಅವರು ಲೋಣಾವಳಾ ಗ್ರಾಮೀಣ ಠಾಣೆಗೆ ದೂರು ನೀಡಿದ್ದರು. ನಂತರ, ಮೂರು ಗಂಟೆ ಕಾರ್ಯಾಚರಣೆ ನಡೆಸಿದ್ದ ರಕ್ಷಣಾ ಸಿಬ್ಬಂದಿ, ಕೇತನ್ ಮೃತದೇಹ ಪತ್ತೆ ಹಚ್ಚಿದ್ದರು.

ಐತಿಹಾಸಿಕ ಮಹತ್ವದ ಲೋಹಾಗಢ

ಲೋಹಾಗಢಕ್ಕೆ ಐತಿಹಾಸಿಕ ಮಹತ್ವ ಇದೆ. ಮರಾಠ ಸಾಮ್ರಾಜ್ಯದ ಸಂಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜ್ ಅವರೊಂದಿಗೆ ಈ ಕೋಟೆ ನಂಟು ಹೊಂದಿದೆ. ಯುನೆಸ್ಕೊ ಘೋಷಿಸಿರುವ ಮಹಾರಾಷ್ಟ್ರದ 12 'ವಿಶ್ವ ಪಾರಂಪರಿಕ ತಾಣ'ಗಳಲ್ಲಿ ಈ ಕೋಟೆಯೂ ಸೇರಿದೆ.

'ಮದುವೆ ಇಷ್ಟವಿಲ್ಲದ್ದಕ್ಕೆ ಕೊಲೆ': 'ಈ ಘಟನೆಗೆ ಸಂಬಂಧಿಸಿದ ಸನ್ನಿವೇಶಗಳನ್ನು ಅವಲೋಕಿಸಿದಾಗ, ಕೇತನ್ ಅವರ ಸಾವು ಸಂಶಯಾಸ್ಪದವೆನಿಸಿತು. ಈ ಘಟನೆ ಕುರಿತು ಪೊಲೀಸರು ಸಮಗ್ರ ತನಿಖೆ ನಡೆಸಿದ ಬಳಿಕ ಇದು ಕೊಲೆಗೆ ಮಾಡಿದ ಸಂಚು ಎಂಬುದು ಗೊತ್ತಾಯಿತು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಪುಣೆ ಗ್ರಾಮೀಣ) ಸಂದೀಪ್ ಸಿಂಗ್ ಗಿಲ್ ಹೇಳಿದರು.

'ತನಿಖಾ ತಂಡಗಳು ಹಲವು ಆಯಾಮಗಳಲ್ಲಿ ತನಿಖೆ ಕೈಗೊಂಡಿದ್ದವು. ಹಣಕಾಸು ವ್ಯವಹಾರ ಹಾಗೂ ವೈಯಕ್ತಿಕ ದ್ವೇಷ ಸೇರಿದಂತೆ ಇತರ ಕಾರಣಗಳಿಂದ ಕೊಲೆ ನಡೆದಿರಬಹುದೇ ಎಂದು ವಿಚಾರಣೆ ನಡೆಸಲಾಯಿತು. ಆದರೆ, ಪುಣೆಯ ಕೊಂಢ್ವಾ ನಿವಾಸಿ ಚೇತನ್ ಬಾಬುಲಾಲ್ ಚೌಧರಿ ಮತ್ತು ಸಿಯಾ ಪರಸ್ಪರ ಪ್ರೀತಿಸುತ್ತಿದ್ದರು ಎನ್ನಲಾದ ವಿಷಯ ತನಿಖೆಯಿಂದ ಗೊತ್ತಾಯಿತು' ಎಂದು ಹೇಳಿದರು.

'ಕೇತನ್ ಜೊತೆ ವಿವಾಹವಾಗುವುದು ಸಿಯಾಗೆ ಇಷ್ಟವಿರಲಿಲ್ಲ. ತನ್ನ ಮತ್ತು ಚೇತನ್ ಚೌಧರಿ ಸಂಬಂಧಕ್ಕೆ ಕೇತನ್ ಅಡ್ಡಿ ಎಂದು ಭಾವಿಸಿದ್ದರು. ಈ ಕಾರಣಕ್ಕೆ ಕೇತನ್ ಅವರನ್ನು ಕೊಲೆ ಮಾಡಲು ಇಬ್ಬರೂ ಸಂಚು ರೂಪಿಸಿದ್ದರು ಎಂಬುದು ತನಿಖೆ ವೇಳೆ ಗೊತ್ತಾಯಿತು' ಎಂದು ಗಿಲ್ ವಿವರಿಸಿದರು.

ಅಪ್ಪ, ಅಮ್ಮ, ತಂಗಿ ಹತ್ಯೆಗೈದ ಯುವತಿ

ಒಂದನೇ ಪುಟದಿಂದ...

ಬೇರೊಂದು ಕೊಠಡಿಯಲ್ಲಿದ್ದ ಸುಪ್ರಿಯಾ, ಪೋಷಕರ ಚೀರಾಟ ಕೇಳಿ ರಕ್ಷಣೆಗೆ ಧಾವಿಸಿದಳು. ಆಕೆಗೂ ಚಾಕುವಿನಿಂದ ಇರಿದರು. ಸೋಮಸುಂದರ್ ಅವರು ತಪ್ಪಿಸಿಕೊಂಡು ಹೊರಬಂದು ಮೆಟ್ಟಿಲುಗಳ ಬಳಿ ಕುಸಿದುಬಿದ್ದರು. ಅವರ ನರಳಾಟ ಕೇಳಿದ ನೆರೆಹೊರೆಯವರು ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟರು.

ಸ್ಥಳಕ್ಕೆ ಬಂದ ಪೊಲೀಸರು, ಫ್ಲ್ಯಾಟ್‌ನ ಒಳಗೆ ಹೋಗಿ ನೋಡಿದಾಗ ಮುತ್ತುಲಕ್ಷ್ಮಿ ಹಾಗೂ ಸುಪ್ರಿಯಾ ಕೊಲೆಯಾಗಿರುವುದು ಗೊತ್ತಾಯಿತು.

'ಕುಟುಂಬ ಸದಸ್ಯರೊಂದಿಗೆ ವೈಟ್‌ಫೀಲ್ಡ್ ಬಳಿಯ ನಲ್ಲೂರಹಳ್ಳಿಯಲ್ಲಿ ಸೋಮಸುಂದರ್ ವಾಸವಾಗಿದ್ದರು. ಸುಪ್ರಿಯಾ, ಮೊದಲ ವರ್ಷದ ಪದವಿ ಓದುತ್ತಿದ್ದಳು. ಕೆನೆತ್, ಅನ್ಯ ಧರ್ಮೀಯನೆಂಬ ಕಾರಣಕ್ಕೆ ಆತನೊಂದಿಗೆ ಶ್ವೇತಾಳ ಮದುವೆ ಮಾಡಲು ಪೋಷಕರು ನಿರಾಕರಿಸಿದ್ದರು. ಸುಮಾರು ₹30 ಲಕ್ಷ ಸಾಲ ಮಾಡಿಕೊಂಡಿದ್ದ ಶ್ವೇತಾ, ಹಣಕ್ಕಾಗಿ ಆಸ್ತಿಯಲ್ಲಿ ಪಾಲು ಕೊಡುವಂತೆ ತಂದೆ ಬಳಿ ಕೇಳಿದ್ದಳು. ಆದರೆ ಅವರು ಆಸ್ತಿಯಲ್ಲಿ ಪಾಲು ಕೊಡಲು ನಿರಾಕರಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ತಿರುಚ್ಚಿಯಲ್ಲಿರುವ ಸೋಮಸುಂದರ್ ಸಂಬಂಧಿಕರು ನಗರಕ್ಕೆ ಬಂದ ನಂತರ ಮೂವರ ಮರಣೋತ್ತರ ಪರೀಕ್ಷೆ ನಡೆಸಲಾಗುತ್ತದೆ. ಸಾಫ್ಟ್‌ವೇರ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ ಶ್ವೇತಾ, ಕೆಲ ತಿಂಗಳುಗಳ ಹಿಂದೆ ಕೆಲಸ ಬಿಟ್ಟಿದ್ದಳು. ಕೆನೆತ್, ಮನೆಯಿಂದಲೇ ಕೆಲಸ ಮಾಡುತ್ತಿದ್ದ ಎಂದು ಗೊತ್ತಾಗಿದೆ. ವೈಟ್‌ಫೀಲ್ಡ್‌ನಲ್ಲಿರುವ ಆತನ ಪೋಷಕರ ವಿಚಾರಣೆ ನಡೆಸಿ, ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿಗಳ ಸೆರೆಗೆ ವಿಶೇಷ ತಂಡ

ಕೆ.ಆರ್.ಪುರ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಬಂಧನಕ್ಕೆ ವಿಶೇಷ ತಂಡಗಳನ್ನು ರಚಿಸಲಾಗಿದೆ. ಆರೋಪಿಗಳ ಮೊಬೈಲ್ ಕರೆಗಳ ಜಾಡು ಹಿಡಿದು ಅವರ ಬೆನ್ನು ಬಿದ್ದಿದ್ದಾರೆ. ಆರೋಪಿಗಳ ಬಂಧನದ ಬಳಿಕ ನಿಖರ ಕಾರಣ ಗೊತ್ತಾಗಲಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕೃತ್ಯವೆಸಗಿದ ಬಳಿಕ ಆರೋಪಿಗಳು ಅಪಾರ್ಟ್‌ಮೆಂಟ್‌ನ ಮತ್ತೊಂದು ಗೇಟ್‌ನಿಂದ ಪರಾರಿಯಾಗಿರುವ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

'ಭಾನುವಾರ ರಾತ್ರಿ ಸೋಮಸುಂದರ್ ದಂಪತಿ ಮತ್ತು ಸುಪ್ರಿಯಾರನ್ನು ಶ್ವೇತಾ ತಮ್ಮ ಫ್ಲ್ಯಾಟ್‌ಗೆ ಕರೆದೊಯ್ದಿದ್ದರು. ಸೋಮಸುಂದರ್ ಅವರು ಸೋಮವಾರ ರಾತ್ರಿ ತಪ್ಪಿಸಿಕೊಂಡು ಹೊರಬಂದಾಗ ಕೊಲೆ ವಿಚಾರ ತಿಳಿಯಿತು' ಎಂದು ಸಾಯಿ ಗ್ರೀನ್ ಹೋಮ್ಸ್ ಅಪಾರ್ಟ್‌ಮೆಂಟ್‌ನ ಸೆಕ್ಯೂರಿಟಿ ಗಾರ್ಡ್ ವೀರ್ ಬಹದ್ದೂರ್ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

'ನೀರು ಹರಿಸಲು 'ಮಹಾ' ನಕಾರ'

ಪ್ರಜಾವಾಣಿ ವಾರ್ತೆ

ಸತೀಶ ಜಾರಕಿಹೊಳಿ

ಬೆಳಗಾವಿ: 'ಈ ಬಾರಿ ಮಹಾರಾಷ್ಟ್ರದಲ್ಲೂ ಮಳೆ ಕೊರತೆಯಿದ್ದು, ನೀರಿನ ಅಭಾವವಿದೆ. ಕೊಯ್ನಾ ಜಲಾಶಯದಿಂದ ರಾಜ್ಯಕ್ಕೆ ನೀರು ಬಿಡುವುದಿಲ್ಲವೆಂದು ಅಲ್ಲಿನ ಸರ್ಕಾರ ತಿಳಿಸಿದೆ. ಅದಕ್ಕೆ ಗಡಿ ಜಿಲ್ಲೆಗಳಲ್ಲಿ ಸದ್ಯ ಲಭ್ಯವಿರುವ ನೀರನ್ನೇ ಸಮರ್ಪಕವಾಗಿ ನಿರ್ವಹಿಸಬೇಕಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಸದ್ಯಕ್ಕೆ ಹಿಡಕಲ್ ಜಲಾಶಯದಲ್ಲಿ ಎರಡು ತಿಂಗಳಿಗೆ ಸಾಕಾಗುವಷ್ಟು ನೀರಿದೆ. ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸಲಾಗುವುದು. ನಗರ ಮತ್ತು ಗ್ರಾಮಗಳಲ್ಲಿ ನೀರಿನ ಅಭಾವವಾದರೆ, ತಾತ್ಕಾಲಿಕ ವ್ಯವಸ್ಥೆ ಮಾಡಲಾಗುವುದು' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ನೀರು ಬಿಡಿಸುವ ಸಂಬಂಧ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಹಾರಾಷ್ಟ್ರದ ಜೊತೆ ಮಾತುಕತೆ ನಡೆಸಿದ್ದಾರೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದ ಮಾತಿಗೆ ಪ್ರತಿಕ್ರಿಯಿಸಿದ ಸಚಿವ, 'ಈ ರೀತಿ ಯಾವುದೇ ಮಾತುಕತೆ ಅಥವಾ ಒಪ್ಪಂದ ಆಗಿಲ್ಲ. ಅದು ಸುಳ್ಳು. ಮಹಾರಾಷ್ಟ್ರದಿಂದ ನೀರು ಸಿಗುವ ನಿರೀಕ್ಷೆ ಕೈಬಿಡಬೇಕು' ಎಂದರು.

ವಾರದಲ್ಲೇ ನಿರ್ಣಯಕ್ಕೆ ಆದೇಶ: 'ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ' ಎಂಬ ನಿರ್ಣಯವನ್ನು ಮಹಾನಗರ ಪಾಲಿಕೆಯಲ್ಲಿ ಕೈಗೊಳ್ಳುವ ಸಂಬಂಧ ರಾಜ್ಯ ಸರ್ಕಾರ ವಾರದಲ್ಲೇ ನಿರ್ದೇಶನ ನೀಡಲಿದೆ' ಎಂದರು.

'ಮಹಾನಗರ ಪಾಲಿಕೆ ಸಭೆಯಿಂದ ಏಕೆ ದೂರ ಉಳಿದಿದ್ದೀರಿ' ಎಂಬ ಪ್ರಶ್ನೆಗೆ, 'ಪಾಲಿಕೆ ಸುಧಾರಿಸಬೇಕು ಎಂದು ಹೋಗುತ್ತಿದ್ದೆ. ಅವರ್‍ಯಾರೂ ಸುಧಾರಿಸುವುದಿಲ್ಲ ಎಂದು ಗೊತ್ತಾಯಿತು. ಅದಕ್ಕೆ ದೂರ ಉಳಿದಿದ್ದೇನೆ' ಎಂದರು.

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಕಾಡುಗೋಡಿ ವಿಭಾಗ,
ಹೂಡಿ ಮುಖ್ಯ ರಸ್ತೆ, ಹೂಡಿ, ಬೆಂಗಳೂರು-560 048.
ಸಂಖ್ಯೆ: ಬೆಂಪೂನಪಾ/ಕಾಪಾಅ/ಕಾಗೋ/ಟೆಪ್ರ/01/2026-27 ದಿನಾಂಕ: 23.06.2026

ಟೆಂಡರ್‌ಗಳಿಗಾಗಿ ಆಹ್ವಾನ (ಅಲ್ಪಾವಧಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಕಾಡುಗೋಡಿ ವಿಭಾಗ ಇವರು ಕೆಳಗಿನ ಕೋಷ್ಟಕದಲ್ಲಿ ನೀಡಲಾದ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ದಾರರು ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ಯಾವುದಾದರೂ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ನೋಂದಣಿ ಹೊಂದಿರಬೇಕು.

ಕ್ರ.ಸಂ.	ಕೆಲಸದ ಹೆಸರು
1	ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾಡುಗೋಡಿ ವಿಭಾಗದ ವಾರ್ಡ್ ಸಂಖ್ಯೆ. 31-ಕಾಡುಗೋಡಿ, 32-ಚನ್ನಸಂದ್ರ, 34-ಕಾವೇರಿನಗರ, 28-ಭೈರತಿ, 30-ಬೆಳತೂರು, 29-ಹೂಡಿಗಳಲ್ಲಿ ರಸ್ತೆಗಳ ಹಾಗೂ ಒಳಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಇತರೆ ಸಂಬಂಧಿತ ಕಾಮಗಾರಿಗಳು. (ಅನೆಕ್ಸ್‌ಚರ್-2, ಕ್ರಮ ಸಂಖ್ಯೆ. 27 ರಿಂದ 32) **ಟೆಂಡರಿಗಿಟ್ಟ ಮೊತ್ತ:** ರೂ. 980.00 ಲಕ್ಷಗಳು. **ಇಎಂಡಿ ಮೊತ್ತ:** ರೂ. 14,70,000/-.

ವೇಳಾ ಪಟ್ಟಿ : 1) ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30-06-2026 ಮಧ್ಯಾಹ್ನ 3.00 ಗಂಟೆಯೊಳಗೆ. 2) ಬಿಡ್ ಪೂರ್ವ-ಭಾವಿ ಸಭೆ ದಿನಾಂಕ & ಸಮಯ : 30-06-2026 ರಂದು ಸಂಜೆ 4.00 ಗಂಟೆಗೆ. 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ & ಸಮಯ : 04-07-2026 ಸಂಜೆ 4.00 ಗಂಟೆಯವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ : 06-07-2026 ರಂದು ಸಂಜೆ 4.30 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ : 07-07-2026 ರಂದು ಸಂಜೆ 4.00 ಗಂಟೆಗೆ. 6) ಟೆಂಡರ್‌ಗಳ ಮಾನ್ಯತೆ : 180 ದಿನಗಳು.
ಸಹಿ/- ಕಾರ್ಯಪಾಲಕ ಅಭಿಯಂತರರು, ಕಾಡುಗೋಡಿ ವಿಭಾಗ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.
ಸಂ: ಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ/ 2ನೇ ಟೆಂಡರ್ ಪ್ರಕಟಣೆ ಸಂಖ್ಯೆ : 05/2026-27 ದಿನಾಂಕ : 20.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ 2ನೇ ಕರೆ
(ಕೆ.ಪಿ.ಪಿ.ಪೋರ್ಟಲ್‌ನ ಮೂಲಕ ಮಾತ್ರ)
ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.
1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 20.06.2026 ರಿಂದ 02.07.2026 ರವರೆಗೆ 17.30 ಗಂಟೆಗೆ. 2) ಪ್ರೀ ಬಿಡ್ ಮೀಟಿಂಗ್ : 30.06.2026 ರಂದು ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಇಂಜನಿಯರ್, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 03.07.2026 ರಂದು 17.30 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : After obtaining approval of technical bid from competent authority. 5) ಕಾಲಾವಧಿ : 12 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 2033.84 ಲಕ್ಷಗಳವರೆಗೆ. 7) ಇಎಂಡಿ ಮೊತ್ತ : ರೂ. 20.33 ಲಕ್ಷಗಳು. (Rs.1.00 lakhs through e-cash and balance amt of Rs. 19.33 lakhs through e-BG).
ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.
ಸಹಿ/-
ಕಾರ್ಯಪಾಲಕ ಇಂಜನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.
ವಾ.ಸಾ.ಸಂ.ಇ/ಶಿ/ನಂ.99-06/ ಝೇಂಕಾರ್/2026-27

ಬೆಂಗಳೂರು ಉತ್ತರ ನಗರ ಪಾಲಿಕೆ, ವಲಯ-2
ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ, ಹೆಸರುಘಟ್ಟ ಮುಖ್ಯರಸ್ತೆ,
ಎಂಇಐ ಬಡಾವಣೆ, ಬಾಗಲಗುಂಟೆ, ಟಿ ದಾಸರಹಳ್ಳಿ, ಬೆಂಗಳೂರು - 560 073.
ಸಂಖ್ಯೆ: ಬೆಉನಪಾ/ಕಾಪಾಅ/ದಾ.ವಿ/ಟೆಂಡರ್/06/2026-27 ದಿನಾಂಕ: 22-06-2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ಏಕಲಕೋಟೆ ಮತ್ತು ದ್ವಿಲಕೋಟೆ ಪದ್ಧತಿ
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು ದಾಸರಹಳ್ಳಿ ವಿಭಾಗ ಇವರು ಆಯುಕ್ತರು, ಬೆಂಗಳೂರು ಉತ್ತರ ನಗರ ಪಾಲಿಕೆ, ಬೆಂಗಳೂರು ಇವರಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

ಕ್ರ.ಸ	ಕಾಮಗಾರಿಗಳ ಹೆಸರು / ವರ್ಗೀಕರಣ
1.	ವಾರ್ಡ್ ಸಂಖ್ಯೆ-65 ಅಬ್ಬಿಗೆರೆಯಲ್ಲಿ ಪಾದಚಾರಿ ಮಾರ್ಗಗಳ ದುರಸ್ಥಿ ಮತ್ತು ನಿರ್ವಹಣೆ ಮಾಡುವುದು (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 25.00 ಲಕ್ಷಗಳು, ಇಎಂಡಿ ಮೊತ್ತ: ₹.50000.00
2.	ವಾರ್ಡ್ ಸಂಖ್ಯೆ-66 ಕಮ್ಮಗೊಂಡನಹಳ್ಳಿಯಲ್ಲಿ ಪಾದಚಾರಿ ಮಾರ್ಗಗಳ ದುರಸ್ಥಿ ಮತ್ತು ನಿರ್ವಹಣೆ ಮಾಡುವುದು (ಪರಿಶಿಷ್ಠ ಪಂಗಡ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 25.00 ಲಕ್ಷಗಳು, ಇಎಂಡಿ ಮೊತ್ತ: ₹.25000.00
3.	ವಾರ್ಡ್ ಸಂಖ್ಯೆ-67 ಶೆಟ್ಟಿಹಳ್ಳಿಯಲ್ಲಿ ಪಾದಚಾರಿ ಮಾರ್ಗಗಳ ದುರಸ್ಥಿ ಮತ್ತು ನಿರ್ವಹಣೆ ಮಾಡುವುದು (ವರ್ಗ-I) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 25.00 ಲಕ್ಷಗಳು, ಇಎಂಡಿ ಮೊತ್ತ: ₹.25000.00
4.	ವಾರ್ಡ್ ಸಂಖ್ಯೆ-68 ಮಲ್ಲಸಂದ್ರದಲ್ಲಿ ಪಾದಚಾರಿ ಮಾರ್ಗಗಳ ದುರಸ್ಥಿ ಮತ್ತು ನಿರ್ವಹಣೆ ಮಾಡುವುದು (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 25.00 ಲಕ್ಷಗಳು, ಇಎಂಡಿ ಮೊತ್ತ: ₹.50000.00
5.	ವಾರ್ಡ್ ಸಂಖ್ಯೆ-69 ಬಾಗಲಗುಂಟೆಯಲ್ಲಿ ಪಾದಚಾರಿ ಮಾರ್ಗಗಳ ದುರಸ್ಥಿ ಮತ್ತು ನಿರ್ವಹಣೆ ಮಾಡುವುದು (ಪರಿಶಿಷ್ಠ ಜಾತಿ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 25.00 ಲಕ್ಷಗಳು, ಇಎಂಡಿ ಮೊತ್ತ: ₹.25000.00
6.	ವಾರ್ಡ್ ಸಂಖ್ಯೆ-70 ಮಂಜುನಾಥನಗರದಲ್ಲಿ ಪಾದಚಾರಿ ಮಾರ್ಗಗಳ ದುರಸ್ಥಿ ಮತ್ತು ನಿರ್ವಹಣೆ ಮಾಡುವುದು (ವರ್ಗ-II)(ಎ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 25.00 ಲಕ್ಷಗಳು, ಇಎಂಡಿ ಮೊತ್ತ: ₹.25000.00
7.	ವಾರ್ಡ್ ಸಂಖ್ಯೆ-71 ನೆಲೆ ಮಹೇಶ್ವರಮ್ಮ ದೇವಾಲಯದಲ್ಲಿ ಪಾದಚಾರಿ ಮಾರ್ಗಗಳ ದುರಸ್ಥಿ ಮತ್ತು ನಿರ್ವಹಣೆ ಮಾಡುವುದು (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 25.00 ಲಕ್ಷಗಳು, ಇಎಂಡಿ ಮೊತ್ತ: ₹.50000.00
8.	ವಾರ್ಡ್ ಸಂಖ್ಯೆ-72 ದಾಸರಹಳ್ಳಿಯಲ್ಲಿ ಪಾದಚಾರಿ ಮಾರ್ಗಗಳ ದುರಸ್ಥಿ ಮತ್ತು ನಿರ್ವಹಣೆ ಮಾಡುವುದು (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 25.00 ಲಕ್ಷಗಳು, ಇಎಂಡಿ ಮೊತ್ತ: ₹.50000.00
9.	ವಾರ್ಡ್ ಸಂಖ್ಯೆ-19 ಟಿ ದಾಸರಹಳ್ಳಿಯ ಕೋಕೋನಟ್ ಗಾರ್ಡನ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. 4ನೇ ಕರೆ (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 42.37 ಲಕ್ಷಗಳು, ಇಎಂಡಿ ಮೊತ್ತ: ₹.85000.00
10.	ವಾರ್ಡ್ ಸಂಖ್ಯೆ-18 ಬಾಗಲಗುಂಟೆಯ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. 4ನೇ ಕರೆ (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 42.37 ಲಕ್ಷಗಳು, ಇಎಂಡಿ ಮೊತ್ತ: ₹.85000.00
11.	ವಾರ್ಡ್ ಸಂಖ್ಯೆ-17 ಚಿಕ್ಕಸಂದ್ರದ ಚಿಕ್ಕಸಂದ್ರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. 4ನೇ ಕರೆ (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 42.37 ಲಕ್ಷಗಳು, ಇಎಂಡಿ ಮೊತ್ತ: ₹.85000.00
12.	ಶೆಟ್ಟಿಹಳ್ಳಿ ಉಪವಿಭಾಗ ವಾರ್ಡ್ ಸಂಖ್ಯೆ-16 ಶೆಟ್ಟಿಹಳ್ಳಿ ಕಾಲೋನಿಯಲ್ಲಿ ಇ-ಗ್ರಂಥಾಲಯ ಕಟ್ಟಡ ಮತ್ತು ಶೌಚಾಲಯ ನಿರ್ಮಾಣ ಮಾಡುವುದು. 2ನೇ ಕರೆ (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 44.39 ಲಕ್ಷಗಳು, ಇಎಂಡಿ ಮೊತ್ತ: ₹.88780.00
13.	ಶೆಟ್ಟಿಹಳ್ಳಿ ಉಪವಿಭಾಗ ವಾರ್ಡ್ ಸಂಖ್ಯೆ-15 ಮೇದರಹಳ್ಳಿಯಲ್ಲಿ ಉದ್ಯಾನವನ ಅಭಿವೃದ್ಧಿ ಮಾಡುವುದು. 2ನೇ ಕರೆ (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 23.48 ಲಕ್ಷಗಳು, ಇಎಂಡಿ ಮೊತ್ತ: ₹.46960.00
14.	ವಾರ್ಡ್ ಸಂಖ್ಯೆ-17 ಚಿಕ್ಕಸಂದ್ರದಲ್ಲಿ 2025-2026ನೇ ಸಾಲಿಗೆ ಟ್ರಾಕ್ಟರ್ ಒದಗಿಸಿ ಚರಂಡಿಗಳ ಹೂಳು ತೆಗೆಯುವುದು ಮತ್ತು ನಿರ್ವಹಣೆ ಮಾಡುವುದು. 2ನೇ ಕರೆ (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 28.41 ಲಕ್ಷಗಳು, ಇಎಂಡಿ ಮೊತ್ತ: ₹.56820.00
15.	ವಾರ್ಡ್ ಸಂಖ್ಯೆ-19 ಟಿ ದಾಸರಹಳ್ಳಿಯಲ್ಲಿ 2025-2026ನೇ ಸಾಲಿಗೆ ಟ್ರಾಕ್ಟರ್ ಒದಗಿಸಿ ಚರಂಡಿಗಳ ಹೂಳು ತೆಗೆಯುವುದು ಮತ್ತು ನಿರ್ವಹಣೆ ಮಾಡುವುದು 2ನೇ ಕರೆ (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 28.41 ಲಕ್ಷಗಳು, ಇಎಂಡಿ ಮೊತ್ತ: ₹.56820.00
	ದ್ವಿಲಕೋಟೆ ಪದ್ಧತಿ
16.	ಬಾಗಲಗುಂಟೆ ಎಂಇಐ ಬಡಾವಣೆಯಲ್ಲಿ ದಾಸರಹಳ್ಳಿ ವಲಯ ಕಚೇರಿ ಕಟ್ಟಡಕ್ಕೆ ಹೊಂದಿಕೊಂಡಂತೆ ಅನೆಕ್ಸ್ ಕಟ್ಟಡ ನಿರ್ಮಾಣ ಮಾಡುವುದು. 3ನೇ ಕರೆ (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 410.14 ಲಕ್ಷಗಳು, ಇಎಂಡಿ ಮೊತ್ತ: ₹.616000.00
17.	ಶೆಟ್ಟಿಹಳ್ಳಿ ಉಪವಿಭಾಗ ವಾರ್ಡ್ ಸಂಖ್ಯೆ-15 ಮೇದರಹಳ್ಳಿ ಕಾಲೋನಿಯಲ್ಲಿ ಸಮುದಾಯ ಭವನ ನಿರ್ಮಾಣ ಮಾಡುವುದು. 2ನೇ ಕರೆ (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 125.00 ಲಕ್ಷಗಳು, ಇಎಂಡಿ ಮೊತ್ತ: ₹.187500.00
18.	ದಾಸರಹಳ್ಳಿ ಕ್ಷೇತ್ರದ ಭಾಗದಲ್ಲಿ (ಬೆಂಉನಪಾ ವ್ಯಾಪ್ತಿ) ಬೃಹತ್ ನೀರು ಕಾಲುವೆಯನ್ನು 2026-27ನೇ ಸಾಲಿಗೆ ವಾರ್ಷಿಕ ನಿರ್ವಹಣೆ ಮಾಡುವುದು. (ಸಾಮಾನ್ಯರಿಗೆ) ಅಂದಾಜು ಮೊತ್ತ / ಟೆಂಡರ್‌ಗಿಟ್ಟ ಮೊತ್ತ: ₹. 150.00 ಲಕ್ಷಗಳು, ಇಎಂಡಿ ಮೊತ್ತ: ₹.300000.00

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **06-07-2026**ರ ಸಂಜೆ **4:00** ಗಂಟೆಯೊಳಗಾಗಿ (ಕ್ರಮಸಂಖ್ಯೆ 16 ರಿಂದ 18 ರವರೆಗೆ) (2) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ ವಲಯ-2, ಬೆಂ.ಉ.ನ.ಪಾ, ಬೆಂಗಳೂರು ಇಲ್ಲಿ ದಿನಾಂಕ **07-07-2026**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (ಕ್ರಮಸಂಖ್ಯೆ 16 ರಿಂದ 18 ರವರೆಗೆ) (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **14-07-2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್‌ಗಳನ್ನು ದಿನಾಂಕ **15-07-2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.(ಸಾಧ್ಯವಾದಲ್ಲಿ)
ಸಹಿ/- ಕಾರ್ಯಪಾಲಕ ಅಭಿಯಂತರರು
ದಾಸರಹಳ್ಳಿ ವಿಭಾಗ, ಬೆಂ.ಉ.ನ.ಪಾ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಆಯುಕ್ತರ ಕಾರ್ಯಾಲಯ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ,
ಚಾಮರಾಜಪೇಟೆ, ಬೆಂಗಳೂರು-18, ದೂರವಾಣಿ:26709689/ 26706775, Email: endowmentcommissioner@gmail.com.
ಸಂಖ್ಯೆ: HRICE-ADM0ADM8/51/2026/E-2047124 ದಿನಾಂಕ : 22.06.2026

ಪ್ರಕಟಣೆ
ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2011ರ ಕಲಂ 25 ಅನ್ವಯ ರಚಿಸಲಾಗಿದ್ದ ಈ ಕೆಳಕಂಡ 01 "ಎ" ಪ್ರವರ್ಗದ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅವಧಿಯು ಸದರಿ ದೇವಾಲಯದ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಂದು ಮುಕ್ತಾಯವಾಗಿರುವುದರಿಂದ ಸದರಿ ದೇವಾಲಯಕ್ಕೆ ಹೊಸದಾಗಿ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಸಲುವಾಗಿ ಸಾರ್ವಜನಿಕ / ಭಕ್ತಾಧಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಪ್ರಕಟಣೆ ಹೊರಡಿಸಲು **ದಿನಾಂಕ:17.03.2025**ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 8ನೇ ಸಭೆಯ ವಿಷಯ ಸೂಚಿ ಸಂಖ್ಯೆ:(3)ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಕ್ರ.ಸಂ.	ದೇವಾಲಯದ ಹೆಸರು ಮತ್ತು ವಿಳಾಸ	ಮೂರು ವರ್ಷಗಳ ವ್ಯವಸ್ಥಾಪನಾ ಸಮಿತಿಯ ಅವಧಿಯು ಮುಕ್ತಾಯವಾದ ದಿನಾಂಕ
1	ಕೋಲಾರ ಜಿಲ್ಲೆ, ಬಂಗಾರಪೇಟೆ, ಗುಟ್ಟಹಳ್ಳಿ ಗ್ರಾಮ, ಬಂಗಾರುತಿರುಪತಿ, ಶ್ರೀ ವೆಂಕಟರಮಣ ಸ್ವಾಮಿ ದೇವಾಲಯ.	17.12.2025

ಈ ಕೆಳಕಂಡ 01 ಸಂಯುಕ್ತ ಸಂಸ್ಥೆಯ ವ್ಯವಸ್ಥಾಪನಾ ಸಮಿತಿಯ ಅವಧಿಯು ಸಹ ಸದರಿ ಸಂಸ್ಥೆಯ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಂದು ಮುಕ್ತಾಯವಾಗಿರುವುದರಿಂದ ಸದರಿ ಸಂಸ್ಥೆಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2011ರ ಕಲಂ 25(1)ರಡಿಯಲ್ಲಿ ಹಿಂದೂ ಮತ್ತು ಮುಸ್ಲಿಂ ಈ ಎರಡೂ ಧರ್ಮದ ಭಕ್ತಾಧಿಗಳು ಮತ್ತು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ, ಪ್ರಕಟಣೆ ಹೊರಡಿಸಲು **ದಿನಾಂಕ:17.03.2026ರಂದು** ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 11ನೇ ಸಭೆಯ ವಿಷಯ ಸೂಚಿ ಸಂಖ್ಯೆ:(8)ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಕ್ರ.ಸಂ.	ದೇವಾಲಯದ ಹೆಸರು ಮತ್ತು ವಿಳಾಸ	ಮೂರು ವರ್ಷಗಳ ವ್ಯವಸ್ಥಾಪನಾ ಸಮಿತಿಯ ಅವಧಿಯು ಮುಕ್ತಾಯವಾದ ದಿನಾಂಕ
2	ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಐ.ಡಿ ಪೀಠ, ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ.	17.12.2025

ಹಾಗೂ ಈ ಕೆಳಕಂಡ 13 ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿ ರಚಿಸುವ ಸಂಬಂಧ ಅರ್ಜಿ ಆಹ್ವಾನಿಸಿ ಹೊರಡಿಸಿದ ಪ್ರಕಟಣೆಗೆ ನಿಗದಿತ ಅವಧಿಯಲ್ಲಿ ಯಾವುದೇ ಅರ್ಜಿಗಳು ಸ್ವೀಕೃತವಾದ ಕಾರಣ ಎರಡನೇ ಬಾರಿ ಮರು ಪ್ರಕಟಣೆ ಹೊರಡಿಸಿ ಅರ್ಜಿ ಆಹ್ವಾನಿಸಲು ಮತ್ತು ಪ್ರಕಟಣೆಯನ್ನು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಚುರ ಪಡಿಸುವಂತೆ **ದಿನಾಂಕ:17.03.2026** ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯ ವಿಷಯ ಸೂಚಿ ಸಂಖ್ಯೆ:(8)ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಕ್ರ.ಸಂ.	ದೇವಾಲಯದ ಹೆಸರು ಮತ್ತು ವಿಳಾಸ
3	ಬೆಂಗಳೂರು ನಗರ ಜಿಲ್ಲೆ, ನಗರ್ತರಪೇಟೆ, ಶ್ರೀ ವೆಂಕಟರಣಸ್ವಾಮಿ ದೇವಾಲಯ.
4	ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ದೊಡ್ಡದಾಳವಟ್ಟ ಗ್ರಾಮದ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ದೇವಾಲಯ.
5	ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಎತ್ತಿನಬೂದಿಹಾಳ್, ಶ್ರೀ ಕಟ್ಟೆ ಬಸವೇಶ್ವರ ಸ್ವಾಮಿ ದೇವಾಲಯ,
6	ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ಮಾಲೇಕಲ್, ತಿರುಪತಿ, ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ.
7	ತುಮಕೂರು ಜಿಲ್ಲೆ, ಮಧುಗಿರಿ ಟೌನ್, ಶ್ರೀ ದಂಡಿನ ಮಾರಮ್ಮ ದೇವಾಲಯ.
8	ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ರಜತಾದ್ರಿಪುರ, ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಾಲಯ
9	ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಪಾಂಡೇಶ್ವರ, ಶ್ರೀ ಮಹಾ ಲಿಂಗೇಶ್ವರ ಸ್ವಾಮಿ ದೇವಾಲಯ.
10	ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಡಿಂಕಾ, ಶ್ರೀ ಡಿಂಕದಮ್ಮ ದೇವಾಲಯ.
11	ಮಂಡ್ಯ ಜಿಲ್ಲೆ, ಕೆ.ಆರ್ ಪೇಟೆ ತಾಲ್ಲೂಕು, ಸಾಸಲು ಗ್ರಾಮ, ಶ್ರೀ ಸೋಮೇಶ್ವರ ಮತ್ತು ಶಂಭುಲಿಂಗೇಶ್ವರ ಸ್ವಾಮಿ ದೇವಾಲಯ.
12	ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಲ್ಲುವೀರನಹಳ್ಳಿ ಗ್ರಾಮ, ಶ್ರೀ ಮತ್ತಿ ತಾಳೇಶ್ವರ ಸ್ವಾಮಿ ದೇವಾಲಯ,
13	ಶ್ರೀ ಗವಿರಂಗನಾಥಸ್ವಾಮಿ ದೇವಾಲಯ, ಬಿಲ್ಲೇನಹಳ್ಳಿ, ಕೆ.ಆರ್ ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
14	ವಿಜಯನಗರ ಜಿಲ್ಲೆ, ಮರಿಯಮ್ಮನಹಳ್ಳಿ, ಶ್ರೀಲಕ್ಷ್ಮೀ ನಾರಾಯಣ ದೇವಾಲಯ.
15	ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಶ್ರೀ ಕೋಟೆ ಮಲ್ಲೇಶ್ವರ ಸ್ವಾಮಿ ದೇವಾಲಯ,

ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಗಳ ನಿರ್ಣಯಗಳಂತೆ ಹಾಗೂ ರಾಜ್ಯ ಧಾರ್ಮಿಕ ಪರಿಷತ್ತಿನ ಅಧ್ಯಕ್ಷರಿಂದ ಅನುಮೋದನೆಗೊಂಡಿರುವಂತೆ ಈ ಮೇಲ್ಕಂಡ ಒಟ್ಟು 15 "ಎ" ಪ್ರವರ್ಗದ ದೇವಾಲಯಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 25 ರನ್ವಯ 25 ರಂತೆ ಪ್ರಸ್ತಾಪಿತ ದೇವಾಲಯಗಳಿಗೆ 09 ಮಂದಿ ಮಹನೀಯರು / ಮಹಿಳೆಯರನ್ನೊಳಗೊಂಡ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಸಂಬಂಧ ಸಮಿತಿಗೆ ಸದಸ್ಯತ್ವ ಬಯಸುವ ಆಸಕ್ತ ಭಕ್ತಾಧಿಗಳು /ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಿ, ಪ್ರಕಟಣೆ ಹೊರಡಿಸಿದೆ.
ಸದರಿ ದೇವಾಲಯಗಳ ವ್ಯವಸ್ಥಾಪನಾ ಸಮಿತಿಗೆ ಕನಿಷ್ಠ 25 ವರ್ಷಕ್ಕಿಂತ ಮೇಲ್ಪಟ್ಟ ಆಸ್ತಿಕ ಭಕ್ತಾಧಿಗಳು ಸದಸ್ಯತ್ವ ಕೋರಿ, ಅರ್ಜಿಯನ್ನು ನಿಗಧಿತ ನಮೂನೆ-1(ಬಿ)(22ನೇ ನಿಯಮ) ನಮೂನೆಯಲ್ಲಿ ಭರ್ತಿ ಮಾಡಿ, ಅರ್ಜಿಯನ್ನು **ದಿನಾಂಕ:13.07.2026**ರೊಳಗಾಗಿ **"ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018"** ಇಲ್ಲಿಗೆ ನೇರವಾಗಿ ಸಲ್ಲಿಸತಕ್ಕದ್ದು, ಅಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು, ನಿಗಧಿತ ಅವಧಿಯ ನಂತರದಲ್ಲಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ನಿಗಧಿತ ಅರ್ಜಿ ನಮೂನೆಯು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮತ್ತು **www.itms.kar.gov.in**ನಲ್ಲಿ ಲಭ್ಯವಿರುತ್ತದೆ.
ಸಹಿ/-
ಸದಸ್ಯ ಕಾರ್ಯದರ್ಶಿ, ರಾಜ್ಯ ಧಾರ್ಮಿಕ ಪರಿಷತ್ತು ಹಾಗೂ ಆಯುಕ್ತರು,
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು
ವಾಸಾಸಂಇ/ವಾ.ಪ್ರ/1309/ಎಸ್‌ಎಸ್‌ಸಿ/2026-27

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ
(ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ಭಾರತ ಸರ್ಕಾರ)
ಡೋರ್ ನಂ.: 2-1273/1ಎಫ್, ಬಿ.ವಿ.ರೆಡ್ಡಿ ಕಾಲೋನಿ, ಚಿತ್ತೂರ್-357715
Ph.No:08572-357715,
E-mail: chittornhaipiu@gmail.com

ಸಾರ್ವಜನಿಕ ಪ್ರಕಟಣೆ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಆಯಾ ಸುಂಕ ವಸೂಲಾತಿ ಕೇಂದ್ರಗಳಲ್ಲಿನ ಪ್ರವೇಶ/ನಿರ್ಗಮನಕ್ಕೆ ಸಂಬಂಧಿತ ಸುಂಕ ಮತ್ತು ಬಳಕೆದಾರರ ಶುಲ್ಕ ಸಂಗ್ರಹಣೆಗೆ ಸಂಬಂಧಿಸಿದಂತೆ ದಿನಾಂಕ 07.05.2026ರ ಗೆಜೆಟ್ ನೋಟಿಫಿಕೇಶನ್ ನಂ. 2326(ಈ) ಪ್ರಕಟಿಸಿರುತ್ತಾರೆ. ಸಕ್ಷಮ ಪ್ರಾಧಿಕಾರ ಆಗಿರುವ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ), ಪ್ರಾದೇಶಿಕ ಕಚೇರಿ, ವಿಜಯವಾಡ ಇವರು ತಮ್ಮ, ದಿನಾಂಕ 25.05.2026ರ ಪತ್ರ ಮುಖೇನ, ಹ.ವ. 2026-27ನೇ ಸಾಲಿಗೆ ಅನ್ವಯವಾಗುವ ಬಳಕೆದಾರರ ಶುಲ್ಕದ ದರಗಳಿಗೆ ಅನುಮೋದನೆ ನೀಡಿರುತ್ತಾರೆ. ಅಂತೆಯೇ, ಎನ್‌ಎಚ್‌ಎಐ, ಪಿಐಯು ಚಿತ್ತೂರ್ ವ್ಯಾಪ್ತಿಯೊಳಗಿನ ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆ ಹಾಗೂ ಆಂಧ್ರಪ್ರದೇಶ ರಾಜ್ಯದ ಚಿತ್ತೂರ್ ಜಿಲ್ಲೆಯಲ್ಲಿರುವ, ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್‌ವೇ ಸ್ಟ್ರೆಚ್‌ನ ಕಿ.ಮೀ. 71.000 ದಿಂದ ಕಿ.ಮೀ. 96.000 (ಬೇತಮಂಗಲ - ಬೈರೆಡ್ಡಿಪಲ್ಲಿ ಸೆಕ್ಷನ್) ನಲ್ಲಿ ಕಿ.ಮೀ. 94.095 ರಲ್ಲಿರುವ ಬೈರೆಡ್ಡಿಪಲ್ಲಿ ಫ್ರೀ ಪ್ಲಾಜಾ (ಟಿಪಿ-05)ದಲ್ಲಿನ **ಸುಂಕ ಕಾರ್ಯಾಚರಣೆ ಹಾಗೂ ಬಳಕೆದಾರರ ಶುಲ್ಕ ಸಂಗ್ರಹಣೆಯು 25.06.2026 ರಂದು 08:00 ಗಂಟೆಯಿಂದ ಜಾರಿಗೊಂಡಂತೆ ಪ್ರಾರಂಭವಾಗುತ್ತದೆ.** ಸಕ್ಷಮ ಪ್ರಾಧಿಕಾರ ಅನುಮೋದಿಸಿರುವ ಹ.ವ. 2026-27ನೇ ಸಾಲಿನ ಬಳಕೆದಾರರ ಶುಲ್ಕ ದರಗಳ ವಿವರಗಳು ಕೆಳಗಿನಂತಿರುತ್ತವೆ:

ಎ. ಟಿಪಿ-05 (ಬೈರೆಡ್ಡಿಪಲ್ಲಿ) ಇಂದ ಟಿಪಿ-01 (ಹೆಡಿಗೆನಬೆಲೆ):

ವರ್ಗ	ಸಿಂಗಲ್ ಜರ್ನಿ ಶುಲ್ಕ (ರೂ.)	24 ಗಂಟೆಯೊಳಗೆ ಎರಡು ಒನ್-ವೇ ಜರ್ನಿ ಶುಲ್ಕ (ರೂ.)	ಒಂದು ತಿಂಗಳಲ್ಲಿ 50 ಸಿಂಗಲ್ ಜರ್ನಿಗಳ ಶುಲ್ಕ (ರೂ.)
ಕಾರ್/ಜೀಪ್/ವ್ಯಾನ್/ಎಲ್‌ಎಂವಿ	195	290	6465
ಎಲ್‌ಸಿವಿ/ಎಲ್‌ಜಿವಿ/ಮಿನಿ ಬಸ್	315	470	10440
ಬಸ್/ಟ್ರಕ್ (ಟು ಆಕ್ಸೆಲ್ಸ್)	655	985	21875
3 ಆಕ್ಸೆಲ್‌ವರೆಗಿನ ವಾಹನಗಳಿಗೆ	715	1075	23865
ಎಚ್‌ಸಿಎಂ / ಇಎಂಇ / ಎಂಎವಿ (4-6 ಆಕ್ಸೆಲ್ಸ್)	1030	1545	34305
ಭಾರಿ ಗಾತ್ರದ ವಾಹನಗಳು (7ಕ್ಕೂ ಅಧಿಕ ಆಕ್ಸೆಲ್‌ಗಳು)	1255	1880	41765

ಬಿ. ಟಿಪಿ-05 (ಬೈರೆಡ್ಡಿಪಲ್ಲಿ) ಇಂದ ಟಿಪಿ-02 (ಅಗ್ರಹಾರ):

ವರ್ಗ	ಸಿಂಗಲ್ ಜರ್ನಿ ಶುಲ್ಕ (ರೂ.)	24 ಗಂಟೆಯೊಳಗೆ ಎರಡು ಒನ್-ವೇ ಜರ್ನಿ ಶುಲ್ಕ (ರೂ.)	ಒಂದು ತಿಂಗಳಲ್ಲಿ 50 ಸಿಂಗಲ್ ಜರ್ನಿಗಳ ಶುಲ್ಕ (ರೂ.)
ಕಾರ್/ಜೀಪ್/ವ್ಯಾನ್/ಎಲ್‌ಎಂವಿ	145	215	4810
ಎಲ್‌ಸಿವಿ/ಎಲ್‌ಜಿವಿ/ಮಿನಿ ಬಸ್	235	350	7765
ಬಸ್/ಟ್ರಕ್ (ಟು ಆಕ್ಸೆಲ್ಸ್)	490	730	16275
3 ಆಕ್ಸೆಲ್‌ವರೆಗಿನ ವಾಹನಗಳಿಗೆ	535	800	17755
ಎಚ್‌ಸಿಎಂ / ಇಎಂಇ / ಎಂಎವಿ (4-6 ಆಕ್ಸೆಲ್ಸ್)	765	1150	25520
ಭಾರಿ ಗಾತ್ರದ ವಾಹನಗಳು (7ಕ್ಕೂ ಅಧಿಕ ಆಕ್ಸೆಲ್‌ಗಳು)	930	1400	31070

ಸಿ. ಟಿಪಿ005 (ಬೈರೆಡ್ಡಿಪಲ್ಲಿ) ಇಂದ ಟಿಪಿ003 (ಕೃಷ್ಣರಾಜಪುರ): ವರ್ಗ

ವರ್ಗ	ಸಿಂಗಲ್ ಜರ್ನಿ ಶುಲ್ಕ (ರೂ.)	24 ಗಂಟೆಯೊಳಗೆ ಎರಡು ಒನ್-ವೇ ಜರ್ನಿ ಶುಲ್ಕ (ರೂ.)	ಒಂದು ತಿಂಗಳಲ್ಲಿ 50 ಸಿಂಗಲ್ ಜರ್ನಿಗಳ ಶುಲ್ಕ (ರೂ.)
ಕಾರ್/ಜೀಪ್/ವ್ಯಾನ್/ಎಲ್‌ಎಂವಿ	80	115	2610
ಎಲ್‌ಸಿವಿ/ಎಲ್‌ಜಿವಿ/ಮಿನಿ ಬಸ್	125	190	4215
ಬಸ್/ಟ್ರಕ್ (ಟು ಆಕ್ಸೆಲ್ಸ್)	265	395	8830
3 ಆಕ್ಸೆಲ್‌ವರೆಗಿನ ವಾಹನಗಳಿಗೆ	290	435	9630
ಎಚ್‌ಸಿಎಂ / ಇಎಂಇ / ಎಂಎವಿ (4-6 ಆಕ್ಸೆಲ್ಸ್)	415	625	13845
ಭಾರಿ ಗಾತ್ರದ ವಾಹನಗಳು (7ಕ್ಕೂ ಅಧಿಕ ಆಕ್ಸೆಲ್‌ಗಳು)	505	760	16855

ಸಿ. ಟಿಪಿ-05 (ಬೈರೆಡ್ಡಿಪಲ್ಲಿ) ಇಂದ ಟಿಪಿ-04 (ಸುಂದರಪಾಳ್ಯ):

ವರ್ಗ	ಸಿಂಗಲ್ ಜರ್ನಿ ಶುಲ್ಕ (ರೂ.)	24 ಗಂಟೆಯೊಳಗೆ ಎರಡು ಒನ್-ವೇ ಜರ್ನಿ ಶುಲ್ಕ (ರೂ.)	ಒಂದು ತಿಂಗಳಲ್ಲಿ 50 ಸಿಂಗಲ್ ಜರ್ನಿಗಳ ಶುಲ್ಕ (ರೂ.)
ಕಾರ್/ಜೀಪ್/ವ್ಯಾನ್/ಎಲ್‌ಎಂವಿ	50	75	1655
ಎಲ್‌ಸಿವಿ/ಎಲ್‌ಜಿವಿ/ಮಿನಿ ಬಸ್	80	120	2675
ಬಸ್/ಟ್ರಕ್ (ಟು ಆಕ್ಸೆಲ್ಸ್)	170	250	5605
3 ಆಕ್ಸೆಲ್‌ವರೆಗಿನ ವಾಹನಗಳಿಗೆ	185	275	6115
ಎಚ್‌ಸಿಎಂ / ಇಎಂಇ / ಎಂಎವಿ (4-6 ಆಕ್ಸೆಲ್ಸ್)	265	395	8790
ಭಾರಿ ಗಾತ್ರದ ವಾಹನಗಳು (7ಕ್ಕೂ ಅಧಿಕ ಆಕ್ಸೆಲ್‌ಗಳು)	320	480	10705

ಯೋಜನಾ ನಿರ್ದೇಶಕರು, ಎನ್‌ಎಚ್‌ಎಐ, ಪಿಐಯು-ಚಿತ್ತೂರ್
ಕೇವಲ ರಸ್ತೆಗಳನ್ನಲ್ಲ, ದೇಶ ನಿರ್ಮಾಣವಾಗುತ್ತಿದೆ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸನ್ಮಾನ, ಬಿರುದುಗಳು ಅಸಾಮಾನ್ಯರಿಗೆ ಮುಜುಗರ ಉಂಟು ಮಾಡುತ್ತವೆ; ಅನರ್ಹರಿಂದ ಗೌರವ ಕಳೆದುಕೊಳ್ಳುತ್ತವೆ.

–ಜಾರ್ಜ್ ಬರ್ನಾಡ್ ಷಾ

ಸಂಪಾದಕೀಯ

ಪಕ್ಷದ ಸಮಸ್ಯೆಗೆ ದೈವಸಾಕ್ಷ್ಯ ಬೇಡ ಧಾರ್ಮಿಕ ಸಂಕೇತ ಅಪಬಳಕೆ ಸಲ್ಲ

ರಾಜ್ಯಸಭೆ ಮತ್ತು ವಿಧಾನ ಪರಿಷತ್ತಿನ ಚುನಾವಣೆಗಳಲ್ಲಿನ ಅಡ್ಡ ಮತದಾನದ ಫಲಾನುಭವಿ ಜಾಗದಲ್ಲಿ ಸಾಮಾನ್ಯವಾಗಿ ಗುರುತಿಸಿಕೊಳ್ಳುತ್ತಿದ್ದ ಭಾರತೀಯ ಜನತಾ ಪಕ್ಷ (ಬಿಜೆಪಿ) ಈ ಬಾರಿ ಸಂತ್ರಸ್ತ ಸ್ಥಾನದಲ್ಲಿದೆ. ಕರ್ನಾಟಕದ ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಐದು ಸ್ಥಾನಗಳು ಕಾಂಗ್ರೆಸ್ ಪಾಲಾಗುವುದರೊಂದಿಗೆ ಬಿಜೆಪಿ ಮುಖಭಂಗ ಅನುಭವಿಸಿದೆ. ನಾಲ್ಕು ಸ್ಥಾನಗಳನ್ನು ಗೆಲ್ಲಲು ಸಾಧ್ಯವಾದಷ್ಟು ಸಂಖ್ಯಾಬಲವನ್ನು ಹೊಂದಿದ್ದರೂ, ಬಿಜೆಪಿ ಹಾಗೂ ಜಾತ್ಯತೀತ ಜನತಾದಳದ ಕೆಲವು ಶಾಸಕರು ಗುಪ್ತ ಮತದಾನದ ಲಾಭ ಪಡೆದು ಕಾಂಗ್ರೆಸ್ ಪಕ್ಷದ ಐದನೇ ಅಭ್ಯರ್ಥಿಯ ಗೆಲುವಿಗೆ ಕಾರಣರಾಗಿದ್ದಾರೆ. ಪಕ್ಷಕ್ಕೆ ದ್ರೋಹ ಬಗೆದ ಕಳಂಕಿತ ಶಾಸಕರನ್ನು ಪತ್ತೆ ಹಚ್ಚುವ ಕೇಸರಿ ಪಾಳಯದ ಪ್ರಯತ್ನ ವಿಚಿತ್ರ ಸನ್ನಿವೇಶವೊಂದಕ್ಕೆ ಕಾರಣವಾಗಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ಧರ್ಮಸ್ಥಳದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಸುವ ಮೂಲಕ ಶಾಸಕರನ್ನು ಆಣೆ ಪ್ರಮಾಣದ ಪರೀಕ್ಷೆಗೆ ಗುರಿಪಡಿಸುವ ಮಾತನಾಡಿದರು. ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿ ಶಾಸಕರು ತಮ್ಮ ಸತ್ಯಸಂಧತೆಯನ್ನು ಸಾಬೀತುಪಡಿಸಬೇಕು ಎನ್ನುವುದು ಅವರ ಮಾತಿನ ಇಂಗಿತವಾಗಿತ್ತು. ಆದರೆ, ಪ್ರಲ್ಹಾದ ಜೋಶಿ, ಎಸ್. ಸುರೇಶ್ ಕುಮಾರ್, ಡಿ.ವಿ. ಸದಾನಂದ ಗೌಡ ಹಾಗೂ ಅರವಿಂದ ಬೆಲ್ಲದ ಸೇರಿದಂತೆ ಪಕ್ಷದ ಕೆಲವು ನಾಯಕರ ಸಲಹೆಯ ಮೇರೆಗೆ ಆಣೆ ಪ್ರಮಾಣದ ಮಾತು ಹಿನ್ನೆಲೆಗೆ ಸರಿದಿದೆ.



ಆಣೆ ಪ್ರಮಾಣ ಕರ್ನಾಟಕಕ್ಕೆ ಹೊಸತೇನೂ ಅಲ್ಲ. ವಿವಾದಗಳನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ನಾಗರಿಕ ವ್ಯವಸ್ಥೆಯ ಪದ್ಧತಿಗಳು ವಿಫಲವಾದಾಗ, ಸಾಂಪ್ರದಾಯಿಕ ಆಣೆ ಪ್ರಮಾಣದ ಮೊರೆ ಹೋಗುವ ಕ್ರಮ ಶತಮಾನಗಳಿಂದಲೂ ಜಾರಿಯಲ್ಲಿದೆ. ದೈವದ ನ್ಯಾಯವನ್ನು ವಂಚಿಸುವುದು ಯಾರಿಂದಲೂ ಸಾಧ್ಯ ಇಲ್ಲ ಎನ್ನುವ ನಂಬಿಕೆ ಬೇರೂರಿರುವ ಈ ವ್ಯವಸ್ಥೆಯಲ್ಲಿ, ತನ್ನ ಪ್ರಾಮಾಣಿಕತೆ ಸಾಬೀತುಪಡಿಸಬೇಕಾದ ವ್ಯಕ್ತಿ ದೈವದ ಸನ್ನಿಧಿಯಲ್ಲಿ ಸತ್ಯದ ಪ್ರಮಾಣ ಮಾಡಬೇಕಾಗುತ್ತದೆ. ಸುಳ್ಳು ಪ್ರಮಾಣ ಮಾಡುವ ವ್ಯಕ್ತಿಗೆ ಕೇಡುಂಟಾಗುತ್ತದೆ ಎನ್ನುವ ನಂಬಿಕೆಯು ಕಾನೂನಿನ ನೆಲೆಗಟ್ಟಿನ ಬದಲಾಗಿ, ವ್ಯಕ್ತಿಯ ಅಂತಃಸಾಕ್ಷಿ ಮತ್ತು ಭಕ್ತಿಯನ್ನು ಅವಲಂಬಿಸಿದ್ದಾಗಿದೆ. ದೈವದೊಂದಿಗೆ ತಳಕು ಹಾಕಿಕೊಂಡ ಈ ನಂಬಿಕೆಯನ್ನು ರಾಜಕಾರಣಿಗಳು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯತ್ನಿಸಿದ್ದಾರೆ. 2011ರಲ್ಲಿ ಬಿ.ಎಸ್. ಯಡಿಯೂರಪ್ಪ ಮತ್ತು ಎಚ್.ಡಿ. ಕುಮಾರಸ್ವಾಮಿ ಅವರ ನಡುವೆ ಆಣೆ ಪ್ರಮಾಣದ ವಾಗ್ವಾದ ನಡೆದಿತ್ತು. ಹರತಾಳು ಹಾಲಪ್ಪ – ಬೇಳೂರು ಗೋಪಾಲಕೃಷ್ಣ, ಕೆ.ಎಂ. ಶಿವಲಿಂಗೇಗೌಡ – ಎಸ್. ರವಿಕುಮಾರ್ ಮತ್ತು ಲಕ್ಷ್ಮಿ ಹೆಬ್ಬಾಳ್ಕರ್ – ಸಿ.ಟಿ. ರವಿ ಅವರಿಗೆ ಸಂಬಂಧಿಸಿದ ವಿವಾದಗಳಲ್ಲಿ ಧರ್ಮಸ್ಥಳವನ್ನು ಪ್ರಸ್ತಾಪಿಸುವ ವೇದಿಕೆಯನ್ನಾಗಿ ಬಳಸಿಕೊಳ್ಳಲಾಗಿದೆ. ಇಂತಹ ವಿವಾದಗಳು ಬಗೆಹರಿದಿರುವ ಉದಾಹರಣೆಗಳು ಕಡಿಮೆ. ಜನಸಾಮಾನ್ಯರ ನಂಬಿಕೆಗೆ ಸಂಬಂಧಿಸಿದ ಸಂಪ್ರದಾಯದ ಮಹತ್ವವನ್ನು ಕುಗ್ಗಿಸುವ ವಿದ್ಯಮಾನಗಳು ಹೆಚ್ಚಾಗಿವೆ. ಈ ಸಾಲಿಗೆ ವಿಜಯೇಂದ್ರ ಅವರ ಇತ್ತೀಚಿನ ಅಭಿಯಾನ ಅಸಮಂಜಸ ಪ್ರಸ್ತಾವವಾಗಿದೆ.

> ಪಕ್ಷ ಹಾಗೂ ನಾಯಕತ್ವದ ವೈಫಲ್ಯವನ್ನು ದೈವದ ಮೊರೆ ಹೋಗುವ ಮೂಲಕ ಮರೆಮಾಚುವುದು ಸಾಧ್ಯವಿಲ್ಲ. ರಾಜಕೀಯ ಸಮಸ್ಯೆಗಳ ಪರಿಹಾರಕ್ಕೆ ದೇಗುಲಗಳು ವೇದಿಕೆ ಆಗಬಾರದು.

ಶಾಸಕರು ಅಡ್ಡ ಮತದಾನ ಮಾಡಿದ್ದೇ ಆದಲ್ಲಿ, ಆ ಘಟನೆ ಪಕ್ಷದ ರಾಜಕಾರಣ ಮತ್ತು ಸಂಘಟನಾ ವೈಫಲ್ಯವನ್ನು ಪ್ರತಿಬಿಂಬಿಸುತ್ತದೆ. ಶಿಸ್ತುಪಾಲನೆ, ಪಕ್ಷದೊಳಗಿನ ಅಸಮಾಧಾನವನ್ನು ಮುಂಚಿತವಾಗಿಯೇ ಗುರುತಿಸುವುದು ಹಾಗೂ ಆಂತರಿಕ ವಿರೋಧಾಭಾಸಗಳನ್ನು ಸಮರ್ಥವಾಗಿ ನಿಭಾಯಿಸುವುದು ಪಕ್ಷದ ಅಧ್ಯಕ್ಷರ ಕರ್ತವ್ಯಗಳಾಗಿವೆ. ಘಟನೆ ನಡೆದ ನಂತರ ದೈವದ ಮೊರೆ ಹೋಗುವುದು, ಆ ವಿದ್ಯಮಾನ ಸಂಭವಿಸುವ ಮುನ್ನ ಅಗತ್ಯವಾಗಿದ್ದ ರಾಜಕೀಯ ನಿರ್ವಹಣೆಗೆ ಪರ್ಯಾಯ ಆಗಲಾರದು. ನಾಯಕತ್ವ ವೈಫಲ್ಯದ ಕೊರತೆಯನ್ನು ದೈವದ ಹೆಸರಿನಲ್ಲಿ ಮರೆಮಾಚುವುದು ಸಾಧ್ಯವಿಲ್ಲ. ಅದಲ್ಲದೆ, ಮುಖ್ಯವಾಗಿ ಪ್ರಜಾಪ್ರಭುತ್ವದಲ್ಲಿ ಸಮಸ್ಯೆಗಳನ್ನು ಪ್ರಜಾತಾಂತ್ರಿಕ ವಿಧಾನದಲ್ಲಿಯೇ ಬಗೆಹರಿಸಿಕೊಳ್ಳಬೇಕಾಗಿದೆ. ಅಡ್ಡ ಮತದಾನ, ಅಶಿಸ್ತು ಮತ್ತು ಗುಂಪುಗಾರಿಕೆಗಳಂತಹ ಸಮಸ್ಯೆಗಳಿಗೆ ಪಕ್ಷದೊಳಗಿನ ಆಂತರಿಕ ತನಿಖೆ ಮತ್ತು ಶಿಸ್ತುಕ್ರಮಗಳೇ ಉತ್ತರವಾಗಿವೆ. ಆ ಸಮಸ್ಯೆಗಳನ್ನು ದೇವಾಲಯಗಳಲ್ಲಿ ಅಥವಾ ಸಾರ್ವಜನಿಕ ಧಾರ್ಮಿಕ ಪ್ರದರ್ಶನಗಳ ಮೂಲಕ ಬಗೆಹರಿಸುವುದು ಸಾಧ್ಯವಿಲ್ಲ. ರಾಜ್ಯದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ನಕ್ಷೆಯಲ್ಲಿ ಧರ್ಮಸ್ಥಳಕ್ಕೆ ವಿಶೇಷ ಸ್ಥಾನವಿದೆ. ರಾಜಕಾರಣಿಗಳು ತಮ್ಮ ನೈತಿಕತೆಗೆ ಒರೆಗಲ್ಲಿನ ರೂಪದಲ್ಲಿ ಧರ್ಮಸ್ಥಳವನ್ನು ಪಕ್ಷದ ಸಮಸ್ಯೆಗಳಲ್ಲಿ ಎಳೆದುತರುವುದು ಸರಿಯಲ್ಲ. ಧಾರ್ಮಿಕ ಮಹತ್ವದ ಸಂಕೇತವನ್ನು ಸುಳ್ಳು ಪತ್ತೆ ಯಂತ್ರವನ್ನಾಗಿ ಪರಿವರ್ತಿಸುವುದರಿಂದ ಧರ್ಮಕ್ಕಾಗಲೀ, ಪ್ರಜಾಪ್ರಭುತ್ವಕ್ಕಾಗಲೀ ಉಪಯೋಗ ಆಗುವುದಿಲ್ಲ. ರಾಜಕಾರಣದಲ್ಲಿನ ಹೋರಾಟಗಳು ರಾಜಕೀಯ ರಂಗದಲ್ಲಿ ನಡೆಯಬೇಕೇ ಹೊರತು, ದೇವಾಲಯಗಳ ಗರ್ಭಗುಡಿಯ ಆವರಣದಲ್ಲಿ ಅಲ್ಲ.

ಜಾಲತಾಣ

ಮನೆಯವರ ಮೇಲೆ ಪ್ರಮಾಣ!

ಬಿಜೆಪಿ ಶಾಸಕರ ಅಡ್ಡ ಮತದಾನಕ್ಕೆ ಧರ್ಮಸ್ಥಳದ ಮಂಜುನಾಥನ ಮೇಲೆ ಆಣೆ ಏಕೆ? ಶಾಸಕರು ತಂತಮ್ಮ ಹೆಂಡತಿ–ಮಕ್ಕಳ ಮೇಲೆ ಪ್ರಮಾಣ ಮಾಡಲಿ ಎಂದು ನಂಬಿಕೆ ದ್ರೋಹಕ್ಕೆ ಒಳಗಾದ ಜನ ಬಯಸುತ್ತಿದ್ದಾರೆ.

ಸುರೇಶ್ ಬಿ.ಎಚ್., 'ಫೇಸ್‌ಬುಕ್'ನಿಂದ

ಕಿಡಿನುಡಿ

ಬಿಡದಿ ಟೌನ್‌ಶಿಪ್ ಬಗ್ಗೆ ಬಿಡದಿಯಲ್ಲಿಯೇ ಚರ್ಚೆ ನಡೆಯಬೇಕು. ಅದು ಬಿಟ್ಟು ಸರ್ಕಾರಿ ಕಚೇರಿ, ಖಾಸಗಿ ನಿವಾಸಗಳ ನಾಲ್ಕು ಗೋಡೆಗಳ ಮಧ್ಯೆ ಚರ್ಚಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಹ್ವಾನ ನೀಡಿರುವುದು ಎಷ್ಟು ಸರಿ?

ಆರ್. ಅಶೋಕ, ಶಾಸಕ

25 ವರ್ಷಗಳ ಹಿಂದೆ

ಭಾನುವಾರ, 24-6-2001

• **ಆಂಧ್ರದ ನೀರಾವರಿ: ಕೇಂದ್ರಕ್ಕೆ ರಾಜ್ಯದ ನಿಯೋಗ**

ಬೆಂಗಳೂರು, ಜೂನ್ 23– ಆಂಧ್ರಪ್ರದೇಶದ 3 ವಿವಾದಾಸ್ಪದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿ ಸಹಕಾರಿ ಸೂತ್ರ ಆಧರಿಸಿದ ಒಕ್ಕೂಟ ವ್ಯವಸ್ಥೆಗೇ ಧಕ್ಕೆ ತಂದಿರುವುದರಿಂದ ಮುಂಬರುವ ಸಂಸತ್ತಿನ ಅಧಿವೇಶನಕ್ಕಿಂತ ಮುಂಚೆ ದೆಹಲಿಗೆ ಸರ್ವ ಪಕ್ಷಗಳ ನಿಯೋಗವನ್ನು ಕೊಂಡೊಯ್ಯಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಇಲ್ಲಿ ಹೇಳಿದರು.

ತುರ್ತಾಗಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆಗಳಿಗೆ ಅನುಮತಿ ನೀಡಿರುವ ಏಕಪಕ್ಷೀಯ ತೀರ್ಮಾನಕ್ಕೆ ರಾಜಕೀಯ ಕಾರಣಗಳೇ ಕುಮ್ಮಕ್ಕಾಗಿರುವಂತಿದೆ ಎಂದು ಕಟುವಾಗಿ ಟೀಕಿಸಿದರು.

• **ಹುಬ್ಬಳ್ಳಿ: ಕಾಲೇಜುಗಳಿಗೆ ಬೆಂಕಿ ಹಚ್ಚುವ ಯತ್ನ**

ಹುಬ್ಬಳ್ಳಿ, ಜೂನ್ 23– ಮೊದಲ ಪಿಯುಸಿ ತರಗತಿಗೆ ಪ್ರವೇಶ ನೀಡಲು ವಿದ್ಯಾರ್ಥಿಗಳ ಪಾಲಕರಿಂದ ವಂತಿಗೆ ಪಡೆಯಲಾಗಿದೆ ಎಂದು ಆರೋಪಿಸಿ ಅಖಿಲ ಭಾರತ ಯುವಜನ ಒಕ್ಕೂಟದ ಕಾರ್ಯಕರ್ತರು ಇಂದು ನಗರದ ಜೆ.ಜಿ. ವಾಣಿಜ್ಯ ಹಾಗೂ ಕಾಡಸಿದ್ದೇಶ್ವರ ಕಲಾ ಕಾಲೇಜುಗಳಿಗೆ ಬೆಂಕಿ ಹಚ್ಚುವ ವಿಫಲ ಪ್ರಯತ್ನ ನಡೆಸಿದರು.

ಪೊಲೀಸರು ಮಧ್ಯ ಪ್ರವೇಶಿಸಿ ಬೆಂಕಿ ಹಚ್ಚಲು ಯತ್ನಿಸಿದ ಐವರನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರಿಂದ ಹೆಚ್ಚಿನ ಅನಾಹುತಗಳು ಸಂಭವಿಸಲಿಲ್ಲ.

75 ವರ್ಷಗಳ ಹಿಂದೆ

ಭಾನುವಾರ, 24-6-1951

• **'ವ್ಯವಸಾಯ ಆದಾಯಯುತ ಕಸುಬು ಆಗಬೇಕು'**

ಬೆಂಗಳೂರು, ಜೂನ್ 23– 'ವ್ಯವಸಾಯವನ್ನು ಹೆಚ್ಚು ಆದಾಯಯುತ ಹಾಗೂ ಗೌರವಯುತ ಕಸುಬಾಗಿ ಮಾಡದಿದ್ದಲ್ಲಿ ಅದರ ಪ್ರಗತಿಯೇ ಸಾಧ್ಯವಿಲ್ಲ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ. ಹನುಮಂತಯ್ಯನವರು ಇಂದು ಬೆಳಿಗ್ಗೆ ಡ್ಯಾಲಿ ಮೆಮೋರಿಯಲ್ ಹಾಲಿನಲ್ಲಿ ಮೈಸೂರು ವ್ಯವಸಾಯ ಶೋಧಕ ಸಂಘದ 31ನೇ ಅಧಿವೇಶನದ ಪ್ರಾರಂಭೋತ್ಸವ ನೆರವೇರಿಸುತ್ತಾ ತಿಳಿಸಿದರು.

ಆಹಾರ ಸಚಿವ ಮರಿಯಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಉಪಾಧ್ಯಕ್ಷ ಬಿ. ಚೂಡೇಗೌಡ ಅವರು ಸ್ವಾಗತ ಭಾಷಣ ಮಾಡಿದರು.

ಏಕಪಕ್ಷ: ಹೊಸ ವ್ಯವಸ್ಥೆ ಉದಯ

ಜನರಾಜಕಾರಣ

ಸಂದೀಪ್ ಶಾಸ್ತ್ರಿ

> ಕಳೆದ ಹನ್ನೆರಡು ವರ್ಷಗಳಲ್ಲಿನ ರಾಜಕೀಯ ಬೆಳವಣಿಗೆಗಳು ಹೊಸ ಏಕಪಕ್ಷ ವ್ಯವಸ್ಥೆ ರೂಪುಗೊಳ್ಳಲು ಕಾರಣವಾಗಿವೆ. ಕಳೆದ ಲೋಕಸಭಾ ಚುನಾವಣೆಯಲ್ಲಿ 'ಎನ್‌ಡಿಎ' ಸಾಧನೆ ಸಾಧಾರಣವಾಗಿದ್ದರೂ, ನಂತರದಲ್ಲಿ ಅದರ ಲಾಭ ಪಡೆದುಕೊಳ್ಳುವಲ್ಲಿ ಇತರೆ ಪಕ್ಷಗಳು ವಿಫಲವಾದವು. ಕಾರ್ಯತಂತ್ರವನ್ನು ಬದಲಿಸಿಕೊಳ್ಳುವ ಮೂಲಕ ಬಿಜೆಪಿ ದೇಶದ ರಾಜಕಾರಣದಲ್ಲಿ ತನ್ನ ಹಿಡಿತ ಬಿಗಿಗೊಳಿಸಿದೆ.

ದೇಶದ ರಾಜಕಾರಣ ಒಂದು ಸುತ್ತನ್ನು ಪೂರ್ಣಗೊಳಿಸಿದೆ. ಕಾಂಗ್ರೆಸ್ ಮುಂದಾಳತ್ವದ, ಒಂದೇ ಪಕ್ಷದ ಪ್ರಾಬಲ್ಯದ ದಿನಗಳಿಂದ ನಾವು 1980ರ ದಶಕದ ಕೊನೆಯ ಭಾಗದಲ್ಲಿ ಹಲವು ಪಕ್ಷಗಳ ನಡುವಿನ ಸ್ಪರ್ಧೆಯ ಹಂತಕ್ಕೆ ಪರಿವರ್ತನೆ ಕಂಡಿದ್ದೆವು. 2014ರಲ್ಲಿ ಬಿಜೆಪಿಯು ಲೋಕಸಭೆಯಲ್ಲಿ ಸ್ಪಷ್ಟ ಬಹುಮತ ಪಡೆಯುವ ಮೂಲಕ ಏಕಪಕ್ಷ ಪ್ರಾಬಲ್ಯದ ಹೊಸ ವ್ಯವಸ್ಥೆಯೊಂದರ ಉದಯ ಶುರುವಾಯಿತು.

ಕಳೆದ 12 ವರ್ಷಗಳಲ್ಲಿ ಬಿಜೆಪಿಯು ತನ್ನ ಹೆಜ್ಜೆಗುರುತುಗಳನ್ನು ಹಂತ ಹಂತವಾಗಿ ದೇಶದೆಲ್ಲೆಡೆ ಮೂಡಿಸಿದೆ ಹಾಗೂ ಪ್ರಧಾನ ರಾಜಕೀಯ ಪಕ್ಷವಾಗಿ ಬೆಳೆದಿದೆ. ಇದೇ ಅವಧಿಯಲ್ಲಿ ಇತರ ರಾಷ್ಟ್ರೀಯ ಪಕ್ಷಗಳು ಹಾಗೂ ರಾಜ್ಯಮಟ್ಟದ ಪಕ್ಷಗಳು ತೀವ್ರ ಹಿನ್ನಡೆ ಕಂಡಿವೆ. ತಮ್ಮ ಮೊದಲಿನ ಶಕ್ತಿಯನ್ನು ಮರಳಿ ಪಡೆಯಲು ಅವುಗಳಿಗೆ ಕಷ್ಟವಾಗುತ್ತಿದೆ. ಅಸ್ಸಾಂ ಹಾಗೂ ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗಳ ಫಲಿತಾಂಶ ಹಾಗೂ ಅದರ ನಂತರದ ಬೆಳವಣಿಗೆಗಳು ಬಿಜೆಪಿ ನೇತೃತ್ವದ ಹೊಸ 'ಏಕಪಕ್ಷ ಪ್ರಾಬಲ್ಯದ ವ್ಯವಸ್ಥೆ'ಯನ್ನು ಇನ್ನಷ್ಟು ಬಲಪಡಿಸಿವೆ.

ಕಾಂಗ್ರೆಸ್ ಪಕ್ಷವು ಪ್ರಬಲವಾಗಿದ್ದ ಕಾಲದಲ್ಲಿ ಇದ್ದ ವ್ಯವಸ್ಥೆಗಿಂತ ಈಗಿನ ವ್ಯವಸ್ಥೆಯು ಭಿನ್ನವಾಗಿದೆ. ಮೊದಲನೆಯದಾಗಿ, ಈಗಿನ ವ್ಯವಸ್ಥೆಯಲ್ಲಿ ಬಿಜೆಪಿಗೆ ಸವಾಲು ಹಾಕುವ ರಾಜಕೀಯ ಪಕ್ಷಗಳ ಪ್ರಾಬಲ್ಯ ಹೆಚ್ಚಿರುವ ಪ್ರದೇಶಗಳು, ಮುಖ್ಯವಾಗಿ ರಾಜ್ಯಗಳ ಮಟ್ಟದಲ್ಲಿವೆ. ವಿಂಧ್ಯ ಪರ್ವತದ ದಕ್ಷಿಣಕ್ಕೆ ನಾಲ್ಕು ರಾಜ್ಯಗಳಲ್ಲಿ ಬಿಜೆಪಿಯು ಸರ್ಕಾರದ ಭಾಗವಲ್ಲ. ಒಂದು ರಾಜ್ಯದಲ್ಲಿ (ಆಂಧ್ರಪ್ರದೇಶ) ಬಿಜೆಪಿ ಎರಡು ಮುಖ್ಯ ಮಿತ್ರಪಕ್ಷಗಳ ಜೊತೆ ಸರ್ಕಾರದ ಭಾಗವಾಗಿದೆ, ಅಲ್ಲಿ ಬಿಜೆಪಿಯ ಪ್ರತಿನಿಧಿಗಳೂ ಸರ್ಕಾರದ ಭಾಗವಾಗಿದ್ದು ಸಚಿವ ಸಂಪುಟದಲ್ಲಿ ಸ್ಥಾನಪಡೆದಿದ್ದಾರೆ. ಕರ್ನಾಟಕ ಮತ್ತು ತೆಲಂಗಾಣದಲ್ಲಿ ಬಿಜೆಪಿಯು ಪ್ರಧಾನ ಪ್ರತಿಪಕ್ಷವಾಗಿದೆ. ಕೇರಳದಲ್ಲಿ ಸಣ್ಣ ಬಲದೊಂದಿಗೆ ಮೂರನೆಯ ಸ್ಥಾನದಲ್ಲಿದೆ. ತಮಿಳುನಾಡಿನಲ್ಲಿ ಒಂದು ಮೈತ್ರಿಕೂಟದ ಕಿರಿಯ ಪಾಲುದಾರನಾಗಿದೆ.

ಎರಡನೆಯದಾಗಿ, ಏಕಪಕ್ಷ ಪ್ರಾಬಲ್ಯದ ಹೊಸ ವ್ಯವಸ್ಥೆಯಲ್ಲಿ ಬಿಜೆಪಿಯು ತಾನು ರಾಷ್ಟ್ರೀಯ ಚುನಾವಣೆಯನ್ನು ನೋಡುವ ಬಗೆಯಲ್ಲೇ ಪ್ರತಿ ರಾಜ್ಯದ ಚುನಾವಣೆಯನ್ನೂ ನೋಡಬೇಕಾಗಿದೆ. ತನ್ನೆಲ್ಲ ಕಾರ್ಯಕರ್ತರನ್ನು, ಹಿತೈಷಿಗಳನ್ನು ಹಾಗೂ ಸಂಪನ್ಮೂಲವನ್ನು ಚುನಾವಣೆ ಸಮಯದಲ್ಲಿ ಒಗ್ಗೂಡಿಸಲು ಪಕ್ಷವು ನಡೆಸುವ ಯತ್ನವು ಬಹಳ ದೊಡ್ಡದು. ಹಿಂದಿನ ಏಕಪಕ್ಷ ಪ್ರಾಬಲ್ಯದ ವ್ಯವಸ್ಥೆಯು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಕಾಂಗ್ರೆಸ್ಸಿಗೆ ಒಂದು ಸೊಕ್ಕಿತ್ತು. 'ವಿರೋಧ ಪಕ್ಷವನ್ನು ಕಾಣಬಲ್ಲಿರಾದರೆ ಆ ಪಕ್ಷಕ್ಕೆ ಮತ ನೀಡಿ' ಎಂಬ ಘೋಷವಾಕ್ಯವನ್ನು ಕಾಂಗ್ರೆಸ್ ಆಗ ಬಳಸುತ್ತಿತ್ತು. ಆದರೆ ಅಂತಹ ಧಾಟಿಯ ಘೋಷವಾಕ್ಯವನ್ನು ಬಿಜೆಪಿ ಬಳಸುವುದಿಲ್ಲ. ಬಿಜೆಪಿಯ ಚುನಾವಣಾ ಯಂತ್ರವು ಯಾವತ್ತಿಗೂ ಸಕ್ರಿಯವಾಗಿರುತ್ತದೆ. ಅಷ್ಟು ಮಾತ್ರವಲ್ಲ, ಲೋಕಸಭಾ ಚುನಾವಣೆ ಅಥವಾ ವಿಧಾನಸಭಾ ಚುನಾವಣೆಗೆ ಸಜ್ಜಾಗುತ್ತಲೇ ಇರುತ್ತದೆ.

ಮೂರನೆಯದಾಗಿ, ಇಂದು ರಾಜಕಾರಣದಲ್ಲಿ ಮತ್ತು ಸಮಾಜದಲ್ಲಿ ಕಾಣುತ್ತಿರುವ ಧ್ರುವೀಕರಣವು ಅಂದಿನ ದಿನಗಳಲ್ಲಿ ಇರಲಿಲ್ಲ. ಇದು ಅಧಿಕಾರಕ್ಕಾಗಿ ನಡೆಯುವ ಸ್ಪರ್ಧೆಗೆ ಸಂಕೀರ್ಣತೆಯ ಹೊಸದೊಂದು ಆಯಾಮವನ್ನು ತರುತ್ತದೆ.

ಹಿಂದಿನ ಹಾಗೂ ಇಂದಿನ ವ್ಯವಸ್ಥೆಗಳ ನಡುವೆ ಕಣ್ಣಿಗೆ ಕಾಣುವ ಸಾಮ್ಯತೆಗಳೂ ಇವೆ. ಮೊದಲನೆಯದಾಗಿ, ಹಿಂದಿನ ಹಾಗೂ ಇಂದಿನ ಏಕಪಕ್ಷ ಪ್ರಾಬಲ್ಯದ ವ್ಯವಸ್ಥೆಗಳಲ್ಲಿ ಕೇಂದ್ರ ನಾಯಕತ್ವದ ಪಾತ್ರವು ಬಹುಮಟ್ಟಿಗೆ ಒಂದೇ ಬಗೆಯದ್ದಾಗಿದೆ. ಆಗಲೂ ಹೈಕಮಾಂಡ್ ಸಂಸ್ಕೃತಿ ಇತ್ತು, ಅದು ಈಗಲೂ ಕಾಣುತ್ತಿದೆ. ಎರಡನೆಯದಾಗಿ, ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಪಕ್ಷದ ಕೇಂದ್ರ ನಾಯಕತ್ವ ತೀರ್ಮಾನ ತೆಗೆದುಕೊಳ್ಳುವುದು ಹಿಂದೆ ಸ್ಪಷ್ಟವಾಗಿ ಕಾಣಿಸುತ್ತಿತ್ತು, ಅದು ಈಗಲೂ ಇದೆ. ಈ ವಿಚಾರದಲ್ಲಿ ನ್ಯಾಯಸಮ್ಮತವಾಗಿ ಮಾತನಾಡಬೇಕು ಎಂದಾದರೆ, ದೇಶದ ಎಲ್ಲ ರಾಜಕೀಯ ಪಕ್ಷಗಳು ಕಾರ್ಯನಿರ್ವಹಿಸುವುದೂ ಇದೇ ಬಗೆಯಲ್ಲಿ. ರಾಜ್ಯಗಳಲ್ಲಿ ಬಿಜೆಪಿಯೇತರ ಪಕ್ಷಗಳು ಸರ್ಕಾರ ರಚನೆ ಮಾಡಿದಾಗ, ಸರ್ಕಾರದ ನೇತೃತ್ವವನ್ನು ಯಾರು ವಹಿಸುತ್ತಾರೆ ಎಂಬುದನ್ನು ತೀರ್ಮಾನಿಸುವಲ್ಲಿ ಆ ಪಕ್ಷದ ಕೇಂದ್ರ ನಾಯಕತ್ವವೇ ಹೆಚ್ಚಿನ ಪಾತ್ರ ಹೊಂದಿರುತ್ತದೆ.

ಮೂರನೆಯದಾಗಿ, ಪ್ರಬಲವಲ್ಲದ ಪಕ್ಷಗಳು ಹೋಳಾಗುವುದು ಹಿಂದೆ ಬಹಳ ಸಹಜವಾದ ರಾಜಕೀಯ ವಿದ್ಯಮಾನವಾಗಿತ್ತು. ಆ ಬೆಳವಣಿಗೆ ಈಗಲೂ ಮುಂದುವರಿದಿದೆ. 1967ರ ನಂತರದಲ್ಲಿ ಕಾಂಗ್ರೆಸ್ಸೇತರ ಪಕ್ಷಗಳ ಮೈತ್ರಿಕೂಟಗಳು ರಾಜ್ಯಗಳಲ್ಲಿ ಸರ್ಕಾರ ರಚನೆ ಮಾಡಿದ್ದವು, ನಂತರ ಅವು ತಮ್ಮಲ್ಲಿನ ಭಿನ್ನಮತದ ಕಾರಣದಿಂದಾಗಿ ಉರುಳಿದವು, ಕೆಲವು ಪಕ್ಷಗಳು ಕಾಂಗ್ರೆಸ್ ಜೊತೆ ವಿಲೀನ ಕೂಡ ಆದವು. ಪಶ್ಚಿಮ ಬಂಗಾಳ ಹಾಗೂ ಮಹಾರಾಷ್ಟ್ರದಲ್ಲಿ ತೀರಾ ಈಚೆಗೆ ನಡೆದಿರುವ ಕೆಲವು ಬೆಳವಣಿಗೆಗಳನ್ನು ಗಮನಿಸಿದರೆ ಅದೇ ಬಗೆಯ ಪರಿಸ್ಥಿತಿಯನ್ನು ಈಗಲೂ ಕಾಣಬಹುದು. ಕೊನೆಯ ಸಾಮ್ಯತೆ, ಪ್ರಬಲ ಪಕ್ಷವು (ಆಗ ಮತ್ತು ಈಗ) ಮಹತ್ವದ ಶಾಸನಗಳಿಗೆ ಒಪ್ಪಿಗೆ ಪಡೆಯಲು ಲೋಕಸಭೆಯಲ್ಲಿ ಅಗತ್ಯ ಸಂಖ್ಯಾಬಲ ಸಂಪಾದಿಸಲು ಯತ್ನ ನಡೆಸುವುದಾಗಿದೆ.

ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಈಗ ಮೂರನೆಯ ಅವಧಿಗೆ ಆಡಳಿತ ನಡೆಸುತ್ತಿದೆ. ಈ ಮೈತ್ರಿಕೂಟವು ದೇಶದ 28 ರಾಜ್ಯಗಳ ಪೈಕಿ ಸರಿಸುಮಾರು ಮೂರನೆಯ ನಾಲ್ಕರಷ್ಟು ರಾಜ್ಯಗಳಲ್ಲಿ ಹಾಗೂ ಮುಖ್ಯಮಂತ್ರಿ ಇರುವ ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ, ಅಂದರೆ ಒಟ್ಟು 22 ಕಡೆ ಆಡಳಿತ ನಡೆಸುತ್ತಿದೆ. ಈ 22 ಕಡೆಗಳ ಪೈಕಿ 17ರಲ್ಲಿ ಬಿಜೆಪಿಗೆ ಸೇರಿದವರೇ ಮುಖ್ಯಮಂತ್ರಿ ಆಗಿದ್ದಾರೆ. ಇನ್ನುಳಿದ ಐದು ಕಡೆ ಎನ್‌ಡಿಎ ಮೈತ್ರಿಕೂಟಗಳಿಗೆ ಸೇರಿದ ಪಕ್ಷದವರು ಮುಖ್ಯಮಂತ್ರಿಯಾಗಿದ್ದಾರೆ (ಆಂಧ್ರಪ್ರದೇಶ, ಸಿಕ್ಕಿಂ, ಮೇಘಾಲಯ, ನಾಗಾಲ್ಯಾಂಡ್ ಮತ್ತು ಪುದುಚೆರಿ).

ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶ ಸೇರಿ ಒಂಬತ್ತು ಕಡೆ ಎನ್‌ಡಿಎ ಹೊರಗಿನ ಪಕ್ಷಗಳು ಅಥವಾ ಮೈತ್ರಿಕೂಟಗಳು ಸರ್ಕಾರ ರಚಿಸಿವೆ. ನಾಲ್ಕು ರಾಜ್ಯಗಳಲ್ಲಿ ಕಾಂಗ್ರೆಸ್ಸಿನವರು ಸರ್ಕಾರದ ಮುಖ್ಯಸ್ಥರಾಗಿದ್ದಾರೆ. ತಮಿಳುನಾಡು ಮತ್ತು ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ಪಕ್ಷವು ಆಡಳಿತಾರೂಢ ಮೈತ್ರಿಕೂಟದ ಪಾಲುದಾರ ಆಗಿದೆ. ಪಂಜಾಬ್‌ನಲ್ಲಿ ಎಎಪಿ ಆಡಳಿತವಿದೆ ಹಾಗೂ ಮಿಜೋರಾಂನಲ್ಲಿ ರಾಜ್ಯಮಟ್ಟದ ಪಕ್ಷವೊಂದರ ಸರ್ಕಾರವಿದೆ. ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದಲ್ಲಿ ಅಲ್ಲಿನ ಪಕ್ಷದ ಸರ್ಕಾರವಿದೆ.

ರಾಜ್ಯಗಳ ಮಟ್ಟದಲ್ಲಿ ವಿವಿಧ ರಾಜಕೀಯ ಪಕ್ಷಗಳ ನಡುವೆ ಅಧಿಕಾರ ಹಂಚಿಕೆಯ ಸ್ವರೂಪವು ಬಿಜೆಪಿಯ ಪ್ರಾಬಲ್ಯವನ್ನು ತೋರಿಸುವಂತಿದೆ. ಏಕಪಕ್ಷ ಪ್ರಾಬಲ್ಯದ ಹೊಸ ವ್ಯವಸ್ಥೆಯಲ್ಲಿ ಒಂದು ಪಕ್ಷವು (ಬಿಜೆಪಿ) ಇತರೆಲ್ಲ ಪಕ್ಷಗಳಿಗಿಂತ ಹೆಚ್ಚಿನ ಬಲ ಹೊಂದಿದೆ; ಅದು ತನ್ನದೇ ಬಲದ ಆಧಾರದಲ್ಲಿ ಅಥವಾ ಮಿತ್ರಪಕ್ಷಗಳ ಜೊತೆಗೂಡಿ ದೇಶದ ಎಂಟು ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶ ಹೊರತುಪಡಿಸಿ ಇತರ ಎಲ್ಲ ಕಡೆ ಅಧಿಕಾರ ನಡೆಸುತ್ತಿದೆ. ಹೊಸ ವ್ಯವಸ್ಥೆಯಲ್ಲಿನ ಒಂದು ಮುಖ್ಯವಾದ ವ್ಯತ್ಯಾಸವೆಂದರೆ, ಪ್ರಬಲ ಪಕ್ಷಕ್ಕೆ ಸೇರಿದವರು 22 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಪೈಕಿ 17ರಲ್ಲಿ ಮಾತ್ರ ಮುಖ್ಯಮಂತ್ರಿ ಸ್ಥಾನದಲ್ಲಿದ್ದಾರೆ.

ಏಕಪಕ್ಷ ಪ್ರಾಬಲ್ಯದ ಹೊಸ ವ್ಯವಸ್ಥೆಯಲ್ಲಿ ಬಿಜೆಪಿಯು ಎನ್‌ಡಿಎ ಒಳಗಡೆ ತನ್ನ ಅಸ್ತಿತ್ವವನ್ನು ನಿಧಾನವಾಗಿ ವಿಸ್ತರಿಸಬಹುದು. ಆ ಮೂಲಕ, ತನ್ನ ಮಿತ್ರಪಕ್ಷಗಳಿಂದ ಮುಖ್ಯಮಂತ್ರಿ ಸ್ಥಾನವನ್ನು ತಾನು ಪಡೆದುಕೊಳ್ಳಬಹುದು (ಬಿಹಾರ ಮತ್ತು ಮಹಾರಾಷ್ಟ್ರದಲ್ಲಿ ಆಗಿರುವಂತೆ). ಪರಿಸ್ಥಿತಿ ಅನುಕೂಲವಾಗಿದ್ದಾಗ ಎನ್‌ಡಿಎ ಆಚೆಗಿನ ತನ್ನ ಎದುರಾಳಿ ಪಕ್ಷಗಳಿಗೆ ಸವಾಲು ಹಾಕಬಹುದು ಎಂಬ ವಾದವೊಂದು ಇದೆ. ಈ ರೀತಿ ಮಾಡಿದಾಗ ಏಕಪಕ್ಷದ ಪ್ರಾಬಲ್ಯದ ವ್ಯವಸ್ಥೆಯು ಇನ್ನಷ್ಟು ಬಲಗೊಳ್ಳುತ್ತದೆ.

ಮತ್ತೊಂದೆಡೆ, ಎನ್‌ಡಿಎ ಕೂಟದಲ್ಲಿ ಇಲ್ಲದ ಪಕ್ಷಗಳು ಒಗ್ಗಟ್ಟಾದರೆ ಏಕಪಕ್ಷದ ಪ್ರಾಬಲ್ಯದ ವ್ಯವಸ್ಥೆಗೆ ಪ್ರತಿರೋಧವೊಂದು ಎದುರಾಗಬಹುದು. 2024ರ ಲೋಕಸಭಾ ಚುನಾವಣೆ ನಂತರದಲ್ಲಿ ಬಿಜೆಪಿಗೆ ಲೋಕಸಭೆಯಲ್ಲಿ ನಿಚ್ಚಳ ಬಹುಮತ ಪಡೆಯಲು ಸಾಧ್ಯವಾಗದೆ ಇದ್ದಾಗ, ಪಕ್ಷವು ತನ್ನ ಕಾರ್ಯತಂತ್ರವನ್ನು ಬದಲಾಯಿಸಿಕೊಂಡಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಇದರ ಪರಿಣಾಮವಾಗಿ ಹರಿಯಾಣದಿಂದ ಆರಂಭಿಸಿ ಹಲವು ರಾಜ್ಯಗಳಲ್ಲಿ ಪಕ್ಷವು ಯಶಸ್ಸು ಪಡೆಯಿತು. 2024ರ ಲೋಕಸಭಾ ಚುನಾವಣೆಯಲ್ಲಿ ಸಿಕ್ಕಿದ ಯಶಸ್ಸನ್ನು ಮುಂದಕ್ಕೆ ಒಯ್ಯುವಲ್ಲಿ ಎನ್‌ಡಿಎ ಹೊರತಾದ ಪಕ್ಷಗಳು ವಿಫಲವಾದವು.

ಒಂದೇ ಪಕ್ಷದ ಪ್ರಾಬಲ್ಯ ಇರುವ ವ್ಯವಸ್ಥೆಗಳಲ್ಲಿ ಆ ಪ್ರಬಲ ಪಕ್ಷಕ್ಕೆ ತನ್ನ ರಾಜಕೀಯ ಅಸ್ತಿತ್ವವನ್ನು ವಿಸ್ತರಿಸುವುದು ಸುಲಭವಾಗುತ್ತದೆ ಎಂಬುದು ಹಲವು ಬಾರಿ ಕಂಡುಬಂದಿದೆ. ಆದರೆ ಇದೇ ಹೊತ್ತಿನಲ್ಲಿ ಆ ಪಕ್ಷದ ಎದುರಾಳಿಗಳು, ಆ ಪಕ್ಷದ ಪ್ರಾಬಲ್ಯವನ್ನು ಎದುರಿಸಲು ಹೆಚ್ಚು ಸಂಘಟಿತವಾದ, ಒಗ್ಗಟ್ಟಿನ ಮತ್ತು ಯೋಜಿತವಾದ ಪ್ರಯತ್ನಗಳನ್ನು ನಿರಂತರವಾಗಿ ನಡೆಸಬೇಕಾಗುತ್ತದೆ. ಮುಂದಿನ ವರ್ಷಗಳಲ್ಲಿ ದೇಶದಲ್ಲಿನ ಪಕ್ಷ ರಾಜಕಾರಣದ ದೃಷ್ಟಿಯಿಂದ ಹಾಗೂ ಒಟ್ಟಾರೆ ರಾಜಕಾರಣದ ದೃಷ್ಟಿಯಿಂದ ಆಸಕ್ತಿಕರ ವಿದ್ಯಮಾನಗಳನ್ನು ನಿರೀಕ್ಷಿಸಬಹುದು.



ವಾಚಕರ ವಾಣಿ

ನಾಮಫಲಕ ಬದಲಿಸಿ ಬೀಗಿದರೆ ಸಾಕೆ?

ಒಂದೂವರೆ ಲಕ್ಷ ಜನಸಂಖ್ಯೆ ಹೊಂದಿರುವ ಕುರಾಕೊವಾ ದೇಶವು ಫಿಫಾ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಗೆ ಅರ್ಹತೆ ಪಡೆದು ಬಲಿಷ್ಠ ಈಕ್ವೆಡಾರ್ ನಡುವಿನ ಪಂದ್ಯವನ್ನು ಡ್ರಾ ಮಾಡಿಕೊಂಡಿದೆ. ಐದು ಲಕ್ಷ ಜನಸಂಖ್ಯೆಯ ಕೇಪ್ ವರ್ಡೆ ಬಲಿಷ್ಠ ಸ್ಪೇನ್ ಸೇರಿದಂತೆ ತಾನು ಎದುರಿಸಿರುವ ಎರಡು ದೇಶಗಳೊಂದಿಗಿನ ಪಂದ್ಯಗಳನ್ನು ಡ್ರಾ ಮಾಡಿಕೊಂಡಿದೆ. ಪಂದ್ಯಾವಳಿಯಲ್ಲಿ ಭಾಗವಹಿಸಿರುವ 48 ದೇಶಗಳ ಒಟ್ಟು ಜನಸಂಖ್ಯೆಯ (225 ಕೋಟಿ) ಮೂರನೇ ಎರಡರಷ್ಟು ಜನಸಂಖ್ಯೆ (148 ಕೋಟಿ) ಭಾರತದ್ದು. ಆದರೆ, ನಮಗೆ ಇದುವರೆಗೂ ಫಿಫಾ ವಿಶ್ವಕಪ್‌ಗೆ ಅರ್ಹತೆ ಪಡೆಯಲಾಗಿಲ್ಲ. ಆದರೆ, ನಾವೀಗ, 'ಆಲ್ ಇಂಡಿಯಾ ಫುಟ್‌ಬಾಲ್ ಫೆಡರೇಷನ್' ಎಂಬ ಸಂಸ್ಥೆಯ ಹೆಸರನ್ನು 'ಫುಟ್‌ಬಾಲ್ ಫೆಡರೇಷನ್ ಆಫ್ ಭಾರತ್' ಎಂದು ಬದಲಾಯಿಸಿ ಹೆಮ್ಮೆಪಟ್ಟುಕೊಳ್ಳಲು ಹೊರಟಿದ್ದೇವೆ. ಜಾಗತಿಕ ಜನಪ್ರಿಯತೆಯಲ್ಲಿ ಕ್ರಿಕೆಟ್‌ಗಿಂತ ಮೇಲ್‌ಸ್ತರದಲ್ಲಿರುವ ಫುಟ್‌ಬಾಲ್ ನಮಗೆ ಬೇಡವೆ? ಸಂಸ್ಥೆಯ ಹೆಸರು ಬದಲಾಯಿಸಿ ಹೆಮ್ಮೆಪಟ್ಟರೆ ಸಾಕೆ?

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಅನನ್ಯ ಕಥನಕಾರನಿಗೆ ಸಂದ ಸೂಕ್ತ ಗೌರವ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಯಲ್ಲಿ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರಿಗೆ ಜೀವಮಾನದ ಸಾಧನೆಗಾಗಿ ಶ್ರೇಷ್ಠ ಪ್ರಶಸ್ತಿ ಸಂದಿದೆ. ಇದು ಕನ್ನಡಿಗರಿಗೆ ಮಾತ್ರವಲ್ಲ; ಇಡೀ ಭಾರತೀಯ ಚಿತ್ರರಂಗಕ್ಕೆ ಸಂದ ಗೌರವ. ಗಿರೀಶರು ತಮ್ಮ ವಿಶಿಷ್ಟ ಕಲಾತ್ಮಕ ದೃಷ್ಟಿಕೋನದ ಮೂಲಕ ಕನ್ನಡ ಚಿತ್ರರಂಗಕ್ಕೆ ಅಂತರ ರಾಷ್ಟ್ರೀಯ ಸ್ಥಾನಮಾನವನ್ನು ತಂದುಕೊಟ್ಟಿದ್ದಾರೆ. ಅವರು ನಿರ್ದೇಶಿಸಿರುವ 'ಘಟಶ್ರಾದ್ಧ', 'ತಬರನ ಕಥೆ', 'ತಾಯಿಸಾಹೇಬ', 'ದ್ವೀಪ' ಹಾಗೂ 'ನಾಯಿ ನೆರಳು' ಅದ್ವಿತೀಯ ಚಿತ್ರಗಳಾಗಿವೆ. ಕಲಾತ್ಮಕ ಸಿನಿಮಾ ತತ್ತ್ವಕ್ಕೆ ಬದ್ಧರಾಗಿರುವ ಅವರು ಮತ್ತಷ್ಟು ಸಿನಿಮಾಗಳನ್ನು ಭಾರತೀಯ ಚಿತ್ರರಂಗಕ್ಕೆ ನೀಡಲಿ.

ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

ಆಣೆ ಪ್ರಮಾಣ: ಜನತಂತ್ರದ ಅಣಕ

ವಿಧಾನ ಪರಿಷತ್ ಚುನಾವಣೆಯಲ್ಲಿನ ಅಡ್ಡ ಮತದಾನದಿಂದ ಬಿಜೆಪಿ ವಿಚಲಿತವಾಗಿದೆ. ಧರ್ಮಸ್ಥಳದಲ್ಲಿ ತನ್ನ ಶಾಸಕಾಂಗ ಸಭೆ ನಡೆಸಿ ಅಲ್ಲಿ ಆಣೆ ಪ್ರಮಾಣ ಮಾಡಿಸಲು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಮುಂದಾಗಿದ್ದಾರೆ. ಇದು ಜನಪ್ರತಿನಿಧಿಗಳಿಗಷ್ಟೇ ಅಲ್ಲ; ಅವರನ್ನು ಚುನಾಯಿಸಿದ ಮತದಾರರಿಗೆ ಮಾಡುವ ಅವಮಾನವಾಗಿದೆ. ಸಂವಿಧಾನದಲ್ಲಿ ಗೋಪ್ಯ ಮತದಾನಕ್ಕೆ ಅವಕಾಶ ನೀಡಿರುವಾಗ ಮತ ಚಲಾಯಿಸುವವರು ತಮ್ಮ ಸ್ವವಿವೇಚನೆಯಿಂದ ಅರ್ಹರನ್ನು ಚುನಾಯಿಸಲಿ ಎಂಬುದು ಸಾಮಾನ್ಯ ನಾಗರಿಕನಿಗೂ ತಿಳಿದಿದೆ. ಇದು ಕಾನೂನಿಗೆ ವಿರುದ್ಧವಾಗಿದ್ದರೆ ಪಕ್ಷದ ಶಾಸಕರ ಸಂಖ್ಯೆಗನುಗುಣವಾಗಿ ಶಾಸಕಾಂಗ ಪಕ್ಷದ ನಾಯಕ ಅಥವಾ ಪಕ್ಷದ ಅಧ್ಯಕ್ಷರು ಸೂಚಿಸುವವರನ್ನು ಆಯ್ಕೆ ಮಾಡುವಂತೆ ಎಲ್ಲಾ ಪಕ್ಷಗಳು ಪಕ್ಷಾತೀತವಾಗಿ ಹೊಸದಾಗಿ ಕಾಯ್ದೆ ರೂಪಿಸುವುದು ಸೂಕ್ತ.

ಕೆ.ಎಂ. ನಾಗರಾಜು, ಮೈಸೂರು

ಕಸ ಗುಡಿಸುವುದು ಶ್ರೇಷ್ಠ ಕಾಯಕವಲ್ಲವೆ?

ಬೆಂಗಳೂರಿನಲ್ಲಿ ಇತ್ತೀಚೆಗೆ ಕೆಪಿಸಿಸಿ ಅಧ್ಯಕ್ಷರ ಪದಗ್ರಹಣ ಸಮಾರಂಭ ನಡೆಯಿತು. ಭಾಷಣದ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ನಾವೇನು ಕಸ ಗುಡಿಸಲು ಬಂದಿದ್ದೇವೆಯೆ' ಎಂದು ಹೇಳಿದ್ದು ಚರ್ಚೆಗೆ ಗ್ರಾಸವಾಗಿದೆ. ನಾವು ಕಸ ಗುಡಿಸಲು ಬಂದಿಲ್ಲ; ದನ ಕಾಯಲು ಬಂದಿಲ್ಲ – ಹೀಗೆಲ್ಲ ಒಬ್ಬ ವ್ಯಕ್ತಿ ಮಾಡುವ ಕೆಲಸದ ಬಗ್ಗೆ ಕೀಳಾಗಿ ಮಾತನಾಡಿ, ನಮ್ಮ ಕೆಲಸವೇ ಶ್ರೇಷ್ಠ ಎಂಬಂತೆ ನಡೆದುಕೊಳ್ಳುವುದು ಸರಿಯಲ್ಲ. ಹಾಗಿದ್ದರೆ ಖರ್ಗೆಯವರು ಭಾಷಣ ಮಾಡಿದ ವೇದಿಕೆಯನ್ನೆಲ್ಲ ಸ್ವಚ್ಛಗೊಳಿಸಿ ಕಂಗೊಳಿಸುವಂತೆ ಮಾಡಿದ್ದು ಯಾರು? ಮನೆಯ ಹಾಗೂ ಬೀದಿಯ ಕಸ ಗುಡಿಸುವವರು ಒಂದು ವಾರ ಬಾರದೆ ಇದ್ದರೆ ಪೌರ ಕಾರ್ಮಿಕರ ಪ್ರಾಮುಖ್ಯತೆಯು ರಾಜಕೀಯ ನಾಯಕರಿಗೆ ಅರಿವಾದೀತು. ನೆನಪಿರಲಿ, ಕಸ ಗುಡಿಸುವವರು ನಿಮಗೆ ಮತ ಹಾಕಿರಬಹುದಲ್ಲವೆ?

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಕನ್ನಡ ಶಬ್ದ ಭಂಡಾರ: ಗರಿಷ್ಠ ಬಳಕೆ ಅಗತ್ಯ

ಕನ್ನಡದ ಶಬ್ದ ಭಂಡಾರ ಶ್ರೀಮಂತವಾಗಿದೆ. ಅದರ ಬಳಕೆ ಹೆಚ್ಚೆಚ್ಚು ಆದಷ್ಟು ಖುಷಿಯಾಗುತ್ತದೆ. ಕುಮಾರವ್ಯಾಸ, ರನ್ನ, ಪಂಪ, ಕುವೆಂಪು, ತರಾಸು, ಬೇಂದ್ರೆ, ಡಿವಿಜಿ ಅವರು ಅದನ್ನು ಸಮರ್ಥವಾಗಿ ಬಳಕೆ ಮಾಡಿದ್ದರಿಂದ ಇಂದಿಗೂ ಕನ್ನಡಿಗರ ಮನಸ್ಸಿಗೆ ಹತ್ತಿರವಾಗಿದ್ದಾರೆ. ಆದರೆ, ಕೆಲವು ದೃಶ್ಯ ಮಾಧ್ಯಮಗಳು ಕನ್ನಡದ ಜೊತೆಗೆ ಇಂಗ್ಲಿಷ್ ಸೇರಿಸಿ ಕಂಗ್ಲಿಷ್ ಬಳಸುತ್ತಿವೆ. ಸುದ್ದಿ ಕೊಡುವವರು, ನಿರೂಪಕರು, ಧಾರಾವಾಹಿ, ಸಿನಿಮಾ ತಯಾರಕರು ಕನ್ನಡದ ಶಬ್ದ ಭಂಡಾರವನ್ನು ಬಳಸಿ ಕನ್ನಡವನ್ನು ಮತ್ತಷ್ಟು ಶ್ರೀಮಂತಗೊಳಿಸಬೇಕು. ಕೆಲವು ಸಿನಿಮಾಗಳ ಹೆಸರುಗಳನ್ನು ಬಾಯಿಂದ ಉಚ್ಚರಿಸಲು ಅಸಹ್ಯ ಎನಿಸುತ್ತದೆ. ಬಳಕೆಯಿಂದ ಭಾಷೆ ಬೆಳೆಯುತ್ತದೆ ವಿನಾ ಬರೀ ಹೇಳಿಕೆಗಳಿಂದ ಬೆಳೆಯುವುದಿಲ್ಲ.

ಎಂ. ಪರಮೇಶ್ವರ, ಹಿರಿಯೂರು

ಪಿನ್ ಪೀಳಿಗೆ: ಭಾಷಾಂತರದ ಅವಾಂತರ

ಗ್ರಾಹಕರು ಕನ್ನಡದಲ್ಲಿ ವ್ಯವಹರಿಸಬೇಕೆಂಬ ಉದ್ದೇಶದಿಂದ ಬ್ಯಾಂಕ್‌ಗಳ ಎಟಿಎಂ ಕೇಂದ್ರಗಳಲ್ಲಿ ಗ್ರಾಹಕ ಬಳಕೆಯ ಸೂಚನೆಗಳನ್ನು ಕನ್ನಡದಲ್ಲಿ ನೀಡಿರುವುದು ಸರಿಯಷ್ಟೇ. ಆದರೆ, ಇಂಗ್ಲಿಷ್‌ನಿಂದ ಕನ್ನಡಕ್ಕೆ ಪದಗಳನ್ನು ಭಾಷಾಂತರಿಸುವ ವೇಳೆ ಅಪಭ್ರಂಶದಿಂದಾಗಿ ಗ್ರಾಹಕರಿಗೆ ಮುಜುಗರವಾಗುತ್ತಿದೆ. ಎಸ್‌ಬಿಐ ಎಟಿಎಂಗಳಲ್ಲಿ ಕನ್ನಡ ವ್ಯವಹಾರದ ಆಯ್ಕೆ ಮಾಡಿದಾಗ, 'ಠೇವಣಿ', 'ಬ್ಯಾಂಕಿಂಗ್' ಮತ್ತು 'ಪಿನ್ ಪೀಳಿಗೆ' ಎಂಬ ಆಯ್ಕೆ ಕಾಣಿಸುತ್ತವೆ. ಇಂಗ್ಲಿಷ್‌ನ 'ಪಿನ್ ಜನರೇಷನ್' ಪದವನ್ನು 'ಪಿನ್ ಪೀಳಿಗೆ' ಎಂದು ಅನುವಾದಿಸಲಾಗಿದೆ. ಸ್ಪಷ್ಟವಾದ ಕನ್ನಡ ಪದಗಳ ಬಳಕೆಗೆ ಬ್ಯಾಂಕ್‌ಗಳು ಒತ್ತು ನೀಡಲಿ.

ಜಗನ್ನಾಥ ಗುರು, ಯಶವಂತಪುರ

ಚುರುಮುರಿ

ಆಣೆ ಪ್ರಮಾಣ

• ಮಣ್ಣೆ ರಾಜು

ಕಾರು ಹತ್ತಲು ಬಂದ ಶಾಸಕರನ್ನು ಮಾಧ್ಯಮದವರು ಅಡ್ಡ ಹಾಕಿ ಮುಖಕ್ಕೆ ಮೈಕ್ ಹಿಡಿದರು.

'ನನ್ನ ದಾರಿಗೆ ಯಾಕ್ರೀ ಅಡ್ಡ ಬರ್ತೀರಿ?' ಶಾಸಕರು ಸಿಟ್ಟಾದರು.

'ನೀವು ಅಡ್ಡ ಮತದಾನ ಮಾಡಿದ್ದೀರಿ ಎಂದು ಸಾಮಾಜಿಕ ಜಾಲತಾಣದಲ್ಲಿ ಜನ ನಿಮ್ಮ ಜನ್ಮ ಜಾಲಾಡ್ತಿದ್ದಾರೆ ಸಾರ್...' ಮಾಧ್ಯಮದವರು ಶಾಸಕರಿಗೆ ಮುಗಿಬಿದ್ದರು.

'ಯಾವೋನ್ರೀ ಹೇಳಿದ್ದು? ಪಕ್ಷ ನನಗೆ ತಾಯಿ ಇದ್ದಂತೆ. ಹೆತ್ತ ತಾಯಿಗೆ ದ್ರೋಹ ಬಗೆಯುತ್ತೇನೇನ್ರೀ? ಬೇಕಾದ್ರೆ ಧರ್ಮಸ್ಥಳ ಮಂಜುನಾಥನ ಮುಂದೆ ಆಣೆ, ಪ್ರಮಾಣ ಮಾಡ್ತೀನಿ'.

'ಕ್ರಾಸ್ ವೋಟಿಂಗ್ ಪತ್ತೆಗೆ ಪಕ್ಷದಿಂದ ಸತ್ಯಶೋಧನಾ ಸಮಿತಿ ರಚಿಸಲಾಗಿದೆ. ಆದರೂ, ಧರ್ಮಸ್ಥಳ ಮಂಜುನಾಥನ ಸನ್ನಿಧಿಯಲ್ಲಿ ಶಾಸಕಾಂಗ ಸಭೆ ನಡೆಸಿ ಆಣೆ ಪ್ರಮಾಣ ಮಾಡಿಸುತ್ತಾರಂತೆ. ಅದು ಅತಿ ಆಗಲಿಲ್ವೆ ಸಾರ್?'

'ನಮ್ಮ ನಾಯಕರಿಗೆ ದೇವರೇ ದಿಕ್ಕು ಎನ್ನುವಂತ ಪರಿಸ್ಥಿತಿ ಎದುರಾಗಿದೆ. ಮುಂದೆ ತಿರುಪತಿ, ಕಾಶಿ, ರಾಮೇಶ್ವರದಲ್ಲೂ ಶಾಸಕಾಂಗ ಸಭೆ ಮಾಡಬಹುದು'.

'ಧರ್ಮಸ್ಥಳ ಮಂಜುನಾಥನೇ ಏಕೆ? ಕೋರ್ಟು, ಕಾನೂನು, ಶಿಸ್ತು ಕ್ರಮ ಇದೆಯಲ್ಲ'.

'ಮಂಜುನಾಥ ಬೇಲ್ ಕೊಡಲ್ಲ, ತಪ್ಪಿತಸ್ಥರಿಗೆ ನೇರ ಶಿಕ್ಷೆ ಕೊಡ್ತಾನೆ ಎಂಬ ನಂಬಿಕೆ!'

'ನಾಯಕರ ನಡುವಿನ ಸಮನ್ವಯತೆ ಕೊರತೆಯಿಂದ ಶಾಸಕರು ಅಡ್ಡದಾರಿಯಲ್ಲಿ ಹೋಗಿ ಅಡ್ಡ ಮತದಾನ ಮಾಡಿದ್ದಾರೆ ಎಂದು ನಿಮ್ಮ ಪಕ್ಷದ ಕೆಲವರು ಹೇಳ್ತಿದ್ದಾರಲ್ಲಾ ಸಾರ್'.

'ನೋಡ್ರೀ... ಶಾಸಕರಾಗಿ ಮೂರು ವರ್ಷದಿಂದ ನಮಗೆ ಅನುದಾನವಿಲ್ಲ, ಸಮಾಧಾನವಿಲ್ಲ. ಇಂಥ ಕಷ್ಟಕಾಲದಲ್ಲಿ ಎಮ್ಮೆಲ್ಸಿ ಎಲೆಕ್ಷನ್ ಬಂತು. ನನ್ನ ಮತ, ನನ್ನ ಹಕ್ಕು, ನನ್ನ ಲಕ್ಕು ಕಣ್ರೀ... ಆತ್ಮಸಾಕ್ಷಿಯಂತೆ ನಾನು ಮತ ಚಲಾಯಿಸಿದ್ದೇನೆ ಎಂದು ಯಾವ ದೇವರ ಮುಂದೆ ಬೇಕಾದರೂ ಆಣೆ, ಪ್ರಮಾಣ ಮಾಡ್ತೀನಿ...' ಎಂದು ಸಿಟ್ಟುಗೊಂಡ ಶಾಸಕರು ಕಾರು ಹತ್ತಿ ಕಿಟಕಿ ಗ್ಲಾಸ್ ಏರಿಸಿಕೊಂಡರು.

ಸಂಗತ

ಸ್ವಚ್ಛತೆಯ ಪ್ರಜ್ಞೆ ಇದೆ; ಕಸವೂ ಸಾಕಷ್ಟಿದೆ!

ಕನಸುಗಳನ್ನು ಮಾತ್ರವಲ್ಲ, ಕಸವನ್ನೂ ನಮ್ಮ ಬದುಕಿನ ಭಾಗವಾಗಿಸಿಕೊಂಡಿದ್ದೇವೆ. ಜಪಾನೀಯರ 'ಪೌರಪ್ರಜ್ಞೆ'ಯನ್ನು ಮೆಚ್ಚುತ್ತಲೇ ಕಸ ಸೃಷ್ಟಿಸುತ್ತೇವೆ, ಚೆಲ್ಲುತ್ತೇವೆ.

• ಸದಾಶಿವ ಸೊರಟೂರು

ಅಮೆರಿಕದ ಡಲ್ಲಾಸ್‌ನಲ್ಲಿ ಕಳೆದ ವಾರ ನಡೆದ ಜಪಾನ್ ಮತ್ತು ನೆದರ್ಲೆಂಡ್ಸ್ ಫುಟ್‌ಬಾಲ್ ಪಂದ್ಯದ ಬಳಿಕ ಆಟ ನೋಡಲು ಬಂದಿದ್ದ ಜಪಾನೀಯರು ಕ್ರೀಡಾಂಗಣದಲ್ಲಿ ಚೆಲ್ಲಿದ್ದ ಕಸವನ್ನು ಆಯ್ದು ಸ್ವಚ್ಛಗೊಳಿಸಿದ ವಿದ್ಯಮಾನ ಜಗತ್ತಿನ ಗಮನ ಸೆಳೆಯಿತು, ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ನಮ್ಮಲ್ಲೂ ಅನೇಕರು ಆ ಘಟನೆಯ ಫೋಟೊ–ವಿಡಿಯೊ ಹಂಚಿಕೊಂಡರು; ಸೋಷಿಯಲ್ ಮೀಡಿಯಾ ಸ್ಟೇಟಸ್‌ನಲ್ಲಿ ಇಟ್ಟುಕೊಂಡು ಸಂಭ್ರಮಿಸಿದರು. ನಮ್ಮ ಬೀದಿಯಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವ ವ್ಯಕ್ತಿಯೊಬ್ಬರಿದ್ದಾರೆ. ಅವರ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲೂ ಜಪಾನೀಯರ ಕಸ ಆಯುವಿಕೆ ಕುರಿತಾಗಿ ಮೆಚ್ಚುಗೆ ಇತ್ತು ಮತ್ತು ಆ ಘಟನೆಯ ನಂತರವೂ ಅವರ 'ಎಸೆಯುವಿಕೆ' ಮುಂದುವರಿದಿದೆ.

ಶಾಲೆಯ ಮಕ್ಕಳು ಹರಿದ ಹಾಳೆಗಳನ್ನು ಕಿಟಕಿಯಿಂದ ಹೊರಕ್ಕೆ ಸಲೀಸಾಗಿ ಎಸೆಯಬಲ್ಲರು. ಕಾಲೇಜು ವಿದ್ಯಾರ್ಥಿಗಳಂತೂ ತಾವು ಬಳಸಿದ ವಸ್ತುಗಳನ್ನು ಎಲ್ಲೆಂದರಲ್ಲಿ ಚೆಲ್ಲಬಲ್ಲರು. ಹಿರಿಯರು ಬಸ್ಸುಗಳಲ್ಲಿ ತಾವು ತಿಂದ ತಿಂಡಿಯ ಕವರ್‌ಗಳನ್ನು ಬಿಟ್ಟು ಹೋಗಬಲ್ಲರು. ಅಡುಗೆಮನೆಯ ತ್ಯಾಜ್ಯಗಳು ಸಲೀಸಾಗಿ ರಸ್ತೆಗೆ ಬರಬಲ್ಲವು. ಇಲ್ಲಿ ಯಾರು ಬೇಕಾದರೂ ಯಾರ ಅನುಮತಿಯೂ ಇಲ್ಲದೆ ತಾವು ಸೃಷ್ಟಿಸಿದ ತ್ಯಾಜ್ಯವನ್ನು ಎಲ್ಲಿ ಬೇಕಾದರೂ ವಿಲೇವಾರಿ ಮಾಡಿ ಹೊರಟು ಹೋಗಬಲ್ಲರು.

ಜಾತ್ರೆ ನಡೆದ ಮಾರನೆಯ ದಿನ ಗುಡಿಯ ಸುತ್ತಲೂ ದೇವರು ಸಹಿಸಿಕೊಳ್ಳಲಾಗದಷ್ಟು ಕಸ ತುಂಬಿರುತ್ತದೆ. ಹಬ್ಬವಾದ ಬಳಿಕ ಇನ್ನೊಮ್ಮೆ ಅದೇ ಹಬ್ಬ ಬರಲು ಹೆದರುವಷ್ಟು ಕಸ ಪೇಟೆಬೀದಿಗಳಲ್ಲಿ ಸೃಷ್ಟಿಯಾಗುತ್ತದೆ. ಸಂತೆ ಮುಗಿದ ಮೇಲೆ ಅಲ್ಲಿ ಉಳಿದ ಕಸ, ಮುಂದಿನ ಸಂತೆಯ ದಿನದವರೆಗೂ ಜನರಿಗಾಗಿ ಕಾಯುತ್ತದೆ.

ನಾವು ನಮ್ಮ ಮಕ್ಕಳ ಜೊತೆ, ನಮ್ಮ ಕನಸುಗಳ ಜೊತೆ, ನಮ್ಮ ನಾಳೆಗಳ ಜೊತೆಯಷ್ಟೇ ಬದುಕುತ್ತಿಲ್ಲ, ನಾವೇ ಸೃಷ್ಟಿಕೊಂಡ ಕಸದ ನಡುವೆಯೂ ಬದುಕುತ್ತಿದ್ದೇವೆ ಎಂಬುದು ತೀರಾ ವಿಪರ್ಯಾಸದ ಸಂಗತಿ. ನಮ್ಮದು ಕಸದೊಂದಿಗಿನ ಬದುಕು!

ಕುವೆಂಪು ಅವರ 'ಜಲಗಾರ' ನಾಟಕ ಕಸ ಬಳಿಯುವುದರ ಮಹತ್ವದ ಬಗ್ಗೆ ಮಾತನಾಡುತ್ತದೆ. ಆ ನಾಟಕದ ಜಲಗಾರ, 'ಗುಡಿಸುವುದೆ ನನ್ನ ದೇವರ ಪೂಜೆ' ಎನ್ನುತ್ತಾನೆ. ಅದೇ ನಾಟಕದಲ್ಲಿ ಶಿವನು 'ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ!' ಎನ್ನುತ್ತಾನೆ. ಗುಡಿಸುವಿಕೆಯೇ ಗುಡಿಯಾಗುವುದರ ಮೊದಲ ಮೆಟ್ಟಿಲಿದು.

ನಾವು ನಿತ್ಯ ಸ್ವಚ್ಛತಾಪ್ರಜ್ಞೆಯಲ್ಲೇ ದಿನ ಕಳೆಯುತ್ತಿದ್ದೇವೆ. ನಮ್ಮ ಪಠ್ಯದಲ್ಲಿ ಸ್ವಚ್ಛತೆಯ ಪಾಠವಿದೆ. ನಮ್ಮ ಮಾತುಗಳಲ್ಲಿ ಸ್ವಚ್ಛತೆಯ ಕಾಳಜಿ ಇದೆ. ಕಸ ಎಸೆಯಬಾರದು ಎಂಬುದು ಎಲ್ಲರಿಗೂ ಗೊತ್ತಿದೆ. ಕಂಡಲ್ಲಿ ಉಗುಳಬಾರದು ಎಂಬುದು ಕೂಡ ತೀರಾ ಸಾಮಾನ್ಯ ತಿಳಿವಳಿಕೆ. ಆದರೂ, 'ನನ್ನನ್ನು ಬಳಸಿ' ಎಂದು ನಿಂತ ಕಸದ ಡಬ್ಬಿಗಳು ಸದಾ ಖಾಲಿ. ಊರು–ನಗರಗಳ ಬೀದಿಗಳ ಅಂಚು ಕಸದ ರಾಶಿಯಿಂದ ಕಂಗೊಳಿಸುತ್ತದೆ. ರಸ್ತೆಯ ನಡುವೆ ಯಾರೋ ಉಗುಳಿ ಹೋದ ಉಗುಳು.



ನಮ್ಮ ಅಂತರಂಗದೊಳಗೆ ಕಸವಿದ್ದರೆ ಹೊರಗಿನ ಕಸವೂ ಸಹನೀಯವಾಗಿ ಕಾಣುತ್ತದೇನೊ? ಎಲ್ಲೆಂದರಲ್ಲಿ ಕಸ ಎಸೆಯುವ ಮನುಷ್ಯನ ಮನಸು ಮೊದಲು ಕೊಳಕಾಗಿರುತ್ತದೆ. ಅಂತಹವರು ಮಾತ್ರ ಕಂಡಲ್ಲಿ ಎಸೆಯುತ್ತಾರೆ. ಕಂಡಲ್ಲಿ ಉಗುಳುತ್ತಾರೆ. ಮನಸ್ಸು ಸ್ವಚ್ಛವಾಗಿರದೆ ಇರುವವರಿಂದ ಪರಿಸರವಾದರೂ ಹೇಗೆ ಸ್ವಚ್ಛವಾಗಿ ಇದ್ದೀತು?

ಸ್ವಚ್ಛತೆಯ ವಿಷಯವಾಗಿ ನಾವು ಬೇರೆ ದೇಶಗಳಿಗಿಂತ ಬಹಳ ಹಿಂದೆ ಇದ್ದೇವೆ. ಆ ಕಥೆಗಳೂ ನಮಗೆ ಗೊತ್ತು. ಕಸದ ಕಾರಣಕ್ಕೆ ನಾವು ತಂದುಕೊಳ್ಳುವ ಅನಾರೋಗ್ಯ ಮತ್ತು ಮಾನಸಿಕ ಕಿರಿಕಿರಿಗಳು ನಮ್ಮ ಅಭಿವೃದ್ಧಿಯನ್ನು ಕುಂಠಿತಗೊಳಿಸಿವೆ. ಎಲ್ಲೆಂದರಲ್ಲಿ ಕಸ ಎಸೆಯುವುದು ನಮಗೆ ರೂಢಿಯಾಗಿದೆ. ಅದನ್ನು ನಾವು ತಲೆಮಾರುಗಳಿಂದ ಪಡೆದುಕೊಂಡ ಆಸ್ತಿ ಎಂಬಂತೆ ಮುಂದುವರಿಸಿಕೊಂಡು ಬಂದಿದ್ದೇವೆ. ಸ್ವಚ್ಛತೆಯ ಬಗ್ಗೆ ಪಾಠ ಹೇಳುವ ಶಾಲೆಯಲ್ಲಿ ಒಂದು ಸರಿಯಾದ ಕಸದ ಬುಟ್ಟಿ ಇರುವುದಿಲ್ಲ. 'ಸ್ವಚ್ಛ ಭಾರತ'ದಂತಹ ಯೋಚನೆಯನ್ನು ಜಾರಿಗೆ ತಂದರೂ ಎಷ್ಟೋ ನಗರಗಳು ಕೊಳಕಿನ ಆಗರವಾಗಿವೆ.

ಸ್ವಚ್ಛತೆಯ ನಿಯಮಗಳಿವೆ, ಅವುಗಳನ್ನು ನಾವು ಮುರಿಯುತ್ತೇವೆ. ಯೋಜನೆಗಳಿವೆ, ಅವುಗಳ ಹೊಣೆಗಾರಿಕೆ ಸರ್ಕಾರದ್ದು ಎಂದು ಸುಮ್ಮನಾಗುತ್ತೇವೆ. ಕಾನೂನುಗಳು ಊರನ್ನು, ದೇಶವನ್ನು ಸ್ವಚ್ಛವಾಗಿಡುವುದಿಲ್ಲ. ನಮ್ಮ ಪ್ರಜ್ಞೆ ಮಾತ್ರ ಅದನ್ನು ಸಾಧ್ಯ ಮಾಡುತ್ತದೆ. ಗಲೀಜು ಮಾಡುವ ಮುನ್ನ ಇಡೀ ದೇಶವು ನಮ್ಮ ಮನೆಯ ಅಂಗಳ ಎಂಬುದು ನಮಗೆ ನೆನಪಾಗಬೇಕು. ಉಗುಳುವ ಪ್ರತಿ ಜಾಗವು ನಮ್ಮ ಮನೆಯ ಕೊಠಡಿಯೆಂದೇ ಭಾವಿಸಬೇಕು. ಈ ಪ್ರಜ್ಞೆ ಇದ್ದರೆ ಸಾಕು, ನಾಡು ಸ್ವಚ್ಛವಾದೀತು.

ಜಪಾನೀಯರಿಗೆ ಅಮೆರಿಕದ ಕ್ರೀಡಾಂಗಣದಲ್ಲಿ ಸ್ವಚ್ಛ ಮಾಡಲು ಹೇಳಿದ್ದು ಯಾವುದೇ ಕಾನೂನು ಅಲ್ಲ. ಅವರ ನಾಗರಿಕ ಪ್ರಜ್ಞೆ. ಜಪಾನೀಯರ ಕಸ ಆಯುವ ಗುಣವನ್ನು ಮೆಚ್ಚಿ ಕೊಂಡಾಡುವ ನಾವು, ಅದೇ ಗುಣವನ್ನು ನಮ್ಮದಾಗಿಸಿಕೊಳ್ಳುವ ಸಣ್ಣ ಪ್ರಯತ್ನವನ್ನಾದರೂ ಮಾಡಬೇಕಿದೆ. ಕಣ್ಣಿಗೆ ಕಾಣುವ ಕಸವನ್ನು ಎತ್ತಿ ಕಸದ ಬುಟ್ಟಿಗೆ ಹಾಕುವ ನಮ್ಮ ಒಂದು ಪುಟ್ಟ ಹೆಜ್ಜೆ, ಇಡೀ ದೇಶದ ಸ್ವಚ್ಛತೆಯ ಚಿತ್ರಣವನ್ನೇ ಬದಲಿಸಬಲ್ಲದು.

'ಕಸ ಗುಡಿಸುವುದೇ ನನ್ನ ಕೆಲಸವಾಗಿದ್ದರೆ ನಾನು ಗುಡಿಸುವ ಓಣಿ ಜಗತ್ತಿನ ಅತ್ಯಂತ ಸ್ವಚ್ಛ ಜಾಗವಾಗಿರುತ್ತದೆ...' ಎಂದಿದ್ದರು ವಿಶ್ವೇಶ್ವರಯ್ಯ. ಆ ಮಾತು ನಮಗೆ ಬೆಳಕಾಗಲಿ. ಕಸ ಗುಡಿಸುವುದು ಸ್ವಚ್ಛತೆಯ ಸಂಕೇತ ಆಗಿರುವಂತೆಯೇ ಸಾಮಾಜಿಕ ಹೊಣೆಗಾರಿಕೆಯೂ ಆಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೆಸ್ಸಿ ಕಾಲ್ಚೆಂಡಿನ ಮಾಂತ್ರಿಕ

ಅಂತರರಾಷ್ಟ್ರೀಯ ಪಂದ್ಯ 201
ಗೋಲು 122
ವಿಶ್ವಕಪ್ ಪಂದ್ಯ 28
ಗೋಲು 18

ಚುರುಕಾದ ಪಾಸ್, ಡ್ರಿಬ್ಲಿಂಗ್ ಮತ್ತು ರಭಸದ ಶೂಟ್‌ಗಳ ಮೂಲಕ ಗೋಲುಗಳನ್ನು ಪೇರಿಸುತ್ತಿರುವ ಆಟಗಾರ ಲಯೊನೆಲ್ ಮೆಸ್ಸಿ. ಅರ್ಜೆಂಟೀನಾದ ಫುಟ್‌ಬಾಲ್ ಪರಂಪರೆಯನ್ನು ಮುಂದುವರಿಸಿರುವ ದಿಗ್ಗಜ. ಬಾಲ್ಯದಲ್ಲಿ ಅನುಭವಿಸಿದ ಕಷ್ಟ, ನಷ್ಟಗಳನ್ನೆಲ್ಲ ಮೀರಿ ಬೆಳೆದ ಮೆಸ್ಸಿ ಈಗ ಫಿಫಾ ವಿಶ್ವಕಪ್ ಇತಿಹಾಸದ ಅತ್ಯಧಿಕ ಗೋಲ್ ಸ್ಕೋರರ್

• ಗಿರೀಶ ದೊಡ್ಡಮನಿ

ಮಿನುಗುವ ಕಂಗಳ, ಕೆಂಪು ಕೆನ್ನೆಗಳ ಆ ಪುಟ್ಟ ಬಾಲಕನ ಫುಟ್‌ಬಾಲ್ ಆಟಕ್ಕೆ ಮನಸೋಲದವರೇ ಇರಲಿಲ್ಲ. ರೊಸಾರಿಯೊ (ಅರ್ಜೆಂಟೀನಾ) ಮೈದಾನದಲ್ಲಿ ಪ್ರತಿದಿನವೂ ಪುಟಪುಟನೇ ಓಡುತ್ತ ಫುಟ್‌ಬಾಲ್ ಆಡುತ್ತಿದ್ದ ಐದು ವರ್ಷದ ಪೋರನ ಕಾಲ್ಚಳಕ ನೋಡಿದವರು 'ಮತ್ತೊಬ್ಬ ಮರಡೋನಾ' ಎಂದು ಚಪ್ಪಾಳೆ ತಟ್ಟುತ್ತಿದ್ದರು. ಆದರೆ ಆ ಪುಟ್ಟ ದೇಹದ ಒಳಗೊಂದು ಸಮಸ್ಯೆ ಸದ್ದಿಲ್ಲದೇ ಮೊಳೆಯುತ್ತಿತ್ತು. ಶರೀರದ ಬೆಳವಣಿಗೆಗೆ ಪೂರಕವಾದ ಹಾರ್ಮೋನ್ ಉತ್ಪಾದನೆ ಕುಂಠಿತವಾಗಿತ್ತು. ಹತ್ತನೇ ವಯಸ್ಸಿಗೆ ಬಂದಾಗ ಸಮಸ್ಯೆ ಗಂಭೀರವಾಯಿತು. ಆದರೆ ಚಿಕಿತ್ಸೆಯ ದುಬಾರಿ ವೆಚ್ಚ ಭರಿಸುವ ಶಕ್ತಿ ಕುಟುಂಬಕ್ಕೆ ಇರಲಿಲ್ಲ. ಆ ಹುಡುಗ ಆಡುತ್ತಿದ್ದ ಕ್ಲಬ್‌ಗಳೂ ಖರ್ಚು ಭರಿಸಲು ನಿರಾಕರಿಸಿದವು. ತಮ್ಮ ಮಗನನ್ನು ಫುಟ್‌ಬಾಲ್ ಆಟಗಾರನನ್ನಾಗಿ ರೂಪಿಸುವ ಕನಸು ಕಂಡಿದ್ದ ಅಪ್ಪ, ಅಮ್ಮ, ಅಜ್ಜಿ ಹತಾಶರಾದರು. ಆಗ ಬಾಲಕನ ಫುಟ್‌ಬಾಲ್ ಪಯಣ ಮುಗಿಯಿತೇ ಎಂಬ ಪ್ರಶ್ನೆ ಮೂಡಿತ್ತು. ಆದರೆ ಆ ಹುಡುಗ ಹುಟ್ಟಿದ್ದೇ ಫುಟ್‌ಬಾಲ್ ವಿಶ್ವವನ್ನು ಆಳುವುದಕ್ಕೆ ಅಲ್ಲವೇ?

ಹುಡುಗನ ಆಟವನ್ನು ಹಲವು ಬಾರಿ ನೋಡಿದ್ದ ಬಾರ್ಸಿಲೋನಾದ ಕೋಚ್ ಆಗಿದ್ದ ಕಾರ್ಲ್ಸ್ ರೆಕ್ಸಾಚ್ ನೆರವಿಗೆ ಬಂದರು. ಎಲ್ಲಿಯ ಅರ್ಜೆಂಟೀನಾ, ಎತ್ತಣ ಬಾರ್ಸಿಲೋನಾ!

ಒಟ್ಟಿನಲ್ಲಿ ಆ ಹುಡುಗನ ಅದೃಷ್ಟ ಖುಲಾಯಿಸಿತು. ಚಿಕಿತ್ಸೆ ಪಡೆದ ಆ ಹುಡುಗ ದೈಹಿಕವಾಗಿ ಅಷ್ಟೇ ಅಲ್ಲ; ಫುಟ್‌ಬಾಲ್ ದಿಗ್ಗಜನಾಗಿಯೂ ಬೆಳೆದ. ಆ ಹುಡುಗ 'ಫುಟ್‌ಬಾಲ್ ಮಾಂತ್ರಿಕ' ಲಯೊನೆಲ್ ಮೆಸ್ಸಿ.

ಇದೀಗ ಅವರು ಫಿಫಾ ವಿಶ್ವಕಪ್ ಫುಟ್‌ಬಾಲ್ ಇತಿಹಾಸದಲ್ಲಿಯೇ ಅತಿ ಹೆಚ್ಚು ಗೋಲು ಗಳಿಕೆಯ ದಾಖಲೆಗೆ ಒಡೆಯನಾಗಿದ್ದಾರೆ. ಸೋಮವಾರ ತಡರಾತ್ರಿ ಅಮೆರಿಕದ ಅರ್ಲಿಂಗ್ಟನ್‌ನಲ್ಲಿ ನಡೆದ ಫಿಫಾ ವಿಶ್ವಕಪ್ 'ಜೆ' ಗುಂಪಿನ ಪಂದ್ಯದಲ್ಲಿ ಅವರು ಎರಡು ಗೋಲು ಗಳಿಸಿದರು. ಅದರೊಂದಿಗೆ ಅವರು ವಿಶ್ವಕಪ್ ಟೂರ್ನಿಯಲ್ಲಿ ಗಳಿಸಿದ ಒಟ್ಟು ಗೋಲುಗಳ ಸಂಖ್ಯೆ 18ಕ್ಕೇರಿತು. ಜರ್ಮನಿಯ ಮಿರೋಸ್ಲಾವ್ ಕ್ಲೋಸ್ (16) ಅವರ ದಾಖಲೆಯನ್ನು ಮೆಸ್ಸಿ ಮೀರಿ ನಿಂತರು.

ಆರನೇ ಬಾರಿ ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿರುವ ಮೆಸ್ಸಿ 38 ವರ್ಷ ವಯಸ್ಸಿನಲ್ಲಿಯೂ ತೋರುತ್ತಿರುವ ಸಾಮರ್ಥ್ಯ ಅಮೋಘವಾಗಿದೆ. ಈ ಟೂರ್ನಿಯ ಮೊದಲ ಪಂದ್ಯದಲ್ಲಿ ಅವರು ಅಲ್ಜೀರಿಯಾದ ಎದುರು ಹ್ಯಾಟ್ರಿಕ್ ಸಾಧನೆ ಮಾಡಿದ್ದರು. ಅವರ ಈ ಆಟದಿಂದಾಗಿ ಅರ್ಜೆಂಟೀನಾ ತಂಡವು ಸತತ ಎರಡನೇ ಬಾರಿ ವಿಶ್ವಕಪ್ ಜಯಿಸುವ ನಿರೀಕ್ಷೆ ಮೂಡಿಸಿದೆ.

ವೈಯಕ್ತಿಕ ಪ್ರಶಸ್ತಿಗಳು

ಫಿಫಾ ಬ್ಯಾಲನ್ ಡಿಓರ್ (ಫಿಫಾ ವರ್ಷದ ಶ್ರೇಷ್ಠ ಆಟಗಾರ) ಎಂಟು ಬಾರಿ (2009, 2010, 2011, 2012, 2015, 2019, 2022, 2023)

ಫಿಫಾ ವಿಶ್ವಕಪ್ ಗೋಲ್ಡನ್ ಬಾಲ್ ಪ್ರಶಸ್ತಿ: ಎರಡು ಬಾರಿ (2014, 2022)

ವರ್ಷದಿಂದ ವರ್ಷಕ್ಕೆ.. ಉತ್ತುಂಗಕ್ಕೆ

ಮೆಸ್ಸಿ ಅವರ ವಿಶೇಷ ಎಂದರೆ ವಯಸ್ಸಾದಂತೆ ಅವರು ಮತ್ತಷ್ಟು ಮಾಗುತ್ತಿದ್ದಾರೆ. ಅವರ ಆಟ ಮತ್ತು ಫಿಟ್‌ನೆಸ್‌ನಲ್ಲಿ ಸಾಮರ್ಥ್ಯ ವೃದ್ಧಿಯಾಗುತ್ತಿದೆ.

2006ರಲ್ಲಿ ಮೆಸ್ಸಿ ಮೊದಲ ಸಲ ವಿಶ್ವಕಪ್ ಟೂರ್ನಿಯಲ್ಲಿ ಆಡಿದರು. ಮಾಂಟೆನ್‌ಗ್ರೋ ಎದುರಿನ ಪಂದ್ಯದಲ್ಲಿ ಅವರು ಮೊದಲ ಗೋಲು ದಾಖಲಿಸಿದರು. ಆಗ ಅವರ ವಯಸ್ಸು 18 ವರ್ಷ, 357 ದಿನಗಳಾಗಿದ್ದವು. ವಿಶ್ವಕಪ್ ಗೋಲು ದಾಖಲಿಸಿದ ಅತಿ ಕಿರಿಯ ವಯಸ್ಸಿನ ಆಟಗಾರ ಅವರಾಗಿದ್ದರು. ಬ್ರೆಜಿಲ್‌ನಲ್ಲಿ 2014ರಲ್ಲಿ ನಡೆದಿದ್ದ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ನಾಲ್ಕು; ರಷ್ಯಾದಲ್ಲಿ 2018ರಲ್ಲಿ ನಡೆದ ಟೂರ್ನಿಯಲ್ಲಿ ಒಂದು; ಕತಾರ್‌ನಲ್ಲಿ 2022ರಲ್ಲಿ ಆಯೋಜನೆಯಾಗಿದ್ದ ವಿಶ್ವಕಪ್‌ನಲ್ಲಿ 6 ಗೋಲು ಗಳಿಸಿದ್ದರು. ಈ ಸಲ ಅವರು ಎರಡೇ ಪಂದ್ಯಗಳಿಂದ ಐದು ಗೋಲು ಹೊಡೆದಿದ್ದಾರೆ. ಟೂರ್ನಿಯಲ್ಲಿ ಇನ್ನೂ ಪಂದ್ಯಗಳು ಬಾಕಿ ಇವೆ.

ಅವರಿಗೆ ಸೋಮವಾರದ್ದು 201ನೇ ಅಂತರರಾಷ್ಟ್ರೀಯ ಪಂದ್ಯವಾಗಿತ್ತು. ಇಷ್ಟು ಪಂದ್ಯಗಳಲ್ಲಿ ಒಟ್ಟು 122 ಗೋಲುಗಳನ್ನು ಅವರು ದಾಖಲಿಸಿದ್ದಾರೆ. ಹೋದ ಸಲದ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಅವರು ಹೊಡೆದಿದ್ದ ಎರಡು ಗೋಲುಗಳಿಂದಾಗಿ ಅರ್ಜೆಂಟೀನಾ ತಂಡಕ್ಕೆ ವಿಶ್ವಕಪ್ ಒಲಿದಿತ್ತು. 1986ರ ನಂತರ ಆ ದೇಶ ಜಯಿಸಿದ ಟ್ರೋಫಿ ಇದಾಗಿತ್ತು. ಅದಕ್ಕಾಗಿಯೇ ಅಲ್ಲಿಯ ಜನ ಮೆಸ್ಸಿಯನ್ನು 'ಮೆಸಿಯಾ' ಅಂದರೆ ಜಗದೋದ್ಧಾರಕ ಎಂದು ಕರೆದಿದ್ದರು. ಮೆಸ್ಸಿಯಂತೆಯೇ ಹಲವು ಅಭಿಮಾನಿಗಳು ತಮ್ಮ ಮೈಕೈಗಳಿಗೆ ಹಚ್ಚೆ ಹಾಕಿಸಿಕೊಂಡಿದ್ದಾರೆ.

ಫುಟ್‌ಬಾಲ್ ಕುಬೇರ

ಮೆಸ್ಸಿ ಜನಿಸಿದ್ದು ಮಧ್ಯಮವರ್ಗದ ಕುಟುಂಬದಲ್ಲಿ. ಅಪ್ಪ ಜಾರ್ಜ್ ಹೊರಾಸಿಯೊ ಉಕ್ಕು ಕಾರ್ಖಾನೆಯೊಂದರಲ್ಲಿ ವ್ಯವಸ್ಥಾಪಕರಾಗಿದ್ದರು. ಅಮ್ಮ ಸೆಲಿಯಾ ಕ್ಯೂಸಿತಿನಿ ಅವರು ಅರೆಕಾಲಿಕ ಕ್ಲೀನರ್ ಆಗಿದ್ದವರು. ಜಾರ್ಜ್ ತಮ್ಮ ನೆಚ್ಚಿನ ಫುಟ್‌ಬಾಲ್ ಆಟವನ್ನು ಮಗನಿಗೆ ಕಲಿಸಿಕೊಟ್ಟರು. ಹುಡುಗನ ಉತ್ಸಾಹವನ್ನು ನೋಡಿದ ಅಜ್ಜಿ ಪ್ರೋತ್ಸಾಹದ ನೀರೆರೆದರು. ಅದೇ ಊರಿನ ಗ್ರ್ಯಾಂಜೋಲಿ ಕ್ಲಬ್‌ಗೆ ಸೇರಿಸಿ ಬೆನ್ನುತಟ್ಟಿದರು. ಆದರೆ ಮೆಸ್ಸಿ 11 ವರ್ಷದವರಿದ್ದಾಗ ಅಜ್ಜಿ ತೀರಿಹೋದರು.

ಅಜ್ಜಿಯ ಅಕ್ಕರೆಯ ಮೆಸ್ಸಿ ಫುಟ್‌ಬಾಲ್ ದಿಗ್ಗಜನಾಗಿ ಮಾತ್ರವಲ್ಲ, ಹಣಗಳಿಕೆಯಲ್ಲೂ 'ಕುಬೇರ'ನಾಗಿ ಬೆಳೆದರು. ಅವರ ವೃತ್ತಿಜೀವನದ ಇಲ್ಲಿಯವರೆಗಿನ ಗಳಿಕೆ 120 ಕೋಟಿ ಡಾಲರ್ (ಅಂದಾಜು ₹11,367 ಕೋಟಿ) ಎಂದು ಈಚೆಗೆ ಸಮೀಕ್ಷೆಯೊಂದರಲ್ಲಿ ಪ್ರಕಟಿಸಲಾಗಿದೆ. ಇದು ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರ ಆದಾಯಕ್ಕಿಂತ ಸುಮಾರು ಹತ್ತು ಪಟ್ಟು ಹೆಚ್ಚು. ಈ ವಿಷಯದಲ್ಲಿ ರೊನಾಲ್ಡೊ ಅವರು ಮೆಸ್ಸಿಗಿಂತ ಸ್ವಲ್ಪ ಮುಂದಿದ್ದಾರೆ.

ಲೀಗ್‌ಗಳಲ್ಲಿ ಅವರು ಬಾರ್ಸಿಲೋನಾ, ಪಿಎಸ್‌ಜಿ ಮತ್ತು ಇಂಟರ್ ಮಯಾಮಿ ತಂಡಗಳಲ್ಲಿಯೂ ಮಿಂಚಿದ್ದಾರೆ. ಅವರ ಜಾಹೀರಾತು ಒಪ್ಪಂದಗಳಿಗಾಗಿ ವಿಶ್ವದ ಅಗ್ರಮಾನ್ಯ ಕಂಪನಿಗಳು ಸಾಲು ಗಟ್ಟಿವೆ. ಈಚೆಗೆ ಅವರು ಭಾರತಕ್ಕೆ ಭೇಟಿ ನೀಡಿದಾಗಲೂ ₹100 ಕೋಟಿಗೂ ಹೆಚ್ಚು ಸಂಭಾವನೆ ಪಡೆದಿದ್ದಾರೆಂದು ವರದಿಯಾಗಿತ್ತು. ಫಿಫಾ ರ‍್ಯಾಂಕಿಂಗ್‌ನಲ್ಲಿ 138ನೇ ಸ್ಥಾನದಲ್ಲಿರುವ ಭಾರತ ಕ್ರಿಕೆಟ್ ಪ್ರೇಮಿಗಳ ರಾಷ್ಟ್ರ. ಆದರೂ ಇಲ್ಲಿ ಲಕ್ಷಾಂತರ ಅಭಿಮಾನಿಗಳು ಮೆಸ್ಸಿಗೆ ಇದ್ದಾರೆ. ಇದು ಅವರ ಕಾಲ್ಚಳಕದ ಮ್ಯಾಜಿಕ್.

ವಿಶ್ವಕಪ್‌ನಲ್ಲಿ 10ಕ್ಕೂ ಅಧಿಕ ಗೋಲು ಹೊಡೆದವರು

ಆಟಗಾರ	ಗೋಲು
ಲಯೊನೆಲ್ ಮೆಸ್ಸಿ (ಅರ್ಜೆಂಟೀನಾ)	18
ಮಿರೊಸ್ಲಾವ್ ಕ್ಲೋಸ್ (ಜರ್ಮನಿ)	16
ಕೈಲಿಯನ್ ಎಂಬಾಪೆ (ಫ್ರಾನ್ಸ್)	16
ರೊನಾಲ್ಡೊ (ಬ್ರೆಜಿಲ್)	15
ಗರ್ಡ್ ಮುಲ್ಲರ್ (ಜರ್ಮನಿ)	14
ಜಸ್ಟ್ ಫಾಂಟೇನ್ (ಫ್ರಾನ್ಸ್)	13
ಪೆಲೆ (ಬ್ರೆಜಿಲ್)	12
ಯುರ್ಗನ್ ಕ್ಲಿನ್ಸ್‌ಮನ್ (ಜರ್ಮನಿ)	11
ಶಾಂಡೊರ್ ಕೊಹ್‌ಚೀಸ್ (ಹಂಗರಿ)	11

ಸನಿಹದಲ್ಲಿ ಎಂಬಾಪೆ

ಪ್ರಸಕ್ತ ಕಾಲಘಟ್ಟದಲ್ಲಿ ಮೆಸ್ಸಿ ದಾಖಲೆಯನ್ನು ಸರಿಗಟ್ಟುವ ಸಾಮರ್ಥ್ಯ ತೋರುತ್ತಿರುವ ಆಟಗಾರ, ಫ್ರಾನ್ಸ್‌ನ ಕೈಲಿಯನ್ ಎಂಬಾಪೆ. ಮೆಸ್ಸಿಗಿಂತಲೂ 11 ವರ್ಷ ಚಿಕ್ಕವರಾಗಿರುವ ಎಂಬಾಪೆ **16** ಗೋಲು ಗಳಿಸಿದ್ದಾರೆ. ಅವರಿಗೆ ಇದು ಮೂರನೇ ವಿಶ್ವಕಪ್ ಟೂರ್ನಿಯಾಗಿದೆ. ಕಳೆದೆರಡು ದಶಕಗಳಲ್ಲಿ ಮೆಸ್ಸಿಯ ಬದ್ಧ ಪ್ರತಿಸ್ಪರ್ಧಿಯಾಗಿರುವ ಪೋರ್ಚುಗಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ಅವರು ವಿಶ್ವಕಪ್ ಟೂರ್ನಿಗಳಲ್ಲಿ ಗಳಿಸಿರುವುದು 8 ಗೋಲು ಮಾತ್ರ. 41 ವರ್ಷದ ರೊನಾಲ್ಡೊ ಅವರು ಈ ಸಲದ ಟೂರ್ನಿಯಲ್ಲಿ ಲಯ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಅವರಿಗೆ ವಯಸ್ಸು ಆಗಿರುವುದರಿಂದ ಬಹುತೇಕ ಇದು ಅವರ ಕೊನೆಯ ವಿಶ್ವಕಪ್ ಟೂರ್ನಿಯಾಗಿರುವ ಸಾಧ್ಯತೆಯೇ ಹೆಚ್ಚಿದೆ.

ಅತಿ ಹೆಚ್ಚು ಅಂತರರಾಷ್ಟ್ರೀಯ ಗೋಲು ಗಳಿಸಿದವರು

ಆಟಗಾರ	ಗೋಲು	ಪಂದ್ಯ	ದೇಶ
ಕ್ರಿಸ್ಟಿಯಾನೊ ರೊನಾಲ್ಡೊ	143	129	ಪೋರ್ಚುಗಲ್
ಅಲಿ ದಾಯಿ	108	148	ಇರಾನ್
ಸುನಿಲ್ ಚೆಟ್ರಿ	95	157	ಭಾರತ
ರೊಮೆಲು ಲುಕಾಕು	90	128	ಬೆಲ್ಜಿಯಂ

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತ ಕ್ರಿಕೆಟ್ ತಂಡದ ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿ ಅವರು ಯುವತಿಯೊಂದಿಗೆ ಕಾರಿನಿಂದ ಇಳಿಯುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ವೈಭವ್ ಸೂರ್ಯವಂಶಿ ಅವರು ಇನ್ನೂ 15 ವರ್ಷದವರಾಗಿದ್ದು, ಅವರು ಯುವತಿ ಜತೆ ಓಡಾಡುತ್ತಿದ್ದಾರೆ ಎಂದು ಹಲವರು ಹಲವು ರೀತಿ ಪ್ರತಿಕ್ರಿಯಿಸುತ್ತಿದ್ದಾರೆ. ಆದರೆ, ವಿಡಿಯೊದಲ್ಲಿರುವುದು ನಿಜವಲ್ಲ.

ವಿಡಿಯೊಕ ಕೀಫ್ರೇಮ್ ಅನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಒಂದು ಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಇದೇ ವಿಡಿಯೊ ಅನ್ನು ಹಲವರು ಹಂಚಿಕೊಂಡಿರುವುದು ಕಂಡಿತು. ಜತೆಗೆ, 'ai_prompt778' ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇಂಥದೇ ವಿಡಿಯೊ ಅನ್ನು ಹಂಚಿಕೊಂಡಿರುವುದು ಕಂಡಿತು. ಆ ವಿಡಿಯೊ ಅನ್ನು ಜೂನ್ 19ರಂದು ಅಪ್‌ಲೋಡ್ ಮಾಡಲಾಗಿದೆ. ಅದು ಕೃತಕ ಬುದ್ಧಿಮತ್ತೆಯಿಂದ (ಎಐ) ರೂಪಿಸಿದ ವಿಡಿಯೊ ಎಂದೂ ಉಲ್ಲೇಖಿಸಲಾಗಿದೆ. ಮುಂದುವರಿದು, ಹೈವ್ ಮಾಡರೇಷನ್ ಎನ್ನುವ ಎಐ ಪತ್ತೆ ಸಾಧನದ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಅನ್ನು ಪರೀಕ್ಷಿಸಿದಾಗ, ಅದು ಎಐ ನಿರ್ಮಿತ ವಿಡಿಯೊ ಎನ್ನುವುದು ಖಚಿತವಾಯಿತು. ಎಐ ವಿಡಿಯೊ ಅನ್ನು ಹಂಚಿಕೊಂಡು, ವೈಭವ್ ಸೂರ್ಯವಂಶಿ ಅವರ ಬಗ್ಗೆ ಸುಳ್ಳು ಪ್ರತಿಪಾದನೆಗಳನ್ನು ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ವಾಸುದೇವ ನಾಡಿಗ್

ತನ್ನದು, ತನ್ನದಲ್ಲದ್ದು

ಭಯಂಕರ ಹಸಿದಿದ್ದ ಹಾಗೆ ಕಂಡಿದ್ದ ಆ ಮಹಿಳೆ ಏರ್‌ಪೋರ್ಟ್ ಚೆಕ್ ಇನ್ ಮುಗಿಸಿ ಖಾಲಿ ಇದ್ದ ಕುರ್ಚಿಗಾಗಿ ತಡಕಾಡಿ ಕೂತಳು. ಪಕ್ಕದಲ್ಲಿದ್ದ ಯುವಕನ ಕೂಡಾ ಔಪಚಾರಿಕ ಮಾತು; ಎಲ್ಲಿಗೆ ಹೊರಟಿದ್ದೀರಿ, ಯಾವ ಫ್ಲೈಟ್, ಯಾವ ಗೇಟ್ ಇತ್ಯಾದಿ. ಮತ್ತೆ ಮಾತಿಲ್ಲ. ಮಹಿಳೆ ತನ್ನ ಕೈಚೀಲದಲ್ಲಿದ್ದ ಕುಕೀಸ್ ತಿನ್ನಲು ಯೋಚಿಸಿದಳು. ಪುಸ್ತಕ ಓದುತ್ತಾ ಪಕ್ಕದ ಕುರ್ಚಿಯ ಮೇಲಿದ್ದ ತೆರೆದ ಕುಕೀಸ್ ಕವರಿಗೆ ಕೈಹಾಕಿ ತಿನ್ನಲು ಆರಂಭಿಸಿದಳು. ಇವಳು ಕೈ ತೆಗೆದುಕೊಂಡಾಗೆಲ್ಲ ಯುವಕನೂ ಕುಕೀಸ್ ಕವರಿಗೆ ಕೈಹಾಕಿ ಒಂದೊಂದೇ ತಿನ್ನಲು ಆರಂಭಿಸಿದನು: ಒಂದು ಎರಡು ಮೂರು. ಅವನ ಈ ನಡತೆ ಕಂಡು ಮಹಿಳೆಗೆ ಕಿರಿಕಿರಿ, ಕೋಪ ಎರಡೂ ಶುರುವಾಗಹತ್ತಿತು. ಒಮ್ಮೆ ಸಿಟ್ಟಿನಿಂದ ನೋಡಿದರೂ ಯುವಕ ಮುಗುಳ್ನಕ್ಕ ಅಷ್ಟೇ. ಇನ್ನೇನು ಕವರಿನಲ್ಲಿ ಒಂದೇ ಉಳಿದಿತ್ತು. ಅದಕ್ಕೆ ಯುವಕ ಕೈಹಾಕಿ ತೆಗೆದುಕೊಂಡು ಅರ್ಧ ಭಾಗ ಮಹಿಳೆಗೆ ಕೊಡಲು ಮುಂದಾದ. ಅಷ್ಟರಲ್ಲಿ ಆಕೆ ಹೊರಡಬೇಕಾಗಿದ್ದ ಫ್ಲೈಟ್‌ನ ಬೋರ್ಡಿಂಗ್ ಆರಂಭವಾಯಿತು.

ವಿಮಾನದ ಒಳಗೆ ಕೂತರೂ ಆ ಯುವಕನ ನಡತೆಯ ಬಗ್ಗೆಯೇ ಯೋಚನೆ; ತನ್ನ ಕುಕೀಸ್ ನಿರ್ಲಜ್ಜವಾಗಿ ತಿನ್ನುತ್ತಿದ್ದ ಅಂತ. ಕೆಲ ಸಮಯದ ನಂತರ ತನ್ನ ಕೈಚೀಲ ತೆರೆದರೆ ಅದರಲ್ಲಿ ಇನ್ನೂ ಬಿಚ್ಚದೇ ಇರುವ ಕುಕೀಸ್ ಪ್ಯಾಕೆಟ್ ಕಂಡು ಹೌಹಾರಿದಳು. ತಾನು ಪುಸ್ತಕ ಓದುತ್ತ ಪಕ್ಕದ ಕುರ್ಚಿಯ ಮೇಲೆ ತೆರೆದಿದ್ದ ಕುಕೀಸ್ ಪ್ಯಾಕೆಟ್ ತನ್ನದಲ್ಲ, ಧಾವಂತದಲ್ಲಿ ಅದನ್ನು ತೆರೆದೂ ಇಟ್ಟಿರಲಿಲ್ಲ, ಅದು ಯುವಕನದು ಎಂದು ಅರ್ಥವಾದಾಗ ವಿಮಾನ ಬಾನಿಗೆ ಸೇರಿಯಾಗಿತ್ತು. ತಾನೇ ಆ ಯುವಕನ ಕುಕೀಸ್ ಅನ್ನು ನಿಸ್ಸಂಕೋಚದಿಂದ ಖಾಲಿ ಮಾಡಿದ ಬಗ್ಗೆ ಪೇಚಾಡಿದಳು. ತಾನು ಹಾಗೆ ತೆಗೆದುಕೊಳ್ಳುವಾಗಲೂ ಒಂದು ಮಾತು ಕೂಡ ಆಡದ ಯುವಕ ಕೊನೆಗೆ ಉಳಿದಿದ್ದ ಒಂದರಲ್ಲಿಯೇ ಅರ್ಧ ಭಾಗ ಮಾಡಿಕೊಟ್ಟದ್ದನ್ನು ನೆನೆದು ಇನ್ನಷ್ಟು ಮುದುಡಿಹೋದಳು. ಅದು ತನ್ನದಲ್ಲದ ಕುಕೀಸ್ ಆದರೂ ಅವನನ್ನು ಮನಸ್ಸಿನೊಳಗೇ ಬೈಯುತ್ತ ಕೂತ ಬಗೆಗೆ ನಾಚಿಕೆ ಪಟ್ಟಳು. ಆ ಯುವಕ ಏನೂ ಆಗದವನ ಹಾಗೆ ಮುಗುಳ್ನಗುತ್ತ ಕೂತಿದ್ದ.

ಅದೆಷ್ಟು ವಾಸ್ತವ ಸತ್ಯಗಳನ್ನು ಈ ಘಟನೆ ಕಣ್ಣ ಮುಂದೆ ತಂದಿಡುತ್ತದೆ ನೋಡಿ. ಅದಾವುದೋ ಧಾವಂತ ಮತ್ತು ಸ್ವಪೀಡನೆಗೆ ಒಳಗಾಗಿ ಬೇರೆಯವರ ಮೇಲೆ ತಪ್ಪು ಹೊರಿಸಿ ಕೆಂಡಕಾರುವ ಜನರನ್ನು ಈ ಕತೆ ತರಾಟೆಗೆ ತೆಗೆದುಕೊಳ್ಳುತ್ತದೆ. ಆ ಮಹಿಳೆ ಮತ್ತು ಯುವಕ ಇಬ್ಬರು ತಂದಿದ್ದೂ ಒಂದೇ ತರಹದ ಕುಕೀಸ್ ಆದರೂ ಅದು ಕಲಿಸಿದ ಪಾಠವೇ ಬೇರೆ. ಬದುಕೂ ಇಷ್ಟೇ. ನಮ್ಮದೇ ಆದ ಪೂರ್ವಗ್ರಹದ ಮೂಲಕ ಅನ್ಯರ ನಿಂದೆಗೆ ಮುಂದಾಗುತ್ತೇವೆ. ಸಂಯಮವಿರದೇ ಕೆಡುಕಿಗೆ ಮಾದರಿ ಆಗಿಬಿಡುತ್ತೇವೆ. ಕುಕೀಸ್ ತನ್ನದೇ ಆದರೂ ಅದು ತನ್ನದು ಎಂದು ಯಾವ ಕ್ಷಣದಲ್ಲೂ ನಡೆದುಕೊಳ್ಳದ ಯುವಕನ ಆ ಸಂಯಮ ಮತ್ತು ಅದು ತನ್ನದಲ್ಲದಿದ್ದರೂ ತನ್ನದೇ ತನ್ನ ಹಕ್ಕು ಎಂದು ಭಾವಿಸಿ ಮನಸ್ಸು ಕೆಡಿಸಿಕೊಂಡ ಆ ಮಹಿಳೆ ಇಬ್ಬರೂ ಬಾಳಿನ ಬಿಂಬಗಳೆ. ಧಾವಂತದ ಕ್ರಿಯೆಗಳು ಮತ್ತು ಯೋಚನೆಗಳು ನಮ್ಮ ವ್ಯಕ್ತಿತ್ವವನ್ನೇ ರೂಪಿಸಬಲ್ಲವು.

ಇತರರಿಗೂ ಹಂಚಿ ತಿನ್ನುವುದರ ನಿಸ್ವಾರ್ಥ ಖುಷಿ ಮತ್ತು ದುಡುಕಿನ ಮನೋಭಾವ ಹೀಗೆ ಆಗಾಗ ಸಂಧಿಸಬೇಕಲ್ಲವೆ? ❖

ಗುಂಡಣ್ಣ



ಪದಬಂಧ 6443

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆರಕ್ಷಕನು ಕಲಿತಿರುವ ವರ್ಣ (3)
3.ಇಲ್ಲದಿರುವಾಗಲೇ ಭಾವ ಬಂದಿಹನಲ್ಲಾ! (3)
5.ಮಸ್ತಿಷ್ಕ ಇಲ್ಲಿದೆ (3)
6.ಸರಕ್ಕನೆ ಕಸಿದುಕೊಂಡು ಧರಿಸಿರುವ ಮಾಲೆ (2)
7.ರಭಸವಾಗಿ ಹರಿಯುತ್ತಿರುವ ದ್ರವ (2)
9.ಸಕಾಲದಲ್ಲಿ ಬಂದಿರುವ ಪದಾತಿಸೈನ್ಯ (3)
10.ದರಿಯ ಹತ್ತಿರ ಬಡವನಿದ್ದಾನೆ (3)
11.ವನದಲ್ಲಿ ತಿರುಗುವಾಗ ಹೊಸದು ಕಂಡೀತು (2)
13.ಜವಾನನ ಸುತ್ತ ನೆರೆದಿರುವ ಮಂದಿ (2)
14.ತೊಂದರೆ ಈ ರೀತಿ ಬಂದಿದೆ (3)
16.ತರುಲತೆಗಳನ್ನು ನೋಡುತ್ತಿರುವ ಯೌವ್ವನಿಗ (3)
17.ದನವಿರುವ ಆಲಯ (3)

ಮೇಲಿಂದ ಕೆಳಕ್ಕೆ
1.ಚುಂಬಿಸಲು ಯೋಗ್ಯವಾಗಿರುವ ತುಟಿ (3)
2.ಲಕ್ಷ್ಮೀಯ ಇನ್ನೊಂದು ಹೆಸರು (2)
3.ಅಗುಳು ನುಂಗುವಾಗ ಸುರಿದ ಕಣ್ಣೀರು (2)
4.ನಡುವೆ ಜೀ ಎನ್ನುತ್ತಿರುವ ಮಂತ್ರಿ (3)
6.ಒಂದೇ ಕಾಲದಲ್ಲಿದ್ದವನು (5)
8.ಸಾಗರದ ಮೇಲೆ ಕೈಗೊಂಡ ಪಯಣ (5)
12.ವರನ ಒತ್ತಾಯ (3)
13.ಜನರ ಹತ್ತಿರ ಕಾಣಿಸಿಕೊಂಡಿರುವ ಸೇವಕ (3)
14.ಬಾದಾರಾಯನ ಕಾಲದ ಶರ (2)
15.ಕಸವರದಲ್ಲಿರುವ ಗಲೀಜು ಕಾಣಿಸಿತೇ? (2)



6442ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬದಲುಮಾತು 3.ಹೆಸರು
5.ತಲೆಬರಹ 7.ಷಡ್ದಕ
9.ಹಗಲು 11.ಕುಸುಮ
13.ವಿಮಾನಯಾನ
15.ಅವನಿ 16.ವರದಿಗಾರ

ಮೇಲಿಂದ ಕೆಳಕ್ಕೆ:
1.ಬದ್ಧದ್ವೇಷ 2.ಮಾವುತ
4.ಸನ್ನಾಹ 6.ಬಯಲು
8.ಡ್ಡದ 9.ಹವನ
10.ಹಸು 12.ಮಹಾದ್ವಾರ
13.ವಿಪ್ಲವ 14.ನಗರ

ಸುಡೊಕು 6826

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3					1	8	2	
8		9						5
	6					3		7
	8			1			5	
9		3	5		8	4		6
	5			3			8	
5		4		8			7	
2	9		1		7	5		4
		6		4			9	

6825 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

24 ಜೂನ್ 2026 ಬುಧವಾರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ದಶಮಿ ಗಂ. 18-13 ನಕ್ಷತ್ರ: ಚಿತ್ರ ಗಂ. 13-59 ಯೋಗ: ಪರಿಘ ಗಂ. 10-23 ಕರಣ: ತೈತಿಲ ಗಂ. 5-23, ಮಿಥುನ ಮಾಸದ 09 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ಸೂರ್ಯೋದಯ : 06-09 ಸೂರ್ಯಾಸ್ತ : 06-57 ಮುಸ್ಲಿಂ ದಿನಾಂಕ : 08 ಮೊಹರಂ ದಿನ ವಿಶೇಷ : ಗಂಗಾ ದಶಹರ ಅದೃಷ್ಟ ಸಂಖ್ಯೆ : 7, 1

ಮೇಷ: ದಾಖಲೆಯ ಪತ್ರಗಳನ್ನು ಬರೆಸುವ ಸಂದರ್ಭವಿದ್ದಲ್ಲಿ, ಸಂಖ್ಯೆಗಳಲ್ಲಿ ಅಥವಾ ವಾಕ್ಯಗಳಲ್ಲಿ ಹೆಚ್ಚಿನ ಗಮನವಹಿಸಿ ಮತ್ತು ಪರಿಣಿತರ ಅನುಭವವನ್ನು ಕೇಳಿ ಮುಂದುವರೆಯಿರಿ. ಶಕ್ತಿಯಿಂದಾಗದ್ದು ಯುಕ್ತಿಯಿಂದ ಮಾಡುವಿರಿ.

ವೃಷಭ: ಮಕ್ಕಳ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುವುದು ಈ ದಿನ ನಿಮಗೆ ಕಷ್ಟವಾದರೂ ಅನಿವಾರ್ಯವಾಗಿ ನಡೆದುಕೊಳ್ಳಿರಿ. ಹಿತಶತ್ರುಗಳ ದ್ವೇಷ ಅಸೂಯೆಯಿಂದ ಬರುತಿದ್ದ ಮನದ ಕ್ಲೇಶವು ದೂರಾಗುತ್ತದೆ.

ಮಿಥುನ: ಮನೆಯ ಜವಾಬ್ದಾರಿಯನ್ನು ಮಗನಿಗೆ ವಹಿಸುವ ಆಲೋಚನೆ ಬರುವುದು, ಆದರೆ ಇದಕ್ಕೆ ಸಂಬಂಧಿಸಿದಂತೆ ಇಂದು ಯಾವುದೇ ತೀರ್ಮಾನ ತೆಗೆದುಕೊಳ್ಳಬೇಡಿ. ಜೀವನ ಸಂಗಾತಿಯ ದೂರ ಪ್ರಯಾಣ ದುಃಖ ತರುವುದು.

ಕರ್ಕಾಟಕ: ನಿಮ್ಮ ನಡುವಳಿಕೆಯಿಂದ ಅಥವಾ ಮಾತಿನಿಂದ ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ. ನಿಮಗಿಂತ ಹಿರಿಯರಿಂದ ಪ್ರಶಂಸೆಗೆ ಒಳಗಾಗುವುದು ನಿಮಗೆ ಸಂತಸವನ್ನು ತಂದುಕೊಡುವುದು.

ಸಿಂಹ: ನಿಮ್ಮ ಪರೋಪಕಾರದಂತಹ ನಿರ್ಧಾರಗಳಿಂದ ಸಹೋದ್ಯೋಗಿಗಳಿಗೆ ಸಂತಸವಾಗುವುದು. ಕಟ್ಟಿಗೆ ಅಥವಾ ಇಂಧನದ ಮಾರಾಟವು ಲಾಭವನ್ನು ತಂದುಕೊಡಲಿದೆ. ವಿದೇಶ ಪ್ರಯಾಣಕ್ಕೆ ಹಣಕಾಸಿನ ಹೊಂದಿಕೆಯಾಗುವುದು.

ಕನ್ಯಾ: ತತ್ವ ಆದರ್ಶಗಳ ಜೊತೆಗೆ ಹಿರಿಯರ ಅನುಭವ ಸಲಹೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಿರಿ. ರಸಗೊಬ್ಬರ ಮತ್ತು ಕೀಟ ನಾಶಕಗಳನ್ನು ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಆಯಾಸವೂ ಕಾಡಲಿದೆ.

ತುಲಾ: ಸಂಕೋಚವಿಲ್ಲದೆ ನೂತನ ಕಾರ್ಯಭಾರವನ್ನು ಹೆಗಲಿಗೇರಿಸಿಕೊಳ್ಳಿ. ಏಕೆಂದರೆ ನಿಮ್ಮ ಮೇಲಿರುವ ನಂಬುಗೆ ಮತ್ತು ವಿಶ್ವಾಸದಿಂದಾಗಿ ಈ ಅವಕಾಶಗಳು ನಿಮ್ಮದಾಗಲಿವೆ. ಮದುವೆ ಬಗ್ಗೆ ಮನೆಯಲ್ಲಿ ನಿರ್ಧಾರ ತಿಳಿಸುವಿರಿ.

ವೃಶ್ಚಿಕ: ಏನನ್ನಾದರೂ ಸಾಧಿಸಲೇಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಆದರೆ ಅದಕ್ಕೆ ಸರಿಯಾದ ಪ್ರಯತ್ನದ ಕೊರತೆ ಉಂಟಾಗದಂತೆ ನೋಡಿಕೊಳ್ಳಿ. ಅಕ್ಕ ಪಕ್ಕದ ವ್ಯಕ್ತಿಗಳ ಬಗ್ಗೆ ಎಚ್ಚರವಹಿಸಿ.

ಧನು: ತೀರ್ಥಯಾತ್ರೆ ದೇವರ ದರ್ಶನವು ನಿಮ್ಮ ಮನಸ್ಸಿಗೆ ಸಮಾಧಾನ ತಂದರೂ ದೇಹಾಯಾಸವನ್ನು ಉಂಟುಮಾಡುವುದು. ಕಂಪನಿಯ ಹಣಕಾಸಿನ ನಿರ್ವಹಣೆಯಲ್ಲಿ ನಿಮ್ಮ ಪಾತ್ರ ಪ್ರಮುಖವಾಗುವುದು.

ಮಕರ: ಮಕ್ಕಳ ಮೇಲಿನ ವ್ಯಾಮೋಹ ಅತಿಯಾಗಿ ಸಮಾಜದಲ್ಲಿ ಗೌರವ ಕಳೆದುಕೊಳ್ಳುವ ಘಟನೆ ನಿಮ್ಮ ಬಾಳಲ್ಲಿ ನಡೆಯಬಹುದು. ಸ್ನೇಹಿತರ ಜೊತೆಗಿನ ಕಷ್ಟ-ಸುಖದ ಸಂಭಾಷಣೆ ನಿಮ್ಮ ಅಭಿವೃದ್ಧಿಗೆ ದಾರಿ ದೀಪವಾಗಲಿದೆ.

ಕುಂಭ: ಸಾಲದ ಹಣವು ಬಂಧು ಒಬ್ಬರ ನೆರವಿನಿಂದ ಕೈಸೇರಲಿದೆ. ಕೆಲಸದಲ್ಲಿ ಹಿರಿಯರ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಮಗ ಅಥವಾ ಮಗಳಿಗೆ ನಿಮ್ಮ ಸಂಸಾರದ ಜವಾಬ್ದಾರಿ ವಹಿಸುವಿರಿ.

ಮೀನ: ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗುವ ಪ್ರಯತ್ನದಿಂದಾಗಿ ಶ್ರೀಮಂತಿಕೆ ಗಳಿಸಬಹುದು. ಎದುರಿನ ವ ವ್ಯಕ್ತಿಯ ಮನಸ್ಸಿನ ಭಾವನೆ ಅವರ ಮಾತಿನಲ್ಲಿ ವ್ಯಕ್ತವಾಗುತ್ತದೆ. ಮನೆಯಲ್ಲಿ ಸಂತಾನದ ಶುಭ ಸುದ್ದಿ ಕೇಳುವಿರಿ.

ಷೇರುಪೇಟೆ ವಹಿವಾಟು: 76,200 ಇಂದಿನ ಅಂತ್ಯ; 77,094 ಹಿಂದಿನ ಅಂತ್ಯ; ↓893

ಎನ್‌ಎಸ್‌ಇ ನಿಫ್ಟಿ — ಹಿಂದಿನ ಅಂತ್ಯ: 24,102; ಇಂದಿನ ಅಂತ್ಯ: 23,824; ದಿನದ ಕನಿಷ್ಠ: 23,784; ↓278

ಮೊಟ್ಟೆ ಧಾರಣೆ (ಎನ್‌ಇಸಿಸಿ) — ಬೆಂಗಳೂರು: 100 ಕ್ಕೆ ₹705; 12 ಕ್ಕೆ ₹94; ಮೈಸೂರು: 100 ಕ್ಕೆ ₹720

ರಾಮನಗರ ರೇಷ್ಮೆಗೂಡು — ಮಿಶ್ರತಳಿ(ಸಿ.ಬಿ) ₹350-725; ದ್ವಿತಳಿ (ಬಿ.ವಿ) ₹477-877

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ) — ಆರ್‌ಎಸ್‌ಎಸ್-4 ₹267; ಆರ್‌ಎಸ್‌ಎಸ್-5 ₹261; ಗುಡ್ ಲಾಟ್ ₹228

ಮುದ್ರೆ-ಮನೆ ಕಾಫಿ (50 ಕೆಜಿಗೆ) — ಎಪಿ ₹23,250; ಎಸಿ ₹14,000; ಆರ್‌ಪಿ ₹18,550; ಆರ್‌ಸಿ ₹10,100

ಅನಿಲ ಸೋರಿಕೆ: ಮೃತರ ಸಂಖ್ಯೆ 9ಕ್ಕೆ

ಚೆನ್ನೈ (ಪಿಟಿಐ): 'ತಿರುವಳ್ಳೂರ್ ಜಿಲ್ಲೆಯಲ್ಲಿನ ಮೀನು ಸಂಸ್ಕರಣಾ ಘಟಕದಲ್ಲಿ ಅಮೋನಿಯಂ ಅನಿಲ ಸೋರಿಕೆಯಿಂದಾದ ಅವಘಡದಲ್ಲಿ ಸಾವಿನ ಸಂಖ್ಯೆ 9ಕ್ಕೆ ಏರಿಕೆಯಾಗಿದೆ' ಎಂದು ತಮಿಳುನಾಡು ಸರ್ಕಾರ ತನ್ನ ಹೇಳಿಕೆಯಲ್ಲಿ ಮಾಹಿತಿ ನೀಡಿದೆ.

'ಮೃತರಲ್ಲಿ ಎಲ್ಲರೂ ಮಹಿಳೆಯರೇ ಆಗಿದ್ದಾರೆ. ಈ ಪೈಕಿ 7 ಮಂದಿ ಒಡಿಶಾದವರು ಮತ್ತು ಉಳಿದ ಇಬ್ಬರು ಅಸ್ಸಾಂನವರು' ಎಂದು ಆರೋಗ್ಯ ಇಲಾಖೆ ಹೇಳಿದೆ.

ಮಳೆ ಕೊರತೆಯ ನೆಪವೊಡ್ಡಿ ಕೊಯ್ನಾ ಜಲಾಶಯದಿಂದ ಕರ್ನಾಟಕಕ್ಕೆ ನೀರು ಬಿಡಲ್ಲ ಎಂದು ಮಹಾರಾಷ್ಟ್ರ ಹೇಳಿರುವುದು ಸರಿಯೇ?

• ಸರಿ • ಇಲ್ಲ • ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1570 (1590)
ಸೋಯಾ (ರಿಫೈನ್ಡ್)	₹1460 (1455)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1460 (1470)

ಅಡಿಕೆ ಸಾಗಣೆ ತಾತ್ಕಾಲಿಕ ಸ್ಥಗಿತ

ಮಹಾರಾಷ್ಟ್ರದಲ್ಲಿ ತೀವ್ರಗೊಂಡ ಕರ್ನಾಟಕದ ಲಾರಿಗಳ ಜಪ್ತಿ ಪ್ರಕ್ರಿಯೆ

• ರಾಜೇಂದ್ರ ಹೆಗಡೆ

ಮುಖ್ಯಾಂಶಗಳು
- ರಸ್ತೆಯಲ್ಲೇ ಉಳಿದ ಕೋಟ್ಯಂತರ ರೂಪಾಯಿ ಮೌಲ್ಯದ ಅಡಿಕೆ
- ದರ ಕುಸಿಯುವ ಭೀತಿ
- ವಿನಾಕಾರಣ ಲಾರಿ ತಡೆಯುವ ಕ್ರಮಕ್ಕೆ ವರ್ತಕರ ಆಕ್ರೋಶ

ಶಿರಸಿ: ಮಹಾರಾಷ್ಟ್ರದಲ್ಲಿ ಕರ್ನಾಟಕದ ಅಡಿಕೆ ಲಾರಿಗಳ ಜಪ್ತಿ ಪ್ರಕ್ರಿಯೆ ತೀವ್ರಗೊಂಡ ಕಾರಣ ವರ್ತಕರು ಹೊರ ರಾಜ್ಯಗಳಿಗೆ ಅಡಿಕೆ ಸಾಗಣೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದಾರೆ. ಇದರಿಂದ ಮಾರುಕಟ್ಟೆಯಲ್ಲಿ ಅಡಿಕೆ ದರ ಕುಸಿಯುವ ಭೀತಿಯಿದ್ದು, ಆ ರೀತಿ ಆಗದಂತೆ ತಡೆಯುವ ಯತ್ನವನ್ನು ಸಹಕಾರ ಸಂಘಗಳು ನಡೆಸಿವೆ.

ಪ್ರಸ್ತುತ ನೂರಾರು ಟನ್ ಅಡಿಕೆ ಮಹಾರಾಷ್ಟ್ರ ಗಡಿ ದಾಟಲಾಗದೆ ಮಾರ್ಗ ಮಧ್ಯೆ ಸಿಲುಕಿವೆ. ಕೋಟ್ಯಂತರ ರೂಪಾಯಿ ಮೌಲ್ಯದ ಬಂಡವಾಳ ರಸ್ತೆಯಲ್ಲೇ ಉಳಿದಿರುವುದರಿಂದ ವರ್ತಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸ್ಥಳೀಯ ಮಾರುಕಟ್ಟೆಯಲ್ಲೂ ಹೊಸದಾಗಿ ಅಡಿಕೆ ಖರೀದಿಸಲು ವರ್ತಕರಲ್ಲಿ ಆತಂಕ ಹೆಚ್ಚಿದೆ. ಸಾಗಣೆ ಸಮಸ್ಯೆ, ಆರ್ಥಿಕ ಬಿಕ್ಕಟ್ಟಿನ ಕಾರಣ ನೀಡಿ ಕೆಲವು ವರ್ತಕರು ಮಾರುಕಟ್ಟೆ ದರಕ್ಕಿಂತ ಕ್ವಿಂಟಲ್‌ಗೆ ಒಂದು ಸಾವಿರ ರೂಪಾಯಿ ಕಡಿಮೆ ಬೆಲೆಗೆ ಅಡಿಕೆ ಖರೀದಿಸಲು ಮುಂದಾಗಿದ್ದಾರೆ. ಇದು ಇತ್ತೀಚಿನ ವರ್ಷಗಳಲ್ಲಿ ಮಾರುಕಟ್ಟೆಯಲ್ಲಿ ಅಡಿಕೆಗೆ ಸ್ಥಿರ ಧಾರಣೆ ಕಾಯ್ದುಕೊಳ್ಳಲು ಶ್ರಮಿಸಿದ್ದ ಸಹಕಾರ ಸಂಘಗಳ ನಿದ್ದೆ ಕೆಡುವಂತೆ ಮಾಡಿದೆ.

'ಕರ್ನಾಟಕದ ಅಡಿಕೆಯು ಮಹಾರಾಷ್ಟ್ರ ಮಾರುಕಟ್ಟೆಗೆ ನೇರವಾಗಿ ಪೂರೈಕೆ ಆಗುವುದಿಲ್ಲ. ಅಲ್ಲಿ ಅಡಿಕೆ ಉತ್ಪನ್ನಗಳಿಗೆ ನಿಷೇಧ ಇರುವುದರಿಂದ, ಮಹಾರಾಷ್ಟ್ರದ ಮಾರ್ಗವಾಗಿ ಉತ್ತರ ಭಾರತದ ಇತರೆ ಮಾರುಕಟ್ಟೆಗಳಿಗೆ ಪೂರೈಕೆ ಆಗುತ್ತದೆ. ಹೀಗಿದ್ದರೂ, ಮಹಾರಾಷ್ಟ್ರದ ಆಹಾರ ಸುರಕ್ಷತಾ ಅಧಿಕಾರಿಗಳು ಗಡಿ ಭಾಗದಲ್ಲಿ ವಿನಾಕಾರಣ ಲಾರಿಗಳನ್ನು ತಡೆದು ತೊಂದರೆ ನೀಡುತ್ತಿರುವುದು ಸಮಸ್ಯೆ ಹೆಚ್ಚುವಂತೆ ಮಾಡಿದೆ' ಎಂದು ಅಡಿಕೆ ವರ್ತಕರ ಸಂಘದ ಕೆ.ಬಿ.ಲೋಕೇಶ ತಿಳಿಸಿದರು.

ಮಹಾರಾಷ್ಟ್ರದಲ್ಲಿ ಕರ್ನಾಟಕ ಮೂಲದ ಅಡಿಕೆ ಲಾರಿಗಳನ್ನು ತಡೆಯಲಾಗಿದೆ

> **ಲಾರಿಗಳ ಜಪ್ತಿ ಪ್ರಕ್ರಿಯೆ ಹೀಗೆಯೇ ಮುಂದುವರಿದರೆ ಅಡಿಕೆ ಧಾರಣೆ ಸ್ಥಿರತೆ ಕಾಯ್ದುಕೊಳ್ಳುವುದು ಕಷ್ಟ. ಪರಿಹಾರ ಕಂಡುಕೊಳ್ಳಲು ಸಭೆ ನಡೆಸಲಾಗುವುದು**
> **ಗೋಪಾಲಕೃಷ್ಣ ವೈದ್ಯ,** ಅಧ್ಯಕ್ಷ, ಟಿಎಸ್‌ಎಸ್, ಶಿರಸಿ

> **ಅಡಿಕೆ ಲಾರಿಗಳನ್ನು ಮಹಾರಾಷ್ಟ್ರದಲ್ಲಿ ಬಿಜೆಪಿ ಸರ್ಕಾರವು ವಶಪಡಿಸಿಕೊಳ್ಳುತ್ತಿರುವುದು ಖಂಡನೀಯ. ಇದು ರೈತ ವಿರೋಧಿ ಕ್ರಮ**
> **ಶಿವರಾಂ ಹೆಬ್ಬಾರ,** ಶಾಸಕ

ಶಿವಮೊಗ್ಗದಲ್ಲಿ ಇಂದು ಸಭೆ: ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಜೂನ್ 24ರಂದು ಪ್ರಮುಖ ಸಹಕಾರ ಸಂಘಗಳ ಮುಖಂಡರು ಶಿವಮೊಗ್ಗದಲ್ಲಿ ತುರ್ತು ಸಭೆ ಹಮ್ಮಿಕೊಂಡಿದ್ದಾರೆ. ಮಾರುಕಟ್ಟೆ ಸ್ಥಿರತೆ ಕಾಯ್ದುಕೊಳ್ಳುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಮೂಲಕ ಮಹಾರಾಷ್ಟ್ರ ಸರ್ಕಾರ ಮತ್ತು ಅಡಿಕೆ ಪೂರೈಕೆಯಾಗುವ ಇತರೆ ರಾಜ್ಯಗಳ ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಹಕಾರ ವಲಯ ಸಜ್ಜಾಗಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಘು ಎಸ್. ನಾಯ್ಕ್, ಬೆಂಗಳೂರು

• **ಪ್ರಶ್ನೆ: ನಾನು ಇತ್ತೀಚಿನ ಕೆಲವು ವರ್ಷಗಳಿಂದ ಷೇರುಗಳಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಈಗಾಗಲೇ ಲಿಸ್ಟಿಂಗ್ ಆಗಿರುವ ಷೇರು ಖರೀದಿಸುವುದು ನನಗೆ ಅರ್ಥವಾಗಿದೆ. ಆದರೆ, ಇನ್ನೂ ಲಿಸ್ಟ್ ಆಗದ ಕಂಪನಿಗಳ ಷೇರುಗಳನ್ನು ನಾವು ಖರೀದಿಸುವ ಅವಕಾಶ ಇದೆಯೇ? ಕೆಲವು ಕಂಪನಿಗಳಿಗೆ ಹಣದ ಅಗತ್ಯವಿದ್ದು, ಅವು ಹೂಡಿಕೆ ಸಂಗ್ರಹಿಸುವ ಉದ್ದೇಶದಿಂದ ಬ್ಯಾಂಕ್ ಸಾಲದ ಮೊರೆ ಹೋಗದೆ ತಮ್ಮ ಬಂಡವಾಳವನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಇಂತಹ ಸಂದರ್ಭದಲ್ಲಿ, ಹೂಡಿಕೆದಾರರ ದೃಷ್ಟಿಯಿಂದ ಡಿಬೆಂಚರ್ ಯಾ ಪ್ರಿಫರೆನ್ಸ್ ಷೇರುಗಳನ್ನು ಆಯ್ಕೆ ಮಾಡುವುದು ಸೂಕ್ತವೇ, ಅಥವಾ ಈಕ್ವಿಟಿಯಾಗಿ ಪರಿವರ್ತಿಸಬಹುದಾದ ಷೇರುಗಳನ್ನು ಆಯ್ಕೆ ಮಾಡುವುದು ಹೆಚ್ಚು ಸೂಕ್ತವೇ?**

ಉತ್ತರ: ಲಿಸ್ಟಿಂಗ್ ಆಗದ ಕಂಪನಿಗಳಲ್ಲಿ ಹೂಡಿಕೆ ಮಾಡಲು ಸಾಕಷ್ಟು ಅವಕಾಶ ಇದೆ. ಆದರೆ ಈ ವಿಚಾರದಲ್ಲಿ ಸಾಕಷ್ಟು ಯೋಜನೆ ಅಗತ್ಯ. ಲಿಸ್ಟ್ ಆಗಿರುವ ಕಂಪನಿ ಷೇರುಗಳಾದರೆ ನಿಮ್ಮ ಅಗತ್ಯದಂತೆ ಹಾಗೂ ಹೂಡಿಕೆ ಮೊತ್ತಕ್ಕನುಗುಣವಾಗಿ ನೀವು ನಿರ್ಧಾರ ಕೈಗೊಳ್ಳಬಹುದು. ಲಿಸ್ಟಿಂಗ್ ಆಗದ ಹೂಡಿಕೆಗಳಲ್ಲಿ ನಿರೀಕ್ಷಿಸುವ ಮೊತ್ತವೂ ಅಧಿಕವಿರುತ್ತದೆ. ಖಾಸಗಿಯಾಗಿ ನಿಯೋಜನೆ ಮಾಡಲಾಗುವ ಷೇರು ಮಾರಾಟ, ನವೋದ್ಯಮ ಹಾಗೂ ಬೆಳವಣಿಗೆಯ ಹಂತದಲ್ಲಿರುವ ಕಂಪನಿಗಳ ಬಂಡವಾಳ ಸಂಗ್ರಹಣೆ ಪ್ರಕ್ರಿಯೆಯ ಮೂಲಕ ಹೂಡಿಕೆದಾರರು ಲಿಸ್ಟ್ ಆಗದ ಕಂಪನಿಗಳ ಷೇರುಗಳು ಅಥವಾ ಇತರ ಹಣಕಾಸು ಸಾಧನಗಳಲ್ಲಿ ಹೂಡಿಕೆ ಮಾಡಬಹುದು. ಆದರೆ ಇಂತಹ ಹೂಡಿಕೆಗಳಲ್ಲಿ ದ್ರವ್ಯತೆ ಕಡಿಮೆ, ಮಾಹಿತಿ ಲಭ್ಯತೆ ಸೀಮಿತ ಹಾಗೂ ಅಪಾಯ ತುಸು ಹೆಚ್ಚಿರುತ್ತದೆ. ಹೀಗಾಗಿ ಈ ರೀತಿಯ ಹೂಡಿಕೆಗಳಿಗೆ ಸಾಕಷ್ಟು ಮಾಹಿತಿ ಸಂಗ್ರಹದ ಅಗತ್ಯವಿರುತ್ತದೆ.

ಡಿಬೆಂಚರ್, ಪ್ರಿಫರೆನ್ಸ್ ಷೇರು ಮತ್ತು ಈಕ್ವಿಟಿಯಾಗಿ ಪರಿವರ್ತಿಸುವ ಸಾಧನಗಳ ನಡುವೆ ಮೂಲಭೂತ ವ್ಯತ್ಯಾಸಗಳಿವೆ. ಡಿಬೆಂಚರ್ ಹೂಡಿಕೆದಾರ ಕಂಪನಿಯ ಸಾಲದಾತನಾಗಿರುತ್ತಾನೆ. ನಿಗದಿತ ಬಡ್ಡಿ ಪಡೆಯುವ ಹಕ್ಕು ಅವನಿಗಿರುತ್ತದೆ. ಕಂಪನಿ ಮುಚ್ಚುವ ಪರಿಸ್ಥಿತಿ ಬಂದರೆ, ಸಾಮಾನ್ಯ ಷೇರುದಾರರಿಗಿಂತ ಮೊದಲು ಸಾಲದಾತರ ಹಕ್ಕು ಪರಿಗಣಿಸಲಾಗುತ್ತದೆ. ಆದರೆ ಕಂಪನಿಯ ಬೆಳವಣಿಗೆಯಿಂದ ಉಂಟಾಗುವ ಹೆಚ್ಚಿನ ಲಾಭದಲ್ಲಿ ಡಿಬೆಂಚರ್ ಹೂಡಿಕೆದಾರನಿಗೆ ನೇರ ಪಾಲು ಇರುವುದಿಲ್ಲ.

ಪ್ರಿಫರೆನ್ಸ್ ಷೇರುದಾರರು ಸಾಲದಾತರಲ್ಲ, ಆದರೆ ಸಾಮಾನ್ಯ ಷೇರುದಾರರಿಗಿಂತ ಆದ್ಯತೆ ಹೊಂದಿರುತ್ತಾರೆ. ಲಾಭಾಂಶ ವಿತರಣೆಯಲ್ಲಿ ಹಾಗೂ ಕಂಪನಿ ವಿಸರ್ಜನೆಯ ಸಂದರ್ಭದಲ್ಲಿ ಬಂಡವಾಳ ಮರುಪಾವತಿಯಲ್ಲಿ ಅವರಿಗೆ ಆದ್ಯತೆ ದೊರೆಯುತ್ತದೆ. ಅವರಿಗೆ ಸಾಮಾನ್ಯವಾಗಿ ಮತದಾನದ ಹಕ್ಕುಗಳು ಸೀಮಿತವಾಗಿರುತ್ತವೆ ಹಾಗೂ ಕಂಪನಿಯ ಭವಿಷ್ಯದ ಮೌಲ್ಯವರ್ಧನೆಯ ಸಂಪೂರ್ಣ ಲಾಭ ಸಿಗುವುದಿಲ್ಲ. ಬದಲಾಗಿ, ಹಾಕಿದ ಬಂಡವಾಳಕ್ಕೆ ಪ್ರತಿಯಾಗಿ ನಿಶ್ಚಿತ ಬಡ್ಡಿ ಸಿಗುತ್ತದೆ.

ಪರಿವರ್ತನೀಯ ಡಿಬೆಂಚರ್‌ಗಳು ಅಥವಾ ಪರಿವರ್ತನೀಯ ಪ್ರಿಫರೆನ್ಸ್ ಷೇರುಗಳು ಹೂಡಿಕೆದಾರರಿಗೆ ಮಧ್ಯಮ ಮಾರ್ಗವನ್ನು ಒದಗಿಸುತ್ತವೆ. ಆರಂಭಿಕ ಅವಧಿಯಲ್ಲಿ ಬಡ್ಡಿ ಅಥವಾ ನಿಗದಿತ ಆದಾಯ ಒದಗಿಸಿ ಕೊಡುತ್ತದೆ. ನಂತರ ನಿಗದಿತ ಷರತ್ತುಗಳ ಮೇರೆಗೆ ಅವುಗಳನ್ನು ಈಕ್ವಿಟಿ ಷೇರುಗಳಾಗಿ ಪರಿವರ್ತಿಸಬಹುದು. ಕಂಪನಿಯ ವ್ಯವಹಾರ ಯಶಸ್ವಿಯಾದರೆ, ಭವಿಷ್ಯದ ಮೌಲ್ಯವರ್ಧನೆಯ ಲಾಭವನ್ನೂ ಪಡೆಯುವ ಅವಕಾಶ ಸಿಗುತ್ತದೆ. ಈ ಕಾರಣದಿಂದ ಬೆಳವಣಿಗೆಯ ಹಂತದಲ್ಲಿರುವ ಕಂಪನಿಗಳಲ್ಲಿ ದೀರ್ಘಾವಧಿ ಹೂಡಿಕೆದಾರರು ಪರಿವರ್ತನೀಯ ಸಾಧನಗಳನ್ನು ಹೆಚ್ಚಾಗಿ ಪರಿಗಣಿಸುತ್ತಾರೆ.

ತೆರಿಗೆ ದೃಷ್ಟಿಯಿಂದ, ಡಿಬೆಂಚರ್‌ಗಳ ಮೇಲಿನ ಬಡ್ಡಿ ಆದಾಯವು 'ಇತರೆ ಮೂಲಗಳಿಂದ ಆದಾಯ' ಎಂಬ ವರ್ಗದ ಅಡಿ ತೆರಿಗೆಗೆ ಒಳಪಡುತ್ತದೆ. ಪರಿವರ್ತನೆಯ ಮೊದಲು ದೊರೆಯುವ ಬಡ್ಡಿ ಅಥವಾ ಲಾಭಾಂಶವು ಸಂಬಂಧಿತ ವೈಯಕ್ತಿಕ ತೆರಿಗೆ ದರಗಳ ಪ್ರಕಾರ ತೆರಿಗೆಗೆ ಒಳಪಡುತ್ತದೆ. ಪರಿವರ್ತನೆಯನ್ನು ಸಾಮಾನ್ಯವಾಗಿ ತಕ್ಷಣದ ಮಾರಾಟವೆಂದು ಪರಿಗಣಿಸುವುದಿಲ್ಲ. ಆದರೆ ಪರಿವರ್ತನೆಯ ನಂತರ ದೊರೆಯುವ ಈಕ್ವಿಟಿ ಷೇರುಗಳನ್ನು ಮಾರಾಟ ಮಾಡಿದಾಗ ಉಂಟಾಗುವ ಲಾಭವು ಬಂಡವಾಳ ಲಾಭ ತೆರಿಗೆಗೆ ಒಳಪಡುತ್ತದೆ. ಲಾಭದ ಪ್ರಮಾಣ ಹಾಗೂ ಷೇರುಗಳ ಹೂಡಿಕೆ ಅವಧಿಯನ್ನು ಅವಲಂಬಿಸಿ ತೆರಿಗೆ ನಿರ್ಧಾರವಾಗುತ್ತದೆ.

ಹೂಡಿಕೆದಾರರ ದೃಷ್ಟಿಯಿಂದ, ಬಂಡವಾಳದ ಸುರಕ್ಷತೆಗೆ ಆದ್ಯತೆ ನೀಡುವವರು ಡಿಬೆಂಚರ್‌ಗಳನ್ನು ಪರಿಗಣಿಸಬಹುದು. ಸ್ಥಿರ ಆದಾಯ ಮತ್ತು ಮಿತವಾದ ಅಪಾಯ ಬಯಸುವವರಿಗೆ ಪ್ರಿಫರೆನ್ಸ್ ಷೇರುಗಳು ಸೂಕ್ತವಾಗಬಹುದು. ಕಂಪನಿಯ ಭವಿಷ್ಯದ ಬೆಳವಣಿಗೆಯಲ್ಲಿ ಪಾಲ್ಗೊಂಡು ಹೆಚ್ಚಿನ ಲಾಭದ ಸಾಧ್ಯತೆಯನ್ನು ಬಯಸುವ ದೀರ್ಘಾವಧಿ ಹೂಡಿಕೆದಾರರಿಗೆ ಪರಿವರ್ತನೀಯ ಹೂಡಿಕೆ ಸಾಧನಗಳು ಹೆಚ್ಚು ಆಕರ್ಷಕ ಆಯ್ಕೆಯಾಗಬಹುದು.

ಯಾವುದೇ ಹೊಸ ತಲೆಮಾರಿನ ಅಥವಾ ಲಿಸ್ಟಿಂಗ್ ಆಗದ ಕಂಪನಿಯಲ್ಲಿ ಹೂಡಿಕೆ ಮಾಡುವ ಮೊದಲು ಹೂಡಿಕೆದಾರರು ತಮ್ಮದೇ ಆದ ಪರಿಶೀಲನೆ ನಡೆಸುವುದು ಅತ್ಯಗತ್ಯ. ಮೊದಲನೆಯದಾಗಿ, ಕಂಪನಿಯ ಕಳೆದ ಕೆಲವು ವರ್ಷಗಳ ಹಣಕಾಸು ವರದಿಗಳು, ಆದಾಯದ ಬೆಳವಣಿಗೆ, ಲಾಭದಾಯಕತೆ, ಸಾಲದ ಪ್ರಮಾಣ, ನಗದು ಹರಿವು, ನಿವ್ವಳ ಮೌಲ್ಯ ಇತ್ಯಾದಿ ವೃದ್ಧಿಯಾಗುತ್ತಿರುವ ಬಗ್ಗೆ ಪರಿಶೀಲಿಸಬೇಕು. ಆದಾಯದ ಬೆಳವಣಿಗೆಯಷ್ಟೇ ಅಲ್ಲದೆ, ಆ ಬೆಳವಣಿಗೆ ಸ್ಥಿರವಾಗಿದೆಯೇ ಎಂಬುದನ್ನೂ ಗಮನಿಸಬೇಕು.

ಇದರೊಡನೆ ಪ್ರವರ್ತಕರ ಹಿನ್ನೆಲೆ, ಅವರ ಅನುಭವ, ವ್ಯವಹಾರದಲ್ಲಿನ ನೈತಿಕತೆ, ಕಾರ್ಪೊರೇಟ್ ಆಡಳಿತ, ಕಂಪನಿಯ ವ್ಯವಹಾರದ ರೀತಿ–ನೀತಿ, ಸ್ಪರ್ಧಾತ್ಮಕ ಸಾಮರ್ಥ್ಯ, ಮಾರುಕಟ್ಟೆಯ ಗಾತ್ರ, ತಂತ್ರಜ್ಞಾನದೊಡನೆ ಭವಿಷ್ಯದ ಬೆಳವಣಿಗೆಯ ಅವಕಾಶಗಳನ್ನು ಪರಿಗಣಿಸಬೇಕು. ಹೂಡಿಕೆಗೂ ಮುನ್ನ ನಿಮಗೆ ದೊರೆಯುವ ಹಕ್ಕುಗಳು, ಪರಿವರ್ತನೆ ಷರತ್ತುಗಳು, ಮತದಾನದ ಹಕ್ಕು, ಹೆಚ್ಚುವರಿ ಷೇರುಗಳ ವಿತರಣೆ ಸಂದರ್ಭದಲ್ಲಿ ಇರುವ ಅವಕಾಶ ಹಾಗೂ ಹೂಡಿಕೆ ಹಿಂಪಡೆಯುವ ವ್ಯವಸ್ಥೆಗಳ ಬಗ್ಗೆ ಸ್ಪಷ್ಟತೆ ಹೊಂದಿರಬೇಕು. ಈ ಎಲ್ಲ ಅಂಶಗಳ ಸಮಗ್ರ ವಿಶ್ಲೇಷಣೆಯ ನಂತರವೇ ಹೂಡಿಕೆ ನಿರ್ಧಾರ ಕೈಗೊಳ್ಳುವುದು ಸೂಕ್ತ. ಈ ಬಗ್ಗೆ ನಿಮ್ಮ ಬ್ರೋಕರ್ ನೆರವು ಪಡೆದುಕೊಳ್ಳಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ಶ್ರೀ ಡಾ|| ಹೆಚ್.ಚೌಡಯ್ಯನವರು
ಮರಣ: 24-06-2021
ಸದಾ ಸ್ಮರಿಸುವ:
ಪತ್ನಿ ಮತ್ತು ಕುಟುಂಬ ವರ್ಗದವರು

ನಿಧನ

ಡಿ. ತುಳಸಿದಾಸ್
(ಕಾರ್ಯಾಧ್ಯಕ್ಷರು, ITI ನಿವೃತ್ತ ಅಧಿಕಾರಿಗಳ ಸಂಘ ಮತ್ತು ಅಧ್ಯಕ್ಷರು, ಶ್ರೀನಿವಾಸ ಬಲಿಜ ಸಂಘ)
ಉಪಾಧ್ಯಕ್ಷರು,
ಶ್ರೀ ಯೋಗಿನಾರಾಯಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ನಿ.
23.06.2026 ರಂದು ಸಂಜೆ 7.45 ಕ್ಕೆ ನಿಧನರಾದರು
ಪಾರ್ಥಿವ ಶರೀರವನ್ನು 24.06.2026ರ ಸಂಜೆ 4.00 ಗಂಟೆಯವರೆಗೆ ಮೃತರ ನಿವಾಸದಲ್ಲಿ ಇರಿಸಲಾಗುವುದು. #283, 1ನೇ ಕ್ರಾಸ್, BHCS ಲೇಔಟ್, ಉತ್ತರಹಳ್ಳಿ ಮುಖ್ಯ ರಸ್ತೆ, ಬೆಂಗಳೂರು -560063
ಇವರ ಅಂತ್ಯಕ್ರಿಯೆಯನ್ನು ಬನಶಂಕರಿ ಚಿತಾಗಾರದಲ್ಲಿ ನೆರವೇರಿಸಲಾಗುವುದು
Mobile : 9243120511

'ಒಪ್ಪಂದವನ್ನು ಇರಾನ್ ಗೌರವಿಸಲಿ'

ಹೊರ್ಮುಜ್ ಜಲಸಂಧಿ ತೆರೆಯುವ ವಿಶ್ವಾಸ ವ್ಯಕ್ತಪಡಿಸಿದ ಡೊನಾಲ್ಡ್ ಟ್ರಂಪ್

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): 'ಇರಾನ್–ಇಸ್ರೇಲ್ ನಡುವಿನ ಯುದ್ಧ ಕೊನೆಗೊಳಿಸಿ, ಶಾಂತಿ ಮರುಸ್ಥಾಪಿಸುವ ನಿಟ್ಟಿನಲ್ಲಿ ಇರಾನ್ ಶಾಂತಿ ಒಪ್ಪಂದವನ್ನು ಗೌರವಿಸುವುದು ಮುಖ್ಯವಾಗಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

'ಹೊರ್ಮುಜ್ ಜಲಸಂಧಿಯನ್ನು ಪೂರ್ಣವಾಗಿ ತೆರೆಯುವ ಕುರಿತಂತೆ ಆಶಾವಾದ ವ್ಯಕ್ತಪಡಿಸಿದ ಅವರು, ಇದರಿಂದ ತೈಲ ಸಂಗ್ರಹವು ಹೆಚ್ಚಾಗಲಿದೆ' ಎಂದು ತಿಳಿಸಿದ್ದಾರೆ.

ಓವಲ್ ಕಚೇರಿಯಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಅವರು ಎಲ್ಲಿಯವರೆಗೂ ನಮ್ಮನ್ನು ಗೌರವಿಸುತ್ತಾರೋ, ಅಲ್ಲಿಯವರೆಗೂ ನಾನು ಭಯ ಎಂಬ ಶಬ್ದವನ್ನು ಬಳಸುವುದಿಲ್ಲ. ಅದು ಅನುಚಿತ ಪದವಾಗಿದೆ. ಅವರು ಎಲ್ಲಿಯ ತನಕ ನಮ್ಮನ್ನು ಗೌರವಿಸುತ್ತಾರೋ, ಅಲ್ಲಿಯ ತನಕ ನಾವು ಅವರಿಗೆ ಯಾವುದೇ ತೊಂದರೆ ನೀಡುವುದಿಲ್ಲ' ಎಂದು ಟ್ರಂಪ್ ಭರವಸೆ ನೀಡಿದ್ದಾರೆ.

ಫೆಬ್ರುವರಿ 28ರಂದು ಅಮೆರಿಕ ಹಾಗೂ ಇಸ್ರೇಲ್ ದೇಶವು ಇರಾನ್ ಮೇಲೆ ಜಂಟಿಯಾಗಿ ದಾಳಿ ನಡೆಸಿದ ಬಳಿಕ ಹೊರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ಹಡಗುಗಳ ಸಂಚಾರಕ್ಕೆ ಇರಾನ್ ನಿರ್ಬಂಧ ಹೇರಿತ್ತು. ಮಧ್ಯಂತರ ಒಪ್ಪಂದದ ಪ್ರಕಾರ, ಜಲಸಂಧಿಯನ್ನು ಪೂರ್ಣ ಪ್ರಮಾಣದಲ್ಲಿ ತೆರೆಯಬೇಕು ಎಂದು ಇರಾನ್‌ಗೆ ತಿಳಿಸಲಾಗಿದೆ.

> **ಬಾಂಬ್ ದಾಳಿಗೆ ಒಳಗಾಗಿರುವ ಇರಾನ್‌ನ ಪರಮಾಣು ಘಟಕಕ್ಕೆ ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿಯ (ಐಎಇಎ) ಅಧಿಕಾರಿಗಳು ಭೇಟಿ ನೀಡಿ ತಪಾಸಣೆ ನಡೆಸಲು ಸಮಯ ನಿಗದಿಯಾಗಿಲ್ಲ**
> **ಎಸ್ಮಾಯಿಲ್ ಬಾಘೈ,** ವಿದೇಶಾಂಗ ಸಚಿವಾಲಯದ ವಕ್ತಾರ

ಒಪ್ಪಂದದ ಬಳಿಕ ಕಳೆದ ವಾರಾಂತ್ಯದಲ್ಲಿ ಡಜನ್‌ಗೂ ಅಧಿಕ ಹಡಗುಗಳು ಸಾಗಿದ್ದವು. ಲೆಬನಾನ್ ಮೇಲೆ ಇಸ್ರೇಲ್ ದಾಳಿ ನಡೆಸಿದ ಬಳಿಕ ಹೊರ್ಮುಜ್ ಅನ್ನು ಇರಾನ್ ಮತ್ತೆ ಮುಚ್ಚಿತ್ತು.

'ಹೊರ್ಮುಜ್ ಜಲಸಂಧಿಯನ್ನು ಅಂತರರಾಷ್ಟ್ರೀಯ ಕಾನೂನಿಗೆ ಅನುಗುಣವಾಗಿ ಇರಾನ್ ನಿರ್ವಹಣೆ ಮಾಡಲಿದೆ' ಎಂದು ಇರಾನ್ ಸಂಸತ್ತಿನ ಸ್ಪೀಕರ್ ಹಾಗೂ ಮುಖ್ಯ ಮಧ್ಯಸ್ಥಿಕೆದಾರ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಸ್ಪಷ್ಟಪಡಿಸಿದ್ದಾರೆ.

'ಪ್ರಾದೇಶಿಕ ಹಾಗೂ ಜಾಗತಿಕ ಆರ್ಥಿಕತೆಯನ್ನು ಮರಳಿ ತರುವ ನಿಟ್ಟಿನಲ್ಲಿ ಹೊರ್ಮುಜ್ ಜಲಸಂಧಿಯನ್ನು ಸಕ್ರಿಯಗೊಳಿಸಲಾಗುವುದು' ಎಂದು ಖಾಲೀಬಾಫ್ ಹೇಳಿಕೆ ನೀಡಿದ್ದಾರೆ ಎಂದು ಇರಾನ್‌ನ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ.

'ಜೀವರಕ್ಷಕ ಔಷಧ: ದಾರಿ ತಪ್ಪಿಸುತ್ತಿವೆ ಜಾಹೀರಾತು'

ಬೆಂಗಳೂರು: 'ಜೀವ ರಕ್ಷಕ ಔಷಧಗಳ ಬಗ್ಗೆ ದಾರಿ ತಪ್ಪಿಸುವ ಜಾಹೀರಾತು ನೀಡುತ್ತಿರುವವರು ಹಾಗೂ ಅಸಹಜ ರಿಯಾಯಿತಿಯ ಫಲಕಗಳನ್ನು ಪ್ರದರ್ಶಿಸುತ್ತಿರುವವರ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕ ಫಾರ್ಮ ರಿಟೈಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಷನ್ ಆಗ್ರಹಿಸಿದೆ.

ಈ ಬಗ್ಗೆ ಸಂಘದ ಅಧ್ಯಕ್ಷ ಸಿ. ಜಯರಾಂ ಅವರು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಯುಕ್ತ ಕೆ.ಶ್ರೀನಿವಾಸ ಅವರಿಗೆ ಮನವಿ ಸಲ್ಲಿಸಿದ್ದಾರೆ.

'ಔಷಧಗಳ ಬಗ್ಗೆ ಉತ್ಪ್ರೇಕ್ಷಿತ ಜಾಹೀರಾತನ್ನು ಪ್ರದರ್ಶಿಸಲಾಗುತ್ತಿದೆ. ಅಸಹಜ, ಭಾರಿ ರಿಯಾಯಿತಿಯ ಫಲಕಗಳನ್ನು ಅಳವಡಿಸಿ, ಜನರ ದಾರಿ ತಪ್ಪಿಸಲಾಗುತ್ತಿದೆ. ರಾಷ್ಟ್ರೀಯ ಔಷಧ ಬೆಲೆ ನಿಗದಿ ಪ್ರಾಧಿಕಾರವು ಲಾಭದ ಗಡಿಯನ್ನು ಗೊತ್ತುಪಡಿಸಿದೆ. ಆದರೆ, ಬಹುರಾಷ್ಟ್ರೀಯ ಕಂಪನಿಗಳು ದಾರಿ ತಪ್ಪಿಸುವ ಜಾಹೀರಾತು ನೀಡಿ, ರಿಯಾಯಿತಿ ದರದಲ್ಲಿ ಜೀವರಕ್ಷಕ ಔಷಧ ಮಾರಾಟ ಮಾಡುತ್ತಿವೆ. ಈ ಬೆಳವಣಿಗೆ ಔಷಧ ಉದ್ಯಮದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ' ಎಂದು ಹೇಳಿದ್ದಾರೆ.

'ಕೇರಳಂ ರಾಜ್ಯದ ಔಷಧ ನಿಯಂತ್ರಕರು 2024ರ ಸೆ. 4ರಂದು ಐತಿಹಾಸಿಕ ಸುತ್ತೋಲೆ ಹೊರಡಿಸಿದ್ದರು. ಔಷಧ ಮಳಿಗೆಗಳ ಸ್ಥಾಪನೆ ಹಾಗೂ ನವೀಕರಣದ ವೇಳೆ 'ಮಳಿಗೆಗಳ ಹೊರಭಾಗದಲ್ಲಿ ಯಾವುದೇ ರಿಯಾಯಿತಿ ಫಲಕಗಳನ್ನು ಪ್ರದರ್ಶಿಸುವುದಿಲ್ಲ' ಎಂಬ ಬಗ್ಗೆ ಮಳಿಗೆ ಮಾಲೀಕರು ಪ್ರಮಾಣ ಪತ್ರ ಸಲ್ಲಿಸಬೇಕೆಂದು ಸೂಚಿಸಿದ್ದರು' ಎಂದು ತಿಳಿಸಿದ್ದಾರೆ.

ಅಡಿಕೆ ಧಾರಣೆ

ಕುಮಟಾ			
ಚಾಲಿ	42256- 43915		
ಪುತ್ತೂರು			
ಕೋಕ	20000-33500		
ಹೊಸತು	30000-47000		
ಸಾಗರ			
ಬಿಳಿಗೋಟು	20,199-28501		
ಚಾಲಿ	38,111-40111		
ಕೆಂಪುಗೋಟು	33899-37300		
ರಾಶಿ	47189-50869		
ಸಿಪ್ಪೆಗೋಟು	21889-21889		
ಸಿದ್ದಾಪುರ			
ಬಿಳಿಗೋಟು	25699-33289		
ಚಾಲಿ	41699-47239		
ಕೋಕ	23299-31289		
ಕೆಂಪುಗೋಟು	27069-36200		
ರಾಶಿ	43359-49899		
ತಟ್ಟಿಬೆಟ್ಟೆ	35900-44299		
ಶಿರಸಿ			
ಬೆಟ್ಟೆ	40629-49099		
ಬಿಳಿಗೋಟು	26699-36691		
ಚಾಲಿ	43500-47915		
ಕೆಂಪುಗೋಟು	20166-33099		
ರಾಶಿ	49699-53200		
ಯಲ್ಲಾಪುರ			
ಆಪಿ	53379-53379		
ಬಿಳಿಗೋಟು	18899-36100		
ಚಾಲಿ	36719-48099		
ಕೋಕ	14099-30199		
ಕೆಂಪುಗೋಟು	22899-32899		
ರಾಶಿ	49169-53769		
ತಟ್ಟಿಬೆಟ್ಟೆ	36706-44809		
ಶಿವಮೊಗ್ಗ			
ರಾಶಿ	44366-52719		
ಗೊರಬಲು	19000-41786		
ಸರಕು/ಹಸ	55559-96296		
ಬೆಟ್ಟೆ	59999-60069		

ಫ್ರಾನ್ಸ್: ಬಿಸಿಲಿಗೆ 40 ಮಂದಿ ಸಾವು

ಪ್ಯಾರಿಸ್ (ಎಪಿ): 'ಫ್ರಾನ್ಸ್‌ನಾದ್ಯಂತ ಬಿಸಿಲಿನ ತೀವ್ರತೆ ಅತ್ಯಧಿಕವಾಗಿದ್ದು, ಅಧಿಕ ಉಷ್ಣತೆಯಿಂದಾಗಿ ಐದು ದಿನಗಳಲ್ಲಿ 40 ಮಂದಿ ಮೃತಪಟ್ಟಿದ್ದಾರೆ' ಎಂದು ಪ್ರಧಾನಿ ಸೆಬಾಸ್ಟಿಯನ್ ಲೆಕೋರ್ನು ತಿಳಿಸಿದ್ದಾರೆ.
ಇಲ್ಲಿನ ಹವಾಮಾನ ಇಲಾಖೆಯು 'ರೆಡ್ ಅಲರ್ಟ್' ಘೋಷಿಸಿದ್ದು, ದಿನದ 24 ಗಂಟೆಯೂ ಉಷ್ಣತೆ ಅಧಿಕವಾಗಿರುತ್ತದೆ ಎಂದು ಎಚ್ಚರಿಕೆ ನೀಡಿದೆ.

ಈ ವಾರದ ಅಂತ್ಯದವರೆಗೂ ಇದೇ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆಯಿದೆ.

ಕ್ರೆಡ್: ಜಿಟಿಆರ್‌ಐ ಕಳವಳ

ಕ್ರೆಡ್ ಸಂಸ್ಥಾಪಕ ಕುನಾಲ್ ಶಾ ವಾಟ್ಸ್‌ಆ್ಯಪ್ ನೂತನ ಸಿಇಒ

ನವದೆಹಲಿ (ಪಿಟಿಐ): ತಂತ್ರಜ್ಞಾನ ಕ್ಷೇತ್ರದ ದೈತ್ಯ ಕಂಪನಿಯಾದ ಮೆಟಾ, ಬೆಂಗಳೂರು ಮೂಲದ ಕ್ರೆಡ್ ಕಂಪನಿಯಲ್ಲಿ 900 ಮಿಲಿಯನ್ ಡಾಲರ್ (₹8,550 ಕೋಟಿ) ಹೂಡಿಕೆ ಮಾಡಲು ತೀರ್ಮಾನಿಸಿರುವುದು ದೇಶದ ಫಿನ್‌ಟೆಕ್ ವಲಯದಲ್ಲಿ ಹಾಗೂ ಹಣಕಾಸಿನ ದತ್ತಾಂಶ ಸಂಗ್ರಹ ವ್ಯವಸ್ಥೆಯಲ್ಲಿ ವಿದೇಶಿ ಪ್ರಭಾವ ಹೆಚ್ಚುತ್ತಿರುವುದರ ಕುರಿತಾಗಿ ಕಳವಳ ಮೂಡಿಸಿದೆ ಎಂದು ಜಿಟಿಆರ್‌ಐ ಹೇಳಿದೆ.

ದೇಶದ ಗ್ರಾಹಕರ ಹಣಕಾಸಿನ ವರ್ತನೆಗಳಿಗೆ ಸಂಬಂಧಿಸಿದ ಭಾರಿ ಪ್ರಮಾಣದ ದತ್ತಾಂಶವನ್ನು ಹೊಂದಿರುವ ಕಂಪನಿಯೊಂದರಲ್ಲಿ ಮೆಟಾ ಹಿಡಿತ ಸಾಧಿಸಲು ಈ ಹೂಡಿಕೆಯಿಂದಾಗಿ ಸಾಧ್ಯವಾಗಲಿದೆ ಎಂದು ಜಿಟಿಆರ್‌ಐ ಹೇಳಿದೆ. ಗ್ರಾಹಕರ ಕ್ರೆಡಿಟ್ ಕಾರ್ಡ್, ಸಾಲ, ಹೂಡಿಕೆಗಳು, ವಿಮೆ ಮತ್ತು ಯುಪಿಐ ವಹಿವಾಟುಗಳಿಗೆ ಸಂಬಂಧಿಸಿದ ದತ್ತಾಂಶವನ್ನು ಕ್ರೆಡ್ ಹೊಂದಿದೆ.

ಫೋನ್‌ಪೆ, ಗೂಗಲ್ ಪೇ ಹಾಗೂ ವಾಟ್ಸ್‌ಆ್ಯಪ್ ಪೇ ಕ್ರಮವಾಗಿ ವಾಲ್ಮಾರ್ಟ್, ಗೂಗಲ್ ಮತ್ತು ಮೆಟಾ ಕಂಪನಿಯ ಜೊತೆ ನಂಟು ಹೊಂದಿದವು ಎಂದು ಜಿಟಿಆರ್‌ಐ ಉಲ್ಲೇಖಿಸಿದೆ.

ಚೀನಾ ದೇಶವು ತನ್ನ ಪಾವತಿ ವ್ಯವಸ್ಥೆಯನ್ನು ದೇಶಿ ಕಂಪನಿಗಳಾದ ಅಲಿಪೇ, ವಿಚಾಟ್ ಪೇ ಮುಂತಾದವುಗಳ ಮೂಲಕ ಕಟ್ಟಿತು. ಆದರೆ ಭಾರತವು, ಸಾರ್ವಜನಿಕ ಡಿಜಿಟಲ್ ಮೂಲ ಸೌಕರ್ಯವನ್ನು ಬಳಕೆ ಮಾಡಿಕೊಂಡು ಭದ್ರವಾದ ಸ್ಥಾನ ಹೊಂದಲು ವಿದೇಶಿ ಕಂಪನಿಗಳಿಗೆ ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ಅಮೂಲ್ಯವಾದ ಹಣಕಾಸಿನ ದತ್ತಾಂಶವು ವಿದೇಶಿ ನಿಯಂತ್ರಿತ ವ್ಯವಸ್ಥೆಗೆ ವರ್ಗಾವಣೆಯಾಗುವ ಅಪಾಯ ಇರುತ್ತದೆ ಎಂದು ಹೇಳಿದೆ.



ಕುನಾಲ್ ಶಾ

ಮೆಟಾ ಕಂಪನಿಯು ಕ್ರೆಡ್‌ನಲ್ಲಿ ಹೂಡಿಕೆಗೆ ತೀರ್ಮಾನಿಸಿರುವುದಷ್ಟೇ ಅಲ್ಲದೆ, ಅದರ ಸಂಸ್ಥಾಪಕ ಕುನಾಲ್ ಶಾ ಅವರನ್ನು ವಾಟ್ಸ್‌ಆ್ಯಪ್‌ನ ಜಾಗತಿಕ ಮುಖ್ಯಸ್ಥರನ್ನಾಗಿ ನೇಮಕ ಮಾಡಿದೆ.

'ಇಲ್ಲಿರುವ ಪ್ರಮುಖ ವಿಷಯ ಕ್ರೆಡ್‌ನ ದತ್ತಾಂಶವು ಮೆಟಾ ಕೈಗೆ ಸೇರಿತೇ ಎಂಬುದಲ್ಲ. ಹಣಕಾಸಿನ ವಿಚಾರದಲ್ಲಿ ಸಕ್ರಿಯವಾಗಿರುವ ಲಕ್ಷಾಂತರ ಜನರ ಹಣಕಾಸಿನ ದತ್ತಾಂಶದ ಮೇಲಿನ ನಿಯಂತ್ರಣವು ಹಂತಹಂತವಾಗಿ ವಿದೇಶಿ ಮಾಲೀಕತ್ವದ ಡಿಜಿಟಲ್ ವ್ಯವಸ್ಥೆಗೆ ಸೇರಲು ದೇಶವು ಅವಕಾಶ ಮಾಡಿಕೊಡುತ್ತಿದೆಯೇ ಎಂಬುದಾಗಿದೆ' ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಅವರು ಹೇಳಿದ್ದಾರೆ.

2018ರಲ್ಲಿ ಸ್ಥಾಪನೆ ಆದ ಕ್ರೆಡ್ ಗ್ರಾಹಕರ ಹಣಕಾಸಿನ ವರ್ತನೆಗೆ ಸಂಬಂಧಿಸಿದ ಭಾರಿ ಪ್ರಮಾಣದ ದತ್ತಾಂಶವನ್ನು ಹೊಂದಿದೆ. 1.7 ಕೋಟಿ ಜನ ಇದಕ್ಕೆ ಕ್ರೆಡಿಟ್ ಕಾರ್ಡ್, ಮರುಪಾವತಿ ವಿವರಗಳು, ವೆಚ್ಚಗಳ ವಿವರ, ಬಿಲ್ ಪಾವತಿ ಮಾಹಿತಿ, ಸಾಲ, ಹೂಡಿಕೆ, ವಿಮೆ ಖರೀದಿ ಮಾಹಿತಿಯನ್ನು ಒದಗಿಸುತ್ತಿರುತ್ತಾರೆ ಎಂದು ಅಜಯ್ ಹೇಳಿದ್ದಾರೆ.

ಕ್ರೆಡ್ ಕಂಪನಿಯು ಗ್ರಾಹಕರ ದತ್ತಾಂಶವನ್ನು ಪಡೆಯಲು ಮೆಟಾ ಕಂಪನಿಗೆ ಈಗಲೇ ಅವಕಾಶ ನೀಡಲಿಕ್ಕಿಲ್ಲ. ಆದರೆ ಶೀಘ್ರವೇ ಈ ದತ್ತಾಂಶವು ಮೆಟಾದ ಬಳಕೆಗೆ ನೇರವಾಗಿ ಅಥವಾ ಪರೋಕ್ಷವಾಗಿ ಲಭ್ಯವಾಗಲಿದೆ. ಅದನ್ನು ಮೆಟಾ ಕಂಪನಿಯ ಎ.ಐ. ಮಾದರಿಗಳ ತರಬೇತಿಗೆ ಬಳಸಬಹುದು ಎಂದು ಜಿಟಿಆರ್‌ಐ ಅಂದಾಜು ಮಾಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Engg/ Production Technical

WANTED SERVICE ENGINEER for Bosch Authorised Service. ITI/Diploma. 1-2 Yrs Exp / Freshers can apply. Role: Repair & Calibration. Call: 8884244142

ತಕ್ಷಣ ಬೇಕಾಗಿದ್ದಾರೆ. ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ. 20,000 - 25,000 ಸಂಪಾದಿಸಿ. 8095222026

Drivers

ಬೇಕಾಗಿದ್ದಾರೆ ಲಾರಿ ಡ್ರೈವರ್ 6Wheeler (ಲಾಂಗ್ ರೂಟ್ ಅನುಭವ ಇರಬೇಕು) ಸಂಬಳ 29000 To 39000 with(ESI & PF) ಕರ್ನಾಟಕ & ತಮಿಳುನಾಡು. Pondhan Pvt Ltd. Bangalore Doddaballapura: 9008429150

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ವೈಯಕ್ತಿಕ

Change of Name

ನಾನು ಕ್ರಿಸ್ಟಿ ಜೋಸೆಫ್ S/o ಲಾರೆನ್ಸ್ ಡಿ ಮೆಲ್ಲೊ,ನಂ.3018 ರಾಜಾಕೆಂಪೇಗೌಡ ಬಡಾವಣೆ, ಚನ್ನಪಟ್ಟಣ,ಬೆಂಗಳೂರು ದಕ್ಷಿಣ ಜಿಲ್ಲೆ 562160 ನಲ್ಲಿ ವಾಸಿಸುತ್ತಿದೇನೆ. ಅಫಿಡವಿಟ್ನಲ್ಲಿ ಹೇಳಿದಂತೆ ನಾನು ನನ್ನ ಹೆಸರನ್ನು (ಕ್ರಿಸ್ಟಿ ಜೋಸೆಫ್ ಡಿ ಮೆಲ್ಲೊ) ಎಂದು ಬದಲಾಯಿಸಿದ್ದೇನೆ. (ಕ್ರಿಸ್ಟಿ ಜೋಸೆಫ್ ಡಿ ಮೆಲ್ಲೊ).

CHANGE OF NAME
I, RADHIKA PAI D/o Ramakrishna Borkatte Pai, resident of No. 14, Hublikar Plots, Sadhankeri, Dharwad, Karnataka, I have changed my name from RADHIKA VISHWAS BHAT to RADHIKA PAI, vide affidavit dated 23.06.2026 Sworn before Advocate and Notary L B Gade, Dharwad. Hence forth I shall be called RADHIKA PAI Only.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾಜೇಶ್ ಎಕ್ಸ್‌ಪೋರ್ಟ್ಸ್ ಮೇಲೆ ಇ.ಡಿ ದಾಳಿ 9 ಸ್ಥಳಗಳಲ್ಲಿ ಶೋಧ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ವಿಚಾರಣೆ ಎದುರಿಸುತ್ತಿರುವ ರಾಜೇಶ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್‌ಗೆ (ಆರ್‌ಇಎಲ್) ಸೇರಿದ ಹಲವು ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಮಂಗಳವಾರ ದಾಳಿ ನಡೆಸಿದೆ.

ಚಿನ್ನ ಸಂಸ್ಕರಣೆ ಮತ್ತು ಆಭರಣ ತಯಾರಿಕಾ ಕಂಪನಿಯಾದ ರಾಜೇಶ್ ಎಕ್ಸ್‌ಪೋರ್ಟ್ಸ್ ವಿರುದ್ಧ ಭಾರಿ ಆರ್ಥಿಕ ವಂಚನೆ ಎಸಗಿದ ಆರೋಪವಿದೆ.

'ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ'ಯ (ಫೆಮಾ) ನಿಬಂಧನೆಗಳಡಿ, ಬೆಂಗಳೂರಿನಲ್ಲಿ ಇರುವ ಪ್ರಧಾನ ಕಚೇರಿ ಸೇರಿದಂತೆ ಒಂಬತ್ತು ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಗಳ ಪ್ರಕಾರ, ಆರ್‌ಇಎಲ್ ಷೇರುಗಳ ಖರೀದಿ, ಮಾರಾಟದಲ್ಲಿ ಬೇನಾಮಿಗಳು ಹಲವು ಬಾರಿ ವಹಿವಾಟು ನಡೆಸಿರುವ ಆರೋಪಗಳು ಸೇರಿದಂತೆ ಫೆಮಾ ಉಲ್ಲಂಘನೆಗಳ ಬಗ್ಗೆ ಇ.ಡಿ ತನಿಖೆ ನಡೆಸುತ್ತಿದೆ.

'ದೇಶದಿಂದ 2 ಕೋಟಿ ಡಾಲರ್ (ಸುಮಾರು ₹190 ಕೋಟಿ) ಹಣವನ್ನು ಅಕ್ರಮವಾಗಿ ಹೊರಗೆ ಸಾಗಿಸಲಾಗಿದೆ. ಕಂಪನಿಯ ಚಿನ್ನದ ದಾಸ್ತಾನು ಲೆಕ್ಕಪತ್ರಗಳಲ್ಲಿ ಘೋಷಿಸಿದ್ದಕ್ಕಿಂತ ಶೇ 40ರಷ್ಟು ವ್ಯತ್ಯಾಸ ಇದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನಕ್ಕೆ ಭೇಟಿ ನೀಡಿದ ಮಸೂದ್

ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಚರ್ಚೆ

ಇಸ್ಲಾಮಾಬಾದ್ (ಪಿಟಿಐ): ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರು ಮಂಗಳವಾರ ಪಾಕಿಸ್ತಾನಕ್ಕೆ ಭೇಟಿ ನೀಡಿದರು.

ಪಶ್ಚಿಮ ಏಷ್ಯಾ ಯುದ್ಧವನ್ನು ಕೊನೆಗೊಳಿಸಲು ಅಮೆರಿಕ ಹಾಗೂ ಇರಾನ್‌ನ ಸಹಿ ಹಾಕಿರುವ ಶಾಂತಿ ಒಪ್ಪಂದದ ಎಲ್ಲಾ ಷರತ್ತುಗಳ ಅನುಷ್ಠಾನ, ಉಭಯ ರಾಷ್ಟ್ರಗಳ ಹಿತಾಸಕ್ತಿಗೆ ಅನುಗುಣವಾದ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಚರ್ಚಿಸುವುದು ಈ ಭೇಟಿಯ ಉದ್ದೇಶವಾಗಿತ್ತು.

ಪ್ರಧಾನಿ ಶೆಹಬಾಜ್ ಶರೀಫ್ ಅವರ ಆಹ್ವಾನದ ಮೇರೆಗೆ ಮಸೂದ್ ಪಾಕಿಸ್ತಾನಕ್ಕೆ ಬರಲಿದ್ದಾರೆ. ಉಭಯ ನಾಯಕರು ದ್ವಿಪಕ್ಷೀಯ ಸಂಬಂಧಗಳ ಕುರಿತು ಮಾತುಕತೆ ನಡೆಸಲಿದ್ದಾರೆ ಎಂದು ವಿದೇಶಾಂಗ ಇಲಾಖೆಯು ಈ ಹಿಂದೆ ತಿಳಿಸಿತ್ತು.

ಮಸೂದ್ ಅವರು ನೂರ್ ಖಾನ್ ವಾಯುನೆಲೆಯಲ್ಲಿ ಬಂದಿಳಿದರು. ಪಾಕಿಸ್ತಾನದ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ, ಶೆಹಬಾಜ್ ಶರೀಫ್ ಹಾಗೂ ಇತರ ಉನ್ನತ ನಾಯಕರು ಅವರನ್ನು ಬರಮಾಡಿಕೊಂಡರು.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಪ್ರತ್ಯೇಕವಾಗಿ ಮಸ್ಕತ್‌ನಿಂದ ಇಲ್ಲಿಗೆ ಬಂದಿಳಿದರು. ಹೊರ್ಮುಜ್ ಜಲಸಂಧಿಯ ನಿರ್ವಹಣೆ ಕುರಿತು ಒಮಾನ್ ನಾಯಕತ್ವದೊಂದಿಗೆ ಉನ್ನತ ಮಟ್ಟದ ಚರ್ಚೆ ನಡೆಸಲು ಅವರು ಮಸ್ಕತ್‌ಗೆ ತೆರಳಿದ್ದರು.

ಶೆಹಬಾಜ್ ಅವರೊಂದಿಗೆ ಮಸೂದ್ ಮಾತುಕತೆ ನಡೆಸಿದರು. 'ಇರಾನ್–ಅಮೆರಿಕ ಒಪ್ಪಂದವು ಪಶ್ಚಿಮ ಏಷ್ಯಾದಲ್ಲಿ ಸ್ಥಿರತೆ ಹಾಗೂ ಭದ್ರತೆಯನ್ನು ಬಲಪಡಿಸಲು ಸಹಾಯ ಮಾಡಲಿದೆ' ಎಂದು ಮಸೂದ್ ಹೇಳಿರುವುದಾಗಿ ಸರ್ಕಾರಿ ಸ್ವಾಮ್ಯದ ಮಾಧ್ಯಮ ಸಂಸ್ಥೆ ವರದಿ ಮಾಡಿದೆ.

'ಮಾತುಕತೆಯು ಎಷ್ಟು ಪರಿಣಾಮಕಾರಿಯಾಗಿ ಇರಲಿದೆ ಎಂಬುದು, ಒಪ್ಪಂದಗಳಿಗೆ ಬದ್ಧರಾಗಿರುವುದು ಹಾಗೂ ಅವುಗಳ ಅನುಷ್ಠಾನವನ್ನು ಅವಲಂಬಿಸಿರುತ್ತದೆ' ಎಂದು ಮಸೂದ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪಾಕಿಸ್ತಾನದ ನೂರ್ ಖಾನ್ ವಾಯುನೆಲೆಯಲ್ಲಿ ಬಂದಿಳಿದ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರನ್ನು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ಅವರು ಮಂಗಳವಾರ ಬರಮಾಡಿಕೊಂಡರು – ಎಎಫ್‌ಪಿ ಚಿತ್ರ

ಎ.ಐ.ನಿಂದ ಐ.ಟಿಗೆ ಧಕ್ಕೆಯಿಲ್ಲ: ನಿಲೇಕಣಿ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆಯು (ಎ.ಐ) ಐ.ಟಿ. ಸೇವಾ ಕಂಪನಿಗಳನ್ನು ಇನ್ನಿಲ್ಲದಂತೆ ಮಾಡುವುದಿಲ್ಲ; ಅದರ ಬದಲಿಗೆ ಈ ಹೊಸ ತಂತ್ರಜ್ಞಾನವು ಐ.ಟಿ ಸೇವಾ ಕಂಪನಿಗಳ ಬಲ ಹೆಚ್ಚಿಸುತ್ತದೆ ಎಂದು ಇನ್ಫೊಸಿಸ್ ಲಿಮಿಟೆಡ್‌ನ ಅಧ್ಯಕ್ಷ ನಂದನ್ ನಿಲೇಕಣಿ ಪ್ರತಿಪಾದಿಸಿದ್ದಾರೆ.

ಇನ್ಫೊಸಿಸ್ ಕಂಪನಿಯು 2030ರ ವೇಳೆಗೆ ಸೃಷ್ಟಿಯಾಗುವ 400 ಬಿಲಿಯನ್ ಡಾಲರ್ ಮೊತ್ತದ (₹37.88 ಲಕ್ಷ ಕೋಟಿ) ಎ.ಐ. ಆಧಾರಿತ ಸೇವೆಗಳ ಮಾರುಕಟ್ಟೆಯ ಪ್ರಯೋಜನ ಪಡೆಯಲಿದೆ ಎಂದು ಅವರು ಹೇಳಿದ್ದಾರೆ.

ಕಂಪನಿಯ ಷೇರುದಾರರ 45ನೆಯ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಐ.ಟಿ ಉದ್ಯಮದ ಎದುರು ಇರುವ 'ಅಸ್ತಿತ್ವದ ಪ್ರಶ್ನೆ'ಗೆ ಉತ್ತರಿಸುವ ಯತ್ನ ನಡೆಸಿದರು.

'ಜೆನ್‌ಎಐ ಆರಂಭವಾಗಿ ಮೂರು ವರ್ಷಕ್ಕೂ ಹೆಚ್ಚು ಕಾಲ ಸಂದಿದೆ. ಈ ಹೊತ್ತಿನಲ್ಲಿ ಇನ್ಫೊಸಿಸ್ ಕಂಪನಿಯು ಹಿಂದೆಂದಿಗಿಂತ ಹೆಚ್ಚು ಪ್ರಸ್ತುತವಾಗಿದೆ. ಅಲ್ಲದೆ, ಮುಂದಿನ ಒಂದು ದಶಕದ ಅವಧಿಗೆ ಹೆಚ್ಚು ಸನ್ನದ್ಧವಾಗಿ ನಿಂತಿದೆ. ಅತ್ಯುತ್ತಮವಾದ ಕೋಡಿಂಗ್ ಪರಿಕರಗಳನ್ನು ಬಳಸಿ, ನಮ್ಮ ಉತ್ಪಾದಕತೆಯನ್ನು ಸುಧಾರಿಸಿಕೊಳ್ಳುತ್ತೇವೆ' ಎಂದಿದ್ದಾರೆ.



'ಎವಿಆರ್ ಸಿನೆ ಮ್ಯಾಕ್ಸ್' ಆರಂಭದ ವೇಳೆ ಉಪಸ್ಥಿತರಿದ್ದ ನಟ–ನಟಿಯರು, ನಿರ್ದೇಶಕರು

ಕನ್ನಡದ ಹೊಸ ಒಟಿಟಿ ಆರಂಭ 'ಎವಿಆರ್ ಸಿನೆ ಮ್ಯಾಕ್ಸ್'

ಕನ್ನಡಿಗರಿಗಾಗಿ ಕನ್ನಡದಲ್ಲೇ ರೂಪುಗೊಂಡಿರುವ ಹೊಸ ಒಟಿಟಿ ವೇದಿಕೆ 'ಎವಿಆರ್ ಸಿನೆ ಮ್ಯಾಕ್ಸ್' ಅಧಿಕೃತವಾಗಿ ಕಾರ್ಯಾರಂಭ ಮಾಡಿದೆ. ಎವಿಆರ್ ಪ್ರೊಡಕ್ಷನ್ಸ್‌ನ ಅರವಿಂದ್ ವೆಂಕಟೇಶ್ ರೆಡ್ಡಿ ಇದರ ಸ್ಥಾಪಕರಾಗಿದ್ದು, ಹಿರಿಯ ಹಾಸ್ಯನಟ ನರಸಿಂಹರಾಜು ಅವರ ಮೊಮ್ಮಗ, ನಟ–ನಿರ್ದೇಶಕ ಅವಿನಾಶ್ ದಿವಾಕರ್ ಶೃಂಗೇರಿ ವೇದಿಕೆಯ ಉಸ್ತುವಾರಿ ವಹಿಸಿಕೊಂಡಿದ್ದಾರೆ.

ಈಚೆಗೆ ನಡೆದ ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ, ನಿರ್ದೇಶಕರಾದ ಟಿ.ಎಸ್. ನಾಗಾಭರಣ, ನಾಗತಿಹಳ್ಳಿ ಚಂದ್ರಶೇಖರ, ಟಿ.ಎನ್. ಸೀತಾರಾಮ್, ಪಿ. ಶೇಷಾದ್ರಿ, ಶಶಾಂಕ್ ಹಾಗೂ ನಾಗಣ್ಣ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ನಟರಾದ ದೊಡ್ಡಣ್ಣ, ಮುಖ್ಯಮಂತ್ರಿ ಚಂದ್ರು, ಸುಂದರರಾಜ್, ಮೋಹನ್, ಗುರುಕಿರಣ್, ಥ್ರಿಲ್ಲರ್ ಮಂಜು, ಶಿವಧ್ವಜ್ ಹಾಗೂ ನಟಿಯರಾದ ಗಿರಿಜಾ ಲೋಕೇಶ್, ಸುಧಾರಾಣಿ, ತಾರಾ ಅನುರಾಧಾ, ಹರ್ಷಿಕಾ ಪೂಣಚ್ಚ, ಪದ್ಮಜಾ ರಾವ್ ಮತ್ತು ನಿರ್ಮಾಪಕ ಯೋಗೀಶ್ ದ್ವಾರಕೀಶ್ ಕೂಡ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಜಯಮಾಲಾ, 'ಹೊಸ ಒಟಿಟಿ ವೇದಿಕೆಗೆ ಶುಭವಾಗಲಿ. ಇದು ಕನ್ನಡ ಚಲನಚಿತ್ರೋದ್ಯಮ ಹಾಗೂ ನಿರ್ಮಾಪಕರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲಿ' ಎಂದು ಹಾರೈಸಿದರು.

ವೇದಿಕೆಯ ಕುರಿತು ಮಾಹಿತಿ ನೀಡಿದ ಅರವಿಂದ್ ವೆಂಕಟೇಶ್ ರೆಡ್ಡಿ, 'ಎವಿಆರ್ ಸಿನೆ ಮ್ಯಾಕ್ಸ್ ಕನ್ನಡಿಗರಿಂದ ಕನ್ನಡಿಗರಿಗಾಗಿ ಆರಂಭಿಸಿರುವ ಒಟಿಟಿ. ಈಗಾಗಲೇ 750ಕ್ಕೂ ಹೆಚ್ಚು ಸಿನಿಮಾಗಳ ಸಂಗ್ರಹವಿದೆ. ಸಿನಿಮಾಗಳ ಜತೆಗೆ ರಿಯಾಲಿಟಿ ಶೋಗಳು, ಕ್ರೀಡಾ ಹಾಗೂ ಸಂಗೀತ ಕಾರ್ಯಕ್ರಮಗಳು ಮತ್ತು ವಿವಿಧ ಕಾರ್ಯಕ್ರಮಗಳ ನೇರ ಪ್ರಸಾರಕ್ಕೂ ಆದ್ಯತೆ ನೀಡಲಿದ್ದೇವೆ' ಎಂದು ಹೇಳಿದರು. ನಿರ್ದೇಶಕ ರವಿ ಶ್ರೀವತ್ಸ ಅವರ 'ಗ್ಯಾಂಗ್ ಆಫ್ ಯುಕೆ' ಚಿತ್ರವನ್ನು ವೆಬ್ ಸಿರೀಸ್ ರೂಪದಲ್ಲಿ ವೇದಿಕೆಯಲ್ಲಿ ಬಿಡುಗಡೆ ಮಾಡಲಾಗುವುದು. ನಟ ಸೃಜನ್ ಲೋಕೇಶ್ 'ಸೃಜಾ ಟಾಕೀಸ್' ಕಾರ್ಯಕ್ರಮ ನಡೆಸಿಕೊಡಲಿದ್ದು, ಮಲೇಷ್ಯಾದಲ್ಲಿ ಕ್ರಿಕೆಟ್ ಟೂರ್ನಿಯನ್ನೂ ಆಯೋಜಿಸುವ ಯೋಜನೆ ಇದೆ ಎಂದು ಅವರು ತಿಳಿಸಿದರು.

'ಎವಿಆರ್ ಸಿನೆ ಮ್ಯಾಕ್ಸ್ ಮೂಲಕ ವಿಶ್ವದಾದ್ಯಂತ ಇರುವ ಕನ್ನಡಿಗರಿಗೆ ಗುಣಮಟ್ಟದ ಹಾಗೂ ಶುದ್ಧ ಮನರಂಜನೆಯನ್ನು ತಲುಪಿಸುವ ಗುರಿ ನಮ್ಮದು' ಎಂದು ಅವಿನಾಶ್ ದಿವಾಕರ್ ಶೃಂಗೇರಿ ಹೇಳಿದರು.

ಚಂದನ್ ಕುಮಾರ್

ಹೊಸರೂಪದಲ್ಲಿ 'ಫ್ಲರ್ಟ್'

ನಾಯಕ ನಟ ಚಂದನ್ ಕುಮಾರ್ ಮೊದಲ ಬಾರಿಗೆ ನಿರ್ದೇಶಿಸಿದ್ದ 'ಫ್ಲರ್ಟ್' ಸಿನಿಮಾ ಮರು ಸಂಕಲನದ ನಂತರ ಹೊಸರೂಪ ಪಡೆದಿದ್ದು, ಮರುಬಿಡುಗಡೆಗೆ ಸಿದ್ಧವಾಗಿದೆ.

ಈ ಚಿತ್ರದ ಬಿಡುಗಡೆ ವೇಳೆಗೆ ಹಲವು ಚಿತ್ರಗಳು ಬಿಡುಗಡೆ ಆಗಿದ್ದವು. ಹೀಗಾಗಿ, ಚಿತ್ರತಂಡ ಚಿತ್ರಮಂದಿರಗಳಿಂದ ಚಿತ್ರವನ್ನು ಹಿಂಪಡೆದಿತ್ತು. ನಂತರ ಮತ್ತೆ ಸಂಕಲನ ಮಾಡಿದ್ದು, 'ಎ ಪ್ಯೂರ್ ಡವ್ ಸ್ಟೋರಿ' ಅಡಿಬರಹವುಳ್ಳ ಚಿತ್ರ ಹೊಸರೂಪ ಪಡೆದುಕೊಂಡಿದೆ. ಸುದೀಪ್ ಅವರು ಫ್ರೆಂಡ್‌ಶಿಪ್ ಕುರಿತ 'ನೀ ನನ್ನ ಜೀವ...' ಹಾಡಿಗೆ ದನಿಯಾಗಿದ್ದಾರೆ. ಸುದೀಪ್ ಅವರೇ ಚಿತ್ರದ ಟ್ರೇಲರ್ ರಿಲೀಸ್ ಮಾಡಿದ್ದರು. ನಾಯಕ ನಟ ಚಂದನ್ ಕುಮಾರ್ ಅವರೇ ಎವರೆಸ್ಟ್ ಪಿಕ್ಚರ್ಸ್ ಬ್ಯಾನರ್‌ನಡಿ ಚಿತ್ರ ನಿರ್ಮಿಸಿದ್ದಾರೆ.

ಚಂದನ್ ಕುಮಾರ್, 'ಫ್ಲರ್ಟ್ ಎಂದರೆ ಚುಡಾಯಿಸುವುದು ಎಂದರ್ಥವಲ್ಲ. ಗಾಢವಾದ ಪ್ರೀತಿಯನ್ನೂ ಫ್ಲರ್ಟ್ ಎಂದೇ ಕರೆಯುತ್ತಾರೆ. ಚಿತ್ರದ ಎಲ್ಲ ಪಾತ್ರಗಳಿಗೂ ಮಹತ್ವವಿದೆ. ರೋಮ್ ಕಾಮ್ ಜತೆಗೆ ಸೈಕೋ ಕ್ಯಾರೆಕ್ಟರ್ ಕೂಡಾ ಇದೆ' ಎಂದರು.

ನಾಯಕಿಯರಾಗಿ ನಿಮಿಕಾ ರತ್ನಾಕರ್, ಅಕ್ಷತಾ ಬೋಪಣ್ಣ ಅಭಿನಯಿಸಿದ್ದು, ಅವಿನಾಶ್, ಗಿರೀಶ್ ಶಿವಣ್ಣ, ಶೃತಿ, ಸಾಧು ಕೋಕಿಲ, ವಿನಯ್ ಗೌಡ ತಾರಾಬಳಗದಲ್ಲಿದ್ದಾರೆ.

ನಕುಲ್ ಅಭಯಂಕರ್ ಒಂದು ಹಾಡಿಗೆ, ಜಸ್ಸಿ ಗಿಫ್ಟ್ ಮೂರು ಹಾಡುಗಳಿಗೆ ಸಂಗೀತ ಸಂಯೋಜನೆ ಜೊತೆಗೆ, ಹಿನ್ನೆಲೆ ಸಂಗೀತ ಒದಗಿಸಿದ್ದಾರೆ. ಎಚ್.ಸಿ.ವೇಣು ಅವರ ಛಾಯಾಗ್ರಹಣವಿದೆ.

ಖಲೀಫಾ

'ಖಲೀಫಾ' ಆ.20ಕ್ಕೆ ತೆರೆಗೆ

ಚಿನ್ನ ಕಳ್ಳ ಸಾಗಣೆ ಕುಖ್ಯಾತಿಯ ಅಮೀರ್ ಅಲಿ ವಹಿವಾಟು ಆಧರಿಸಿದ, ಸಸ್ಪೆನ್ಸ್ ಕಥಾ ಹಂದರದ ಮಲಯಾಳಂ ಚಿತ್ರ 'ಖಲೀಫಾ' ಆಗಸ್ಟ್ 20ರಂದು ತೆರೆಕಾಣಲಿದೆ.

ನಟ ಪೃಥ್ವಿರಾಜ್ ಸುಕುಮಾರನ್ ಅಮೀರ್ ಅಲಿ ಪಾತ್ರ ನಿಭಾಯಿಸಿದ್ದು, ವೈಶಾಖ ನಿರ್ದೇಶಿಸಿದ್ದಾರೆ. ಚಿತ್ರ ಬಿಡುಗಡೆಯ ದಿನಾಂಕವನ್ನು ನಟ ಪೃಥ್ವಿರಾಜ್ ಸುಕುಮಾರನ್ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಆಸ್ತಿ, ಅಧಿಕಾರ, ಪ್ರತೀಕಾರ ಎಂದು ಕಳ್ಳ ಸಾಗಣೆಯ ಜಗತ್ತಿನ ಕತ್ತಲರೂಪವನ್ನು ಚಿತ್ರ ಕಟ್ಟಿಕೊಡಲಿದೆ. ಟೊವಿನೊ ಥಾಮಸ್, ಕೃತಿ ಶೆಟ್ಟಿ, ಇಂದ್ರನ್ ಚಿತ್ರದ ತಾರಾಬಳಗದಲ್ಲಿದ್ದಾರೆ. ನೀಲ್ ನಿತಿನ್ ಮುಖೇಶ್ ಈ ಚಿತ್ರದ ಮೂಲಕ ಮಲಯಾಳಂ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ.

ಬಲರಾಮನಿಗೆ ಧ್ರುವ ಸರ್ಜಾ ಸಾಥ್

ಪ್ರಿಯಾ ಆನಂದ್

ಕೆ.ಎಂ.ಚೈತನ್ಯ ನಿರ್ದೇಶನದ 'ಬಲರಾಮನ ದಿನಗಳು' ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದೆ. ನಟ ಧ್ರುವ ಸರ್ಜಾ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಕೋರಿದರು. ವಿನೋದ್ ಪ್ರಭಾಕರ್ ನಟನೆಯ ಚಿತ್ರ ಜೂನ್ 26ರಂದು ತೆರೆಗೆ ಬರಲಿದೆ.

'ನಮ್ಮ ತಾತ ಬದುಕಿದ್ದಾಗ ಎಲ್ಲ ಖಳನಟರಿಗೂ ನಮ್ಮ ಮನೆ ಒಂದು ರೀತಿ ಅಡ್ಡವಾಗಿತ್ತಂತೆ. ವಜ್ರಮುನಿ, ಸುಧೀರ್, ತೂಗುದೀಪ, ಪ್ರಭಾಕರ್ ಎಲ್ಲರೂ ನಮ್ಮ ಮನೆಯಲ್ಲಿಯೇ ಸೇರುತ್ತಿದ್ದರು. ತಾತನ ತಲೆಮಾರಿನ ಬಳಿಕವೂ ಪ್ರಭಾಕರ್ ನಮ್ಮ ಕುಟುಂಬದೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಅದೇ ರೀತಿ ವಿನೋದ್ ಕೂಡ ನಮ್ಮ ಮನೆಯ ಸದಸ್ಯರಲ್ಲೊಬ್ಬರು. ಅವರ ಈ ಚಿತ್ರಕ್ಕೆ ಒಳಿತಾಗಲಿ' ಎಂದರು ಧ್ರುವ.

'ಕೆ.ಎಂ.ಚೈತನ್ಯ ಅಣ್ಣನ ಜತೆ ಕೆಲ ಸಿನಿಮಾ ಮಾಡಿದ್ದಾರೆ. ಕಾಲೇಜಿನಲ್ಲಿ ಓದುತ್ತಿದ್ದಾಗ 'ಆ ದಿನಗಳು' ಚಿತ್ರ ತೆರೆಗೆ ಬಂದಿತ್ತು. 'ಬಲರಾಮ'ನ ಟ್ರೇಲರ್ ಅದನ್ನು ನೆನಪಿಸುತ್ತಿದೆ. ಖಂಡಿತ ಇದು ಚೈತನ್ಯ ಅವರ ಸೊಗಡಿನ ಸಿನಿಮಾ. ಆ್ಯಕ್ಷನ್ ಸಿನಿಮಾವಾದರೂ ಕ್ಲಾಸ್, ಕಲ್ಟ್ ಘಮವಿದೆ. ಆದಷ್ಟು ಬೇಗ ಅವರು ನನಗೂ ಒಂದು ಸಿನಿಮಾ ಮಾಡಲಿ' ಎಂದು ಅವರು ಚಿತ್ರದ ಟ್ರೇಲರ್‌ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

80ರ ದಶಕದಲ್ಲಿ ನಡೆಯುವ ಬೆಂಗಳೂರಿನ ಭೂಗತ ಲೋಕದ ಕಥೆ ಚಿತ್ರದಲ್ಲಿದೆ. ರೌಡಿ ಜಯರಾಂ ಬಳಗದ ಸೆಣಸಾಟವೇ ಒಟ್ಟಾರೆ ಕಥೆ ಎಂಬುದು ಟ್ರೇಲರ್‌ನಿಂದ ಗೊತ್ತಾಗುತ್ತಿದೆ. ಆ್ಯಕ್ಷನ್, ರೌಡಿಸಂ ಕಥೆಯಾದರೂ ಎಲ್ಲಿಯೂ ಬೈಗುಳಗಳು ಕೇಳಿಸುವುದಿಲ್ಲ. ಎಲ್ಲ ಪಾತ್ರಗಳನ್ನು ನಿರ್ದೇಶಕರು ಬಹಳ ಗೌರವಯುತವಾಗಿಯೇ ಪೋಷಣೆ ಮಾಡಿರುವುದು ಟ್ರೇಲರ್‌ನಲ್ಲಿ ಎದ್ದು ಕಾಣುತ್ತದೆ.

ವಿನೋದ್ ಪ್ರಭಾಕರ್‌ಗೆ ಪ್ರಿಯಾ ಆನಂದ್ ಜೋಡಿಯಾಗಿದ್ದಾರೆ. ಅತುಲ್ ಕುಲಕರ್ಣಿ, ಶರತ್ ಲೋಹಿತಾಶ್ವ, ಆಶಿಶ್ ವಿದ್ಯಾರ್ಥಿ, ರಮೇಶ್ ಇಂದಿರಾ ಹಾಗೂ ಬಿಗ್‌ಬಾಸ್ ಖ್ಯಾತಿಯ ವಿನಯ್ ಗೌಡ ಸೇರಿ ಹಲವು ಕಲಾವಿದರು ಚಿತ್ರದಲ್ಲಿದ್ದಾರೆ. ಪದ್ಮಾವತಿ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಸಂತೋಷ್ ನಾರಾಯಣ್ ಸಂಗೀತ, ವೇಣು ಛಾಯಾಚಿತ್ರಗ್ರಹಣವಿದೆ.

ಚಿಟಿಕೆ ಸುದ್ದಿ

'ಡೈಪರ್ ದೇಣಿಗೆ' ಅಭಿಯಾನ ಆರಂಭ

ನವದೆಹಲಿ (ಪಿಟಿಐ): ನೀಟ್- ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ನವದೆಹಲಿಯ ಜಂತರ್- ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಕಾಕ್ರೋಚ್ ಜನತಾ ಪಕ್ಷದ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರು ಮಂಗಳವಾರ 'ಡೈಪರ್ ದೇಣಿಗೆ ಅಭಿಯಾನ'ವನ್ನು ಆರಂಭಿಸಿದ್ದಾರೆ.

ಹೊಸ ಅಭಿಯಾನದ ಕುರಿತಂತೆ 'ಎಕ್ಸ್' ಮೂಲಕ ಮನವಿ ಮಾಡಿದ್ದಾರೆ.

'ಪ್ರತಿಭಟನಾ ಸ್ಥಳಕ್ಕೆ ಡೈಪರ್‌ಗಳನ್ನು ತಂದು, ಪ್ರಧಾನ್ ರಾಜೀನಾಮೆಗೆ ಒತ್ತಾಯಿಸಬೇಕು. ಡೈಪರ್ ಎ ಡೇ- ಕೀಪ್ಸ್ ಲೀಕ್ಸ್ ಅವೇ' ಅಭಿಯಾನದಲ್ಲಿ ಕೈ ಜೋಡಿಸಿ. ಅದು ಶಿಕ್ಷಣ ಸಚಿವರಿಗೆ ತಲುಪುವುದನ್ನು ನಾವು ಖಚಿತಪಡಿಸುತ್ತೇವೆ' ಎಂದು ಸಿಜೆಪಿ ತಿಳಿಸಿದೆ.

ದೆಹಲಿ: ಬೆಂಕಿಗೆ 30 ಗುಡಿಸಲು ಆಹುತಿ

ನವದೆಹಲಿ (ಪಿಟಿಐ): 'ದೆಹಲಿಯ ತಕಿಯಾ ಕಾಲೆ ಖಾನ್ ಪ್ರದೇಶದಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಕನಿಷ್ಠ 30 ಗುಡಿಸಲುಗಳು ಸುಟ್ಟು ಹೋಗಿವೆ. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ' ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದರು.

ಮೌಲಾನಾ ಅಜಾದ್ ವೈದ್ಯಕೀಯ ಕಾಲೇಜಿನ ಹಿಂಬದಿಯಲ್ಲಿರುವ ಕೊಳೆಗೇರಿಯಲ್ಲಿ ಘಟನೆ ನಡೆದಿದೆ.

'ಈ ಪ್ರದೇಶದಿಂದ 12 ಜನರನ್ನು ಸ್ಥಳಾಂತರಿಸಲಾಗಿದೆ. ಸೋಮವಾರ ರಾತ್ರಿ 11.22ಕ್ಕೆ ಬೆಂಕಿ ಹೊತ್ತಿಕೊಂಡಿರುವ ಮಾಹಿತಿ ತಿಳಿಯಿತು. 24 ಅಗ್ನಿ ಶಾಮಕ ವಾಹನಗಳು 3 ಗಂಟೆ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿವೆ' ಎಂದರು.

ಹಳೆಯ ಪೀಠೋಪಕರಣ, ಮರದ ದಿಮ್ಮಿ ಮತ್ತು ಇತರ ವಸ್ತುಗಳನ್ನು ಸಂಗ್ರಹಿಸಿ ಇಟ್ಟಿದ್ದ ಸ್ಥಳದಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡಿತು. ಬಳಿಕ ಅದು ಹತ್ತಿರದ ಗುಡಿಸಲುಗಳಿಗೆ ವ್ಯಾಪಿಸಿದೆ. ಬೆಂಕಿ ಹೇಗೆ ಹೊತ್ತಿಕೊಂಡಿತು ಎಂಬುದರ ಬಗ್ಗೆ ಖಚಿತ ಮಾಹಿತಿ ಇಲ್ಲ ಎಂದು ಹೇಳಿದರು.

ಕೇಂದ್ರ ಸಚಿವ ಜಾರ್ಜ್ ಕುರಿಯನ್ ರಾಜೀನಾಮೆ

ನವದೆಹಲಿ (ಪಿಟಿಐ): ಕೇಂದ್ರ ಸಚಿವ, ಕೇರಳಂನ ಬಿಜೆಪಿ ಮುಖಂಡ ಜಾರ್ಜ್ ಕುರಿಯನ್ (65) ಅವರು ರಾಜ್ಯಸಭಾ ಸದಸ್ಯತ್ವದ ಅವಧಿ ಪೂರ್ಣಗೊಂಡ ಬೆನ್ನಲ್ಲೇ, ಸಂಪುಟಕ್ಕೆ ರಾಜೀನಾಮೆ ಮಂಗಳವಾರ ನೀಡಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕುರಿಯನ್ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ.

ಮಧ್ಯಪ್ರದೇಶದಿಂದ 2024ರಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದ ಕುರಿಯನ್, ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ಅಲ್ಪಸಂಖ್ಯಾತ ವ್ಯವಹಾರ, ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಖಾತೆಯ ರಾಜ್ಯ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಕ್ರಿಶ್ಚಿಯನ್ ಸಮುದಾಯದಿಂದ ಕೇಂದ್ರ ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿದ್ದ ಏಕೈಕ ಸದಸ್ಯರಾಗಿದ್ದರು.

ಕುರಿಯನ್ ಅವರ ರಾಜ್ಯಸಭಾ ಸದಸ್ಯತ್ವದ ಜೂನ್ 21ರಂದು ಪೂರ್ಣಗೊಂಡಿತ್ತು. ಬಿಜೆಪಿಯ ಕೇಂದ್ರ ನಾಯಕತ್ವವು ರಾಜ್ಯಸಭಾ ಚುನಾವಣೆಯಲ್ಲಿ ಅವರನ್ನು ಪುನರಾಯ್ಕೆ ಮಾಡದ ಕಾರಣ ರಾಜೀನಾಮೆ ಸಲ್ಲಿಸಿದ್ದಾರೆ.

---

111 ಜಿಲ್ಲೆಗಳಲ್ಲಿ ಬೆಳೆ ಹಾನಿ ತೀವ್ರ

ಎಲ್ ನಿನೊ ಪರಿಣಾಮ ಶೇ 43ರಷ್ಟು ಮಳೆ ಕೊರತೆ: ಕೇಂದ್ರ ಕೃಷಿ ಸಚಿವ ಚೌಹಾಣ್

ನವದೆಹಲಿ (ಪಿಟಿಐ): 'ಎಲ್ ನಿನೊ ಪರಿಣಾಮದಿಂದ ಶೇಕಡ 43ರಷ್ಟು ಮಳೆ ಕೊರತೆ ಆಗಲಿದ್ದು, ದೇಶದ 111 ಜಿಲ್ಲೆಗಳಲ್ಲಿ ಮುಂಗಾರು ಹಂಗಾಮಿಗೆ ಬೆಳೆಹಾನಿ ಪ್ರಮಾಣ ತೀವ್ರವಾಗಿರಲಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು.

'ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಗುಜರಾತ್, ಉತ್ತರ ಪ್ರದೇಶ, ರಾಜಸ್ಥಾನ, ಬಿಹಾರ, ಜಾರ್ಖಂಡ್, ತೆಲಂಗಾಣ, ಆಂಧ್ರ ಪ್ರದೇಶ, ಒಡಿಶಾ ರಾಜ್ಯಗಳ ಒಟ್ಟು 315 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಬೀಳಲಿದೆ ಎಂದು ಸರ್ಕಾರ ಗುರುತಿಸಿದೆ' ಎಂದು ಮಂಗಳವಾರ ನಡೆದ ಮುಂಗಾರು ಪ್ರಗತಿ ಪರಿಶೀಲನಾ ಸಭೆಯ ಬಳಿಕ ಅವರು ತಿಳಿಸಿದರು.

'ಶೇ 25ಕ್ಕಿಂತ ಕಡಿಮೆ ನೀರಾವರಿ ಪ್ರದೇಶಗಳನ್ನು ಹೊಂದಿರುವ ಮಹಾರಾಷ್ಟ್ರದ 20 ಜಿಲ್ಲೆಗಳು ಸೇರಿ, ಒಟ್ಟು 111 ಜಿಲ್ಲೆಗಳಲ್ಲಿ ಪರಿಣಾಮ ತೀವ್ರವಾಗಿರಲಿದೆ. ಶೇ 25ರಿಂದ ಶೇ 50ರಷ್ಟು ನೀರಾವರಿ ಪ್ರದೇಶವನ್ನು ಹೊಂದಿರುವ 76 ಜಿಲ್ಲೆಗಳು ಮಧ್ಯಮ ಪರಿಣಾಮ ಎದುರಿಸಲಿವೆ. ಸಾಕಷ್ಟು ಅಣೆಕಟ್ಟು ಮತ್ತು ನೀರಾವರಿ ಮೂಲಸೌಕರ್ಯಗಳನ್ನು ಹೊಂದಿರುವ 128 ಜಿಲ್ಲೆಗಳು ಕನಿಷ್ಠ ಪರಿಣಾಮ ಎದುರಿಸಲಿವೆ' ಎಂದು ಸಚಿವಾಲಯವು ವರ್ಗೀಕರಿಸಿದೆ.

ಮುಖ್ಯಾಂಶಗಳು

- ಜುಲೈ 2ರವರೆಗೂ ದುರ್ಬಲ ಮುಂಗಾರು ಮುಂದುವರಿಕೆ
- ಮುಂಗಾರು ಬಿತ್ತನೆಗೆ ರೈತರಿಗೆ ಕಡಿಮೆ ಸಮಯ
- ಜೂನ್ 22ರವರೆಗೆ ಶೇ 10ರಷ್ಟು ಮಾತ್ರ ಬಿತ್ತನೆ

ಪರ್ಯಾಯ ಬೆಳೆಗಳನ್ನು ಬೆಳೆಯುವಂತೆ ರೈತರಿಗೆ ಸಲಹೆ ನೀಡಬೇಕು. ಕೃಷಿ ಜಮೀನುಗಳು ಖಾಲಿ ಉಳಿಯದಂತೆ ನೋಡಿಕೊಳ್ಳಬೇಕು. ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ಲಭ್ಯತೆ ಸಾಕಷ್ಟಿದೆ

ಶಿವರಾಜ್ ಸಿಂಗ್ ಚೌಹಾಣ್, ಕೇಂದ್ರ ಕೃಷಿ ಸಚಿವ

'ಜಲಾಶಯಗಳ ನೀರಿನಮಟ್ಟ ಸದ್ಯಕ್ಕೆ ಕಳೆದ ವರ್ಷಕ್ಕಿಂತಲೂ ಹೆಚ್ಚಿದೆ, ಆದರೆ ಕುಸಿಯುತ್ತಿದೆ. ನೀರನ್ನು ವಿವೇಚನೆಯಿಂದ ಬಳಸಬೇಕು ಮತ್ತು ವಿಬಿ ಜಿರಾಮ್ ಜಿ ಅಡಿ ಕೊಳ, ಕಾಲುವೆ, ಕೃಷಿ ಹೊಂಡಗಳು, ಚೆಕ್ ಡ್ಯಾಮ್‌ಗಳನ್ನು ಸ್ವಚ್ಛಗೊಳಿಸುವಂತೆ ರಾಜ್ಯ ಸರ್ಕಾರಗಳನ್ನು ಕೋರಿದೆ' ಎಂದು ಸಚಿವರು ತಿಳಿಸಿದರು.

'ಗುರುತಿಸಲಾದ ರಾಜ್ಯಗಳಲ್ಲಿ ಬೆಳೆ ವಿಮೆ ಯೋಜನೆ ಮತ್ತು ಕಿಸಾನ್ ಕ್ರೆಡಿಟ್ ಕಾರ್ಡ್ಸ್ ಅಡಿ ವ್ಯಾಪಕವಾಗಿ ನೋಂದಣಿ ಮಾಡಿಸಬೇಕು. ಸಂದೇಶಗಳು, ವಾಟ್ಸ್‌ಆ್ಯಪ್, ದೂರವಾಣಿ ಕರೆ ಮತ್ತಿತರ ಮಾಧ್ಯಮಗಳ ಸಹಾಯದಿಂದ ಕೃಷಿಕರಿಗೆ ಸಕಾಲದಲ್ಲಿ ಸಲಹೆಗಳನ್ನು ಬಿತ್ತರಿಸಬೇಕು ಎಂದು 731 ಕೃಷಿ ವಿಜ್ಞಾನ ಕೇಂದ್ರಗಳಿಗೆ ಹೇಳಲಾಗಿದೆ' ಎಂದರು.

'ಮುನ್ಸೂಚನೆಗಳು ಸಾಮಾನ್ಯ ಪರಿಸ್ಥಿತಿಯನ್ನು ಆಧರಿಸಿವೆ. ಆದರೆ, ಕೃಷಿ ಉತ್ಪಾದನೆ ಕುಸಿಯದಂತೆ ಖಚಿತಪಡಿಸಲು ಕ್ರಮ ಕೈಗೊಳ್ಳುತ್ತೇವೆ' ಎಂದು ಅವರು ಭರವಸೆ ನೀಡಿದರು.

ಕಳೆದ ವರ್ಷ ಜೂನ್ 22ರ ವೇಳೆಗೆ 1.17 ಕೋಟಿ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿತ್ತು. ಈ ಬಾರಿ ಅದಕ್ಕಿಂತ ಸ್ವಲ್ಪ ಹೆಚ್ಚು, ಅಂದರೆ 1.19 ಕೋಟಿ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿದೆ. ಸೋಯಾಬೀನ್ ಹೊರತುಪಡಿಸಿ ಉಳಿದ ಬೆಳೆಗಳ ಬಿತ್ತನೆ ಕಳೆದ ಮುಂಗಾರು ಋತುವಿಗಿಂತ ಹೆಚ್ಚಿದೆ.

ಪರ್ಯಾಯ ಕ್ರಮಗಳು

ಮಳೆ ಪ್ರಮಾಣಕ್ಕೆ ಸೂಕ್ತವಾಗುವ ಪರ್ಯಾಯ ಬೆಳೆ ಶಿಫಾರಸು ಸೇರಿದಂತೆ ಆಯಾ ರಾಜ್ಯಗಳಿಗೆ ಅನುಗುಣವಾಗುವ ತುರ್ತು ಯೋಜನೆಗಳನ್ನು ಸಚಿವಾಲಯ ರೂಪಿಸಿದೆ.

ಏಕ ಬೆಳೆ ಪದ್ಧತಿಯನ್ನು ಅವಲಂಬಿಸುವ ಬದಲು ಕಡಿಮೆ ನೀರು–ಕಡಿಮೆ ಅವಧಿಯಲ್ಲಿ ಬೆಳೆಯಬಹುದಾದ, ಪ್ರತಿಕೂಲ ಹವಾಮಾನವನ್ನು ತಾಳಿಕೊಳ್ಳುವ ತಳಿಯ ದ್ವಿದಳ ಧಾನ್ಯಗಳು, ಎಣ್ಣೆಬೀಜಗಳು, ಸಿರಿಧಾನ್ಯಗಳನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹಿಸುವಂತೆ ರಾಜ್ಯಗಳಿಗೆ ನಿರ್ದೇಶನ ನೀಡಲಾಗಿದೆ.

ಕ್ಷಣಕ್ಷಣದ ನಿಗಾ ಮತ್ತು ಸಲಹೆಗಾಗಿ ಎಲ್ ನಿನೊ ನಿಗಾ ಘಟಕ ಮತ್ತು ಬೆಳೆ ಹವಾಮಾನ ವಿಚಕ್ಷಣಾ ಗುಂಪುಗಳನ್ನು ರಚಿಸಲಾಗಿದೆ.

ಪ್ರಾಥಮಿಕ ತನಿಖಾ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ: ಅಯೋಧ್ಯೆಯ ರಾಮ ಮಂದಿರದಲ್ಲಿನ ಕಾಣಿಕೆ ಕಳವು ಆರೋಪದ ಕುರಿತು ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ), ಪ್ರಾಥಮಿಕ ತನಿಖಾ ವರದಿಯನ್ನು ಉತ್ತರ ಪ್ರದೇಶ ಸರ್ಕಾರಕ್ಕೆ ಮಂಗಳವಾರ ಸಲ್ಲಿಸಿದೆ.

'ಮೂವರು ಸದಸ್ಯರಿರುವ ಎಸ್‌ಐಟಿ, 150 ಪುಟಗಳ ವರದಿಯನ್ನು ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಂಜಯ್ ಪ್ರಸಾದ್ ಅವರಿಗೆ ಸಲ್ಲಿಸಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ತನಿಖೆಯು ಇನ್ನೂ ಪ್ರಗತಿಯಲ್ಲಿದ್ದು, ಮುಂದಿನ 10–15 ದಿನಗಳಲ್ಲಿ ಅಂತಿಮ ವರದಿ ಸಲ್ಲಿಸುವ ಸಾಧ್ಯತೆ ಇದೆ. ವರದಿಯ ವಿವರಗಳನ್ನು ಈಗಲೇ ಮಾಧ್ಯಮಗಳಿಗೆ ಹಂಚಿಕೊಳ್ಳುವುದು ಸಾಧ್ಯವಿಲ್ಲ' ಎಂದು ಲಖನೌ ವಿಭಾಗೀಯ ಆಯುಕ್ತ ವಿಜಯ್ ವಿಶ್ವಾಸ್ ಪಂತ್ ಅವರು ಮಾಹಿತಿ ನಿಡಿದ್ದಾರೆ.

'ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ, ದೇಣಿಗೆ ಸಂಗ್ರಹ ಮತ್ತು ಎಣಿಕೆ ಹಾಗೂ ಉಸ್ತುವಾರಿ ವ್ಯವಸ್ಥೆಗೆ ಸಂಬಂಧಿಸಿದ ವಿವರಗಳು ವರದಿಯಲ್ಲಿವೆ. ರಾಮಮಂದಿರ ಟ್ರಸ್ಟ್ ಪದಾಧಿಕಾರಿಗಳ ಅಜಾಗರೂಕತೆಯನ್ನು ಗುರುತಿಸಲಾಗಿದೆ. ಪದಾಧಿಕಾರಿಗಳ ಸಂಬಂಧಿಕರನ್ನು ಟ್ರಸ್ಟ್‌ಗೆ ನೇಮಕ ಮಾಡಿರುವ ಕುರಿತೂ ಪ್ರಶ್ನೆಗಳನ್ನು ಎತ್ತಲಾಗಿದೆ. ಕಾಣಿಕೆ ಎಣಿಕೆಯಲ್ಲಿ ತೊಡಗಿಸಿಕೊಂಡಿದ್ದ 40 ಸಿಬ್ಬಂದಿಯನ್ನು ತೆಗೆದು, ಬೇರೆ ಕೆಲಸಗಳಿಗೆ ನಿಯೋಜಿಸಲಾಗಿರುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಎಸ್‌ಐಟಿ ಶಿಫಾರಸುಗಳು

- ಕಾಣಿಕೆ ಎಣಿಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರೂ ಸೇರಿ, ಅಂದಾಜು 24 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸುವುದು
- ನಿತ್ಯವೂ ಸ್ವೀಕರಿಸುವ ಕಾಣಿಕೆಯ ವಿವರವನ್ನು ದಾಖಲೆಯಲ್ಲಿ ನಮೂದಿಸುವುದು
- ಕಾಣಿಕೆಗೆ ಸಂಬಂಧಿಸಿ ಪ್ರತಿ ವಾರವೂ ಲೆಕ್ಕಪರಿಶೋಧನೆ ಮಾಡುವುದು
- ಟ್ರಸ್ಟ್ ಪುನರ್ ರಚನೆ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಕ ಮಾಡುವುದು

ತಿರುಪರನ್‌ಕುಂದ್ರಂ ದೀಪ: 'ಸುಪ್ರೀಂ'ಗೆ ಮೊರೆ

ನವದೆಹಲಿ (ಪಿಟಿಐ): ಮದುರೆ ಸಮೀಪದ ತಿರುಪರನ್‌ಕುಂದ್ರಂ ಬೆಟ್ಟದ ದೀಪ ಸ್ತಂಭದಲ್ಲಿ ದೀಪ ಹಚ್ಚಲು ಮದ್ರಾಸ್ ಹೈಕೋರ್ಟ್ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೊರೆಹೋಗಿದೆ.

ಜೂನ್ 11ರಂದು ಸರ್ಕಾರಿ ವಕೀಲ ಬಿ. ಕರುಣಾಕರನ್ ಮೂಲಕ ಸುಪ್ರೀಂ ಕೋರ್ಟ್‌ಗೆ ಸರ್ಕಾರ ಅರ್ಜಿ ಸಲ್ಲಿಸಿದೆ.

ಹಿಂದಿನ ಡಿಎಂಕೆ ಸರ್ಕಾರ, ತಿರುಪರನ್‌ಕುಂದ್ರಂ ಬೆಟ್ಟದಲ್ಲಿರುವ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಆಡಳಿತ ಮಂಡಳಿ ಮತ್ತು ಹಜರತ್ ಸುಲ್ತಾನ್ ಸಿಕ್ಕಂದರ್ ಬಾದುಷಾ ಅವುಲಿಯಾ ದರ್ಗಾ ಜತೆಗೂಡಿ, ದೀಪ ಹಚ್ಚಲು ಅನುಮತಿ ನೀಡಿದ್ದ ಏಕಸದಸ್ಯ ಪೀಠದ ಆದೇಶದ ವಿರುದ್ಧ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ದೀಪ ಹಚ್ಚಲು ಅವಕಾಶ ನೀಡುವುದು ಕೋಮು ಅಶಾಂತಿಗೆ ಕಾರಣ ಆಗಬಹುದು ಎಂದು ಆತಂಕ ವ್ಯಕ್ತಪಡಿಸಿತ್ತು.

ಆದರೆ, 'ದೀಪ ಹಚ್ಚಲು ಅವಕಾಶ ನೀಡುವುದರಿಂದ ಸಾರ್ವಜನಿಕ ಶಾಂತಿಗೆ ಭಂಗ ಉಂಟಾಗುತ್ತದೆ ಎಂಬ ರಾಜ್ಯ ಸರ್ಕಾರದ ಭಯವು ಹಾಸ್ಯಾಸ್ಪದ ಮತ್ತು ನಂಬಲು ಆಗುವುದಿಲ್ಲ. ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಇರುವ ಆತಂಕವು, ರಾಜ್ಯ ಸರ್ಕಾರ ತನ್ನ ಅನುಕೂಲಕ್ಕಾಗಿ ತಾನೇ ಸೃಷ್ಟಿಸಿದ 'ಕಾಲ್ಪನಿಕ ಭೂತ' ಅಲ್ಲದೇ ಬೇರೇನೂ ಅಲ್ಲ' ಎಂದಿದ್ದ ಹೈಕೋರ್ಟ್, ಏಕಸದಸ್ಯ ಪೀಠ ನೀಡಿದ್ದ ತೀರ್ಪನ್ನು ಎತ್ತಿ ಹಿಡಿದಿತ್ತು.

ಬೆಟ್ಟದ ದೀಪ ಸ್ತಂಭದಲ್ಲಿ ಕಾರ್ತಿಕ ದೀಪೋತ್ಸವದ ಸಂದರ್ಭದಲ್ಲಿ ದೀಪ ಹಚ್ಚಬಹುದು. ದೀಪಸ್ತಂಭ ಇರುವ ಜಾಗವು ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನಕ್ಕೆ ಸೇರಿದೆ ಎಂದು ಮದ್ರಾಸ್ ಹೈಕೋರ್ಟ್‌ನ ಮದುರೆ ಪೀಠವು ಜನವರಿ 6ರಂದು ತೀರ್ಪು ನೀಡಿತ್ತು.

'ನೀಟ್' ಬರೆದ ಯುವತಿ ನಾಪತ್ತೆ: ಶವವಾಗಿ ಪತ್ತೆ

ಖರಗೋನ್ (ಮಧ್ಯ ಪ್ರದೇಶ) (ಪಿಟಿಐ): ನೀಟ್ ಮರು ಪರೀಕ್ಷೆ ಬರೆದ ದಿನವೇ (ಜೂನ್ 21) ನಾಪತ್ತೆಯಾಗಿದ್ದ ಯುವತಿಯೊಬ್ಬರು ಇಲ್ಲಿನ ನರ್ಮದಾ ನದಿ ದಂಡೆಯ ಮೇಲೆ ಸೋಮವಾರ ಶವವಾಗಿ ಪತ್ತೆಯಾಗಿದ್ದಾರೆ.

ಇಂದೋರ್‌ನ ಲಸೂಡಿಯಾದ ತಲಾವಲೀ ಚಾಂದಾ ಪ್ರದೇಶದ ನಿವಾಸಿ ನಿಕ್ಕಿ ಯಾದವ್ (21) ಮೃತರು. ಇದು ಕೊಲೆ ಎಂದು ಅವರ ಕುಟುಂಬದವರು ಶಂಕೆ ವ್ಯಕ್ತಪಡಿಸಿದ್ದಾರೆ.

'ನಿಕ್ಕಿ ಅವರು ತಮ್ಮನ ಜೊತೆ ಪರೀಕ್ಷಾ ಕೇಂದ್ರಕ್ಕೆ ತೆರಳಿದ್ದರು. ಪರೀಕ್ಷೆ ಮುಗಿದ ಬಳಿಕ, ತನ್ನ ಮೊಬೈಲ್ ಚಾರ್ಜ್ ಮುಗಿದಿದೆ. ಬೇಗನೆ ಮನೆಗೆ ತಲುಪುತ್ತೇನೆ' ಎಂದು ಬೇರೊಬ್ಬರ ಮೊಬೈಲ್‌ನಿಂದ ತಾಯಿಗೆ ಕರೆ ಮಾಡಿದ್ದರು. ತಡರಾತ್ರಿಯಾದರೂ ಮನೆಗೆ ಬಾರದ ಕಾರಣ ಕುಟುಂಬದವರು ಹುಡುಕಾಟ ಆರಂಭಿಸಿದ್ದರು. ಸೋಮವಾರ ಬೆಳಿಗ್ಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಒತ್ತಡದಲ್ಲಿದ್ದ ವಿದ್ಯಾರ್ಥಿನಿ ಸಾವು- ಮಹಾರಾಜಗಂಜ್ (ಉತ್ತರ ಪ್ರದೇಶ): ನೀಟ್ ಪರೀಕ್ಷೆಗೆ ಹಾಜರಾದ ಬಳಿಕ ಒತ್ತಡದಲ್ಲಿದ್ದ ವಿದ್ಯಾರ್ಥಿನಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಚೌಪರಿಯಾ ಕಂಚನಪುರದ ನಿವಾಸಿ, ಚಂಚಲ್ ಭಾರ್ತಿ (19) ಮೃತರು.

'ಮನೆಯಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದ ಅವರನ್ನು ಕುಟುಂಬದವರು ಆಸ್ಪತ್ರೆಗೆ ಕರೆತಂದಿದ್ದರು. ಅಷ್ಟೊತ್ತಿಗಾಗಲೇ ಅವರು ಮೃತಪಟ್ಟಿದ್ದರು ಎಂದು ವೈದ್ಯರು ಘೋಷಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಚಂಚಲ್ ಅವರು ಬಿದ್ದಿದ್ದ ಜಾಗದಲ್ಲಿ ನೀಟ್ ಪ್ರಶ್ನೆ ಪತ್ರಿಕೆಯನ್ನು ವಶಪಡಿಸಿಕೊಂಡಿದ್ದು, ಅದರ ಮೇಲೆ, 'ನಾನು ಏನನ್ನೂ ಮಾಡಲಾರೆ, ಸಹೋದರ' ಎಂದು ಬರೆದಿತ್ತು' ಎಂದು ಅವರು ಮಾಹಿತಿ ನೀಡಿದ್ದಾರೆ.

ಲಖನೌ ಅಗ್ನಿ ದುರಂತ: ಕಟ್ಟಡ ಕೆಡವಲು 2016ರಲ್ಲೇ ಆದೇಶಿಸಿದ್ದ ಎಲ್‌ಡಿಎ

ವಸತಿ ಕಟ್ಟಡದಲ್ಲಿ ವಾಣಿಜ್ಯ ಚಟುವಟಿಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ: ಇಲ್ಲಿನ ಅಲಿಗಂಜ್ ಪ್ರದೇಶದಲ್ಲಿ ಸೋಮವಾರ ಅಗ್ನಿ ಅವಘಡ ಸಂಭವಿಸಿದ ಕಟ್ಟಡವು 'ಅನಧಿಕೃತ'ವಾಗಿದ್ದು, 2016ರಲ್ಲಿ ಅದನ್ನು ಕೆಡವಲು ಆದೇಶ ಹೊರಡಿಸಲಾಗಿತ್ತು.

ಆದರೆ ಕಟ್ಟಡದ ಮಾಲೀಕರು ಲಖನೌ ಅಭಿವೃದ್ಧಿ ಪ್ರಾಧಿಕಾರದ (ಎಲ್‌ಡಿಎ) ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಈ ಆದೇಶವನ್ನು ರದ್ದು ಮಾಡಿಸಿಕೊಂಡಿದ್ದರು ಎಂದು ಆರೋಪಿಸಲಾಗಿದೆ.

ದುರಂತದ ಬೆನ್ನಲ್ಲೇ ಎಲ್‌ಡಿಎ, ಕಟ್ಟಡ ಕೆಡವಲು ಮತ್ತೊಮ್ಮೆ ಮಾಲೀಕರಿಗೆ ನೋಟಿಸ್ ಜಾರಿಗೊಳಿಸಿದ್ದು 15 ದಿನಗಳಲ್ಲಿ ಉತ್ತರಿಸುವಂತೆ ಸೂಚಿಸಿದೆ. 'ಆ ಬಳಿಕ ಕಟ್ಟಡ ಕೆಡವಲಾಗುವುದು' ಎಂದು ಎಲ್‌ಡಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಟ್ಟಡವು ವಸತಿಯ ಉದ್ದೇಶಕ್ಕೆ ಬಳಸುವ ಪರವಾನಗಿಯನ್ನು ಮಾತ್ರ ಹೊಂದಿತ್ತು. ಆದರೆ, ಮಾಲೀಕರು ನಿಯಮಗಳನ್ನು ಉಲ್ಲಂಘಿಸಿ ವಾಣಿಜ್ಯ ಚಟುವಟಿಕೆಗಳಿಗೆ ಬಳಸಿಕೊಂಡಿದ್ದರು.

'ಕಟ್ಟಡದಲ್ಲಿ ಸಾಕಷ್ಟು ಅಗ್ನಿ ಸುರಕ್ಷತಾ ವ್ಯವಸ್ಥೆ ಅಳವಡಿಸಿರಲಿಲ್ಲ. ಯಾವುದೇ ಅಗ್ನಿಶಾಮಕ ಉಪಕರಣಗಳನ್ನು ಇಟ್ಟಿರಲಿಲ್ಲ. ಇಡೀ ಕಟ್ಟಡಕ್ಕೆ ಒಂದೇ ಪ್ರವೇಶ ಮತ್ತು ನಿರ್ಗಮನ ದ್ವಾರ ಇತ್ತು. ತುರ್ತು ನಿರ್ಗಮನ ದ್ವಾರ ಇರಲಿಲ್ಲ' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಉಷಾ ಮೆಹ್ತಾ ರಸ್ತೆಯಲ್ಲಿರುವ ಮೂರು ಅಂತಸ್ತಿನ ವಾಣಿಜ್ಯ ಕಟ್ಟಡದಲ್ಲಿ ಸೋಮವಾರ ಮಧ್ಯಾಹ್ನ ಸಂಭವಿಸಿದ ಅಗ್ನಿ ದುರಂತದಲ್ಲಿ ವಿದ್ಯಾರ್ಥಿಗಳು ಸೇರಿದಂತೆ 15 ಮಂದಿ ಮೃತಪಟ್ಟು, ಏಳು ಜನರು ಗಾಯಗೊಂಡಿದ್ದರು. ಕಟ್ಟಡದಲ್ಲಿದ್ದ ಅನಿಮೇಷನ್ ಕೇಂದ್ರದಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳು ದುರಂತಕ್ಕೆ ಬಲಿಯಾದವರಲ್ಲಿ ಸೇರಿದ್ದಾರೆ.

ಮೃತರನ್ನು ಸಾಗರ್, ನೀಲೇಶ್, ಅನಾಮಿಕಾ, ಸನ್ಯಮ್, ಅನುಷ್ಕಾ, ಸುಖಮನಿ, ಆದಿತ್ಯ ಶ್ರೀವಾಸ್ತವ, ಜ್ಯೋತಿ, ಭವಿಷ್ಯಾ, ಅಬ್ದುಲ್ ರಹ್ಮಾನ್, ಸೂರಜ್, ಭಜನ್, ಜಯನೀಲ್ ಚಕ್ರವರ್ತಿ, ಮೊಹಮ್ಮದ್ ಅಮ್ಮಾರ್ ಮತ್ತು ಸುಮಲ್ಯಾ ಎಂದು ಗುರುತಿಸಲಾಗಿದೆ.

ಸಿ.ಎಂ ಕಾರ್ಯಕ್ರಮ ರದ್ದು: ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮಂಗಳವಾರದ ತಮ್ಮ ಎಲ್ಲ ನಿಗದಿತ ಕಾರ್ಯಕ್ರಮಗಳನ್ನು ರದ್ದುಗೊಳಿಸಿದರು. ನಿಗದಿಯಂತೆ ಮುಖ್ಯಮಂತ್ರಿ ಅವರು ಹಾಥರಸ್ ಮತ್ತು ಆಗ್ರಾಕ್ಕೆ ಭೇಟಿ ನೀಡಬೇಕಿತ್ತು.

ಉತ್ತರ ಪ್ರದೇಶದ ಆಡಳಿತಾರೂಢ ಬಿಜೆಪಿ ಕೂಡ ಮಂಗಳವಾರ ನಿಗದಿಯಾಗಿದ್ದ ತನ್ನ ಎಲ್ಲಾ ಸಂಘಟನಾ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿತು.

ಎಸ್‌ಐಟಿ ತನಿಖೆ ಆರಂಭ

ಅಗ್ನಿ ಅವಘಡ ಘಟನೆಯ ತನಿಖೆಗೆ ರಚಿಸಲಾದ ಇಬ್ಬರು ಸದಸ್ಯರ ವಿಶೇಷ ತನಿಖಾ ತಂಡವು (ಎಸ್‌ಐಟಿ) ಮಂಗಳವಾರ ಬೆಳಿಗ್ಗೆ ಸ್ಥಳಕ್ಕೆ ಭೇಟಿ ನೀಡಿ, ತನಿಖೆ ಆರಂಭಿಸಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ನಿರ್ದೇಶನದಂತೆ ರಚಿಸಲಾಗಿರುವ ಎಸ್‌ಐಟಿಯಲ್ಲಿ ಪ್ರವಾಸೋದ್ಯಮ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಮೃತ್ ಅಭಿಜಾತ್ ಮತ್ತು ಲಖನೌ ವಲಯದ ಎಡಿಜಿಪಿ ಪ್ರವೀಣ್ ಕುಮಾರ್ ಇದ್ದಾರೆ.

'ಸ್ಥಳ ಪರಿಶೀಲನೆಗೆ ಇಲ್ಲಿಗೆ ಬಂದಿದ್ದು, ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಿ, ನಿಗದಿತ ಸಮಯದೊಳಗೆ ವರದಿ ಸಲ್ಲಿಸುತ್ತೇವೆ' ಎಂದು ಪ್ರವೀಣ್ ಕುಮಾರ್ ಅವರು ಸುದ್ದಿಗಾರರಿಗೆ ತಿಳಿಸಿದರು. ಏಳು ದಿನಗಳಲ್ಲಿ ವರದಿ ಸಲ್ಲಿಸುವಂತೆ ಎಸ್‌ಐಟಿಗೆ ನಿರ್ದೇಶಿಸಲಾಗಿದೆ.

ಎಸ್‌ಐಟಿ ತಂಡ ಬರುವ ಮೊದಲು, ಆರು ಸದಸ್ಯರ ವಿಧಿವಿಜ್ಞಾನ ಪ್ರಯೋಗಾಲಯ ತಜ್ಞರು ದುರಂತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಪ್ರಾರಂಭಿಸಿದ್ದರು. ಬೆಂಕಿಗೆ ಏನು ಕಾರಣ ಮತ್ತು ಯಾರ ಲೋಪದಿಂದ ದುರಂತ ಸಂಭವಿಸಿದೆ ಎಂಬುದನ್ನು ಪತ್ತೆಹಚ್ಚುವುದು ತನಿಖೆಯ ಗುರಿಯಾಗಿದೆ.

ದುರಂತದಲ್ಲಿ ಮೃತಪಟ್ಟ ವ್ಯಕ್ತಿಯೊಬ್ಬರ ಕುಟುಂಬದ ಸದಸ್ಯರು ದುಃಖಿಸಿದರು —ಪಿಟಿಐ ಚಿತ್ರ

ಕಟ್ಟಡದ ಮಾಲೀಕನ ಬಂಧನ

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ. ಕಟ್ಟಡದ ಮಾಲೀಕ ವಿಜೇಂದ್ರ ಪ್ರಸಾದ್ ಶುಕ್ಲಾ (62), ಅನಿಮೇಷನ್ ಸೆಂಟರ್ ನಿರ್ವಾಹಕರಾದ ತುಷಾರ್ ಕೃಷ್ಣ ಜೈಸ್ವಾಲ್ (31) ಮತ್ತು ಸುರೇಶ್ ಕುಮಾರ್ ಸಾಹೂ ಹಾಗೂ ಸಾಕು ಪ್ರಾಣಿಗಳ ಮಾರಾಟ ಮಳಿಗೆಯ ಮಾಲೀಕ ರಾಮಕೃಷ್ಣ ಉಪಾಧ್ಯಾಯ (43) ಅವರನ್ನು ಬಂಧಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಲಖನೌ ವಿದ್ಯುತ್ ನಿಗಮ, ಅಗ್ನಿಶಾಮಕ ದಳ ಮತ್ತು ಲಖನೌ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಸೇರಿದಂತೆ ನಾಲ್ವರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ನಕಲಿ ಪ್ರಶ್ನೆಪತ್ರಿಕೆ ಮಾರಾಟ: ಬಂಧನ

ಇಂದೋರ್ (ಪಿಟಿಐ): ಕೃತಕ ಬುದ್ಧಿಮತ್ತೆ ಸಹಾಯದಿಂದ ನೀಟ್ ಪರೀಕ್ಷೆಯ ನಕಲಿ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿ, ಸಾಮಾಜಿಕ ಜಾಲತಾಣಗಳ ಮೂಲಕ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಪ್ರಥಮ ವರ್ಷದ ಕಾನೂನು ವಿದ್ಯಾರ್ಥಿಯೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ತನಗೆ ಮೂಲ ಪ್ರಶ್ನೆಪತ್ರಿಕೆ ಸಿಕ್ಕಿದೆ ಎಂದು ಹೇಳಿಕೊಂಡು ಕನಿಷ್ಠ 25 ಜನರಿಂದ ₹100ರಿಂದ ₹200 ಸಂಗ್ರಹಿಸಿದ್ದ ಆರೋಪದಲ್ಲಿ ಕನಾಡಿಯಾ ಪ್ರದೇಶದ ನಿವಾಸಿ ಅಕ್ಷಯ್ ಮಾಳವೀಯ ಎಂಬವರನ್ನು ಸೋಮವಾರ ಬಂಧಿಸಲಾಗಿದೆ. ಅವರು ಚಾಟ್‌ಜಿಪಿಟಿ ಮೂಲಕ ಪ್ರಶ್ನೆಪತ್ರಿಕೆ ಸೃಷ್ಟಿಸಿ, ಇನ್‌ಸ್ಟಾಗ್ರಾಮ್ ಮೂಲಕ ಹಂಚಿಕೊಂಡಿದ್ದರು. ಆದರೆ ಅದು ಮೂಲ ಪತ್ರಿಕೆಗಿಂತ ಭಿನ್ನವಾಗಿತ್ತು' ಎಂದು ತಿಳಿಸಿದ್ದಾರೆ.

ಮಮತಾ ಅವರೇ ಅಧ್ಯಕ್ಷೆ: ಟಿಎಂಸಿ

ನವದೆಹಲಿ (ಪಿಟಿಐ): ಟಿಎಂಸಿ ಪಕ್ಷದ ನಾಯಕತ್ವ ಯಾರದ್ದು ಎಂಬ ಅನಿಶ್ಚಿತತೆ ಮುಂದುವರಿದಿದೆ. ಪಕ್ಷದ ಅಧ್ಯಕ್ಷೆ ಮಮತಾ ಬ್ಯಾನರ್ಜಿ ಅವರನ್ನು ಕಡೆಗಣಿಸಿ, ಬಂಡಾಯ ಶಾಸಕರ ಗುಂಪು ಸೋಮವಾರ ಸಭೆ ನಡೆಸಿ ತಮ್ಮ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಹೆಸರುಗಳನ್ನು ಘೋಷಿಸಿತ್ತು. 'ಇದಕ್ಕೂ ಎರಡು ದಿನ ಮೊದಲೇ ನಾವು ಚುನಾವಣಾ ಆಯೋಗಕ್ಕೆ ನಮ್ಮ ಪದಾಧಿಕಾರಿಗಳ ಪಟ್ಟಿಯನ್ನು ನೀಡಿದ್ದೆವು' ಎಂದು ಟಿಎಂಸಿ ಹೇಳಿಕೊಂಡಿದೆ.

'ಮಮತಾ ಬ್ಯಾನರ್ಜಿ ಅವರೇ ಟಿಎಂಸಿ ಪಕ್ಷದ ಅಧ್ಯಕ್ಷರು' ಎಂದು ಪಕ್ಷವು ಆಯೋಗಕ್ಕೆ ತಿಳಿಸಿದೆ. ಪದಾಧಿಕಾರಿಗಳ ಪಟ್ಟಿಯನ್ನು ಚುನಾವಣಾ ಆಯೋಗಕ್ಕೆ ನೀಡಲು ವಿಧಾನಸಭೆ ವಿರೋಧ ಪಕ್ಷದ ನಾಯಕ ರುತಬ್ರತಾ ಬ್ಯಾನರ್ಜಿ ಅವರ ನೇತೃತ್ವದ ಬಂಡಾಯದ ಗುಂಪಿಗೆ ಅಧಿಕಾರವೇ ಇಲ್ಲ ಎನ್ನುವುದು ಮಮತಾ ಅವರ ಗುಂಪಿನ ವಾದ.

'ಬಂಡಾಯವೆದ್ದ ಗುಂಪು ಪಟ್ಟಿಯನ್ನು ಸಿದ್ಧಪಡಿಸಲು ತಯಾರಿ ನಡೆಸುತ್ತಿದ್ದಾಗಲೇ ಮಮತಾ ಅವರು ಪಟ್ಟಿಯನ್ನು ಅಂತಿಮಗೊಳಿಸಿ ಚುನಾವಣಾ ಆಯೋಗಕ್ಕೆ ನೀಡಿದ್ದರು' ಎಂದು ಟಿಎಂಸಿ ಹಿರಿಯ ನಾಯಕರೊಬ್ಬರು 'ಪಿಟಿಐ'ಗೆ ತಿಳಿಸಿದರು.

ಮತ್ತೊಂದು ಬೆಳವಣಿಗೆಯಲ್ಲಿ ಫಿರ್ಹಾದ್ ಹಕೀಮ್, ಅರೂಪ್ ಬಿಸ್ವಾಸ್ (ಬಂಡಾಯ ಶಾಸಕರ ಗುಂಪು ತಮ್ಮ ಅಧ್ಯಕ್ಷರು ಎಂದು ಘೋಷಿಸಿದ ಶಾಸಕ), ಅರೂಪ್ ರಾಯ್, ಜಾವೇದ್ ಖಾನ್ ಸೇರಿದಂತೆ ಹಲವು ನಾಯಕರಿಗೆ ಟಿಎಂಸಿ ಪಕ್ಷವು ಶೋಕಾಸ್ ನೋಟಿಸ್ ನೀಡಿದೆ. ಪಕ್ಷದ ವಿರೋಧಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದೀರಿ ಎಂದು ಉಲ್ಲೇಖಿಸಲಾಗಿದೆ.

ವಿಶ್ವಕಪ್‌ನಲ್ಲಿ ರೊನಾಲ್ಡೊ ದಾಖಲೆ

ಆಡಿದ ಆರೂ ಆವೃತ್ತಿಗಳಲ್ಲಿ ಗೋಲು ಹೊಡೆದ ಮೊದಲ ಆಟಗಾರ

ಸೋಮವಾರ ವಿಶ್ವಕಪ್ ಪಂದ್ಯಗಳಲ್ಲಿ ತಾರಾ ವರ್ಚಸ್ಸಿನ ಆಟಗಾರರು ಮಿಂಚಿದರು. ಅರ್ಜೆಂಟೀನಾದ ದಿಗ್ಗಜ ಲಯೊನೆಲ್ ಮೆಸ್ಸಿ ಅವರು ಆಸ್ಟ್ರಿಯಾ ವಿರುದ್ಧದ ಗೆಲುವಿನಲ್ಲಿ ಎರಡು ಗೋಲುಗಳನ್ನು ಗಳಿಸಿದ್ದರು. ಕೈಲಿಯನ್ ಎಂಬಾಪೆ ಅವರೂ ಫ್ರಾನ್ಸ್ ತಂಡವು ಇರಾಕ್ ವಿರುದ್ಧ ಗೆಲುವಲ್ಲಿ ಅವಳಿ ಗೋಲುಗಳ ಕಾಣಿಕೆ ನೀಡಿದರು. ನಾರ್ವೆಯ ಅರ್ಲಿಂಗ್ ಹಾಲಾಂಡ್ ಅವರು ಸೆನೆಗಲ್ ವಿರುದ್ಧ ಗೆಲುವಿನಲ್ಲೂ ಎರಡು ಬಾರಿ ಗೋಲು ಗಳಿಸಿದರು. ಇದನ್ನು ಮುಂದುವರಿಸುವಂತೆ ಮಂಗಳವಾರ ಪೋರ್ಚುಗಲ್‌ನ ಸೂಪರ್ ಸ್ಟಾರ್ ಕ್ರಿಸ್ಟಿಯಾನೊ ರೊನಾಲ್ಡೊ ಅವರೂ 'ಡಬಲ್' ಗೋಲು ಸಾಧನೆ ಮಾಡಿದ್ದು ವಿಶೇಷ.

ಪೋರ್ಚುಗಲ್	ಉಜ್ಬೇಕಿಸ್ತಾನ
5	0

ಹ್ಯೂಸ್ಟನ್ (ಅಮೆರಿಕ) (ಎಎಫ್‌ಪಿ): ಪೋರ್ಚುಗಲ್‌ನ ದಿಗ್ಗಜ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಫಿಫಾ ವಿಶ್ವಕಪ್‌ನಲ್ಲಿ ಆಡಿದ ಆರೂ ಆವೃತ್ತಿಗಳಲ್ಲಿ ಗೋಲು ದಾಖಲಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

41 ವರ್ಷ ವಯಸ್ಸಿನ ರೊನಾಲ್ಡೊ (6ನೇ ಮತ್ತು 39ನೇ ನಿಮಿಷ) ಮಂಗಳವಾರ ಉಜ್ಬೇಕಿಸ್ತಾನ ವಿರುದ್ಧದ 'ಕೆ' ಗುಂಪಿನ ಪಂದ್ಯದಲ್ಲಿ ಅವಳಿ ಗೋಲು ಗಳಿಸಿದರು. ಇದರೊಂದಿಗೆ ವಿಶ್ವಕಪ್‌ನಲ್ಲಿ ಅವರ ಗೋಲುಗಳ ಸಂಖ್ಯೆ 10ಕ್ಕೆ ಏರಿಕೆಯಾಯಿತು.

ಪೋರ್ಚುಗಲ್ ತಂಡವು 5-0 ಅಂತರದಿಂದ ಸುಲಭ ಗೆಲುವು ಸಾಧಿಸಿ ನಾಕೌಟ್ ಹೊಸ್ತಿಲಿಗೆ ಬಂದು ನಿಂತಿತು. ನುನೊ ಮೆಂಡೆಸ್ (17ನೇ) ಮತ್ತು ರಫೆಲ್ ಲಿಯೊ (87ನೇ) ತಲಾ ಒಂದು ಗೋಲು ತಂದಿತ್ತರೆ, ಮತ್ತೊಂದು ಗೋಲು ಎದುರಾಳಿ ತಂಡದ ಗೋಲ್‌ಕೀಪರ್ ಅಬ್ದುವೋಹಿದ್ ನೆಮಾಟೋವ್ ಅವರಿಂದ 'ಉಡುಗೊರೆ'ಯಾಗಿ ಲಭಿಸಿತು.

ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಕಳಪೆ ಪ್ರದರ್ಶನದಿಂದಾಗಿ ಒತ್ತಡದಲ್ಲಿದ್ದ ರೊನಾಲ್ಡೊ ಆರನೇ ನಿಮಿಷದಲ್ಲಿ ಗೋಲು ದಾಖಲಿಸುವ ಮೂಲಕ ವಿಶ್ವಕಪ್ ಇತಿಹಾಸದಲ್ಲಿ ಹೊಸ ದಾಖಲೆ ಬರೆದರು. ಪೋರ್ಚುಗಲ್ ತಂಡವನ್ನು ಮುನ್ನಡೆಸುತ್ತಿರುವ ರೊನಾಲ್ಡೊ 2006ರ ಆವೃತ್ತಿಯಲ್ಲಿ ಇರಾನ್ ವಿರುದ್ಧ ತಮ್ಮ ಮೊದಲ ವಿಶ್ವಕಪ್ ಗೋಲು ಗಳಿಸಿದ್ದರು.

ಹಾಲಿ ಆವೃತ್ತಿಯ ತನ್ನ ಮೊದಲ ಪಂದ್ಯದಲ್ಲಿ 1-1ರಿಂದ ಕಾಂಗೊ ರಿಪಬ್ಲಿಕ್ ಎದುರು ನಿರಾಶಾದಾಯಕ ಡ್ರಾ ಮಾಡಿಕೊಂಡ ಬಳಿಕ ರೊನಾಲ್ಡೊ ಪಡೆಯು ವ್ಯಾಪಕ ಟೀಕೆಗೆ ಗುರಿಯಾಗಿತ್ತು.

ರೊನಾಲ್ಡೊ 2003ರಲ್ಲಿ ಅಂತರ ರಾಷ್ಟ್ರೀಯ ಪಂದ್ಯಕ್ಕೆ ಪದಾರ್ಪಣೆ ಮಾಡಿ, 230 ಪಂದ್ಯಗಳಲ್ಲಿ ದಾಖಲೆಯ 145 ಗೋಲು ಗಳಿಸಿದ್ದಾರೆ. 2016ರಲ್ಲಿ ಪೋರ್ಚುಗಲ್ ಪರ ಯುರೋಪಿಯನ್ ಚಾಂಪಿಯನ್‌ಷಿಪ್ ಪ್ರಶಸ್ತಿ ಗೆದ್ದ ರೊನಾಲ್ಡೊ ಅವರಿಗೆ ಇದು ಕೊನೆಯ ವಿಶ್ವಕಪ್ ಆಗುವ ಸಾಧ್ಯತೆಯಿದೆ.

ಅರ್ಜೆಂಟೀನಾ ನಾಯಕ ಲಯೊನೆಲ್ ಮೆಸ್ಸಿ ಅವರೂ ವಿಶ್ವಕಪ್‌ನ ಕಳೆದ ಆರು ಆವೃತ್ತಿಗಳಲ್ಲಿ ಆಡಿದ್ದಾರೆ. ಆದರೆ, 2010ರ ಆವೃತ್ತಿಯಲ್ಲಿ ಅವರಿಗೆ ಗೋಲು ಗಳಿಸಲು ಸಾಧ್ಯವಾಗಿರಲಿಲ್ಲ.

ಗೋಲು ದಾಖಲಿಸುವ ಯತ್ನದಲ್ಲಿ ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ (ಮಧ್ಯ) ಎಎಫ್‌ಪಿ ಚಿತ್ರ

ಪಂದ್ಯಗಳು

- ಕೊಲಂಬಿಯಾ– ಕಾಂಗೊ ರಿಪಬ್ಲಿಕ್, ಬುಧವಾರ ಬೆಳಿಗ್ಗೆ 7.30
- ಸ್ವಿಟ್ಜರ್ಲೆಂಡ್– ಕೆನಡಾ, ಬುಧವಾರ ರಾತ್ರಿ 12.30
- ಬೋಸ್ನಿಯಾ ಮತ್ತು ಹರ್ಜೆಗೋವಿನಾ– ಕತಾರ್, ಬುಧವಾರ ರಾತ್ರಿ 12.30
- ಸ್ಕಾಟ್ಲೆಂಡ್– ಬ್ರೆಜಿಲ್, ಗುರುವಾರ ಬೆಳಗಿನ ಜಾವ 3.30
- ಮೊರಾಕ್ಕೊ– ಹೈಟಿ, ಗುರುವಾರ ಬೆಳಗಿನ ಜಾವ 3.30
- ಜೆಕ್ ರಿಪಬ್ಲಿಕ್– ಮೆಕ್ಸಿಕೊ, ಗುರುವಾರ ಬೆಳಿಗ್ಗೆ 6.30
- ದಕ್ಷಿಣ ಆಫ್ರಿಕಾ– ದಕ್ಷಿಣ ಕೊರಿಯಾ, ಗುರುವಾರ ಬೆಳಿಗ್ಗೆ 6.30

(ಸಮಯ: ಭಾರತೀಯ ಕಾಲಮಾನ)
ನೇರಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ5 ಆ್ಯಪ್

ಎಂಬಾಪೆ ಮೋಡಿ, ನಾಕೌಟ್‌ಗೆ ಫ್ರಾನ್ಸ್

ಫ್ರಾನ್ಸ್	ಇರಾಕ್
3	0

ಫಿಲಡೆಲ್ಫಿಯಾ (ಎಎಫ್‌ಪಿ): ವಿಶ್ವದ ಶ್ರೇಷ್ಠ ಆಟಗಾರರಲ್ಲಿ ಒಬ್ಬರಾದ ಕೈಲಿಯನ್ ಎಂಬಾಪೆ ವಿಶ್ವಕಪ್‌ನ ಅತ್ಯಧಿಕ ಗೋಲು ಗಳಿಸಿದವರಲ್ಲಿ ಎರಡನೇ ಸ್ಥಾನಕ್ಕೇರಿದರು. ಸೋಮವಾರ ರಾತ್ರಿ ಮಳೆಯಿಂದಾಗಿ ಎರಡು ಗಂಟೆ ತಡವಾಗಿ ಮುಗಿದ ಪಂದ್ಯದಲ್ಲಿ ಫ್ರಾನ್ಸ್ ತಂಡ ಎಂಬಾಪೆ ಅವರ ಮೋಡಿಯಿಂದ 3-0 ಗೋಲುಗಳಿಂದ ಇರಾಕ್ ತಂಡವನ್ನು ಮಣಿಸಿ ನಾಕೌಟ್ ಹಂತಕ್ಕೆ ಮುನ್ನಡೆಯಿತು.

27 ವರ್ಷ ವಯಸ್ಸಿನ ಎಂಬಾಪೆ, ವಿಶ್ವಕಪ್‌ನಲ್ಲಿ 16 ಗೋಲು ಗಳಿಸಿದಂತಾಗಿದೆ. ಬಲೋನ್ ಡೋ'ರ್ ಪ್ರಶಸ್ತಿ ಪುರಸ್ಕೃತ ಒಸ್ಮಾನ್ ಡೆಂಬೆಲೆ ಅವರು ಫ್ರಾನ್ಸ್ ತಂಡದ ಇನ್ನೊಂದು ಗೋಲನ್ನು ಗಳಿಸಿದರು. ಎಂಬಾಪೆ ಅವರು 14 ಮತ್ತು 54ನೇ ನಿಮಿಷ ಗೋಲುಗಳನ್ನು ಗಳಿಸಿ ತಮ್ಮ ನೂರನೇ ಅಂತರರಾಷ್ಟ್ರೀಯ ಪಂದ್ಯವನ್ನು ಅವಿಸ್ಮರಣೀಯಗೊಳಿಸಿದರು.

'ಐ' ಗುಂಪಿನ ಪಂದ್ಯದಲ್ಲಿ ವಿರಾಮದ ವೇಳೆಗೆ ಫ್ರಾನ್ಸ್ 1-0 ಮುನ್ನಡೆ ಗಳಿಸಿತ್ತು. ಆ ವೇಳೆ ಗುಡುಗು–ಸಿಡಿಲಿನಿಂದ ಕೂಡಿದ ಮಳೆಯಾಯಿತು. ಗುಡುಗು–ಮಿಂಚುಗಳನ್ನು ಕಂಡ ಪಂದ್ಯದಲ್ಲಿ ಎಂಬಾಪೆ ಮಿಂಚಿದರು. ವಿಶ್ವಕಪ್‌ನಲ್ಲಿ ಗೋಲು ಗಳಿಸಿದವರ ಪಟ್ಟಿಯಲ್ಲಿ ಲಯೊನೆಲ್ ಮೆಸ್ಸಿ ನಂತರ ಅವರು ಎರಡನೇ ಸ್ಥಾನದಲ್ಲಿದ್ದಾರೆ. ಎಂಬಾಪೆ ಅವರು ಜರ್ಮನಿಯ ಮಿರೋಸ್ಲಾವ್ ಕ್ಲೋಸ್ ಅವರ ದಾಖಲೆಯನ್ನು (16 ಗೋಲು) ಸರಿಗಟ್ಟಿದರು. 90ನೇ ನಿಮಿಷ ಅವರು ಹ್ಯಾಟ್ರಿಕ್ ಅವಕಾಶ ಕಳೆದುಕೊಂಡರು.

32ರ ಘಟ್ಟಕ್ಕೆ ನಾರ್ವೆ; ಸೆನೆಗಲ್‌ಗೆ ಸತತ ಎರಡನೇ ಸೋಲು

ಹಾಲಾಂಡ್ ಆಟಕ್ಕೆ ಒಲಿದ ಜಯ

ಈಸ್ಟ್ ರುದರ್‌ಫೋರ್ಡ್ (ನ್ಯೂಜೆರ್ಸಿ), (ಎಪಿ): ಹಾಲಿ ವಿಶ್ವಕಪ್‌ನ ಪ್ರಮುಖ ತಾರೆಗಳಲ್ಲಿ ಒಬ್ಬರಾದ ಅರ್ಲಿಂಗ್ ಹಾಲಾಂಡ್ ಅವರು ಎರಡು ಗೋಲುಗಳನ್ನು ಬಾರಿಸಿ ನಾರ್ವೆ ತಂಡ ಸೋಮವಾರ ರಾತ್ರಿ 3-2 ಗೋಲುಗಳಿಂದ ಸೆನೆಗಲ್ ತಂಡದ ಮೇಲೆ ಜಯಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಸತತ ಎರಡನೇ ಗೆಲುವನ್ನು ದಾಖಲಿಸಿದ ನಾರ್ವೆ 32ರ ಸುತ್ತಿಗೆ ಮುನ್ನಡೆಯಿತು.

1998ರಿಂದ ವಿಶ್ವಕಪ್‌ನಲ್ಲಿ ಆಡುತ್ತಿರುವ ನಾರ್ವೆ ತಂಡವು 'ಐ' ಗುಂಪಿನಿಂದ ಫ್ರಾನ್ಸ್ ಜೊತೆ ನಾಕೌಟ್ ಸುತ್ತಿಗೆ ಮುನ್ನಡೆದಿದೆ. ಶುಕ್ರವಾರ ನಡೆಯುವ ಪಂದ್ಯದಲ್ಲಿ ನಾರ್ವೆ ತಂಡವು, ಫ್ರಾನ್ಸ್ ತಂಡವನ್ನು ಎದುರಿಸಲಿದೆ.

ಹಾಲಾಂಡ್ ಅವರು ಇರಾಕ್ ವಿರುದ್ಧ ಮೊದಲ ಪಂದ್ಯದಲ್ಲೂ ಎರಡು ಗೋಲುಗಳನ್ನು ಬಾರಿಸಿದ್ದರು.

ಗಾಯಾಳಾದ ಜೂಲಿಯನ್ ರಯರ್ಸನ್ ಸ್ಥಾನದಲ್ಲಿ ಅವಕಾಶ ಪಡೆದ ಮಾರ್ಕಸ್ ಪೆಡರ್ಸನ್ 43ನೇ ನಿಮಿಷ 'ವೈಕಿಂಗ್ಸ್' ತಂಡಕ್ಕೆ ಮುನ್ನಡೆ ಒದಗಿಸಿದರು. ಹಾಲಾಂಡ್ ಅವರು 48 ಮತ್ತು 58ನೇ ನಿಮಿಷ ಎರಡು ಗೋಲುಗಳನ್ನು ಬಾರಿಸಿ ಗೆಲುವಿನ ಅಂತರ ಹೆಚ್ಚಿಸಿದರು.

ಸೆನೆಗಲ್ ಪರ ಇಸ್ಮಾಯಿಲಾ ಸಹ್ರ್ ಅವರು 53ನೇ ನಿಮಿಷ ಮತ್ತು ಪಂದ್ಯದ ಕೊನೆಯ ಹೆಚ್ಚುವರಿ ಅವಧಿಯಲ್ಲಿ (90 + 3) ಗೋಲುಗಳನ್ನು ಗಳಿಸಿದರು.

ನಾರ್ವೆ	ಸೆನೆಗಲ್
3	2

ಚೆಂಡನ್ನು ಹೆಡ್ ಮಾಡಿದ ನಾರ್ವೆಯ ಅರ್ಲಿಂಗ್ ಹಾಲಾಂಡ್ ಎಎಫ್‌ಪಿ ಚಿತ್ರ

ಅಲ್ಜೀರಿಯಾಕ್ಕೆ 12 ವರ್ಷ ನಂತರ ಜಯ

ಸಾಂತಾ ಕ್ಲಾರಾ (ಎಪಿ): ವಿರಾಮದ ನಂತರದ ಆಟದಲ್ಲಿ ಎರಡು ಕಾರ್ನರ್ ಕಿಕ್‌ಗಳ ಮೂಲಕ ಗೋಲುಗಳನ್ನು ಗಳಿಸಿದ ಅಲ್ಜೀರಿಯಾ ತಂಡ ಸೋಮವಾರ ಜೆ ಗುಂಪಿನ ಪಂದ್ಯದಲ್ಲಿ 2–1 ರಿಂದ ಜೋರ್ಡನ್ ತಂಡವನ್ನು ಸೋಲಿಸಿತು.

ನಾಧಿರ್ ಬೆನ್‌ಬೌಲಿ 69ನೇ ನಿಮಿಷ ಕಾರ್ನರ್ ಕಿಕ್‌ನಲ್ಲಿ ಚೆಂಡನ್ನು ಹೆಡ್ ಮಾಡಿ ಅಲ್ಜೀರಿಯಾದ ಮೊದಲ ಗೋಲನ್ನು ಗಳಿಸಿದರು. 82ನೇ ನಿಮಿಷ ಅಮಿನ್ ಗೋಯಿರಿ ನಿರ್ಣಾಯಕ ಗೋಲನ್ನು ಗಳಿಸಿದರು. ಇದು 2014ರ ನಂತರ ಅಲ್ಜೀರಿಯಾ ತಂಡಕ್ಕೆ ವಿಶ್ವಕಪ್‌ನಲ್ಲಿ ಸಂದ ಮೊದಲ ಜಯ.

ನಿಝಾರ್ ಅಲ್ ರಶ್ದಾನ್ ಅವರು ವಿರಾಮಕ್ಕೆ ಮೊದಲು ಜೋರ್ಡನ್ ತಂಡದ ಪರ ಗೋಲು ಗಳಿಸಿ ತಂಡಕ್ಕೆ ಮುನ್ನಡೆ ಒದಗಿಸಿದ್ದರು.

ಹರ್ಮನ್ ಪಡೆಗೆ ಮಣಿದ ಪಾಕ್

ಪ್ರೊ ಲೀಗ್ ಹಾಕಿ: ಲಂಡನ್ ಲೆಗ್‌ನಲ್ಲಿ ಭಾರತ ಶುಭಾರಂಭ

ಲಂಡನ್ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಭಾರತ ಪುರುಷರ ತಂಡವು ಮಂಗಳವಾರ ಎಫ್‌ಐಎಚ್ ಪ್ರೊ ಲೀಗ್‌ನ ಲಂಡನ್ ಚರಣದ ತನ್ನ ಮೊದಲ ಪಂದ್ಯದಲ್ಲಿ 4–3 ಗೋಲುಗಳಿಂದ ಪಾಕಿಸ್ತಾನ ತಂಡವನ್ನು ಸೋಲಿಸಿತು. ಇದರೊಂದಿಗೆ ಅಂತರರಾಷ್ಟ್ರೀಯ ಹಾಕಿಯಲ್ಲಿ ಸಾಂಪ್ರದಾಯಿಕ ಎದುರಾಳಿ ತಂಡದ ವಿರುದ್ಧ ದಶಕದ ಅಜೇಯ ಓಟವನ್ನು ಮುಂದುವರಿಸಿತು.

ಹರ್ಮನ್‌ಪ್ರೀತ್ ಸಿಂಗ್ ಬಳಗವು ಲೀಗ್‌ನಲ್ಲಿ ಎರಡನೇ ಗೆಲುವು ದಾಖಲಿಸಿತು. ಒಟ್ಟು 12 ಪಂದ್ಯಗಳಲ್ಲಿ 10 ಪಾಯಿಂಟ್ ಗಳಿಸಿ ಅಂಕಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. ಆಡಿರುವ 12 ಪಂದ್ಯಗಳನ್ನೂ ಸೋತಿರುವ ಪಾಕ್ ಕೊನೆಯ ಸ್ಥಾನದಲ್ಲಿದೆ.

ಪಂದ್ಯದ ಎಂಟನೇ ನಿಮಿಷದಲ್ಲಿ ಅಹ್ಮದ್ ನದೀಮ್ ಅವರು ಪೆನಾಲ್ಟಿ ಅವಕಾಶದಲ್ಲಿ ಗೋಲು ಬಾರಿಸಿ ಪಾಕಿಸ್ತಾನ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. 22ನೇ ನಿಮಿಷದಲ್ಲಿ ಭಾರತದ ಅಭಿಷೇಕ್ ಅವರು ಫೀಲ್ಡ್ ಗೋಲು ಹೊಡೆದರು. ಹೀಗಾಗಿ, ತಂಡಗಳ ಸ್ಕೋರ್ ಸಮನಾಯಿತು.

24ನೇ ನಿಮಿಷದಲ್ಲಿ ನೀಲಕಂಠ ಶರ್ಮಾ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಹೀಗಾಗಿ, ಹರ್ಮನ್ ಪಡೆ ವಿರಾಮದ ವೇಳೆಗೆ 2-1 ಮುನ್ನಡೆ ಸಾಧಿಸಿತು. 40ನೇ ನಿಮಿಷದಲ್ಲಿ ಸುಖ್‌ಜೀತ್ ಸಿಂಗ್ ಫೀಲ್ಡ್ ಗೋಲು ದಾಖಲಿಸಿದರು. 52ನೇ ನಿಮಿಷದಲ್ಲಿ ರಾಜಿಂದರ್ ಸಿಂಗ್ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಮಿಂಚಿದರು. ಇದರಿಂದ ಭಾರತದ ಮುನ್ನಡೆ 4-1ಕ್ಕೆ ಹಿಗ್ಗಿತು. ನಂತರ ಅಬು ಮೊಹಮ್ಮದ್ (53ನೇ) ಮತ್ತು ಮೊಯಿನ್ ಶಕೀಲ್ (60ನೇ) ಗೋಲು ಗಳಿಸಿದ್ದರಿಂದ ಪಾಕ್ ತಂಡದ ಸೋಲಿನ ಅಂತರ ಕಡಿಮೆಯಾಯಿತು. ಭಾರತ ತಂಡ ಶುಕ್ರವಾರ ಆತಿಥೇಯ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು ಹಾಕಿ ಇಂಡಿಯಾ ಚಿತ್ರ

ಮಹಿಳಾ ವಿಶ್ವಕಪ್: ನ್ಯೂಜಿಲೆಂಡ್‌ಗೆ ಜಯ

ಬ್ರಿಸ್ಟಲ್ (ಎಪಿ): ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಟಿ20 ಮಹಿಳಾ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಮಂಗಳವಾರ ಸ್ಕಾಟ್ಲೆಂಡ್ ತಂಡವನ್ನು ಆರು ವಿಕೆಟ್‌ಗಳಿಂದ ಸುಲಭವಾಗಿ ಮಣಿಸಿತು.

ದಿನದ ಮತ್ತೊಂದು ಪಂದ್ಯದಲ್ಲಿ ಶ್ರೀಲಂಕಾ ತಂಡವು 9 ವಿಕೆಟ್‌ಗಳಿಂದ ಐರ್ಲೆಂಡ್ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 131 (ಡಾರ್ಸಿ ಕಾರ್ಟರ್ ಔಟಾಗದೇ 72; ಅಮೇಲಿಯಾ ಕೆರ್ 17ಕ್ಕೆ 3, ಸೋಫಿ ಡಿವೈನ್ 19ಕ್ಕೆ 2). ನ್ಯೂಜಿಲೆಂಡ್: 18.2 ಓವರ್‌ಗಳಲ್ಲಿ 4 ವಿಕೆಟ್‌ಗೆ 132 (ಇಝಿ ಶಾರ್ಪ್ 62, ಬ್ರೂಕ್ ಹ್ಯಾಲಿಡೇ ಔಟಾಗದೇ 41; ಕ್ಯಾಥರಿನ್ ಬ್ರೈಸ್ 13ಕ್ಕೆ 2, ರೇಚೆಲ್ ಸ್ಲೇಟರ್ 22ಕ್ಕೆ 2).

ಸಂಕ್ಷಿಪ್ತ ಸ್ಕೋರು: ಐರ್ಲೆಂಡ್: 5 ವಿಕೆಟ್‌ಗೆ 130 (ಗ್ಯಾಬಿ ಲೂಯಿಸ್ 59, ಅಲಿಸ್ ಟೆಕ್ಟರ್ ಔಟಾಗದೇ 28). ಶ್ರೀಲಂಕಾ: 15.3 ಓವರ್‌ಗಳಲ್ಲಿ 1 ವಿಕೆಟ್‌ಗೆ 134 (ಚಾಮರಿ ಅಟಪಟ್ಟು ಔಟಾಗದೇ 106).

ಇಂದಿನ ಪಂದ್ಯ

ಇಂಗ್ಲೆಂಡ್ V/s ವೆಸ್ಟ್ ಇಂಡೀಸ್

ತಾಣ: ಲಾರ್ಡ್ಸ್, ಆರಂಭ: ರಾತ್ರಿ 11

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಭಾರತ ತಂಡದ ಜರ್ಸಿ ಪಡೆದ ಸೂರ್ಯವಂಶಿ

ನವದೆಹಲಿ (ಪಿಟಿಐ): ಐರ್ಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಗಾಗಿ ಭಾರತ ತಂಡದಲ್ಲಿ ಸ್ಥಾನ ಪಡೆದಿರುವ 15 ವರ್ಷದ ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿ ಅವರು ತಮ್ಮ ಹೆಸರಿರುವ ರಾಷ್ಟ್ರೀಯ ತಂಡದ ಜರ್ಸಿಯನ್ನು ಪಡೆದುಕೊಂಡಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಮಿಂಚಿದ ಬಳಿಕ ಸೂರ್ಯವಂಶಿ ಅವರನ್ನು ರಾಷ್ಟ್ರೀಯ ತಂಡಕ್ಕೆ ಆಯ್ಕೆ ಮಾಡಲಾಗಿತ್ತು. ಅವರು ತಮ್ಮ ಹೆಸರಿನ ಜೊತೆ 03 ಸಂಖ್ಯೆ ಹೊಂದಿರುವ ನೀಲಿ ಬಣ್ಣದ ಜೆರ್ಸಿಯನ್ನು ಸ್ವೀಕರಿಸಿದ್ದಾರೆ.

'ಈ ಕ್ಷಣವನ್ನು ಬಣ್ಣಿಸಲು ನನ್ನಲ್ಲಿ ಪದಗಳೇ ಇಲ್ಲ. ನಾನು ಮೊದಲು ಬ್ಯಾಟ್ ಹಿಡಿದುಕೊಂಡು ಮೈದಾನಕ್ಕೆ ಅಭ್ಯಾಸ ಮಾಡಲು ಹೋದಾಗ, ಮುಂದೊಂದು ದಿನ ಭಾರತ ತಂಡದ ಜೆರ್ಸಿಯನ್ನು ಧರಿಸಬೇಕು ಎಂದುಕೊಂಡಿದ್ದೆ. ಆ ಕನಸು ನನಸಾಗಿದೆ' ಎಂದು ಸೂರ್ಯವಂಶಿ ಹೇಳಿಕೊಂಡಿದ್ದಾರೆ. ಈ ವಿಡಿಯೊವನ್ನು ಬಿಸಿಸಿಐ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದೆ.

ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಪ್ರತಿನಿಧಿಸಿದ್ದ ವೈಭವ್ ಅವರು 776 ರನ್ ಗಳಿಸಿ ಆರೆಂಜ್ ಕ್ಯಾಪ್ ಗಳಿಸಿದ್ದರು.

ಮಹಾರಾಜ ಟ್ರೋಫಿ: ಮಿಸ್ಟಿಕ್ಸ್ ಪರ ಕ್ರಾಂತಿಕುಮಾರ್ ಆಲ್‌ರೌಂಡ್ ಆಟ

ಗುಲ್ಬರ್ಗಕ್ಕೆ ಸುಲಭ ತುತ್ತಾದ ಶಿವಮೊಗ್ಗ

• ಆರ್. ಜಿತೇಂದ್ರ

ಮೈಸೂರು: ಸ್ಫೋಟಕ ಬ್ಯಾಟಿಂಗ್ ಬಲದಿಂದ ಎದುರಾಳಿ ಶಿವಮೊಗ್ಗ ಯೋಧಾಸ್ ತಂಡವನ್ನು 95 ರನ್‌ಗಳ ಭಾರಿ ಅಂತರದಿಂದ ಬಗ್ಗುಬಡಿದ ಗುಲ್ಬರ್ಗ ಮಿಸ್ಟಿಕ್ಸ್ ತಂಡ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆಯಿತು.

ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಮಹಾರಾಜ ಟ್ರೋಫಿ' ಟಿ20 ಕ್ರಿಕೆಟ್ ಟೂರ್ನಿಯ ಮಂಗಳವಾರದ ಪಂದ್ಯದಲ್ಲಿ ಗುಲ್ಬರ್ಗ ನೀಡಿದ 233 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಶಿವಮೊಗ್ಗ ಯೋಧಾಸ್ ಹೆಚ್ಚು ಪ್ರತಿರೋಧವಿಲ್ಲದೆಯೇ 137 ರನ್‌ಗಳಿಗೆ ಆಲೌಟ್ ಆಯಿತು. ಮಿಸ್ಟಿಕ್ಸ್ ಪರ ಕ್ರಾಂತಿಕುಮಾರ್ ಆಲ್‌ರೌಂಡ್ ಪ್ರದರ್ಶನ (ಔಟಾಗದೇ 31, 8ಕ್ಕೆ 2 ವಿಕೆಟ್) ನೀಡಿದರು.

ಗುಲ್ಬರ್ಗದ ಎಡಗೈ ವೇಗಿ ಗೌತಮ್ ಮಿಶ್ರ 34ಕ್ಕೆ 3 ವಿಕೆಟ್ ಮೂಲಕ ಎದುರಾಳಿಗಳನ್ನು ನಿಯಂತ್ರಿಸಿದರು. ಕ್ರಾಂತಿಕುಮಾರ್, ರೋನಿತ್ ಮೋರೆ ಹಾಗೂ ಸುಹಾಸ್ ಪುರುಷೋತ್ತಮ್ ತಲಾ 2 ವಿಕೆಟ್ ಪಡೆದರು.

ಸ್ಫೋಟಕ ಆರಂಭ: ಟಾಸ್ ಸೋತು ಬ್ಯಾಟಿಂಗ್ ಆರಂಭಿಸಿದ ಗುಲ್ಬರ್ಗ ಆರಂಭದಿಂದಲೇ ಅಬ್ಬರಿಸಿತು. ಬಿ.ಆರ್. ಶರತ್ ಹಾಗೂ ಲೋಚನ್ ಗೌಡ ಕೇವಲ 14 ಎಸೆತದಲ್ಲಿ 38 ರನ್‌ಗಳ ಬಿರುಸಿನ ಆರಂಭ ಒದಗಿಸಿದರು.

ನಂತರದಲ್ಲಿ ಜೊತೆಯಾದ ಲೋಚನ್ ಗೌಡ (47;21ಎ) ಹಾಗೂ ಪ್ರಖರ್ ಚತುರ್ವೇದಿ (45;19ಎ) ಕೇವಲ 29 ಎಸೆತದಲ್ಲಿ 74 ರನ್ ಚಚ್ಚುವ ಮೂಲಕ ಪಂದ್ಯದ ಗತಿ ಬದಲಿಸಿದರು. ಮೊದಲ 10 ಓವರ್‌ಗಳಲ್ಲೇ ತಂಡವು 144 ರನ್ ಪೇರಿಸಿತ್ತು.

ಸಂಕ್ಷಿಪ್ತ ಸ್ಕೋರ್: ಗುಲ್ಬರ್ಗ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 232 (ಲೋಚನ್ ಗೌಡ 47, ಪ್ರಖರ್ ಚತುರ್ವೇದಿ 45, ಕ್ರಾಂತಿಕುಮಾರ್ ಔಟಾಗದೇ 31. ಎಂ.ಜಿ. ನವೀನ್ 44ಕ್ಕೆ 2, ಭೀಮರಾವ್ ನವಲೆ 31ಕ್ಕೆ 2). ಶಿವಮೊಗ್ಗ ಲಯನ್ಸ್: 19.4 ಓವರ್‌ಗಳಲ್ಲಿ 137 (ಲವನೀತ್ ಸಿಸೊಡಿಯ 30, ಗೌತಮ್ ಮಿಶ್ರ 34ಕ್ಕೆ 3, ಕ್ರಾಂತಿಕುಮಾರ್ 8ಕ್ಕೆ 2, ರೋನಿತ್ ಮೋರೆ 12ಕ್ಕೆ 2). ಪಂದ್ಯದ ಆಟಗಾರ: ಪ್ರಖರ್ ಚತುರ್ವೇದಿ

ಇಂದಿನ ಪಂದ್ಯಗಳು
ಕೋಸ್ಟಲ್ ಕಿಂಗ್ಸ್–ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ 2.30)
ಹುಬ್ಬಳ್ಳಿ ಟೈಗರ್ಸ್–ಶಿವಮೊಗ್ಗ ಲಯನ್ಸ್ (ರಾತ್ರಿ 7)
ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್, ಫ್ಯಾನ್‌ಕೋಡ್ ಆ್ಯಪ್

ಶತಕ ಸಿಡಿಸಿದ ಎಲ್‌ಆರ್ ಚೇತನ್ ಸಂಭ್ರಮ ಚಿತ್ರ: ಅನೂಪ್ ರಾಘ್ ಟಿ.

ಚೇತನ್ ಶತಕ: ವಾರಿಯರ್ಸ್‌ಗೆ ಮೊದಲ ಜಯ

ಮೈಸೂರು: ಆರಂಭಿಕ ಎಲ್.ಆರ್. ಚೇತನ್ ಆಕರ್ಷಕ ಶತಕದ (106 ರನ್, 60 ಎ, 4X9, 6X7) ಬಲದಿಂದ ಮೈಸೂರು ವಾರಿಯರ್ಸ್ ತಂಡವು ಬೆಂಗಳೂರು ಬ್ಲಾಸ್ಟರ್ಸ್ ಎದುರು 72 ರನ್ ಅಂತರದಿಂದ ಜಯಿಸಿತು. ಟೂರ್ನಿಯಲ್ಲಿ ಮೈಸೂರಿಗಿದು ಮೊದಲ ಜಯ.

ಮಂಗಳವಾರದ ಎರಡನೇ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವಾರಿಯರ್ಸ್ ಪರ ಚೇತನ್ 58 ಎಸೆತಗಳಲ್ಲಿ ಶತಕ ಸಿಡಿಸಿ ಸಂಭ್ರಮಿಸಿದರು. ಚೇತನ್ ಹಾಗೂ ಕೆ.ಪಿ. ಕಾರ್ತಿಕೇಯ (65) ಜೋಡಿಯು ಮೂರನೇ ವಿಕೆಟ್‌ಗೆ 87 ಎಸೆತಗಳಲ್ಲಿ 169 ರನ್‌ಗಳ ಜೊತೆಯಾಟ ನೀಡಿತು. ತಂಡವು 6 ವಿಕೆಟ್‌ಗೆ 203 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ದೊಡ್ಡ ಮೊತ್ತ ಬೆನ್ನತ್ತಿದ ಬೆಂಗಳೂರು 131 ರನ್‌ಗಳಿಗೆ ಕುಸಿಯಿತು. ಪ್ರವೀಣ್ ದುಬೆ, ಸಮಿತ್ ದ್ರಾವಿಡ್ ಹೊರತುಪಡಿಸಿ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಪ್ರದರ್ಶನ ಬರಲಿಲ್ಲ. ವಾರಿಯರ್ಸ್ ಪರ ಅರವಿಂದ್‌ಕುಮಾರ್ ರೈ 17ಕ್ಕೆ 4 ವಿಕೆಟ್ ಉರುಳಿಸಿದರು.

ಸಂಕ್ಷಿಪ್ತ ಸ್ಕೋರು: ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 203 (ಎಲ್.ಆರ್. ಚೇತನ್ 106, ಕೆ.ಪಿ. ಕಾರ್ತಿಕೇಯ 65). ಬೆಂಗಳೂರು ಬ್ಲಾಸ್ಟರ್ಸ್: 16 ಓವರ್‌ಗಳಲ್ಲಿ 131 (ಪ್ರವೀಣ್ ದುಬೆ 36, ಸಮಿತ್ ದ್ರಾವಿಡ್ 30; ಅರವಿಂದ್‌ಕುಮಾರ್ ರೈ 17ಕ್ಕೆ 4). ಪಂದ್ಯದ ಆಟಗಾರ: ಎಲ್.ಆರ್. ಚೇತನ್

ಆದರ್ಶ್‌ಗೆ ಗಾಯ

ಫೀಲ್ಡಿಂಗ್ ಮಾಡುತ್ತಿದ್ದ ಶಿವಮೊಗ್ಗ ಯೋಧಾಸ್ ತಂಡದ ಆದರ್ಶ್ ಪ್ರಜ್ವಲ್ ಗಾಯಗೊಂಡರು.

ಪಂದ್ಯದ 12ನೇ ಆಟಗಾರನಾಗಿದ್ದ ಆದರ್ಶ್, ಯಶ್‌ರಾಜ್ ಪೂಂಜ ಬದಲಿಗೆ ಫೀಲ್ಡಿಂಗ್‌ಗೆ ಬಂದಿದ್ದರು. ಮೊದಲ ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಎಂ.ಜಿ. ನವೀನ್ ಎಸೆತವನ್ನು ಗುಲ್ಬರ್ಗ ಮಿಸ್ಟಿಕ್ಸ್ ಬ್ಯಾಟ್ಸ್‌ಮನ್ ಕ್ರಾಂತಿಕುಮಾರ್ ಬಲವಾಗಿ ಬಾರಿಸಿದರು. ಪಾಯಿಂಟ್‌ನಲ್ಲಿದ್ದ ಆದರ್ಶ್ ಕ್ಷೇತ್ರರಕ್ಷಣೆಗೆ ಮುಂದಾದಾಗ ಚೆಂಡು ಅವರಿಗೆ ಬಡಿಯಿತು. ನೋವಿನಿಂದ ಕುಸಿದ ಅವರನ್ನು ಕೂಡಲೇ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. 'ಸದ್ಯ ಅವರ ಭುಜಕ್ಕೆ ಪೆಟ್ಟಾಗಿದ್ದು, ನಿಗಾ ವಹಿಸಿದ್ದೇವೆ' ಎಂದು ವೈದ್ಯರು ತಿಳಿಸಿದ್ದಾರೆ.

ಪದ್ಮಶ್ರೀ ಪ್ರದಾನ

ಪಿಟಿಐ ಚಿತ್ರ

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಅವರಿಗೆ ನವದೆಹಲಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ 'ಪದ್ಮಶ್ರೀ' ಪ್ರಶಸ್ತಿಯನ್ನು ಪ್ರದಾನ ಮಾಡಿದರು

ನಿತೀಶ್ ಬದಲು ಸೂರ್ಯಾಂಶ್‌ಗೆ ಸ್ಥಾನ

ಸೂರ್ಯಾಂಶ್

ನವದೆಹಲಿ (ಪಿಟಿಐ): ಭರವಸೆಯ ಆಟಗಾರ ಸೂರ್ಯಾಂಶ್ ಶೆಡ್ಗೆ ಅವರು ಮುಂಬರುವ ಐರ್ಲೆಂಡ್ ಮತ್ತು ಇಂಗ್ಲೆಂಡ್ ಎದುರಿನ ಟಿ20 ಸರಣಿಗೆ ಗಾಯಾಳು ನಿತೀಶ್ ಕುಮಾರ್ ರೆಡ್ಡಿ ಬದಲಿಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಆಲ್‌ರೌಂಡರ್ ನಿತೀಶ್ ಅವರು ಇದೇ 20ರಂದು ನಡೆದ ಅಫ್ಗಾನಿಸ್ತಾನ ವಿರುದ್ಧದ ಏಕದಿನ ಸರಣಿಯ ಮೂರನೇ ಹಾಗೂ ಕೊನೆಯ ಪಂದ್ಯದ ವೇಳೆ ಎಡಗಾಲಿನ ತೊಡೆಯ ಸ್ನಾಯುವಿನ ಗಾಯಕ್ಕೆ ತುತ್ತಾಗಿದ್ದರು. ತಪಾಸಣೆಯ ನಂತರ ಬಿಸಿಸಿಐ ವೈದ್ಯಕೀಯ ತಂಡವು ನಿತೀಶ್ ಅವರಿಗೆ ಪುನಶ್ಚೇತನಕ್ಕಾಗಿ ವಿಶ್ರಾಂತಿ ಪಡೆಯುವಂತೆ ಸೂಚಿಸಿದೆ. ಹೀಗಾಗಿ, ಐರ್ಲೆಂಡ್ ಮತ್ತು ಇಂಗ್ಲೆಂಡ್ ಎದುರಿನ ಟಿ20 ಸರಣಿಯಿಂದ ಅವರನ್ನು ಕೈಬಿಡಲಾಗಿದೆ.

23 ವರ್ಷ ವಯಸ್ಸಿನ ಶೆಡ್ಗೆ ಅವರು ಶ್ರೀಲಂಕಾದಲ್ಲಿ ಈಚೆಗೆ ನಡೆದ ತ್ರಿಕೋನ ಸರಣಿಯಲ್ಲಿ ಭಾರತ ಎ ತಂಡದಲ್ಲಿ ಆಡಿ ಐದು ಪಂದ್ಯಗಳಿಂದ 147 ರನ್ ಗಳಿಸಿದ್ದರು. 23 ಓವರ್‌ಗಳನ್ನು ಎಸೆದು, 2 ವಿಕೆಟ್ ಪಡೆದಿದ್ದರು.

ಡೆಲ್ಲಿ ತಂಡಕ್ಕೆ ಪಂತ್; ಲಖನೌಗೆ ಕುಲದೀಪ್

ಟ್ರೇಡಿಂಗ್: ರಿಷಭ್ ಪಂತ್ ಸಂಭಾವನೆ ₹12 ಕೋಟಿ ಕುಸಿತ

ನವದೆಹಲಿ (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ಪರ ಎರಡು ಋತು ನೀರಸ ಪ್ರದರ್ಶನ ನೀಡಿದ ನಂತರ ರಿಷಭ್ ಪಂತ್ ತವರು ತಂಡ ಡೆಲ್ಲಿ ಕ್ಯಾಪಿಟಲ್ಸ್‌ಗೆ ಮರಳಿದ್ದಾರೆ. ಆದರೆ ಅವರ ಸಂಭಾವನೆಯಲ್ಲಿ ₹12 ಕೋಟಿಯಷ್ಟು ಗಣನೀಯ ಕುಸಿತವಾಗಿದೆ. ಮಂಗಳವಾರ ಅಂತಿಮಗೊಂಡ ಈ ಮಹತ್ವದ 'ಟ್ರೇಡಿಂಗ್'ನಲ್ಲಿ ಸ್ಪಿನ್ನರ್ ಕುಲದೀಪ್ ಯಾದವ್ ಅವರು ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ.

2025ರ ಐಪಿಎಲ್ ಮೆಗಾ ಆಕ್ಷನ್‌ನಲ್ಲಿ ವಿಕೆಟ್ ಕೀಪರ್– ಬ್ಯಾಟರ್ ಪಂತ್ ಅವರು ದಾಖಲೆಯ ₹27 ಕೋಟಿ ಮೊತ್ತಕ್ಕೆ ಲಖನೌ ತಂಡದ ಪಾಲಾಗಿದ್ದರು. ಆ ಮೂಲಕ ಲೀಗ್ ಇತಿಹಾಸದಲ್ಲೇ 'ಅತ್ಯಂತ ದುಬಾರಿ ಆಟಗಾರ' ಎನಿಸಿದ್ದರು. ಈಗ ಆ ಮೊತ್ತದಲ್ಲಿ ಶೇ 44ರಷ್ಟು ಕಡಿತವಾಗಿದೆ.

ಪಂತ್ ಜೊತೆ ಒಪ್ಪಂದ ದೀರ್ಘಾವಧಿಯದ್ದಾಗಿತ್ತು. ಆದರೆ ಎರಡು ನಿರಾಶಾದಾಯಕ ಋತುಗಳ ನಂತರ ಎಲ್‌ಎಸ್‌ಜಿ ಮಾಲೀಕರು, ಆಸ್ಟ್ರೇಲಿಯಾದ ನುರಿತ ಕೋಚಿಂಗ್ ಸಿಬ್ಬಂದಿಯ (ಜಸ್ಟಿನ್ ಲ್ಯಾಂಗರ್ ಮತ್ತು ಟಾಮ್ ಮೂಡಿ) ಅವರ ಬೆಂಬಲದೊಡನೆ ಪಂತ್ ಅವರನ್ನು ಬಿಡುಗಡೆ ಮಾಡಲು ನಿರ್ಧರಿಸಲಾಯಿತು ಎಂದು ಇದಕ್ಕೆ ಮೊದಲು ಎಲ್‌ಎಸ್‌ಜಿ ತಂಡದ ಮಾಲೀಕ ಸಂಜೀವ್ ಗೋಯೆಂಕಾ ಹೇಳಿಕೊಂಡಿದ್ದರು.

ನಿರೀಕ್ಷಿತವಾಗಿದ್ದ ಈ 'ಟ್ರೇಡಿಂಗ್'ನಲ್ಲಿ ಕುಲದೀಪ್ ಯಾದವ್ ಅವರು ತಮ್ಮ ಹಿಂದಿನ ಸಂಭಾವನೆ ಮೌಲ್ಯ (₹13.50 ಕೋಟಿ) ಉಳಿಸಿಕೊಂಡಿದ್ದಾರೆ.

ಪಂತ್ ಈಗ ಮೂಲ ತಂಡಕ್ಕೆ ಮರಳಿದ್ದಾರೆ. ಈ ತಂಡದ ಪರ 2016ರಿಂದ 2024ರ ಅವಧಿಯಲ್ಲಿ ಅವರು 111 ಪಂದ್ಯಗಳನ್ನು ಆಡಿದ್ದರು.

ಕುಲದೀಪ್ 2022ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಸೇರಿಕೊಂಡ ನಂತರ 65 ಪಂದ್ಯಗಳನ್ನು ಆಡಿದ್ದು 72 ವಿಕೆಟ್ ಗಳಿಸಿದ್ದಾರೆ. ಈ ಋತುವಿನಲ್ಲಿ ಅವರು ಅಷ್ಟೇನೂ ಗಮನ ಸೆಳೆದಿರಲಿಲ್ಲ. 14 ಪಂದ್ಯಗಳಿಂದ 10 ವಿಕೆಟ್ ಪಡೆದಿದ್ದು, ಓವರೊಂದಕ್ಕೆ 10.30 ರನ್ ನೀಡಿ ದುಬಾರಿ ಎನಿಸಿದ್ದರು.

ರಿಷಭ್ ಪಂತ್

ಕುಲದೀಪ್

ಕೆಕೆಆರ್ ತಂಡಕ್ಕೆ ಹಾರ್ದಿಕ್ ಪಾಂಡ್ಯ?

ನವದೆಹಲಿ (ಪಿಟಿಐ): ತಾರಾ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಮುಂಬೈ ಇಂಡಿಯನ್ಸ್ ತಂಡವನ್ನು ತೊರೆಯುವುದು ಬಹುತೇಕ ಖಚಿತವಾಗಿದ್ದು ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ತಂಡಗಳು ಅವರನ್ನು 'ಟ್ರೇಡಿಂಗ್' ಮಾಡಿಕೊಳ್ಳಲು ಆಸಕ್ತಿ ತೋರಿವೆ ಎನ್ನಲಾಗಿದೆ.

'ಹಾರ್ದಿಕ್ ಅವರನ್ನು ಟ್ರೇಡ್ ಮಾಡಿಕೊಳ್ಳುವ ಸಂಬಂಧ ಕೆಕೆಆರ್ ಹಾಗೂ ಎಂಐ ಫ್ರಾಂಚೈಸಿಗಳ ಆಡಳಿತ ಮಂಡಳಿಗಳು ಹಲವು ಸುತ್ತಿನ ಚರ್ಚೆ ನಡೆಸಿವೆ' ಎಂದು ಮೂಲವೊಂದು ತಿಳಿಸಿದೆ.

'ಅಜಿಂಕ್ಯ ರಹಾನೆ ಅವರನ್ನು ತಂಡದಿಂದ ಕೈಬಿಡಲು ಕೆಕೆಆರ್ ನಿರ್ಧರಿಸಿದೆ. ಪಾಂಡ್ಯ ಅವರನ್ನು ಟ್ರೇಡ್ ಮಾಡಿಕೊಂಡರೆ, ಅವರಿಗೆ ನಾಯಕತ್ವದ ಜವಾಬ್ದಾರಿಯನ್ನು ನೀಡುವ ಸಾಧ್ಯತೆಯೂ ಇದೆ' ಎಂದು ಹೇಳಿದೆ.

ಯಶಸ್ವಿ ಜೈಸ್ವಾಲ್ ಹಾಗೂ ಹಾರ್ದಿಕ್ ಅವರನ್ನು ಪರಸ್ಪರ ಟ್ರೇಡ್ ಮಾಡಿಕೊಳ್ಳುವ ಬಗ್ಗೆ ರಾಜಸ್ಥಾನ ಹಾಗೂ ಮುಂಬೈ ಫ್ರಾಂಚೈಸಿಗಳು ಮಾತುಕತೆ ನಡೆಸುತ್ತಿವೆ ಎಂದೂ ಹೇಳಲಾಗುತ್ತಿದೆ.